ಅಧ್ಯಾಯ ೨

# ಇತಿಹಾಸ

ದಕ್ಷಿಣ ಕನ್ನಡ ಜಿಲ್ಲೆಯು ಮಂಗಳೂರನ್ನು ಕೇಂದ್ರಸ್ಥಾನವಾಗಿ ಹೊಂದಿದ್ದು ಭೌಗೋಳಿಕವಾಗಿ ಘಟ್ಟ ಪ್ರದೇಶ ಹಾಗೂ ಫಲವತ್ತಾದ ನದಿಕಣಿವೆಗಳೊಂದಿಗೆ, ವಜ್ರದ ಹಾರದಂತೆ ಹೊಳೆಯುವ ಸುದೀರ್ಘ ಕಡಲತೀರವನ್ನೂ ಹೊಂದಿದೆ. ಎತ್ತರವಾದ ಘಟ್ಟಪ್ರದೇಶ ಹಾಗೂ ದಟ್ಟವಾದ ಅರಣ್ಯಗಳನ್ನು ಹೊಂದಿದ್ದು ಅನೇಕ ವನ್ಯಪ್ರಾಣಿಗಳಿಂದ ಕೂಡಿವೆ. ಪಶ್ಚಿಮ ಕರಾವಳಿಯು ಭಾರತದ ಸಾಗರೋತ್ತರ ವಾಣಿಜ್ಯ ಮತ್ತು ವ್ಯಾಪಾರಕ್ಕೆ ಕ್ರಿಪೂ. ಎರಡನೇ ಸಹಸ್ರಮಾನದಿಂದಲೂ ಜನಪ್ರಿಯವಾಗಿತ್ತೆಂದು ಡಾ॥ ಬಿ.ಎ.ಸಾಲೆತೂರ್  ಅಭಿಪ್ರಾಯಪಡುತ್ತಾರೆ. ಪ್ರಾಚೀನ ಕಾಲದಲ್ಲಿ 'ಪಶ್ಚಿಮ ಸಾಗರ'ವೆಂದೂ ಕರೆಯಲಾಗುತ್ತಿದ್ದ ಅರಬ್ಬೀ ಸಮುದ್ರದ ತೀರದಲ್ಲಿರುವ ಈ ಜಿಲ್ಲೆಯು ಅತ್ಯಂತ ಮನಮೋಹಕವಾಗಿದ್ದು ನೋಡುಗರನ್ನು ಮೂಕಸ್ಮಿತರನ್ನಾಗಿಸುವ ರಮಣೀಯ ನಿಸರ್ಗ ತಾಣಗಳನ್ನು ಹೊಂದಿದೆ. ಜಿಲ್ಲೆಯಲ್ಲಿ ಹರಿಯುವ ನದಿ, ತೊರೆ ಹಾಗೂ ಕೂಡು ಹಳ್ಳಗಳು ಹಲವಾರು ಆಕರ್ಷಕ ನೈಸರ್ಗಿಕ ತಾಣಗಳನ್ನು ಸೃಷ್ಟಿಸಿದ್ದು, ಅವು ಪ್ರವಾಸಿಗರನ್ನು ಕೈಬೀಸಿ ಕರೆಯುವುದು ಅತ್ಯಂತ ಸಹಜವಾಗಿದೆ.  ಪ್ರಾರಂಭದಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನೂ ಒಳಗೊಂಡ ದಕ್ಷಿಣ ಕನ್ನಡ ಜಿಲ್ಲೆಯನ್ನು, ಕೆನರಾ ಜಿಲ್ಲೆಯೆಂದು ಕರೆಯಲಾಗುತ್ತಿದ್ದು, ಮದರಾಸ್ ಪ್ರಾಂತ್ಯದ ಆಡಳಿತ ನಿಯಂತ್ರಣದಲ್ಲಿತ್ತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಕ್ರಿ.ಶ.೧೮೫೭ರಲ್ಲಿ ಸಂಭವಿಸಿದ ಸಿಪಾಯಿದಂಗೆಯಂತಹ ಕೆಲವು ಅಹಿತಕರ ಘಟನೆಗಳು ಕರಾವಳಿಯ ಇವೆರಡೂ ಜಿಲ್ಲೆಗಳನ್ನು ಬೇರ್ಪಡಿಸಲು ಮುಖ್ಯ ಕಾರಣವಾಗಿದ್ದು, ೧೬ನೇ ಏಪ್ರಿಲ್ ೧೮೬೨ರಂದು ಉತ್ತರ ಕನ್ನಡ ಜಿಲ್ಲೆಯನ್ನು ಮುಂಬೈ ಪ್ರಾಂತಕ್ಕೂ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಮದರಾಸ್ ಪ್ರಾಂತಕ್ಕೂ ಆಡಳಿತಾತ್ಮಕವಾಗಿ ವರ್ಗಾಯಿಸಲಾಯಿತು. ಪ್ರಾಚೀನತೆಯ ದೃಷ್ಟಿಯಿಂದ ಲಭ್ಯವಿರುವ ಆಕರಗಳ ಆಧಾರದ ಮೇಲೆ ಕ್ರಿಪೂ.೪೦೦೦ದಲ್ಲಿ ಈಜಿಪ್ಟ್ ದೇಶದಲ್ಲಿ ನಿರ್ಮಿತವಾದ ಪಿರಮಿಡ್ಡುಗಳಲ್ಲಿಯ ಶವಗಳನ್ನು ಭಾರತದಿಂದ ಆಮದು ಮಾಡಿಕೊಂಡ ವಿಶೇಷ ಮಸ್ಲಿನ್ (ರೇಷ್ಮೆ) ಬಟ್ಟೆಗಳಲ್ಲಿ ಸುತ್ತಿ ಹೂಳುತ್ತಿದ್ದುದಕ್ಕೆ ಕುರುಹುಗಳಿವೆಯೆಂದು ಡಾ॥ ಬಿ.ಎ.ಸಾಲೆತೂರ್ ಅಭಿಪ್ರಾಯಪಡುತ್ತಾರೆ. ಹೊರದೇಶಗಳೊಂದಿಗೆ ಭಾರತೀಯರು ಸಾಗರೋತ್ತರ ಸಂಪರ್ಕವನ್ನು ಕರ್ನಾಟಕ ಹಾಗೂ ಕೇರಳದ ಪಶ್ಚಿಮ ಕರಾವಳಿಯ ಮೂಲಕ ಹೊಂದಿದ್ದರೆಂದೂ ಅವರು ತಿಳಿಸುತ್ತಾರೆ. ಕ್ರಿಪೂ. ಒಂಭತ್ತನೇ ಶತಮಾನದಲ್ಲೇ ಭಾರತದ ಪಶ್ಚಿಮ ಕರಾವಳಿ ಪ್ರದೇಶಗಳಿಂದ ಗೋಡಂಬಿ, ಕಾಳುಮೆಣಸು ಮತ್ತು ಇತರೆ ವಿಶಿಷ್ಟ ಸಾಂಬಾರ್ ಪದಾರ್ಥಗಳನ್ನು ಆಮದು ಮಾಡಿಕೊಳ್ಳುತ್ತಿದ್ದುದರ ಬಗ್ಗೆ  ಬೈಬಲ್ ಗ್ರಂಥದಲ್ಲಿ ಉಲ್ಲೇಖವಿದೆ. ಉಳ್ಳಾಲದ ರಾಣಿ ಅಬ್ಬಕ್ಕಳನ್ನು "ಮೆಣಸಿನ ರಾಣಿ' ಎಂಬ ಅನ್ವರ್ಥನಾಮದಿಂದ ಕರೆಯಲಾಗುತ್ತಿತ್ತೆಂಬ ಅಂಶದಿಂದ, ತುಳುವ ನಾಡಿನ ಪಶ್ಚಿಮ ಕರಾವಳಿಯು ಸಾಗರೋತ್ತರ ವ್ಯಾಪಾರದಲ್ಲಿ ಹೆಚ್ಚು ಜನಪ್ರಿಯವಾಗಿತ್ತೆಂದು ಸ್ಪಷ್ಟವಾಗುತ್ತದೆ. ಮಿಗಿಲಾಗಿ, ಪ್ರಾಚೀನ ಭಾರತವು ಪಾಶ್ಚಿಮಾತ್ಯ ದೇಶಗಳೊಂದಿಗೆ ಅನಾದಿ ಕಾಲದಿಂದಲೂ ಸಾಗರೋತ್ತರ ವಾಣಿಜ್ಯ ಮತ್ತು ವ್ಯಾಪಾರ ಸಂಪರ್ಕವನ್ನು ಹೊಂದಿದ್ದ ಬಗ್ಗೆ ಸಾಕಷ್ಟು ಪುರಾವೆಗಳು ಲಭ್ಯವಿದೆ.

## ಪೌರಾಣಿಕ ಹಿನ್ನೆಲೆ

ತುಳುವ ನಾಡಿನ ಉಗಮದ ಬಗ್ಗೆ ಹಲವಾರು ವಿವರಣೆಗಳು ತಿಳಿದುಬರುತ್ತದೆ. ಸ್ಕಂದ ಪುರಾಣದ ಭಾಗವೆಂದು ಪರಿಗಣಿಸಲಾಗಿರುವ 'ರಜತಪೀಠಪುರ ಮಹಾತ್ಮೆ'ಯಲ್ಲಿ ಕಂಡುಬರುವ ಉಲ್ಲೇಖದಂತೆ ಈ ಕರಾವಳಿ ಪ್ರದೇಶವು ರಾಮಭೋಜನೆಂಬ ಪೌರಾಣಿಕ ರಾಜನ ಹತೋಟಿಯಲ್ಲಿದ್ದು, ಆತನು ಮೂಲತಃ ತುಳುವ ವಂಶದವನಾಗಿದ್ದು ತುಳುವನಾಡಿನ ಆಡಳಿತಗಾರನಾಗಿದ್ದನೆಂದು ತಿಳಿದುಬರುತ್ತದೆ. ಈ ಪೌರಾಣಿಕ 'ರಜತಪೀಠಪುರ'ವನ್ನು ಆಧುನಿಕ ಉಡುಪಿ ಕ್ಷೇತ್ರವೆಂದು ವಿದ್ವಾಂಸರು ಗುರುತಿಸಿರುತ್ತಾರೆ. ರಾಜ ರಾಮಭೋಜನು ಈ ಪ್ರದೇಶದಲ್ಲಿ ಹಲವಾರು ದತ್ತಿಗಳನ್ನು ನೀಡಿದ ಕಾರಣ ಆತನನ್ನು ಇಲ್ಲಿನ ಜನರು ಗೌರವದಿಂದ ಕೊಂಡಾಡುತ್ತಾರೆ. ಹೀಗಾಗಿ ಈ ಕರಾವಳಿ ಪ್ರದೇಶವನ್ನು 'ತುಳುವ ದೇಶ' ಅಥವಾ 'ತುಳುವ ನಾಡು' ಎಂದು ಪೌರಾಣಿಕವಾಗಿ ಪರಿಗಣಿಸಲಾಗಿದೆ. ಆದರೇ, ಈ ಪೌರಾಣಿಕ ಕತೆಗೆ ಯಾವುದೇ ಐತಿಹಾಸಿಕ ಆಧಾರಗಳಿಲ್ಲ. ಹಾಗೆಯೇ ರಾಜಾರಾಮಭೋಜನ ಬಗ್ಗೆಯೂ ಖಚಿತ ಆಧಾರಗಳಿಲ್ಲ. ಪ್ರೊ|ಬಿ.ಎ.ಸಾಲೆತೂರ್ ಅವರು 'ತುಳುಭಾಷೆ'ಯಿಂದಾಗಿ ಈ ಪ್ರದೇಶಕ್ಕೆ 'ತುಳುನಾಡು' ಎಂಬ ಹೆಸರು ಬಂದಿದೆ ಎಂದು ಅಭಿಪ್ರಾಯಪಡುತ್ತಾರೆ. ಆದರೆ, ಈ ವಾದಕ್ಕೆ ಸಾಕಷ್ಟು ಐತಿಹಾಸಿಕ ಪುಷ್ಟಿ ದೊರೆಯುವುದಿಲ್ಲ. ಸಾಂಪ್ರದಾಯಿಕ ನಂಬಿಕೆಯಂತೆ ತುಳು ಬ್ರಾಹ್ಮಣರು ಅನುಸರಿಸುವ 'ಗ್ರಾಮ ಪದ್ಧತಿ' ಎಂಬ ಪೌರಾಣಿಕ ಗ್ರಂಥದ ಪ್ರಕಾರ ತುಳುವ ಮತ್ತು ಹೈಗ ನಾಡುಗಳನ್ನು ಪರಶುರಾಮನು ಸೃಷ್ಟಿಸಿದನೆಂದು ಹೇಳಲಾಗುತ್ತದೆ. ಈತನು ತನ್ನ ಪರಶುವನ್ನು (ಕೊಡಲಿ) ಕಣ್ಣಳತೆಯ ಮೇಲೆ ಪಶ್ಚಿಮ ಘಟ್ಟಗಳ ಮೇಲೆ ನಿಂತು ಸಮುದ್ರದ ಕಡೆಗೆ ಎಸೆದ ಪರಿಣಾಮವಾಗಿ ಕರಾವಳಿಯ ಭೂ ಭಾಗವು ಗೋಚರವಾಯಿತೆಂದು ಪೌರಾಣಿಕ ಗ್ರಂಥಗಳಲ್ಲಿ ದಾಖಲಿಸಲಾಗಿದೆ. ಪರಶುರಾಮನು ಉಡುಪಿಯ ಬಳಿಯಿರುವ ಕುಂಜಾರಗಿರಿಯಲ್ಲಿ ತನ್ನ ತಾಯಿಯ ಜ್ಞಾಪಕಾರ್ಥವಾಗಿ ದೇವಾಲಯವನ್ನು ನಿರ್ಮಿಸಿದನೆಂದು ಐತಿಹ್ಯವಿದೆ. ಬ್ರಹ್ಮಾಂಡ ಪುರಾಣದ ಉಲ್ಲೇಖದ ಪ್ರಕಾರ ಪರಶುರಾಮನು ತ್ರೇತಾಯುಗದ ಭೃಗು ಋಷಿಯ ವಂಶದವನೆಂದು ಗೊತ್ತಾಗುತ್ತದೆ. ಇವನನ್ನು ವಿಷ್ಣುವಿನ ಆರನೇ ಅವತಾರವೆಂದೂ ಹಿಂದೂಗಳು ಪರಿಗಣಿಸುತ್ತಾರೆ. ಇವನ ತಂದೆ ಜಮದಗ್ನಿ ಋಷಿ ಹಾಗೂ ತಾಯಿ ರೇಣುಕಾದೇವಿ, ಪರಶುರಾಮನನ್ನು ವೇದಶಾಸ್ತ್ರಗಳನ್ನು ಕಲಿಯುವುದಕ್ಕಾಗಿ ಮುತ್ತಜ್ಜನಾದ ಭೃಗುಋಷಿಯ ಆಶ್ರಮಕ್ಕೆ ಕಳುಹಿಸಿದರು. ಇಲ್ಲಿ ಪೂರ್ಣ ವಿದ್ಯಾಭ್ಯಾಸದ ನಂತರ ತನ್ನ ಮುತ್ತಜ್ಜನ ಮಾರ್ಗದರ್ಶನದ ಮೇರೆಗೆ ಈಶ್ವರನನ್ನು ಸಾಕ್ಷಾತ್ಕರಿಸಿಕೊಳ್ಳಲು ಹಿಮಾಲಯಕ್ಕೆ ಯಾತ್ರೆ ಕೈಗೊಂಡನು. ಮಾರ್ಗಮಧ್ಯೆ, ಪರಶುರಾಮನು ಹೈಹಯರನ್ನು ನಾಶಮಾಡಿ ನಂತರ ಮಹೇಂದ್ರ ಪರ್ವತಕ್ಕೆ ಹೋಗಿ ತಪಸ್ಸು ಮಾಡಿದನು. ಆ ಸಮಯದಲ್ಲಿ ಸಹ್ಯಾದ್ರಿ ಪರ್ವತದಲ್ಲಿ ತಪಸ್ಸು ಮಾಡುತ್ತಿದ್ದ ಋಷಿಗಳು ಮುಳುಗಿಹೋದ ತಮ್ಮ ತಪೋ ಸ್ಥಳಗಳನ್ನು ಸಮುದ್ರರಾಜನಿಂದ ಬಿಡಿಸಿಕೊಡಬೇಕೆಂದು ಕೇಳಿಕೊಂಡರು. ಅದರಂತೆ ಪರಶುರಾಮನು ಬಂದು ವರುಣನಿಂದ ಕೇರಳವನ್ನು ಪಡೆದುಕೊಂಡನು. ಇದೇ ಸಂದರ್ಭದಲ್ಲಿ, ಈಗಿನ ತುಳುನಾಡು ಪ್ರದೇಶವು ಕ್ರಮೇಣ ಗೋಚರವಾಯಿತೆಂಬ ಪೌರಾಣಿಕ ಐತಿಹ್ಯವಿದೆ. ತುಳುನಾಡಿಗೆ ಪರಶುರಾಮ ಕ್ಷೇತ್ರವೆಂಬ ಅನ್ವರ್ಥನಾಮವಿರುವುದನ್ನು ಈಗಾಗಲೇ ಗಮನಿಸಲಾಗಿದೆ. "ಕೇರಳೋತ್ಪತ್ತಿ ಮತ್ತು ಬ್ರಹ್ಮಾಂಡ ಪುರಾಣಗಳನ್ನು ಆಧರಿಸಿ ಪರಶುರಾಮನು ಆರ್ಯಾವರ್ತದಿಂದ ವೈದಿಕ ಬ್ರಾಹ್ಮಣರ ಕುಟುಂಬಗಳನ್ನು ಈ ಪ್ರದೇಶಕ್ಕೆ ಬರಮಾಡಿಕೊಂಡು ಅವರುಗಳನ್ನು ತುಳುರಾಜ್ಯದ ೧೬ ಗ್ರಾಮಗಳಲ್ಲಿ ನೆಲೆಸುವಂತೆ ಮಾಡಿದನೆಂಬ ಐತಿಹ್ಯವಿದೆ" ಎಂದು ಪ್ರಸಿದ್ಧ ಇತಿಹಾಸಕಾರರಾದ ಮಂಜೇಶ್ವರ ಗಣಪತಿರಾವ್ ಐಗಳ ಅವರು ಅಭಿಪ್ರಾಯಪಡುತ್ತಾರೆ. ಇವರೇ ತಿಳಿಸಿರುವಂತೆ, ಪರಶುರಾಮನು ಪ್ರಾಗಿತಿಹಾಸ ಕಾಲದವನು ಏಕೆಂದರೇ, ಸಾವಿರಾರು ದಶಕಗಳ ಹಿಂದೆ ಪಶ್ಚಿಮಘಟ್ಟದುದ್ದಕ್ಕೂ ದಟ್ಟವಾದ ಕಾಡು ಆವರಿಸಿದ್ದು, ಅದು ಸಾಮಾನ್ಯಜನತೆಗೆ ನೆಲೆಸಲು ಕಷ್ಟಸಾಧ್ಯವಾಗಿತ್ತು. ಇದನ್ನು ಪರಶುರಾಮನು ಜನವಸತಿಗೆ ಅನುಕೂಲವಾಗುವಂತೆ ರೂಪಿಸಿದ್ದರಿಂದ ಈ ಪ್ರದೇಶಕ್ಕೆ "ಪರಶುರಾಮ ಕ್ಷೇತ್ರ"ಎಂಬ ಹೆಸರು ರೂಢಿಗೆ ಬಂದಿತೆಂಬುದು ಗಣಪತಿರಾವ್ ಐಗಳರ ಅಭಿಪ್ರಾಯವಾಗಿದೆ. ಪೌರಾಣಿಕ ದಾಖಲೆಯ ಪ್ರಕಾರ, ಈಗಿನ ಕಾಸರಗೋಡಿನ ಬಳಿಯ ಅಡೂರಿನಲ್ಲಿರುವ ಶೈವ ದೇವಾಲಯವನ್ನು ಅರ್ಜುನನು ಪ್ರತಿಷ್ಠಾಪಿಸಿದನೆಂದು ಪ್ರತೀತಿಯಿದೆ. ಸುಬ್ರಹ್ಮಣ್ಯದ ಸಮೀಪದ ಪುಷ್ಪಗಿರಿ, ಕೊಲ್ಲೂರು ಬಳಿಯ ಕೂಟಶೈಲ ಅಥವಾ ಕೊಡಚಾದ್ರಿಯು ಮೂಕಾಂಬಿಕಾ ದೇವಿಯ ದೇವಾಲಯದಿಂದಾಗಿ ಜನಪ್ರಿಯವಾಗಿದೆ. ಕೊಲ್ಲೂರು ಮೂಕಾಂಬಿಕೆಯ ಬಗ್ಗೆ ಮಾರ್ಕಂಡೇಯ ಪುರಾಣದಲ್ಲಿ ಉಲ್ಲೇಖವಿದೆ. ಈ ಜಿಲ್ಲೆಯಲ್ಲಿ ಹರಿಯುತ್ತಿರುವ ಕುಮಾರಧಾರ, ಪಯಸ್ವಿನಿ, ಚಂದ್ರಗಿರಿ ಮತ್ತು ನೇತ್ರಾವತಿ ನದಿಗಳ ಬಗ್ಗೆ ಮಾರ್ಕಂಡೇಯ, ವಾಯು ಮತ್ತು ಭವಿಷ್ಯೋತ್ತರ ಪುರಾಣಗಳಲ್ಲಿ ಪದೇಪದೇ ಉಲ್ಲೇಖಿಸಲಾಗಿದೆ. ಮಹಾಭಾರತದಲ್ಲಿ ತುಳುವ ನಾಡಿನ ಬಗ್ಗೆ ನೇರವಾದ ಉಲ್ಲೇಖ ದೊರೆಯದಿದ್ದರೂ ಮಂಗಳೂರು ಸಮೀಪದ ಕದ್ರಿಯಲ್ಲಿ ಪಾಂಡವರ ಗವಿಗಳಿವೆ ಎಂದು ಹೇಳಲಾಗುತ್ತದೆ. ಸಾಮಾನ್ಯವಾಗಿ ಪೂರ್ವೇತಿಹಾಸ ಕಾಲದ ಬೃಹತ್ ಶಿಲಾಗೋರಿಗಳಿಗೆ ಹಾಗೂ ನೆಲೆಗಳಿಗೆ ಪಾಂಡವರ ಗುಡಿ ಅಥವಾ ಗವಿಗಳೆಂದು ಸ್ಥಳೀಯವಾಗಿ ಕರೆಯಲಾಗುತ್ತದೆ. ಕಾಸರಗೂಡಿನಿಂದ ಐದು ಕಿ.ಮೀ. ದೂರದಲ್ಲಿ ಪೂರ್ವಕ್ಕೆ ಪಾಂಡವರ ಕಲ್ಲು ಎಂದು

ಕರೆಯಲಾಗುವ ಕೆರೆಯಿದೆ. ಉಡುಪಿ ಬಳಿಯ ಮಣಿಪುರ, ಬಬ್ರುವಾಹನನ ಊರು ಎಂದು ಪ್ರತೀತಿಯಿದೆ. ಬಂಟ್ವಾಳ ತಾಲೂಕಿನ ಕಕ್ಕೆಪದವು ಎಂಬಲ್ಲಿರುವ ಪಾಂಡವರ ಕಲ್ಲುಗಳು ಬೃಹತ್ ಶಿಲಾಯುಗ ಕಾಲದ ಸಮಾಧಿಗಳಾಗಿವೆ

## ತುಳುನಾಡಿನ ಪ್ರಾಚೀನ ಹಿನ್ನೆಲೆ

ಸ್ಥಳ ಪುರಾಣಗಳಿಗೆ ಸಂಬಂಧಿಸಿದಂತೆ ಜಿಲ್ಲೆಯ ಅನೇಕ ತಾಣಗಳು ಪೌರಾಣಿಕ ಹಾಗೂ ಜಾನಪದೀಯ ಆಕರಗಳಲ್ಲಿ ಉಲ್ಲೇಖಗೊಂಡಿರುವುದು ವ್ಯಕ್ತವಾಗುತ್ತದೆ. ಪುರಾಣ ಪುರುಷರ ಹಾಗೂ ಪೌರಾಣಿಕ ಶಕ್ತಿಗಳ ಒಡನಾಟವನ್ನು ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ತೀರ್ಥಕ್ಷೇತ್ರಗಳೊಂದಿಗೆ ಸ್ಥಳೀಯವಾಗಿ ತಳಕು ಹಾಕಿ ವಿವರಿಸಲಾಗುತ್ತದೆ. ಈಗಾಗಲೇ ಉಲ್ಲೇಖಿಸಿರುವಂತೆ ಜಿಲ್ಲೆಯ ಗ್ರಾಮಪದ್ಧತಿಯು ಹಲವಾರು ಸ್ಥಳಗಳ ಪೌರಾಣಿಕ ಹಿನ್ನೆಲೆಯ ಬಗ್ಗೆ ದಾಖಲಿಸುತ್ತದೆ. ಕದಂಬ ವಂಶದ ಮಯೂರ ಶರ್ಮನು ಅಹಿಚ್ಛತ್ರದಿಂದ ವೇದಾಧ್ಯಯನದಲ್ಲಿ ತೊಡಗಿದ್ದ ಬ್ರಾಹ್ಮಣರನ್ನು ತನ್ನ ಸಾಮ್ರಾಜ್ಯಕ್ಕೆ ಕರೆತಂದು ಅವರುಗಳಿಗೆ ಉದಾರವಾಗಿ ಭೂಮಿಯನ್ನು ದಾನ ಕೊಟ್ಟು, ಗ್ರಾಮಗಳ ಆಡಳಿತ ನಿರ್ವಹಣೆಯಂತಹ ಜವಾಬ್ದಾರಿಯನ್ನು ನೀಡಿದ್ದಾಗಿ ಸ್ಥಳಪುರಾಣಗಳು ತಿಳಿಸುತ್ತದೆ. ಆ ಸಂದರ್ಭದಲ್ಲಿ ಅನೇಕ ಪವಿತ್ರ ಕ್ಷೇತ್ರಗಳು ನ್ಯಾಯವಿತರಣೆ ಹಾಗೂ ಸಣ್ಣಪುಟ್ಟ ವ್ಯಾಜ್ಯಗಳನ್ನು ಬಗೆಹರಿಸುವಲ್ಲಿ ನೆರವಾಗುತ್ತಿದ್ದುದು ದಾಖಲೆಗಳಿಂದ ತಿಳಿದುಬರುತ್ತದೆ.

ಕರ್ನಾಟಕ ರಾಜ್ಯದ ಈ ಪಶ್ಚಿಮ ಕರಾವಳಿಯನ್ನು ತಮಿಳುನಾಡಿನ ಸಂಗಮ್ ಸಾಹಿತ್ಯದಲ್ಲಿ 'ತುಳುನಾಡು' (ಕ್ರಿ.ಶ. ೩ನೇ ಮತ್ತು ೪ನೇ ಶತಮಾನಗಳಲ್ಲಿ) ಎಂದು ಕರೆದಿರುವುದು ಉಲ್ಲೇಖಾರ್ಹವಾಗಿದೆ. ಕರಾವಳಿಯ ಜನಪ್ರಿಯ ರಾಷ್ಟ್ರಕವಿ ಎಂ.ಗೋವಿಂದ ಪೈ ಅವರು ಕರಾವಳಿಯ ಮೂಲವನ್ನು ಗುರುತಿಸಲು ಪ್ರಯತ್ನಿಸಿದ್ದು, ಕ್ರಿ.ಶ.ಮೂರನೇ ಶತಮಾನದಲ್ಲಿ ರಚಿತವಾದ ಹರಿವಂಶದ ವಿಷ್ಣುಪರ್ವದಲ್ಲಿ 'ತುಳುನಾಡು' ಮತ್ತು 'ಮುದಗಾರ' ಅಥವಾ 'ಮೊಗೇರಾ' ಎಂದು ಉಲ್ಲೇಖಿಸಿರುವುದನ್ನು ತಿಳಿಸುತ್ತಾರೆ. ಗೋವಿಂದ ಪೈ ಅವರೇ ತಿಳಿಸುವಂತೆ ಉತ್ತರ ಕನ್ನಡ ಜಿಲ್ಲೆಯಿಂದ ಆರಂಭವಾಗಿ ಕನ್ಯಾಕುಮಾರಿಯವರೆಗೆ ವ್ಯಾಪಿಸಿರುವ ಪಶ್ಚಿಮ ಕರಾವಳಿ ಪ್ರದೇಶದಲ್ಲಿ ನಾಗಾರಾಧನೆಯನ್ನು ಪ್ರಮುಖವಾಗಿ ಅನುಸರಿಸುವ ಹಾಗೂ ಸರ್ಪವನ್ನು ತಮ್ಮ ಧಾರ್ಮಿಕ ಸಂಕೇತವಾಗಿ ಹೊಂದಿರುವ ನಾಗರೆಂಬ ವಿಶಿಷ್ಟ ಜನಾಂಗ ವಾಸವಾಗಿತ್ತು. ಈ ನಾಗಾರಾಧಕರು ತಾವು ಮೂಲತ: ನಾಗರಖಂಡ ಪ್ರದೇಶದ 'ಶಂಖಕುಲ' ಮೂಲದಿಂದ ಈ ಪ್ರದೇಶಕ್ಕೆ ವಲಸೆ ಬಂದವರೆಂದು ಕರೆದುಕೊಳ್ಳುವರು ಮತ್ತು ಜೀಮೂತವಾಹನನ ಉಲ್ಲೇಖವಿರುವ ಅನೇಕ ಸಂಸ್ಕೃತ ಕಾವ್ಯಗಳಲ್ಲಿ 'ಶಂಖಕುಲದ' ಬಗ್ಗೆ ಕಂಡುಬರುವ ಕೆಲವು ಆಧಾರಗಳೂ ಸಹ ಈ ಅಭಿಪ್ರಾಯಕ್ಕೆ ಪುಷ್ಟಿ ಕೊಡುತ್ತವೆ. ದಕ್ಷಿಣ ಕನ್ನಡದಲ್ಲಿ ಆಚರಿಸಲಾಗುವ 'ನಾಗಮಂಡಲ' ಪೂಜಾರಾಧನೆ ಮತ್ತು ಹಲವಾರು ಶತಮಾನಗಳಿಂದ ರೂಢಿಯಲ್ಲಿರುವ ಧಾರ್ಮಿಕ ಪದ್ಧತಿಗಳು 'ನಾಗಜನತೆ'ಯ ವಾದಕ್ಕೆ ಮತ್ತಷ್ಟು ಪುಷ್ಟಿ ನೀಡುತ್ತಿದ್ದು, ಪಾಲಿ ಭಾಷೆಯಲ್ಲಿ ರಚಿತವಾಗಿರುವ ಜಾತಕ ಕಥೆಗಳಲ್ಲಿ ವಿವರಿಸಲಾಗಿರುವ ಜೀಮೂತವಾಹನನ ಕಥೆಯೂ ಈ ಜಿಲ್ಲೆಯಲ್ಲಿ ಸಂಭವಿಸಿತ್ತೆಂಬ ಅಭಿಪ್ರಾಯವಿದೆ. ಅಶೋಕನ ಶಾಸನಗಳಲ್ಲಿ ಉಲ್ಲೇಖಗೊಂಡಿರುವ 'ಸತಿಯಪುತೊ' ಎಂಬುದು ದಕ್ಷಿಣಭಾರತಕ್ಕೆ ಸಂಬಂದಿಸಿದ್ದೆಂದು ಹಲವು ವಿದ್ವಾಂಸರ ಸ್ಪಷ್ಟ ಅಭಿಪ್ರಾಯವಿದೆ. ಈ ಸಂಬಂಧ ಲಭ್ಯವಿರುವ ಎಲ್ಲಾ ಆಧಾರಗಳನ್ನೂ ಪರಾಮರ್ಶಿಸಿರುವ ಡಾ॥ ಕೆ.ವಿ.ರಮೇಶ್ ಅವರು ಅಶೋಕನ ಶಾಸನದ 'ಸತಿಯಪುತ್ರ'ರೆಂಬ ಉಲ್ಲೇಖವು ಈ ಕರಾವಳಿ ಜಿಲ್ಲೆಯಲ್ಲಿ ವಾಸಿಸುತ್ತಿದ್ದ ಜನಗಳಿಗೆ ಅನ್ವಯಿಸುವುದೆಂಬ ಖಚಿತ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಇದಕ್ಕೆ ಪೂರಕವಾಗಿ ಡಾ॥ ಪಿ. ಗುರುರಾಜಭಟ್ ಅವರು ಈ ಜಿಲ್ಲೆಯಲ್ಲಿ ವಾಸಿಸುತ್ತಿರುವ 'ಮೊಗವೀರ' ಅಥವಾ 'ಬಿಲ್ಲವ'ರಲ್ಲಿ 'ಸಾದಿಯಾ' ಎಂಬ ಪಂಗಡವಿದೆಯೆಂದು ಹೇಳಿರುವುದು ಉಲ್ಲೇಖಾರ್ಹ.

ಪ್ರಾಚೀನ ಕಾಲದಲ್ಲಿ ಭಾರತದ ಪಶ್ಚಿಮ ಕರಾವಳಿಯು ಯೂರೋಪಿನ ಮೆಡಿಟರೇನಿಯನ್ ದೇಶಗಳೊಂದಿಗೆ ವ್ಯಾಪಾರ ಹಾಗೂ ವಾಣಿಜ್ಯ ಸಂಪರ್ಕಗಳನ್ನು ಹೊಂದಿತ್ತೆಂದು ಗ್ರೀಕ್ ಮತ್ತು ರೋಮಿನ ದಾಖಲೆಗಳು ಉಲ್ಲೇಖಿಸುತ್ತವೆ.. ಇವರು ಸೂಚಿಸಿರುವ ಹಲವಾರು ಸ್ಥಳಗಳನ್ನು ಈಗ ಗುರುತಿಸುವುದು ಹಾಗೂ ಅವುಗಳ ಭೌಗೋಳಿಕ ಅಂಶಗಳನ್ನು ಪತ್ತೆಹಚ್ಚುವುದು ಕಷ್ಟಸಾಧ್ಯವಾಗಿದೆ. ಆದರೆ, ಸಾಗರೋತ್ತರ ವ್ಯಾಪಾರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಗುರುತರವಾದ ಪಾತ್ರವಹಿಸಿದ್ದನ್ನು ದಾಖಲೆಗಳು ಖಚಿತಪಡಿಸುತ್ತವೆ. ಕ್ರಿಸ್ತ ಶಕವರ್ಷದ ಆರಂಭದ ಮೊದಲ ಶತಮಾನದಲ್ಲಿ ಪೆರಿಪ್ಲಸ್ ಎಂಬುವ ಗ್ರೀಸ್‌ದೇಶದ ಲೇಖಕನು ಈಜಿಪ್ಷಿಯನ್ನರು ಉಣ್ಣೆ ಹಾಗೂ ಲಿನನ್ ಬಟ್ಟೆಯನ್ನು, ಸುರಾಪಾನೀಯ ಮತ್ತು ಚಿನ್ನಗಳನ್ನು ಭಾರತಕ್ಕೆ ರಫ್ತು ಮಾಡುತ್ತಿದ್ದರು ಹಾಗೂ ಭಾರತದ ಕರಾವಳಿಯಿಂದ ಸಾಂಬಾರ್ ಪದಾರ್ಥಗಳು, ಬೆಲೆಬಾಳುವ ಹರಳುಗಳು, ಮಸ್ಲಿನ್ (ಪ್ರಾಚೀನ ಭಾರತದಲ್ಲಿ ತಯಾರಾಗುತ್ತಿದ್ದ ರೇಷ್ಮೆಗಿಂತಲೂ ತೆಳ್ಳನೆಯ ವಿಶೇಷ ಬಟ್ಟೆಯೆಂದು ಅನೇಕ ವಿದೇಶಿ ದಾಖಲೆಗಳಿಂದ ವ್ಯಕ್ತವಾಗುತ್ತದೆ.) ಬಟ್ಟೆಗಳು, ಕಾಳು ಮೆಣಸು, ದಂತ, ಹತ್ತಿ, ವೀಳ್ಯದೆಲೆ ಮತ್ತು ಆಕರ್ಷಕ ಕಪ್ಪೆಚಿಪ್ಪುಗಳನ್ನು ಆಮದು

ಮಾಡಿಕೊಳ್ಳುತ್ತಿದ್ದರೆಂದು ದಾಖಲಿಸಿರುತ್ತಾನೆ. ಬಹುಶ: ಇವೆಲ್ಲಾ ದಕ್ಷಿಣ ಕನ್ನಡ ಜಿಲ್ಲೆಯಿಂದ ರಫ್ತಾಗುತ್ತಿದ್ದುವೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಗ್ರೀಕ್ ಮೂಲದ ಕ್ರಿ.ಶ.೨೩ರಲ್ಲಿದ್ದ ಪ್ಲಿನಿ ಎಂಬ ಭೂಗೋಳ ಶಾಸ್ತ್ರಜ್ಞನು ಹೆಸರಿಸಿರುವ 'ಮುಶೈರಿಯೇ' ಇಂದಿನ ಮಂಗಳೂರೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಡಾ॥ ಬಿ.ಎ.ಸಾಲೆತೂರ್ ಅವರು ಅಭಿಪ್ರಾಯಪಡುವಂತೆ "ನಿತ್ರಿಯಸ್" ಎಂಬುದು ದಕ್ಷಿಣ ಕನ್ನಡ ಜಿಲ್ಲೆಯ 'ನೇತ್ರಾವತಿ' ನದಿಗೆ ಶಬ್ದ ಸಾಮಿಪ್ಯ ಹೊಂದಿರುತ್ತದೆ ಎಂಬುದು ಹೆಚ್ಚು ಸ್ಪಷ್ಟವಾಗುತ್ತದೆ. ಅವರೇ ತಿಳಿಸಿರುವಂತೆ ಪ್ಲಿನಿ ಹೆಸರಿಸಿರುವ "ಬಾರಸ್" ದಕ್ಷಿಣ ಕನ್ನಡದ 'ಬಸರೂರಿಗೆ' ಸರಿಹೊಂದುತ್ತದೆಂಬುದು ಸ್ಪಷ್ಟ. ಮತ್ತೊಬ್ಬ ಗ್ರೀಕ್ ಭೂಗೋಳ ಶಾಸ್ತ್ರಜ್ಞ ಟಾಲೆಮಿ (ಕ್ರಿ.ಶ.೧೫೦) ತುಳುನಾಡಿನ ಕರಾವಳಿಯ ಕೆಲವು ಸ್ಥಳಗಳನ್ನು ಉಲ್ಲೇಖಿಸಿರುವನು. ಈತನು "ಮೂಗನೂರು" ಎಂಬ ಸ್ಥಳವು 'ಬಾರಿಯೋಸ್' ಎಂಬ ಹೊಳೆಯ ಕೂಡು ತಾಣದಲ್ಲಿದೆ ಎಂದು ತಿಳಿಸಿರುವನು. 'ಮೂಗನೂರೇ' ಇಂದಿನ 'ಮಂಗಳೂರು' ಇರಬೇಕೆಂಬ ಅಭಿಪ್ರಾಯವೂ ಇದೆ. ಟಾಲೆಮಿಯು ದಕ್ಷಿಣ ಕನ್ನಡದ ಕರಾವಳಿಯಿಂದ ಸ್ವಲ್ಪ ಒಳಭಾಗದಲ್ಲಿ "ಒಲೋಖೊಯ್ರ" ಎಂಬ ಸ್ಥಳವನ್ನು ಹೆಸರಿಸಿದ್ದು ಇದು ಬಹುಶ: 'ಆಳ್ವಖೇಡ'ವಾಗಿದ್ದು 'ಆಳುವ' ಅಥವಾ 'ಆಳುಪರ' ಪ್ರಾಂತವೆಂಬ ಅಭಿಪ್ರಾಯವಿದೆ. ಟಾಲೆಮಿಯು ನೀಡಿರುವ ಮತ್ತೊಂದು ಮಹತ್ವದ ವಿಚಾರವೆಂದರೆ ತುಳನಾಡಿನ ಕರಾವಳಿಯ ಸ್ಥಳಗಳ ಬಗ್ಗೆ ಉಲ್ಲೇಖ. ಕ್ರಿ.ಶ. ಎರಡನೇ ಶತಮಾನದ ಪ್ಯಾಪಿರಸ್ ಹಾಳೆಗಳ ಮೇಲೆ ಸಿಕ್ಕಿರುವ ಲಿಪಿಬರಹಗಳ ಪೈಕಿ ಕೆಲವು ಈಜಿಪ್ಟ್ ಅಥವಾ ಗ್ರೀಕ್ ನಾಡಿಗೆ ಸೇರಿಲ್ಲದೇ ವಿಶಿಷ್ಠ ಶೈಲಿಯನ್ನು ವ್ಯಕ್ತಪಡಿಸುತ್ತವೆ. ಕರಾವಳಿಯ ಪ್ರಸಿದ್ಧ ಸಂಶೋಧಕರು ಹಾಗೂ ಲೇಖಕರಾದ ಎಂ.ಗೋವಿಂದ ಪೈ ಅವರು ಇದನ್ನು 'ಕನ್ನಡ ಲಿಪಿ' ಎಂದು ಪತ್ತೆ ಹಚ್ಚಿರುತ್ತಾರೆ. ಇದರ ಆಧಾರದಿಂದಲೇ "ಗ್ರೀಸ್ ದೇಶದ ಚಾರಿಷನ್ ಎಂಬ ಹೆಂಗಸು ತುಳವ ರಾಜನ ಕೈಸೆರೆಯಾಗುತ್ತಾಳೆ. ಗ್ರೀಕ್ ಪಡೆಯೊಂದು ಆಕೆಯನ್ನು ಮುಕ್ತಗೊಳಿಸಲು ಕರಾವಳಿಯ ಬಳಿ ಬಂದು ಸಂಬಂಧಿಸಿದ ರಾಜ ಹಾಗೂ ಆತನ ಸಹಚರರಿಗೆ ಸುರಾಪಾನ ಮಾಡಿಸಿ ಮಂಪರು ಬರುವ ಹಾಗೆ ಮಾಡಿ ಚಾರಿಷನ್‌ಳನ್ನು ರಾಜನ ಸೆರೆಯಿಂದ ಉಪಾಯವಾಗಿ ಬಿಡಿಸಿಕೊಂಡು ಹೋಗಲು ನೆರವಾಗುತ್ತಾರೆಂದು ಊಹಿಸಲಾಗಿದೆ". ಕೆಲವು ವಿದ್ವಾಂಸರು ಗೋವಿಂದ ಪೈ ಅವರ ವಿವರಣೆಯನ್ನು ಹಾಗೂ ಕನ್ನಡಲಿಪಿ ಇರಬಹುದೆಂಬ ವಾದಗಳನ್ನು ಅನುಮೋದಿಸುತ್ತಾರೆ. ಡಾ॥ ಬಿ.ಎ.ಸಾಲೆತೂರ್‌ವರು "ಇಲ್ಲಿರುವ ಬರಹವು ಪ್ರಾಚೀನ ಹಳಗನ್ನಡ ಲಿಪಿ ಎಂಬುದರಲ್ಲಿ ಸಂಶಯವಿಲ್ಲವೆಂದು ತಿಳಿಸುತ್ತಾರೆ. ಈ ಸಾಲುಗಳಲ್ಲಿ 'ಮಲ್ಪೆ' ಮತ್ತು 'ಮಲ್ಪೆಯ ನಾಯಕ' ನೆಂಬ ಉಲ್ಲೇಖಗಳಿರುವುದು ಸಮಂಜಸವಾಗಿದೆ ಎಂದೂ ಅವರೇ ಅಭಿಪ್ರಾಯಪಡುತ್ತಾರೆ. ಪ್ರಸಿದ್ಧ ಇತಿಹಾಸಕಾರ ಡಾ॥ ಡಿ.ಆರ್.ಭಂಡಾರ್ಕರ್ ಅವರೂ ಡಾ॥ ಎಂ. ಗೋವಿಂದ ಪೈ ಅವರ ಅಭಿಪ್ರಾಯವನ್ನು ಅನುಮೋದಿಸುತ್ತಾರೆ. ಆದರೆ, ಗ್ರೀಕ್ ಹಾಗೂ ದಕ್ಷಿಣ ಕನ್ನಡದ ಸಂಬಂಧಗಳ ಬಗ್ಗೆ ಇತರೆ ಇತಿಹಾಸಕಾರರಲ್ಲಿ ಒಮ್ಮತವಿಲ್ಲ. ಕ್ಯಾ. ಶಿವಪ್ರಕಾಶ್ ರೈಯವರು ಗ್ರೀಕ್ ನಾಟಕದಲ್ಲಿರುವ ಶಬ್ದಗಳು ತುಳು ಭಾಷೆಯದೆಂದು ಹೇಳಿದ್ದು, ಕೆಲವು ವಿದ್ವಾಂಸರು ಇದನ್ನು ಒಪ್ಪಿಯೂ ಇದ್ದಾರೆ.

## ಇತಿಹಾಸಪೂರ್ವಕಾಲ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲಭಿಸಿರುವ ಇತಿಹಾಸಪೂರ್ವಕಾಲದ ಅವಶೇಷಗಳು ಹಲವು ಕುತೂಹಲಕಾರಿಯಾದ ವಿಷಯಗಳನ್ನು ಬೆಳಕಿಗೆ ತಂದಿವೆ. ದಕ್ಷಿಣ ಭಾರತದ ದಖನ್ ಪ್ರಾಂತ್ಯದ ವಿವಿಧೆಡೆ ಕಂಡುಬಂದಿರುವ, ವಿವಿಧ ಹಂತಕ್ಕೆ ಸೇರಿದ ಇತಿಹಾಸಪೂರ್ವ ಕಾಲದ ನೆಲೆಗಳು ಕರಾವಳಿ ಜಿಲ್ಲೆಯಾದ ದಕ್ಷಿಣ ಕನ್ನಡದಲ್ಲಿ ಕಂಡುಬಂದಿಲ್ಲವಾದರೂ, ಕರ್ನಾಟಕ ಕರಾವಳಿಯ ಮೂರು ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡಗಳಲ್ಲಿ ಅಲ್ಲಲ್ಲಿ ಕೆಲವು ಪ್ರಾಚ್ಯ ಅವಶೇಷಗಳು ಬೆಳಕಿಗೆ ಬಂದಿರುತ್ತವೆ. ಮೇಲ್ಮೈಲಕ್ಷಣಗಳ ಅಧ್ಯಯನ ಶಾಸ್ತ್ರದ ಆಧಾರದ ಮೇಲೆ ಕರ್ನಾಟಕ ಕರಾವಳಿಯನ್ನು (೧) ಕರಾವಳಿಯ ಪ್ರದೇಶ (೨) ಬೆಟ್ಟಗುಡ್ಡಗಳಿಂದ ಆವೃತವಾದ ಪ್ರದೇಶ (೩) ಪಶ್ಚಿಮಘಟ್ಟಗಳ ಪ್ರದೇಶಗಳೆಂದು ವಿಂಗಡಿಸಲಾಗಿದೆ. ಈ ಜಿಲ್ಲೆಯು ಉತ್ತರದಿಂದ ದಕ್ಷಿಣಕ್ಕೆ ನೈಸರ್ಗಿಕವಾಗಿ ಚಾಚಿಕೊಂಡಿರುವ ಭೂಭಾಗವನ್ನು ಹೊಂದಿದ್ದು, ಪೂರ್ವದಿಂದ ಪಶ್ಚಿಮಕ್ಕೆ ಕಂಡುಬರುವ ಅಂಕುಡೊಂಕಾದ ಪ್ರದೇಶವು ಅರಬ್ಬೀ ಸಮುದ್ರದಿಂದ ಪಶ್ಚಿಮಘಟ್ಟದವರೆಗೆ ವ್ಯಾಪಿಸಿದೆ. ಭೌಗೋಳಿಕವಾಗಿ ಕರ್ನಾಟಕದ ಕರಾವಳಿಯನ್ನು ಧಾರವಾಡ ಗುಂಪಿನ ಕ್ಯಾಂಬ್ರಿಯನ್, ಡಾಲರೈಟ್ ಸೆನೊಜೊಯಿಕ್ ಜಂಬಿಟ್ಟಿಗೆಗಳು ಮತ್ತು ಶಿಲಾಪದರಗಳು ಎಂದು ಪ್ರಮುಖವಾಗಿ ಭೂ ವಿಜ್ಞಾನಿಗಳು ವಿಂಗಡಿಸಿರುತ್ತಾರೆ. ಜಿಲ್ಲೆಯ ಪೂರ್ವಭಾಗದಲ್ಲಿರುವ ಪಶ್ಚಿಮಘಟ್ಟಗಳಿಂದ ಉಗಮಿಸುವ ನದಿಗಳು ಪೂರ್ವದಿಂದ ಪಶ್ಚಿಮಕ್ಕೆ ಹರಿಯುತ್ತಿದ್ದು, ನದಿಗಳ ಉದ್ದವು ಸುಮಾರು ೧೫೦ ರಿಂದ ೧೬೦ ಕಿ.ಮೀ. ಗಳಿಗೂ ಕಡಿಮೆಯೇ ಆಗಿರುತ್ತದೆ. ಇಲ್ಲಿ ಹರಿಯುವ ನದಿಗಳೆಂದರೆ ಗುರುಪುರ(ಫಲ್ಗುಣಿ)ಮತ್ತು ನೇತ್ರಾವತಿ. ಸಾಮಾನ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯು ಮುಂಗಾರಿನ ತಿಂಗಳುಗಳಲ್ಲಿ ಧಾರಾಕಾರ ಮಳೆಯಿಂದ ಕೂಡಿದ್ದು (ಶೇಕಡಾ ಗರಿಷ್ಠ ಮಳೆಯ ಪ್ರಮಾಣವು ೪೯೩೦ ಮಿ.ಮೀಟರ್‌ನಷ್ಟು) ಅಧಿಕ ಆರ್ದ್ರತೆ (ವಾತಾವರಣದ ತೇವಾಂಶ) ಇರುತ್ತದೆ ಮತ್ತು ಅಧಿಕ ಉಷ್ಣಾಂಶದ ಹವೆಯನ್ನು ಸುಡು ಬೇಸಿಗೆಯ ಕಾಲದಲ್ಲಿ ಹೊಂದಿರುತ್ತದೆ.

## ಶಿಲಾವಲಂಬಿತ ಸಂಸ್ಕೃತಿಗಳು

ಕಳೆದ ನೂರು ವರ್ಷಗಳಲ್ಲಿ ನಡೆದಿರುವ ಪ್ರಾಚ್ಯ ಸಂಶೋಧನೆಗಳಿಂದ ದಕ್ಷಿಣ ಕನ್ನಡ ಜಿಲ್ಲೆಯು ಇತಿಹಾಸ ಪೂರ್ವಕಾಲದ ಅವಶೇಷಗಳಿಂದ ಹೊರತಾಗಿಲ್ಲವೆಂಬ ಅಂಶವು ವ್ಯಕ್ತವಾಗುತ್ತದೆ. ಪೂರ್ವೇತಿಹಾಸ ಕಾಲದ ಮಾನವನು – ಜಿಲ್ಲೆಯ ಹಲವು ಭಾಗಗಳಲ್ಲಿ ನೆಲೆಸಿರಬಹುದಾದ ಕುರುಹುಗಳು ಲಭ್ಯವಾಗಿವೆ. ಆದರೂ ಪಶ್ಚಿಮ ಕರಾವಳಿ ಭೂಭಾಗಗಳಲ್ಲಿ ಆದಿಮಾನವನು ಉಪಯೋಗಿಸುತ್ತಿದ್ದ ಒರಟು ಕಲ್ಲಿನ ಆಯುಧಗಳು ಹೇರಳವಾಗಿ ಲಭಿಸಿಲ್ಲ. ಇದಕ್ಕೆ ಪ್ರತಿಕೂಲವಾದ ಹವಾಗುಣವು ಜಿಲ್ಲೆಯಲ್ಲಿರುವುದು ಕೂಡ ಮುಖ್ಯ ಕಾರಣವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಮಹಾರಾಷ್ಟ್ರದ ಕರಾವಳಿ ಜಿಲ್ಲೆಗಳಾದ ಕೋಲಾಬಾ ಹಾಗೂ ರತ್ನಗಿರಿ ಜಿಲ್ಲೆಗಳಲ್ಲಿ (ಕೊಂಕಣ ಪ್ರಾಂತ್ಯದ) ಶಿಲಾಯುಗದ ನಿವೇಶನಗಳು (ಜೋಶಿ ಮತ್ತು ಬೋಪಾರ್ಡಿಕರ್, ೧೯೭೨), ಪ್ರಾಚ್ಯ ಸಂಶೋಧನೆಯಿಂದ ಪತ್ತೆಯಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಪತ್ತೆಯಾಗಿರುವ ಸ್ಥಿತ್ಯಂತರ ಸೂಕ್ಷ್ಮ ಶಿಲಾಯುಗದ ಸಂಸ್ಕೃತಿಯ ಕೆಲವು ನೆಲೆಗಳೆಂದರೆ ಪುತ್ತೂರು ತಾಲೂಕಿನ ಉಪ್ಪಿನಂಗಡಿ ಮತ್ತು ಬಂಟ್ವಾಳದ ಮಚ್ಚಿನ ಹಾಗೂ ಬಡಗಕಜೆಕಾರು. ಇತ್ತೀಚೆಗೆ ಗೋವಾ ಪ್ರಾಂತ್ಯದಲ್ಲೂ ಪೂರ್ವೇತಿಹಾಸ ಕಾಲದ ಹಲವು ನಿವೇಶನಗಳು ಪತ್ತೆಯಾಗಿವೆ. ಪ್ರಾಚೀನ ಶಿಲಾಯುಗದ ಪ್ರಥಮ ಹಂತದಲ್ಲಿ ಬೆಣಚು ಕಲ್ಲು (ಈ ಭೂವಲಯದಲ್ಲಿ ಪೂರ್ವ ಹಾಗೂ ಮಧ್ಯ ಶಿಲಾಯುಗದಲ್ಲಿ) ಆಯುಧಗಳ ನಿರ್ಮಾಣದಲ್ಲಿ ಬಳಕೆಯಾಗಿರುವುದು ಕೇರಳದ ಕಡಲತೀರದ ಹಲವಾರು ನಿವೇಶನಗಳಲ್ಲಿ ಲಭ್ಯವಿರುವುದು ಪ್ರೊ॥ ರಾಜೇಂದ್ರನ್ ೧೯೭೮ರಲ್ಲಿ ನಡೆಸಿದ ಉತ್ಖನನಗಳಿಂದ ವ್ಯಕ್ತವಾಗುತ್ತದೆ. ಮೇಲೆ ಹೆಸರಿಸಿರುವ ಸಂಶೋಧನೆಗಳ ಫಲವಾಗಿ ಪಶ್ಚಿಮ ಕರಾವಳಿ ಪರಿಸರವು ಮಾನವ ನೆಲೆಗೆ ಅನುಕೂಲವಾಗಿತ್ತೆಂಬ ಅಂಶವು ಸ್ಪಷ್ಟವಾಗುತ್ತದೆ. ಇದೇ ರೀತಿ ಭೌಗೋಳಿಕವಾಗಿ ಹಾಗೂ ಪರಿಸರಾತ್ಮಕವಾಗಿ ಕರ್ನಾಟಕದ ಕರಾವಳಿ, ಕೊಂಕಣ, ಗೋವಾ ಮತ್ತು ಕೇರಳ ಕಡಲ ತೀರಪ್ರದೇಶಗಳು ಏಕ ರೀತಿಯ ಲಕ್ಷಣಗಳನ್ನು ವ್ಯಕ್ತಪಡಿಸುತ್ತವೆಂಬುದು ಪ್ರಾಚ್ಯವಸ್ತು ತಜ್ಞರ ಅಭಿಪ್ರಾಯವಾಗಿದೆ. ಆದುದರಿಂದ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಅವಶೇಷಗಳು ಲಭ್ಯವಿಲ್ಲವೆಂಬುದಕ್ಕೆ ವೈಜ್ಞಾನಿಕವಾಗಿ ಸಂಶೋಧನೆಗಳು ನಡೆಸದೇ ಇರುವುದೇ ಕಾರಣವಾಗಿತ್ತೆಂಬ ಅಂಶವು ಹೆಚ್ಚು ವಾಸ್ತವವಾಗಿರುತ್ತದೆ. " ಕಾರವಾರದ ಬಳಿ ಜಂಬಿಟ್ಟಿಗೆಯಿಂದ ಆವೃತವಾಗಿರುವ ಸೂಕ್ಷ್ಮ ಶಿಲಾಯುಗ ಕಾಲದ ಮೂರು ನಿವೇಶನಗಳು ಪತ್ತೆಯಾಗಿವೆ" ಎಂದು ಸಂಶೋಧಕರಾದ ಎಸ್.ಎನ್. ರಾಜಗುರು ದಾಖಲಿಸಿರುತ್ತಾರೆ.

ಕರ್ನಾಟಕದ ಕರಾವಳಿ ಪರಿಸರದಲ್ಲಿ ನೂತನ ಶಿಲಾಯುಗದ ಅವಶೇಷಗಳೂ ಹೆಚ್ಚಾಗಿ ಲಭ್ಯವಿಲ್ಲ. ವಿರಳವಾದ ಹಲವು ನೂತನ ಶಿಲಾಯುಗದ ಆಧಾರಗಳನ್ನು ಬಿಟ್ಟರೇ ಈ ಪ್ರದೇಶದಲ್ಲಿ ಬೇರೆ ಯಾವುದೇ ಖಚಿತವಾದ ನಿವೇಶನಗಳೂ ಲಭ್ಯವಾಗಿಲ್ಲ. ಆದರೆ ಪ್ರಸಿದ್ಧ ಪುರಾತತ್ವ ಶಾಸ್ತ್ರಜ್ಞರಾದ ಡಾ॥ ಎಸ್.ಆರ್.ರಾವ್ ಮತ್ತು ಡಾ॥ ಅ.ಸುಂದರ ನಡೆಸಿದ ಸಂಶೋಧನೆಯ ಫಲವಾಗಿ (ಭಾರತೀಯ ಪುರಾತತ್ವ ವರದಿ, ೧೯೭೮–೭೯) ಹಲವು ನವಿರಾದ ಶಿಲಾಗೊಡಲಿಗಳು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲೂ ಹಾಗೂ ಗೋಕರ್ಣದ ಸಮೀಪ ಗಂಗಾವತಿ ತಾಲೂಕಿನ ಮಸ್ಕಿಯಲ್ಲಿ ದೊರೆತ ಅವಶೇಷಗಳ ಲಕ್ಷಣಗಳುಳ್ಳ ಮಣ್ಣಿನ ಪಾತ್ರೆಗಳು ಬೆಳಕಿಗೆ ಬಂದಿವೆ. ಇತ್ತೀಚೆಗೆ ಮಲೆನಾಡಿನ ಪ್ರದೇಶವಾದ ಶಿವಮೊಗ್ಗ ಜಿಲ್ಲೆಯಲ್ಲಿ ನೂತನ ಶಿಲಾಯುಗದ ಹಲವು ನಿವೇಶನಗಳನ್ನು ಪತ್ತೆಹಚ್ಚಲಾಗಿದೆ. ಡಾ॥ ಅ.ಸುಂದರ ಶಿವಮೊಗ್ಗ ನಗರದ ಹೊರವಲಯದಲ್ಲಿರುವ ಗುಡ್ಡೆಮರಡಿಯಲ್ಲಿ ನೂತನ ಶಿಲಾಯುಗದ ಅವಶೇಷಗಳನ್ನು ಸಂಶೋಧಿಸಿರುವರು. ಈ ನಿವೇಶನವು ಈಗಾಗಲೇ ವರದಿಯಾಗಿರುವ ಹಳ್ಳೂರು ನಿವೇಶನಕ್ಕೆ ೫೦ ಕಿ.ಮೀ. ದೂರದಲ್ಲಿದೆ. ಪಶ್ಚಿಮಘಟ್ಟದಲ್ಲಿರುವ ನೆಲಸ್ಕಲ್ ಎಂಬ ಸ್ಥಳದಲ್ಲಿ ನೂತನ ಶಿಲಾಯುಗದ ಅವಶೇಷಗಳು ದೊರೆತಿರುವುದು ಕುತೂಹಲಕಾರಿಯಾಗಿದೆ. ಈ ಸ್ಥಳವು ಹುಲಿಕಲ್ ಘಾಟ್ ರಸ್ತೆಯ ಮಾರ್ಗದಲ್ಲಿದ್ದು ಸ್ವಲ್ಪಮಟ್ಟಿಗೆ ಸಮತಟ್ಟಾದ ಪ್ರದೇಶದಲ್ಲಿದೆ. ಈ ಪ್ರದೇಶವು ಘಟ್ಟಪ್ರದೇಶದಿಂದ ಕಡಲತೀರ ಪ್ರದೇಶಕ್ಕೆ ಹೋಗಿಬರುವುದಕ್ಕೆ ಪ್ರಾಚೀನ ಕಾಲದಿಂದಲೂ ಅನುಕೂಲವಾಗಿದ್ದಂತೆ ತೋರುತ್ತದೆ.

## ಕಬ್ಬಿಣ/ ಬೃಹತ್ ಶಿಲಾಯುಗ ಸಂಸ್ಕೃತಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಬೃಹತ್ ಶಿಲಾಯುಗದ ಹಲವಾರು ನಿವೇಶನಗಳು ಪತ್ತೆಯಾಗಿವೆ. ಕಬ್ಬಿಣ ಯುಗದ ಮಾನವನ ಅಸ್ತಿತ್ವದ ಬಗ್ಗೆ ಬೃಹತ್ ಶಿಲಾಯುಗದ ಕಪ್ಪು ಮತ್ತು ಕೆಂಪು ಮಿಶ್ರಿತ ಮಣ್ಣಿನ ಪಾತ್ರೆಗಳು ಉತ್ತರ ಕನ್ನಡ ಜಿಲ್ಲೆಯ ಕಂತ್ರಾಜ್‌ನಲ್ಲೂ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಉದ್ಯಾವರದಲ್ಲೂ ಲಭ್ಯವಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕಬ್ಬಿಣ ಯುಗ/ ಬೃಹತ್ ಶಿಲಾಯುಗ ಸಂಸ್ಕೃತಿಯ ಪ್ರಮುಖ ನೆಲೆಗಳೆಂದರೆ ಐವರ್ನಾಡು (ಸುಳ್ಯ); ವಗೆನಾಡು; ಬಡಗ ಕಜೆಕಾರು (ಬಂಟ್ವಾಳ); ಪುತ್ತೂರು, ಬೀರಮಲೈ, (ಪುತ್ತೂರು) ಮೊದಲಾದುವು.

ಕರ್ನಾಟಕದ ಕರಾವಳಿಯ ಬೃಹತ್ ಶಿಲಾಗೋರಿಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದೆ. ೧) ಕಂಡಿಶಿಲಾಗೋರಿಗಳು, ೨) ಮೃತ್ಪಾತ್ರೆಗಳಲ್ಲಿ ಸಮಾಧಿ ಮಾಡಲಾಗಿರುವ ಗೋರಿಗಳು, ೩) ಬಂಡೆ ಕಡಿದು ನಿರ್ಮಿಸಲಾಗಿರುವ ಗುಹೆ ಸಮಾಧಿಗಳು ಮತ್ತು ೪) ಶಿಲಾಸ್ಮಾರಕ/ನಿಲುವುಗಲ್ಲುಗಳು.

**೧) ಬೃಹತ್ ಶಿಲಾಯುಗದ ಕಂಡಿ ಗೋರಿಗಳು:** ದಕ್ಷಿಣ ಭಾರತದಾದ್ಯಂತ ವ್ಯಾಪಿಸಿರುವ ಬೃಹತ್ ಶಿಲಾಯುಗದ ಕಂಡಿ ಗೋರಿಗಳು ನೀಲಗಿರಿ, ಕೊಡಗು, ಕೊಯಂಬತ್ತೂರು ಮತ್ತು ತಿರುಚಿನಾಪಳ್ಳಿಯ ಪಶ್ಚಿಮ ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಕರ್ನಾಟಕದ ಕರಾವಳಿಯಲ್ಲಿ ಬಡಗಕಜೆಕಾರು (ಡಾ॥ ಗುರುರಾಜಭಟ್–೧೯೬೯), ಬೇಲೂರು (ಡಾ॥ ಸುಂದರ – ೧೯೭೪:೭೯) ಮತ್ತು ಬಂಟ್ವಾಳ ತಾಲೂಕಿನ ಬೋರಕಟ್ಟಿ ಹಾಗೂ ಕೊಣಾಜೆಗಳಲ್ಲಿ ಬೃಹತ್ ಶಿಲಾಯುಗದ ಕಂಡಿಗೋರಿಗಳನ್ನು ಪತ್ತೆಹಚ್ಚಲಾಗಿದೆ. ಈ ಎಲ್ಲಾ ಶಿಲಾಗೋರಿಗಳು ಬೆಣಚುಕಲ್ಲು ನಿಕ್ಷೇಪಗಳು ಹೇರಳವಾಗಿ ದೊರೆಯುವ ಸ್ಥಳಗಳಲ್ಲಿ ಮಾತ್ರ ನಿರ್ಮಿತವಾಗಿರುವುದು ವ್ಯಕ್ತವಾಗುತ್ತದೆ. ಬಂಟ್ವಾಳ ತಾಲೂಕಿನ ಬಡಗಕಜೆಕಾರು ಪ್ರದೇಶವು ಇತಿಹಾಸ ಪೂರ್ವಕಾಲದ ಬೃಹತ್ ನಿವೇಶನವಾಗಿದ್ದು ಸುಮಾರು ಬೃಹತ್ ಶಿಲಾಯುಗದ ೩೦ ಕಂಡಿಗೋರಿಗಳನ್ನು ಡಾ॥ ಅ.ಸುಂದರ ಅವರು ೧೯೭೧ರಲ್ಲಿ ಪತ್ತೆಹಚ್ಚಿರುತ್ತಾರೆ. ಈ ಶಿಲಾಗೋರಿಗಳು ಒರಟಾದ ಬೃಹತ್ ಬಂಡೆಗಳಿಂದ ನಿರ್ಮಿತವಾಗಿದ್ದು ಮೇಲ್ಭಾಗದಲ್ಲಿ ಹೊದಿಸಿರುವ ಬೃಹತ್ ಬಂಡೆಯು – ಇತಿಹಾಸ ಪೂರ್ವಕಾಲದ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ಬೃಹತ್ ಶಿಲಾಯುಗದ ಒಂದು ಗೋರಿಯ ಮುಂಭಾಗದಲ್ಲಿ ಹೂಳಲಾಗಿರುವ ಅರ್ಧಚಂದ್ರಾಕಾರದ ಕಂಡಿಯನ್ನು ಹೊಂದಿರುವ ಕಲ್ಲು ಬಂಡೆಯು ಕಂಡುಬರುತ್ತದೆ. ಇಲ್ಲಿಂದ ವೀಕ್ಷಿಸಿದರೆ ಒಳ ಪ್ರವೇಶದ ಕಿರಿದಾದ ಒಳ ಹಾದಿಯು ಗೋಚರವಾಗುವುದು ಕುತೂಹಲಕಾರಿಯಾಗಿದೆ. ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಬೇಲೂರಿನಲ್ಲಿಯೂ ಇದೇ ಲಕ್ಷಣಗಳುಳ್ಳ ಬೃಹತ್ ಶಿಲಾಯುಗದ ಕಂಡಿಗೋರಿಗಳು ಕಂಡುಬರುತ್ತವೆ. ಬಡಗಕಜೆಕಾರು ನಿವೇಶನದಲ್ಲಿ ದೊರೆತಿರುವ ಬೃಹತ್ ಶಿಲಾಗೋರಿಗಳು ಉತ್ತರ ಕರ್ನಾಟಕದ ಕೊಣ್ಣೂರು, ಐಹೊಳೆ, ಹಗರಟಗಿ, ಅಕ್ಕರಗಾಲ ಮೊದಲಾದೆಡೆಗಳಲ್ಲಿ ದೊರೆತ ಶಿಲಾಗೋರಿಗಳ ಲಕ್ಷಣಗಳನ್ನು ಬಹಳಷ್ಟು ಮಟ್ಟಿಗೆ ಹೋಲುತ್ತದೆಂದು ಡಾ॥ ಅ.ಸುಂದರ ಅವರು ಅಭಿಪ್ರಾಯಪಡುತ್ತಾರೆ. ಹೀಗೆಯೇ ದಕ್ಷಿಣ ಕನ್ನಡ ಜಿಲ್ಲೆಯ ಬೋರಕಟ್ಟೆ ಮತ್ತು ಕೊಣಾಜೆಗಳಲ್ಲಿ ದೊರೆತಿರುವ ಬೃಹತ್ ಶಿಲಾಯುಗದ ಕಂಡಿಗೋರಿಗಳು ಬಡಗಕಜೆಕಾರು ಮತ್ತು ಬೇಲೂರುಗಳಲ್ಲಿ ದೊರೆತಿರುವ ಶಿಲಾಗೋರಿಗಳಿಗಿಂತಲೂ ಬೃಹದಾಕಾರವಾಗಿದ್ದು, ಮುಂಭಾಗದಲ್ಲಿರುವ ಕಂಡಿಗಳು ಪೂರ್ಣವಾಗಿ ವೃತ್ತಾಕಾರವಾಗಿರದೆ ಅರ್ಧಚಂದ್ರಾಕಾರವಾಗಿದೆ. "ರಾಯಚೂರು ಜಿಲ್ಲೆಯ ಹಿರೇ ಬೆಣಕಲ್ ಪರಿಸರದಲ್ಲಿ ಇದೇ ರೀತಿಯ ಕಂಡಿಗಳನ್ನು ಹೊಂದಿರುವ ಬೃಹತ್ ಶಿಲಾಗೋರಿಗಳು ಕಂಡುಬರುತ್ತವೆ" ಎಂದು ಡಾ॥ ಅ. ಸುಂದರ ಅವರು ದಾಖಲಿಸಿರುತ್ತಾರೆ.

ಈಗಾಗಲೇ ಗಮನಿಸಿದಂತೆ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ದೊರೆತಿರುವ ಬೃಹತ್ ಶಿಲಾಯುಗದ ಕಂಡಿ ಶಿಲಾಗೋರಿಗಳು, ಉತ್ತರ ಕರ್ನಾಟಕದ ಐಹೊಳೆ–ರಾಜನಕೊಳ್ಳೂರು ನೆಲೆಗಳಲ್ಲಿ ದೊರೆತಿರುವ ಸಮಕಾಲೀನ ಕಂಡಿ ಶಿಲಾಗೋರಿಗಳೊಂದಿಗೆ ಸಂಪೂರ್ಣ ಹೋಲಿಕೆಯನ್ನು ಹೊಂದಿವೆ, ಎಂಬ ಅಭಿಪ್ರಾಯವನ್ನು ಡಾ॥ ಅ.ಸುಂದರ ವ್ಯಕ್ತಪಡಿಸಿದ್ದು, ಈ ಬೃಹತ್ ಶಿಲಾಯುಗದ ಕಂಡಿಗೋರಿಗಳ ರಚನೆಯು ಸುಮಾರು ಕ್ರಿ.ಪೂ.೮೦೦ ರಿಂದ ಕ್ರಿ.ಪೂ.೬೦೦ರ ಅವಧಿಯಲ್ಲಿ ಆಗಿರಬಹುದೆಂದೂ ಅಭಿಪ್ರಾಯಪಡುತ್ತಾರೆ. ದಕ್ಷಿಣ ಕನ್ನಡದ ಬೋರಕಟ್ಟೆ ಮತ್ತು ಕೊಣಾಜೆಗಳಲ್ಲಿ ಪತ್ತೆಹಚ್ಚಲಾಗಿರುವ ಬೃಹತ್ ಶಿಲಾಯುಗದ ಕಂಡಿಗೋರಿಗಳು ರಾಯಚೂರು ಜಿಲ್ಲೆಯ ಹಿರೇಬೆಣಕಲ್‌ನಲ್ಲಿರುವ ಇದೇ ಕಾಲದ ಶಿಲಾಗೋರಿಗಳ ಲಕ್ಷಣಗಳನ್ನು ಹೋಲುತ್ತವೆಂದು ಡಾ॥ ಅ.ಸುಂದರ ಅವರು ದಾಖಲಿಸಿರುತ್ತಾರೆ. ಇವರೇ ತಿಳಿಸಿರುವಂತೆ ಹಿರೇ ಬೆಣಕಲ್‌ನ ಪೂರ್ವೇತಿಹಾಸದ ಅವಶೇಷಗಳು (ಕ್ರಿ.ಪೂ.೮೦೦) ಉತ್ತರ ಕರ್ನಾಟಕದ ರಾಜನಕೊಳ್ಳೂರು ಶಿಲಾಗೋರಿಗಳಿಗಿಂತಲೂ ಮೊದಲೇ ನಿರ್ಮಿತವಾಗಿರಬೇಕು. ಹೀಗಾಗಿ ದಕ್ಷಿಣ ಕನ್ನಡದ ಪೂರ್ವೇತಿಹಾಸವು, ರಾಜನಕೊಳ್ಳೂರಿನ ಅವಶೇಷಗಳಷ್ಟು ಪ್ರಾಚೀನವೆಂಬ ಅಂಶವು ವಿದ್ವಾಂಸರ ಗಮನವನ್ನು ಸೆಳೆಯುತ್ತದೆ. ಕರ್ನಾಟಕದ ಕರಾವಳಿ ಪ್ರದೇಶವು ಇತಿಹಾಸ ಪೂರ್ವಕಾಲದ ಪ್ರಮುಖ ನೆಲೆಯಾಗಿತ್ತೆಂಬ ಅಂಶವು ಈಗಾಗಲೇ ಚರ್ಚಿಸಿದಂತೆ ಸ್ವಯಂವೇದ್ಯವಾಗುತ್ತದೆ. ಪ್ರಮುಖವಾಗಿ ಕಬ್ಬಿಣ ಯುಗ ಹಾಗೂ ಬೃಹತ್ ಶಿಲಾಯುಗದ ಅವಶೇಷಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪತ್ತೆಯಾಗಿರುವುದರಿಂದ ಇತಿಹಾಸ ಪೂರ್ವಕಾಲದ ಘಟನಾವಳಿಗಳು ವೈಜ್ಞಾನಿಕವಾಗಿ ಕಾಲಾನುಕ್ರಮವಾಗಿ ದೊರೆಯದಿದ್ದರೂ, ಇವುಗಳು ಮುಂದಿನ ಸಂಶೋಧನಾತ್ಮಕ ಅಧ್ಯಯನಕ್ಕೆ ಬಹಳಷ್ಟು ಮಟ್ಟಿಗೆ ನೆರವಾಗುತ್ತಿದೆ.

**೨) ಮೃತ್ಪಾತ್ರೆಯ ಗೋರಿಗಳು:** ಬೃಹದಾಕಾರದ ಮಣ್ಣಿನ ಪಾತ್ರೆಗಳಲ್ಲಿ ಶವಗಳನ್ನು ಇಟ್ಟು ಹೂಳುವ ಪದ್ಧತಿಗೆ ಮೃತ್ಪಾತ್ರೆಯ

ಗೋರಿಗಳೆಂದು ಕರೆಯಲಾಗುತ್ತದೆ. ದಕ್ಷಿಣ ಭಾರತದ ಜಂಬಿಟ್ಟಿಗೆಯ ನಿಕ್ಷೇಪಗಳಿರುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಲಂಬಾಕೃತಿಯ ಮೃತ್ಪಾತ್ರೆಗಳಿರುವ ಗೋರಿಗಳಿದ್ದು, ಅವುಗಳ ಮೇಲ್ಭಾಗದಲ್ಲಿ ಕಲ್ಲುಗುಂಡು ಅಥವಾ ಜಂಬಿಟ್ಟಿಗೆಯ ಶಿಲಾವೃತ್ತಗಳನ್ನು ರಚಿಸುವುದು ಪೂರ್ವೇತಿಹಾಸ ಕಾಲದ ಸಾಮಾನ್ಯ ಆಚರಣೆಯಾಗಿತ್ತು. ಪೂರ್ವೇತಿಹಾಸ ಕಾಲದ ಸಾಂಸ್ಕೃತಿಕ ಹಿನ್ನೆಲೆಯ ಆಧಾರದ ಮೇಲೆ ಜೇಡಿಮಣ್ಣಿನಿಂದ ತಯಾರಿಸಲಾದ ಈ ರೀತಿಯ ಮೃತ್ಪಾತ್ರೆಗೋರಿಗಳನ್ನು ಬೃಹತ್ ಶಿಲಾಯುಗ ಕಾಲಕ್ಕೆ ನಿಗಧಿಪಡಿಸಲಾಗಿದೆ. ಕರ್ನಾಟಕದ ಕರಾವಳಿಯಲ್ಲಿ ಈ ರೀತಿಯ ಮೃತ್ಪಾತ್ರೆಯ ಗೋರಿಗಳು ಮೂರು ನಿವೇಶನಗಳಲ್ಲಿ ಕಂಡುಬರುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಬಳಿ ಈ ರೀತಿಯ ಏಳು ಮೃತ್ಪಾತ್ರಾ ಗೋರಿಗಳನ್ನು ಡಾ॥ ಅ.ಸುಂದರ ಅವರು ದಾಖಲಿಸಿರುತ್ತಾರೆ. ಇವುಗಳಲ್ಲಿ ಬಳಸಲಾಗಿರುವ ಮೃತ್ಪಾತ್ರೆಗಳು ಕೆಂಪು ಮಣ್ಣಿನಿಂದ ತಯಾರಾಗಿದ್ದು ದೊಡ್ಡದಾದ ಕಂಠಭಾಗ ಹಾಗೂ ವೃತ್ತಾಕಾರದ ತಳವನ್ನು ಹೊಂದಿವೆ. ಹೊರಭಾಗದಲ್ಲಿ ಕಲಾತ್ಮಕವಾದ ಚಿತ್ತಾರಗಳನ್ನು ಬಿಡಿಸಿರುವುದು ಇಲ್ಲಿ ದೊರೆತಿರುವ ಮೃತ್ಪಾತ್ರೆಗಳ ವೈಶಿಷ್ಟ್ಯವಾಗಿವೆ. ದಕ್ಷಿಣ ಭಾರತದ ಪೋರ್‌ಕಲಮ್‌ನಲ್ಲಿ ಪತ್ತೆಯಾಗಿರುವ ಮೃತ್ಪಾತ್ರೆಗಳನ್ನು ಇವು ಬಹಳಷ್ಟು ಮಟ್ಟಿಗೆ ಹೋಲುತ್ತವೆಂದು ಪ್ರೊ॥ ಬಿ.ಕೆ.ಥಾಪರ್ (Porkalam-1948, "Excavation of a Megalithic Urnburial", Ancient India No p.3-8 1952) ಅವರು ೧೯೫೨ರಲ್ಲೇ ದಾಖಲಿಸಿರುತ್ತಾರೆ. ಕರ್ನಾಟಕ ಕರಾವಳಿಯ ಈ ನಿವೇಶನಗಳಲ್ಲಿ ಕೆಂಪು–ಕಪ್ಪು ಮಿಶ್ರಿತವಾದ ಹಾಗೂ ಮೂರು ಕಾಲುಗಳಿರುವ ಮೃತ್ಪಾತ್ರೆಗಳು ಹೇರಳವಾಗಿ ಲಭಿಸಿದ್ದು, ದೊಡ್ಡದಾದ ಬಾಯಿ ಹಾಗೂ ವೃತ್ತಾಕಾರದ ಮಧ್ಯಭಾಗಗಳನ್ನು ಹೊಂದಿವೆ. ಇವುಗಳ ತಳಭಾಗವು ವೃತ್ತಾಕಾರವಾಗಿ ಕಿರಿದಾಗಿದ್ದು ಮಧ್ಯದಲ್ಲಿ ಉಬ್ಬಿರುತ್ತವೆ. ಇಲ್ಲಿ ದೊರೆತಿರುವ ಇತರೇ ಅವಶೇಷಗಳೆಂದರೆ ಕೆಂಪು ಹಾಗೂ ಕಪ್ಪು ಮಿಶ್ರಿತ ಮಣ್ಣಿನ ಬೋಗುಣಿ (Bowl), ಕಬ್ಬಿಣದ ಉಪಕರಣ, ಎರಡು ಚಿನ್ನದ ಆಭರಣ ಮತ್ತು ಕಂಚುಲೇಪಿತ ಕಬ್ಬಿಣದ ತಟ್ಟೆಗಳು. ಅದರಲ್ಲೂ ಇಲ್ಲಿ ದೊರೆತಿರುವ ಕಪ್ಪು ಮತ್ತು ಕೆಂಪು ಮಿಶ್ರಿತ ಮಣ್ಣಿನ ಆಟಿಕೆಗಳಂತಿರುವ ಬೋಗುಣಿಗಳು, ಶವಗಳಿರುವ ಮಡಿಕೆಗಳಲ್ಲಿ ದೊರೆತಿರುವುದು ಬಹಳ ಆಸಕ್ತಿಯುತವಾಗಿವೆ. ಇದೇ ರೀತಿಯ ಚಿಕ್ಕಚಿಕ್ಕ ಮಣ್ಣಿನ ಬೋಗುಣಿಗಳು ಕೊಡಗು (ಕೋಲ್ ೧೮೭೯) ಮತ್ತು ಬೆಲುವನ ಕೂಡಿಗೆಯ (ಡಾ॥ ಅ. ಸುಂದರ ೧೯೭೪) ಪೂರ್ವೇತಿಹಾಸದ ನೆಲೆಗಳಲ್ಲೂ ದೊರೆತಿವೆ.

ಹಿಂದಿನ ದಕ್ಷಿಣ ಕನ್ನಡದ ಕರಾವಳಿ ಪ್ರದೇಶದ ಕುಂದಾಪುರ ತಾಲೂಕಿನ ಬೇಲೂರು ಮತ್ತು ವಡ್ಡರ್ಸೆಯ ನೆಲೆಗಳಲ್ಲಿ ಡಾ॥ ಅ.ಸುಂದರ ಅವರು ೧೯೭೪ರಲ್ಲಿ ಮೃತ್ಪಾತ್ರೆಯ ಗೋರಿಗಳನ್ನು ದಾಖಲಿಸಿರುತ್ತಾರೆ. ಬೇಲೂರಿನಲ್ಲಿ ಕೆಂಪು ಮತ್ತು ಕಪ್ಪು ಮಿಶ್ರಿತ ಹಾಗೂ ಕೆಂಪು ಮಡಿಕೆ–ಕುಡಿಕೆಗಳ ಜೊತೆಗೆ ಹೂದಾನಿ, ಬೋಗುಣಿ ಹಾಗೂ ಇತರೆ ಗೃಹೋಪಯೋಗಿ ಅವಶೇಷಗಳು ದೊರೆತಿರುವುದು ಗಮನಾರ್ಹವಾಗಿದೆ.

**೩)ಕೊರೆದ ಬಂಡೆಯ ಗವಿಸಮಾಧಿಗಳು:** ಪುರಾತತ್ವ ಶಾಸ್ತ್ರಜ್ಞರಾದ ಡಾ॥ ಗುರುರಾಜರಾವ್ ಹಾಗೂ ಡಾ॥ ರಾಮಚಂದ್ರನ್ ಅವರ ಅಭಿಪ್ರಾಯದಂತೆ ಕೊರೆದ ಬಂಡೆಯ ಗವಿಸಮಾಧಿಗಳು ಬೃಹತ್ ಶಿಲಾಯುಗ ಕಾಲದ ರಚನೆಗಳಾಗಿದ್ದು ಸಾಮಾನ್ಯವಾಗಿ ಕೇರಳ ರಾಜ್ಯದಲ್ಲಿ ಮಾತ್ರ ಕಂಡುಬಂದಿದ್ದು, ವಿಶೇಷವೆಂದರೇ ಇತ್ತೀಚೆಗೆ ದಕ್ಷಿಣ ಕನ್ನಡ ಜಿಲ್ಲೆಯ ಎಂಟು ಸ್ಥಳಗಳಲ್ಲಿ ಹಲವು ಕೊರೆದ ಬಂಡೆಯ ಗವಿಸಮಾಧಿಗಳನ್ನು ಪತ್ತೆಹಚ್ಚಲಾಗಿದೆ. ಅವುಗಳೆಂದರೆ ಉಡುಪಿ ತಾಲೂಕಿನ ಮೂಡನಿಡಂಬೂರು, ಪೇರಂಪಳ್ಳಿ, ಸಾಂತೂರು ಮತ್ತು ಪರ್ಕಳ (ಸಂಶೋಧಿಸಿದವರು ಡಾ॥ ಪಿ. ಗುರುರಾಜಭಟ್ಟ) ಹಾಗೂ ಕುಂದಾಪುರ ತಾಲೂಕಿನ ಬೋಳುಗುಡ್ಡೆ ಅಮಾಸೆಬೈಲ್, ಮೈರುಕೊಮೆ ಮತ್ತು ಉಳತೂರುಗಳಲ್ಲಿಯೂ ಬೃಹತ್ ಶಿಲಾಯುಗದ ಕೊರೆದ ಬಂಡೆಯ ಗವಿಸಮಾಧಿಗಳು ಚದುರಿದಂತೆ ಕಂಡುಬರುತ್ತವೆ. ಮೂಡನಿಡಂಬೂರಿನಲ್ಲಿರುವ ಕೊರೆದ ಬಂಡೆಯ ಗವಿಸಮಾಧಿಯನ್ನು ಬಗ್ಗೆ ಡಾ॥ ಅ.ಸುಂದರ ಶೋಧಿಸಿರುತ್ತಾರೆ. "ಈ ಗವಿಯ ಶಿಲಾಗೋರಿಯು ವೃತ್ತಾಕಾರದ ಸ್ಥಳ ವಿನ್ಯಾಸವನ್ನು ಹೊಂದಿದ್ದು, ಮುಖ್ಯ ಗೋರಿಯು ಅರ್ಧಗೋಳಾಕಾರದ ಮೇಲ್ಭಾಗವನ್ನು ಹೊಂದಿದ್ದು ಮುಂಭಾಗದಲ್ಲಿ ವೃತ್ತಾಕಾರದ ಕಿಂಡಿಯಿರುವ ಬಂಡೆಯನ್ನು ಹೊಂದಿದೆ. ಈ ಗೋರಿಯ ಮೇಲ್ಭಾಗದಲ್ಲಿ ಹೊದಿಸಿರುವ ಬಂಡೆಯು ಒರಟಾಗಿದ್ದು ಬೃಹತ್ ಶಿಲಾಯುಗದ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ" ಎಂದು ಡಾ॥ ಅ.ಸುಂದರ ಅವರು ಅಭಿಪ್ರಾಯಪಡುತ್ತಾರೆ.

**೪)ಆದಿ ಮಾನವರ ನಿಲವುಗಲ್ಲುಗಳು (Menhirs):** ಕರ್ನಾಟಕ ಕರಾವಳಿಯಲ್ಲಿ ಆದಿ ಮಾನವನ ಕಾಲದ ನಿಲುವುಗಲ್ಲಿನ ಸ್ಮಾರಕವು ಪತ್ತೆಯಾಗಿದೆ. ಇದು ಕಾರವಾರದ ಬಳಿಯಿರುವ ಆಚಾರ್ಯಗದ್ದೆಯಲ್ಲಿದ್ದು, ಆರು ಒರಟಾದ ಕ್ಲೋರೈಟ್ ಸಿಸ್ಟ್‌ನ ಬಂಡೆಗಳು (ಸು. ೦.೫ ಉದ್ದವಿದ್ದು) ಲಂಬ ರೀತಿಯಲ್ಲಿ ನಿಲ್ಲಿಸಲ್ಪಟ್ಟಿವೆ. ಈ ಸಂದರ್ಭದಲ್ಲಿ ಪಶ್ಚಿಮ ಕರಾವಳಿಯ ಈಶಾನ್ಯದಲ್ಲಿ ನೆಲಾಸ್ಕಲ್ ಎಂಬ ನಿವೇಶನದಲ್ಲಿ ಪತ್ತೆ ಹಚ್ಚಲಾಗಿರುವ ನಿಲುವುಗಲ್ಲಿನ ಹಲವು ಸ್ಮಾರಕಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಕೇರಳ ಕರಾವಳಿ ಪ್ರದೇಶದ

ದಕ್ಷಿಣ ಭಾಗದಲ್ಲಿ ಮತ್ತು ಶಿವಮೊಗ್ಗ ಜಿಲ್ಲೆಯ ಆಗ್ನೇಯಕ್ಕಿರುವ ಗುಡ್ಡೆಮರಡಿ ಪ್ರದೇಶಗಳಲ್ಲೂ ಆದಿಮಾನವರ ನಿಲುವುಗಲ್ಲಿನ ಸ್ಮಾರಕಗಳು ಇತ್ತೀಚೆಗೆ ಪತ್ತೆಯಾಗಿವೆ.

## ಇತಿಹಾಸ ಕಾಲ

### ಮೌರ್ಯರ ಕಾಲ

ಮೌರ್ಯರ ಆಳ್ವಿಕೆಯು ಕರ್ನಾಟಕದಲ್ಲಿ ವ್ಯಾಪಿಸಿದ್ದ ಬಗ್ಗೆ ಅಶೋಕನ ಶಾಸನಗಳು ರಾಜ್ಯದ ವಿವಿಧ ಭಾಗಗಳಲ್ಲಿ ದೊರೆತಿರುವುದೇ ಸಾಕ್ಷಿಯಾಗಿದೆ. ಕ್ರಿಪೂ. ೨೭೩ ರಿಂದ ೨೩೨ರವರೆಗೆ ಕರ್ನಾಟಕವನ್ನು ಒಳಗೊಂಡಂತೆ ದಕ್ಷಿಣ ಭಾರತವನ್ನು ಆಳ್ವಿಕೆ ಮಾಡಿದ ಅಶೋಕನ ಎರಡನೆಯ ಶಿಲಾಲಿಪಿಗಳಲ್ಲಿ (Rock edicts) ಚೋಡಾ (ಚೋಳ), ಪಂಡಿಯಾ (ಪಾಂಡ್ಯ), ಕೇರಲ ಪುತ್ರ, ತಾಂಬ್ರಪರ್ಣಿ ಮತ್ತು ಸತಿಯಪುತ್ರ ಎಂಬ ರಾಜ್ಯಗಳನ್ನು ಅವನ ಸಾಮ್ರಾಜ್ಯದ ನೆರೆರಾಜ್ಯಗಳೆಂದು ಕರೆಯಲಾಗಿದೆ. ಈ ರಾಜ್ಯಗಳ ಪೈಕಿ ಚೋಳ ಮತ್ತು ಪಾಂಡ್ಯ ರಾಷ್ಟ್ರಗಳು ಇಂದಿನ ತಮಿಳುನಾಡಿಗೆ ಸರಿಹೊಂದುತ್ತವೆ; ಕೇರಳಪುತ್ರ (ಕೇರಳ ಪ್ರದೇಶ); ತಾಂಬ್ರಪರ್ಣಿ (ಇಂದಿನ ಶ್ರೀಲಂಕಾ ರಾಷ್ಟ್ರ); ಅಂದಿನ ಸತಿಯಪುತ್ರ ಬಹುಶಃ ಸಾತ್‌ಪುರ ಬೆಟ್ಟಗಳ ಶ್ರೇಣಿಗಳ ಪ್ರದೇಶವಿರಬಹುದೆಂದು ಅಭಿಪ್ರಾಯಪಡಲಾಗುತ್ತದೆ. ಒಂದು ಅಭಿಪ್ರಾಯದ ಪ್ರಕಾರ ಸತಿಯಪುತರು ಶಾತವಾಹನರ ಪೂರ್ವಜರು. ಆದರೆ, ಇದರ ಬಗ್ಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಅಶೋಕನ ಸಾಮ್ರಾಜ್ಯದಿಂದ ಹೊರಗಿದ್ದ ಪ್ರದೇಶವೆಂದರೇ ತುಳುನಾಡು. "ತುಳುಭಾಷೆಯು ಬಳಕೆಯಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯೇ ಅಶೋಕನ ಕಾಲದ ಸತಿಯಪುತ್ರವೆಂದು ಅಭಿಪ್ರಾಯ ಪಟ್ಟವರಲ್ಲಿ ಪ್ರಖ್ಯಾತ ಇತಿಹಾಸಕಾರರಾದ ವಿನ್ಸೆಂಟ್ ಸ್ಮಿತ್ ಮೊದಲಿಗರು" ಎಂದು ಡಾ॥ ಕೆ.ವಿ.ರಮೇಶ್ ಅಭಿಪ್ರಾಯಪಡುತ್ತಾರೆ. ಕ್ರಿ.ಶ. ಏಳನೇ ಶತಮಾನದ ಮಧ್ಯಭಾಗದಲ್ಲಿ ಇತಿಹಾಸದ ಪ್ರಭಾವಕ್ಕೆ ಒಳಗಾದ ನಂತರ ತುಳುನಾಡು ತನ್ನದೇ ಆದ ರಾಜಕೀಯ ಮತ್ತು ಸಾಂಸ್ಕೃತಿಕ ಪದ್ಧತಿಗಳನ್ನು ಹಾಗೂ ವಿಶಿಷ್ಟವಾದ ತುಳುಭಾಷೆಯನ್ನೂ ಬೆಳೆಸಿಕೊಂಡು ಬಂದಿರುವುದೇ ವಿನ್ಸೆಂಟ್‌ಸ್ಮಿತ್ ಅವರ ಈ ಅಭಿಪ್ರಾಯಕ್ಕೆ ಕಾರಣವೆಂದು ವಿದ್ವಾಂಸರು ತಿಳಿಸುತ್ತಾರೆ. "ಕೇರಳದ ಉತ್ತರಕ್ಕಿರುವ ಎತ್ತರವಾದ ಪಶ್ಚಿಮಘಟ್ಟಕ್ಕೆ ಸಹ್ಯಾದ್ರಿ ಎಂಬ ಹೆಸರು ಉಪಯೋಗಿಸಿ 'ಸಹ್ಯಾದ್ರಿ ಖಂಡ'ವೆಂದು ಕರೆದಿರುವುದು ಕರ್ನಾಟಕದ ಕರಾವಳಿಗೆ ಅನ್ವಯಿಸುವಂತೆ ಅಶೋಕನ ಕಾಲದ ಸತಿಯಪುತ್ರವು ಸಂಸ್ಕೃತದ 'ಸಹ್ಯಪುತ್ರ'ದ ಪ್ರಾಕೃತ ರೂಪವಾಗಿರಬೇಕು. ಹಾಗೆಯೇ "ಕೇರಳಪುತ್ರವು" ಅಶೋಕನ ಶಾಸನ ಒಂದರಲ್ಲಿ 'ಕೇತಪುತ್ರ'ವೆಂದು ಉಲ್ಲೇಖಗೊಂಡಿರುವುದು ವಿನ್ಸೆಂಟ್‌ಸ್ಮಿತ್ ಅವರ ಅಭಿಪ್ರಾಯಕ್ಕೆ ಪೂರಕವಾಗಿದೆ" ಎಂದು ಡಾ॥ ಕೆ.ವಿ.ರಮೇಶ್ ಅವರೇ ಅಭಿಪ್ರಾಯಪಡುತ್ತಾರೆ. "ಪಾಲಿ ಭಾಷೆಯಲ್ಲಿ ಪುತ ಎಂದರೇ ಪುತ್ರ ಎಂಬ ಅರ್ಥವಿದ್ದು 'ಜನಾಂಗಕ್ಕೆ ಸೇರಿದವ' ನೆಂದು ಅರ್ಥ, ಆದುದರಿಂದ 'ಸಹ್ಯಪುತ್ರವು' ಸಹ್ಯಾದ್ರಿಯಲ್ಲಿ ಮತ್ತು ಅದರ ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ನೆಲೆಸಿರುವ ತುಳುವರಿರಬಹುದು" ಎಂದು ಅವರು ತಿಳಿಸುತ್ತಾರೆ. ತಮಿಳಿನ ಸಂಗಮ್ ಸಾಹಿತ್ಯದಲ್ಲೂ "ಮೆಯ್ಮಲಿ ಪೆರುಂಪೂಣ್ ಚೆಮ್ಮಕೋಶರ್......... ತುಳುನಾಡು" ಅಂದರೆ "ಸುವರ್ಣ ಆಭರಣಗಳಿಂದ ಅಲಂಕೃತರಾದ ಕೋಶರ್ ಜನಾಂಗದ ತುಳುನಾಡು" ಎಂದು ವಿದ್ವಾಂಸರು ಅರ್ಥೈಸುತ್ತಾರೆ.

ಒಟ್ಟಿನಲ್ಲಿ ಕ್ರಿಸ್ತಶಕದ ಆರಂಭದಲ್ಲಿ ತುಳುನಾಡಿನಲ್ಲಿ ಕೋಶರ್ ಜನಾಂಗದವರು ದಕ್ಷಿಣ ಭಾರತದ ಎಲ್ಲೆಡೆ ನೆಲೆಸಿದ್ದರೆಂದೂ ಹಾಗೂ ಪ್ರಬಲರಾಗಿದ್ದರೆಂದೂ ಗ್ರಹಿಸಬಹುದಾಗಿದೆ. ತಮಿಳು ಸಾಹಿತ್ಯದ ಆಧಾರದ ಮೇಲೆ ಕ್ರಿಪೂ.೨೩೨ರಲ್ಲಿ ಅಶೋಕನ ನಿಧನಾನಂತರ ತುಳುನಾಡಿನ ಉತ್ತರಕ್ಕಿದ್ದ ಮೌರ್ಯ ಸಾಮ್ರಾಜ್ಯದ ಭಾಗವಾಗಿ ಕೊಂಕಣವು ಮೌರ್ಯವಂಶದ ಬೇರೊಂದು ಶಾಖೆಗೆ ಸೇರಿದ ರಾಜರುಗಳ ಆಳ್ವಿಕೆಗೊಳಗಾಯಿತು. ಆದರೆ, ಕೋಶರ್ ಹಾಗೂ ಮೌರ್ಯರ ಸಂಬಂಧಗಳು ಹೆಚ್ಚು ಕಾಲ ಮುಂದುವರೆಯಲಿಲ್ಲ. ಕೊಂಕಣದ ರಾಜ ನನ್ನನ್ ಎಂಬಾತನು ಕೋಶರನ್ನು ಪರಾಭವಗೊಳಿಸಿ ಅವರನ್ನು ಕೊಂಕಣ ಮತ್ತು ತುಳುನಾಡಿನಿಂದ ಹೊರದೂಡಿ ತುಳುನಾಡನ್ನು ತನ್ನ ವಶಕ್ಕೆ ತೆಗೆದುಕೊಂಡನು. ಅನಂತರ ತುಳುನಾಡು ಚೇರರ ಆಳ್ವಿಕೆಗೆ ಒಳಪಟ್ಟಿತು. ಚೇರರಾಜ ನಾರ್ಮುಡಿ ಚೇರನ್ ಎಂಬಾತನು ನನ್ನನ್ ರಾಜನ ಆಳ್ವಿಕೆಯನ್ನು ಕೊನೆಗಾಣಿಸಿದನೆಂದು ಪ್ರತೀತಿಯಿದೆ. ನನ್ನನ್ ರಾಜನು ಯಾವಾಗ ಎಷ್ಟು ಸಮಯ ಆಳ್ವಿಕೆ ಮಾಡಿದನೆಂಬುದು ಖಚಿತವಾಗಿ ವ್ಯಕ್ತವಾಗುವುದಿಲ್ಲ. ಆದರೆ, ಡಾ॥ ಕೆ.ವಿ. ರಮೇಶ್ ಅವರೇ ಅಭಿಪ್ರಾಯಪಡುವಂತೆ ಅವನು ಕ್ರಿ.ಶ.ದ ಮೊದಲ ಮೂರು ಶತಮಾನಗಳಲ್ಲಿ ಆಳ್ವಿಕೆ ಮಾಡಿರಬಹುದೆಂದು ಗ್ರಹಿಸಬಹುದಾಗಿದೆ.

ಗ್ರೀಸ್ ದೇಶದ ಭೂಗೋಳಶಾಸ್ತ್ರಜ್ಞ ಟಾಲೆಮಿಯು ಕ್ರಿ.ಶ. ಎರಡನೆಯ ಶತಮಾನದಲ್ಲಿ ಭಾರತದ ಒಲೊಖೊಯ್ರವು ಕಡಲುಗಳ್ಳರ ಕೇಂದ್ರವಾಗಿತ್ತೆಂದು ದಾಖಲಿಸಿರುತ್ತಾನೆ. ಈ 'ಒಲೊಖೊಯ್ರವು' ಆಳುವಖೇಡ(ಅಂದರೆ ತುಳುನಾಡು)ವೆ ಇರಬೇಕೆಂದು ಕೆಲವು ವಿದ್ವಾಂಸರು

ಅಭಿಪ್ರಾಯಪಟ್ಟಿರುತ್ತಾರೆ. ಇದೇ ರೀತಿ ಕ್ರಿ.ಶ. ಎರಡನೇ ಶತಮಾನದ ಪೂರ್ವಾರ್ಧದಲ್ಲಿ ಆಳಿದ ಶಾತವಾಹನ ಚಕ್ರವರ್ತಿ ಗೌತಮೀಪುತ್ರ ಶಾತಕರ್ಣಿಯ ಮಹಾರಾಷ್ಟ್ರದ ನಾಸಿಕ್‌ನ ಶಿಲಾಶಾಸನದಲ್ಲಿ ಮಲಯಾದ್ರಿ ಮತ್ತು ಸಹ್ಯಾದ್ರಿಗಳು ಅವನ ಅಧೀನದಲ್ಲಿದ್ದುವೆಂದು ದಾಖಲಿಸಲಾಗಿದೆ. ಆದರೆ, ಈ ಶಾಸನದಲ್ಲಿ ಉಲ್ಲೇಖಿಸಲಾಗಿರುವ ಸಹ್ಯಾದ್ರಿಯು ತುಳುನಾಡನ್ನು ಒಳಗೊಂಡಿತ್ತೋ ಇಲ್ಲವೋ ಎಂದು ಖಚಿತವಾಗಿ ಹೇಳಲು ಸಾಕಷ್ಟು ಆಧಾರಗಳು ದೊರೆಯಬೇಕಾಗಿದೆ. ಅನಂತರ ಕಾಲದಲ್ಲಿ ಅಂದರೆ ಕ್ರಿ.ಶ. ನಾಲ್ಕನೇ ಶತಮಾನದಲ್ಲಿ ಬನವಾಸಿಯಲ್ಲಿ ಸ್ಥಾಪಿತವಾದ ಕದಂಬರ ಮಯೂರಶರ್ಮನ ರಾಜ್ಯವು ತುಳುನಾಡನ್ನು ತನ್ನ ಆಡಳಿತದ ಎಲ್ಲೆಯಲ್ಲಿ ಹೊಂದಿತ್ತೆಂದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಕ್ರಿ.ಶ. ಐದನೇ ಶತಮಾನದ ಮಧ್ಯಭಾಗದಲ್ಲಿ ತುಳುವ ನಾಡು ಕದಂಬರ ಅಧೀನದಲ್ಲಿತ್ತೆಂದು ತಿಳಿದುಬರುತ್ತದೆ. ಸಹ್ಯಾದ್ರಿಖಂಡದಲ್ಲಿ ಮಯೂರಶರ್ಮನು ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ತುಳುನಾಡಿಗೆ ಕರೆತಂದು ಅವರನ್ನು ಅಲ್ಲಿಯೇ ೩೨ ಗ್ರಾಮಗಳಲ್ಲಿ ನೆಲೆಗೊಳಿಸಿದನೆಂದು ಸ್ಥಳಪುರಾಣಗಳಲ್ಲಿ ದಾಖಲಿಸಲಾಗಿದೆ. "ಒಂದು ಕಾಲದಲ್ಲಿ ಹೊಲೆಯರು ಹಾಗೂ ಕೊರಗರಿಗೆ ಅವರದೇ ವರ್ಗದ "ಹಬಶಿಕ" ಎಂಬ ರಾಜನಿದ್ದನಂತೆ. ಅವನು ಕದಂಬರನ್ನು ಸೋಲಿಸಿದ್ದನೆಂದು ಪ್ರತೀತಿಯಿದೆ. ಹೈಗ ಬ್ರಾಹ್ಮಣ ಚರಿತ್ರೆಯ ರೀತ್ಯಾ 'ಮೊಗೆಯರ್' ಮತ್ತು 'ಪರೆಯರ್' (ಹೊಲೆಯರು) ಗಳಿಂದ ಆಕ್ರಮಿಸಲ್ಪಟ್ಟಿದ್ದ ತುಳುನಾಡನ್ನು ನೋಡಲು ಸನ್ಯಾಸಿಯೊಬ್ಬ ಬಂದು, ನಂತರ ಬನವಾಸಿಯ ದೊರೆ ಗುತ್ತಿಯ ಮಯೂರವರ್ಮನನ್ನು ತುಳುನಾಡನ್ನು ವಶಪಡಿಸಿಕೊಳ್ಳುವಂತೆ ಪ್ರೇರೇಪಿಸಿದನಂತೆ. ತೆಲಂಗಾಣದ ಬ್ಯಾಡರ್ ವರ್ಗದವನಾದ ಅವನು ಹೈಗ, ತುಳುವ ಹಾಗೂ ಕೊಂಕಣಗಳನ್ನು ಜಯಿಸಿ, ಐದು ಸಾವಿರ ಬ್ರಾಹ್ಮಣರನ್ನು ಅಹಿಚ್ಛತ್ರಪುರದಿಂದ ಕರೆತಂದು ಹೈಗದಲ್ಲಿ ನೆಲೆಸಿದನು ಎಂದು ಪ್ರತೀತಿಯಿದೆ. ಆದರೆ, ನಂತರ ಬಂದ ಹೊಲೆಯರ ರಾಜ ಉತಾಂಗನ ಮಗ ನಂದನು ಮಯೂರನನ್ನು ಓಡಿಸಿ ತನ್ನ ಪೂರ್ವಜರ ರಾಜ್ಯವನ್ನು ಮತ್ತೆ ಪಡೆದುಕೊಂಡು ಅಲ್ಲಿದ್ದ ಬ್ರಾಹ್ಮಣರನ್ನೆಲ್ಲಾ ಅಹಿಚ್ಛತ್ರಪುರಕ್ಕೆ ವಾಪಸ್ಸು ಅಟ್ಟಿದನು" ಎಂದು ಸಂಶೋಧಕರಾದ ಡಾ॥ ಎಂ.ಜಿ.ನಾಗರಾಜ್ ಅಭಿಪ್ರಾಯಪಡುತ್ತಾರೆ.

ತುಳುನಾಡು ಕದಂಬರ ಆಧಿಪತ್ಯಕ್ಕೆ ಕ್ರಿ.ಶ.ಐದನೇ ಶತಮಾನದ ಮಧ್ಯಭಾಗದಲ್ಲಿ ಒಳಪಟ್ಟಿತ್ತೆಂದು, ಹಲ್ಮಿಡಿ ಶಿಲಾಶಾಸನದಿಂದ ವೇದ್ಯವಾಗುತ್ತದೆ. ಕದಂಬ ಕಾಕುಸ್ಥವರ್ಮನ ಆಳ್ವಿಕೆಯಲ್ಲಿ ಆಳಪಗಣನಾಯಕನೂ ಭಟರಿಕುಲದವನೂ ಆದ ಪಶುಪತಿಯ ಆದೇಶದ ಮೇರೆಗೆ ಕೇಕಯ ಪಲ್ಲವರೊಡನೆ ಹೋರಾಡಿ ಅವರನ್ನು ಸೋಲಿಸಿದ್ದ ಎಲ್ಲ–ಭಟರಿಯ ಮಗ ಸಳ್ಬಂಗದ ವಿಜಾಅರಸನಿಗೆ ಪಲ್ಮಡಿ, ಮೂಳ್ಗಿವಳ್ಳಿ ಎಂಬ ಎರಡು ಗ್ರಾಮಗಳನ್ನು ದತ್ತಿಯಾಗಿ ನೀಡಿದ ವಿಚಾರವನ್ನು ಹಲ್ಮಿಡಿ ಶಾಸನದಲ್ಲಿ ದಾಖಲಿಸಲಾಗಿದೆ. 'ಆಳುಪ' ಎಂಬ ಕುಲನಾಮವು ಈ ಶಾಸನದಲ್ಲಿ 'ಅಳಪ'ವೆಂದು ಉಲ್ಲೇಖಗೊಂಡಿರುವುದು ಹಾಗೂ ಪಶುಪತಿಯು ಕ್ರಿ.ಶ. ಐದನೇ ಶತಮಾನದ ಮಧ್ಯಭಾಗದಲ್ಲಿ ತುಳುನಾಡನ್ನು ಆಳುತ್ತಿದ್ದ ಆಳುಪರಾಜನೆಂದೂ ಮತ್ತು ಅವನು ಕದಂಬವಂಶದ ಕಾಕುಸ್ಥವರ್ಮನ ಸಾಮಂತನಿದ್ದನೆಂದೂ ಮೈಸೂರು ಪುರಾತತ್ವ ಸಂಶೋಧನಾ ಇಲಾಖೆಯ ೧೯೩೬ ರ ವಾರ್ಷಿಕ ವರದಿಯಲ್ಲಿ ಪ್ರತಿಪಾದಿಸಲಾಗಿದೆ. ದತ್ತಿಗ್ರಾಮಗಳಾದ ಪಲ್ಮಡಿ ಮತ್ತು ಮೂಳ್ಗಿವಳ್ಳಿ ಹಾಸನ ಜಿಲ್ಲೆಯಲ್ಲೂ ಮತ್ತು ವಿಜಾಅರಸನ ಸ್ವಂತ ಊರಾದ ಸಳ್ಬಂಗವು ಶಿವಮೊಗ್ಗ ಜಿಲ್ಲೆಯಲ್ಲೂ ಇದ್ದು ಅವು ತುಳುನಾಡಿನ ಎಲ್ಲೆಗಳಿಗೆ ಸಮೀಪದಲ್ಲಿವೆ. ಅನಂತರ ಕ್ರಿ.ಶ.೭–೯ನೇ ಶತಮಾನಗಳಲ್ಲಿ ಆಳಿದ ಆಳುಪ ಅರಸರುಗಳ ಅಧಿಕಾರವು ಶಿವಮೊಗ್ಗ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ವ್ಯಾಪಿಸಿತ್ತು.

**ಆಳುಪರು**

ದಕ್ಷಿಣ ಕನ್ನಡ ಜಿಲ್ಲೆಯನ್ನು ಆಳಿದ ಪ್ರಬಲ ರಾಜವಂಶಗಳ ಪೈಕಿ ಪ್ರಾಚೀನ ರಾಜವಂಶವೆಂದರೆ ಆಳುಪರದು. 'ಆಳುಪ' ಎಂಬ ಪದದ ಅರ್ಥದ ಬಗ್ಗೆ ಹಲವಾರು ಅಭಿಪ್ರಾಯಗಳು ವ್ಯಕ್ತವಾಗಿವೆ. ಡಾ॥ ಬಿ.ಎ.ಸಾಲೆತೂರ್ ಅವರ ಪ್ರಕಾರ 'ಆಳುಪ' ಎಂಬ ಪದವು "ಆಳುಕ" ಎಂಬ ಮೂಲದಿಂದ ರೂಢಿಗೆ ಬಂದಿರಬೇಕು. ಜಾನ್‌ಫ್ಲೀಟ್ ಅವರ ಪ್ರಕಾರ 'ಆಳುಪ' ಎಂದರೆ 'ಶೇಷ' ಎಂಬ ಅರ್ಥವಿರುವ ಕಾರಣ ಈ ರಾಜವಂಶವು 'ನಾಗವಂಶ'ದ ಮೂಲವೆಂದು ವ್ಯಕ್ತವಾಗುತ್ತದೆ. ಆದರೆ, ಹೆಸರಾಂತ ಚಿಂತಕರಾದ ಡಾ॥ ಗೋವಿಂದ ಪೈ ಅವರು ಈ ವಂಶದ ಮೂಲವನ್ನು 'ಜೀಮೂತವಾಹನ'ನಿಗೆ ಸಂಬಂಧಿಸಿರುವುದು ಗಮನೀಯವಾಗಿದೆ. ಪ್ರಸಿದ್ಧ ಭೂಗೋಳ ತಜ್ಞ ಟಾಲೆಮಿ ಹೆಸರಿಸಿರುವ 'ಒಲೋಖೊಯಿರಾ' ವನ್ನು ಆಳ್ವಖೇಡವೆಂದು ಗುರುತಿಸಲಾಗಿದೆ. ರಾಷ್ಟ್ರಕೂಟ ಮೂರನೆ ಗೋವಿಂದನ (ಕ್ರಿ.ಶ.೭೯೩–೮೧೪) ಮಾವಳಿ ಶಾಸನದಲ್ಲಿ ಉಲ್ಲೇಖಗೊಂಡಿರುವ ಈ ವಂಶನಾಮವು ನಂತರದ ಕಾಲದಲ್ಲಿ 'ಆಳುಕ' ಎಂಬ ಪದದ ರೂಢಿಗೆ ಬದಲು 'ಆಳ್ವ' ಅಥವಾ 'ಆಳುವ' ಪದಗಳ ರೂಪ ಪಡೆದು 'ಆಳುಪ' ಎಂಬ ಮೂಲಪದದ ಛಾಯೆಯನ್ನು ಹೆಚ್ಚು ಹೋಲುತ್ತವೆಂಬ ಅಂಶವು ಸ್ಪಷ್ಟವಾಗುತ್ತದೆ. ಶಾಸನಗಳಲ್ಲಿ ಉಲ್ಲೇಖಿಸಲಾದ 'ಆಳುಪ', 'ಅಲುಪ', 'ಆಳುವ' ಮತ್ತು 'ಆಳ್ವ' ಪದಗಳು ಸಾಮಾನ್ಯವಾಗಿ ನಮ್ಮ ಗಮನ

ಸೆಳೆದರೂ ಮಂಗಳೇಶನ ಮಹಾಕೂಟ ಸ್ಥಂಭ ಶಾಸನದಲ್ಲಿ 'ಆಳುಕ' ಎಂದು ಉಲ್ಲೇಖಗೊಂಡಿರುವುದು ವಿದ್ವಾಂಸರ ಕುತೂಹಲಕ್ಕೆ ಕಾರಣವಾಗಿದೆ. ಮಂಗಳೂರಿನ ಗೊಲ್ಲರ ಗಣಪತಿ ದೇವಾಲಯದಲ್ಲಿರುವ ಆಳುಪರ ಶಾಸನದಲ್ಲಿ, ಐದು ಹೆಡೆ ಸರ್ಪದ ಉಬ್ಬು ಶಿಲ್ಪವು ಪ್ರಮುಖವಾಗಿ ಮೇಲ್ಭಾಗದಲ್ಲಿ ಕಂಡುಬರುವುದರಿಂದ ಆಳುಪರು ನಾಗಾರಾಧನೆಯ ಮೂಲವಂಶದವರೆಂಬುದು ಸ್ಪಷ್ಟವಾಗುತ್ತದೆ ಎಂದು ಡಾ॥ ಸಾಲೆತೂರ್ ಅವರು ಅಭಿಪ್ರಾಯಪಡುತ್ತಾರೆ. ಇದೇ ರೀತಿ ಈ ಶಾಸನದಿಂದ ಆಳಪರು ಮೂಲತ: ಶೈವಾರಾಧಕರೆಂದೂ ವ್ಯಕ್ತವಾಗುತ್ತದೆಂದು ಡಾ॥ ಕೆ.ವಿ.ರಮೇಶ್ ಅವರೂ ಅಭಿಪ್ರಾಯಪಡುತ್ತಾರೆ. ವಡ್ಡರ್ಸೆಯ ಕ್ರಿ.ಶ.೭ನೇ ಶತಮಾನದ ಶಾಸನದಲ್ಲಿ 'ಆಳುವ' ಪದವು ಪ್ರಯೋಗವಾಗಿರುವುದರಿಂದ, ಶಾಸನತಜ್ಞ ಹಲ್ಟ್ಸ್ ಅವರು 'ಆಳ್' ಅಥವಾ 'ಆಳ್ವ' ಪದಗಳು ಆಡಳಿತದ ಸಂಕೇತಗಳಾಗಿರುವುದರಿಂದ 'ಆಳ್ವ', 'ಆಳುಪ' ರಾಜರಿಗೆ ಸಂಬಂಧಿಸಿದೆ ಎಂದು ಅಭಿಪ್ರಾಯಪಡುತ್ತಾರೆ. ಹೀಗಾಗಿ, 'ಆಳುಪ' ಶಬ್ದವು 'ಆಳ್ವಿಕೆ ನಡೆಸುವುದು', 'ಪ್ರಭುತ್ವ ಮಾಡುವುದು', ಅಧಿಕಾರ ನಡೆಸು ಎನ್ನುವ ವಿವಿಧ ಅರ್ಥಗಳಿರುವ 'ಆಳ್' ಎಂಬ ದ್ರಾವಿಡ ಧಾತುವಿನಿಂದ ಹುಟ್ಟಿದುದು. "ಬ್ರಹ್ಮಾಂಡ, ಪದ್ಮ ಮತ್ತು ವಾಮನ ಪುರಾಣಗಳಲ್ಲಿ ಒಂದು ಜನಾಂಗದ ಅಥವಾ ರಾಜ್ಯದ ಅಥವಾ ರಾಜವಂಶದ ಹೆಸರಾಗಿ ಉಕ್ತವಾಗಿರುವ 'ಆಲಿಕ', 'ಆಲವ', 'ಆಲಕ' ಶಬ್ದಗಳು 'ಆಳುಪ' ಜನಾಂಗ ಇಲ್ಲವೇ ದೇಶ ಇಲ್ಲವೇ ರಾಜವಂಶವಿರಬಹುದೆಂದು" ಪ್ರಸಿದ್ಧ ಶಾಸನತಜ್ಞ ಡಾ॥ ಸರ್ಕಾರ್ ಅಭಿಪ್ರಾಯಪಡುತ್ತಾರೆ. ಆಳುಪರು ಸೋಮವಂಶಜರಿದ್ದು ತಮಿಳುನಾಡಿನ ಪಾಂಡ್ಯರಂತೆ ಮೀನ ಲಾಂಛನೋಪೇತರು ಅಲ್ಲದೇ ತಮ್ಮನ್ನು ಪಾಂಡ್ಯವಂಶದವರೆಂದೂ ಕರೆದುಕೊಳ್ಳುತ್ತಾರೆ. ಆಳುಪರ ಬಗ್ಗೆ ದೊರೆತಿರುವ ವೈವಿಧ್ಯಮಯವಾದ ಪದಗಳು ರೂಢಿಯಲ್ಲಿದ್ದು ಅವುಗಳ ಬಗ್ಗೆ ವಿದ್ವಾಂಸರುಗಳು ಪ್ರತ್ಯೇಕ ಅಭಿಪ್ರಾಯಗಳನ್ನು ಹೊಂದಿದ್ದರೂ ಆಳುಪರ ಪ್ರಾಚೀನತೆಯ ಬಗ್ಗೆ ಏಕರೀತಿಯ ಅಭಿಪ್ರಾಯವು ವ್ಯಕ್ತವಾಗಿದೆ. ಕೇರಳದ ತಿರುವನಂತಪುರದಲ್ಲಿ ದೊರೆತಿರುವ 'ಪ್ರಪಂಚ ಹೃದಯ" ವೆಂಬ ಸಂಸ್ಕೃತ ಕಾವ್ಯದಲ್ಲಿ ಪರಶುರಾಮನು ಸಾಂಪ್ರದಾಯಿಕವಾಗಿ ಸೃಷ್ಟಿಸಿದ ಏಳು ಕೊಂಕಣ (ಸಪ್ತ ಕೊಂಕಣ)ರುಗಳ ಪೈಕಿ 'ಆಳುವ' ಸಹ ಒಂದೆಂದು ಪರಿಗಣಿಸಲಾಗಿದೆ. ಈ ಕಾವ್ಯವು ಯಾವಾಗ ರಚಿತವಾಯಿತೆಂದು ಇನ್ನೂ ಖಚಿತವಾಗಿರುವುದಿಲ್ಲ. ಆಳುಪರ ಬಗ್ಗೆ ಪ್ರಸಿದ್ಧ ಹಲ್ಮಿಡಿ ಶಾಸನದಲ್ಲಿ (ಕ್ರಿ.ಶ.೪೫೦) ಉಲ್ಲೇಖವಿದೆ ಎಂದು ಈಗಾಗಲೇ ಹೇಳಲಾಗಿದೆ. ಆಳುಪರು ಮೂಲದಿಂದಲೂ ಶಿವಭಕ್ತರಾಗಿದ್ದರು. ಅವರು ತಮ್ಮ ರಾಜಧಾನಿಯಾಗಿದ್ದ (ಉದಯಪುರ) ಉದ್ಯಾವರದಲ್ಲಿ ಶಂಭುಕಲ್ಲ ದೇವಾಲಯವನ್ನು ನಿರ್ಮಿಸಿ ಆರಾಧಿಸುತ್ತಿದ್ದರೆಂದು ಪ್ರತೀತಿಯಿದೆ. ಆಗಿನ ಕಾಲದಲ್ಲಿ ಉದಯಪುರದ ಸುತ್ತಮುತ್ತಲಿನ ಶಿವಳ್ಳಿಯು ಉತ್ತರಭಾರತದ ವಾರಣಾಸಿಯ ಹಾಗೆ ಒಂದು ಪವಿತ್ರ ಕ್ಷೇತ್ರವಾಗಿದ್ದಿತು.

ಕದಂಬ ರವಿವರ್ಮನ (೪೮೫–೫೧೯ ಕ್ರಿ.ಶ.) ಗುಡ್ನಾಪುರ ಶಾಸನದಲ್ಲಿ ಆಳುಪರನ್ನು ಹಲವಾರು ಸಾಮಂತ ರಾಜರುಗಳ ಪೈಕಿ ಒಬ್ಬರೆಂದು ದಾಖಲಿಸಲಾಗಿದೆ. ಚಲುಕ್ಯ ವಂಶದ ಇಮ್ಮಡಿ ಪುಲಿಕೇಶಿಯ ಪ್ರಸಿದ್ಧ (ಕ್ರಿ.ಶ.೬೩೪–೬೩೫) ಐಹೊಳೆ ಶಾಸನದಲ್ಲಿ ಆಳುಪರ ಬಗ್ಗೆ ಉಲ್ಲೇಖವಿದೆ. ಆಳುಪರ ಬಗ್ಗೆ ಅತ್ಯಂತ ಪ್ರಮುಖ ಉಲ್ಲೇಖವೆಂದರೇ ಹರಿಹರದಲ್ಲಿ ದೊರೆತಿರುವ ಚಲುಕ್ಯ ವಂಶದ ವಿನಯಾದಿತ್ಯನ (ಕ್ರಿ.ಶ.೬೯೪) ಶಾಸನವೆಂದು ಪರಿಗಣಿಸಲ್ಪಟ್ಟಿದೆ. ವಾತಾಪಿ ಚಲುಕ್ಯ ದೊರೆ ವಿನಯಾದಿತ್ಯನ (ಕ್ರಿ.ಶ.೬೮೧–೬೯೬) ಈ ತಾಮ್ರ ಶಾಸನದಲ್ಲಿ ಆಳುಪರನ್ನು 'ಆಳುವ' ವಂಶದವರೆಂದು ಉಲ್ಲೇಖಿಸಲಾಗಿದೆ. ಅದಕ್ಕೂ ಮೊದಲಿನ ಕ್ರಿ.ಶ. ೬೦೨ರ ಚಾಳುಕ್ಯ ರಾಜ ಮಂಗಳೇಶನ ಮಹಾಕೂಟದ ಸ್ಥಂಭ ಶಾಸನದಲ್ಲಿ 'ಆಳುಕ' ಎಂಬ ಪ್ರದೇಶವನ್ನು, ಮೊದಲನೇ ಕೀರ್ತಿವರ್ಮನು (ಕ್ರಿ.ಶ.೫೬೬–೫೯೬) ವಶಪಡಿಸಿಕೊಂಡ ವಿಚಾರವಿದ್ದು, ಇದು 'ಆಳುವ' ಪದದ ಪರ್ಯಾಯ ಪದವೆಂದು ಪರಿಗಣಿಸಲಾಗಿದೆ. ಈ ಶಾಸನದಲ್ಲಿ ಉಲ್ಲೇಖಿಸಿರುವ 'ಮೂಲ ಆಳುವ' ಪದಪ್ರಯೋಗವು ಈ ವಂಶದ ಪ್ರಾಚೀನತೆಗೆ ಸಾಕ್ಷಿಯಾಗಿದೆ. ಈಗಾಗಲೇ ಗಮನಿಸಿರುವಂತೆ ಟಾಲೆಮಿಯ 'ಒಲೋಖೊಯ್ರ' ರಾಷ್ಟ್ರಕೂಟ ಮೂರನೇ ಗೋವಿಂದ(ಕ್ರಿ.ಶ.೭೯೧–೮೧೪)ನ ಶಾಸನದ 'ಆಳ್ವಖೇಡ' ಎಂದು ಖಚಿತವಾಗಿ ಗುರುತಿಸಲ್ಪಟ್ಟರೆ ಆಳುಪ ವಂಶದ ಪ್ರಾಚೀನತೆಯು ಕ್ರಿ.ಶ.ಎರಡನೇ ಶತಮಾನದಷ್ಟು ಹಿಂದೆ ಹೋಗುತ್ತದೆ.

ತುಳು ಸಂಪ್ರದಾಯದಂತೆ ಹಾಗೂ ತುಳು ಜನತೆಯ ನಂಬಿಕೆಯಂತೆ ಭೂತಾಳಪಾಂಡ್ಯನ ಹೆಸರು ಅತ್ಯಂತ ಜನಪ್ರಿಯವಾಗಿದೆ. ಸಾಂಪ್ರದಾಯಿಕವಾಗಿ ಭೂತಾಳಪಾಂಡ್ಯನು ಅಳಿಯ ಸಂತಾನ ಪದ್ಧತಿಯ ಆಚರಣೆಗೆ ಮೂಲ ಕಾರಣನಾದನೆಂದು ಪ್ರತೀತಿಯಿದೆ. ಈ ಅಭಿಪ್ರಾಯವನ್ನು ಸಂಪೂರ್ಣವಾಗಿ ನಿರಾಕರಿಸುವ ಡಾ॥ ಸಾಲೆತೂರ್ ಅವರು "ಐತಿಹಾಸಿಕವಾಗಿ ಪರಿಗಣಿಸಿದರೆ ಭೂತಾಳಪಾಂಡ್ಯನೆಂಬ ವ್ಯಕ್ತಿಯು ಜೀವಿಸಿದ್ದ ಬಗೆಗೆ ಯಾವುದೇ ಪುರಾವೆಗಳೂ ದೊರೆಯುವುದಿಲ್ಲ. ಆದರೇ ತುಳು ಕತೆಗಳಲ್ಲಿ ಮಾತ್ರ ಭೂತಾಳಪಾಂಡ್ಯನ ಬಗ್ಗೆ ದೃಢವಾದ ನಂಬಿಕೆಯಿದ್ದು ಈತನ ಬಗ್ಗೆ ಪೌರಾಣಿಕ ನಂಬಿಕೆಗಳು ತುಳುವರಲ್ಲಿ ಬೆಳೆದು ಬಂದಿದೆ" ಎಂದು ಅಭಿಪ್ರಾಯಪಡುತ್ತಾರೆ. ಆದರೆ, ದಕ್ಷಿಣ ಕನ್ನಡ ಜಿಲ್ಲೆಯ ಹೆಸರಾಂತ ಸಂಶೋಧಕರಾದ ಎಂ.ಗೋವಿಂದ ಪೈ ಹಾಗೂ ಸಂಶೋಧಕರಾದ ವೆಂಕೋಬರಾವ್ ಅವರುಗಳು ಭೂತಾಳಪಾಂಡ್ಯನ ಐತಿಹಾಸಿಕ ಅಸ್ತಿತ್ವದ ಬಗ್ಗೆ ಸಮರ್ಥಿಸಿರುತ್ತಾರೆ. "ಈತನು ತನ್ನ ಹೆಸರಿನಲ್ಲಿ ಭೂತ–ಆಳುಪ–ಪಾಂಡ್ಯ

ಮೂರು ಹೆಸರುಗಳನ್ನು ಹೊಂದಿರುವುದರಿಂದ, ಇದು ಪಾಂಡ್ಯರಿಗೂ–ಆಳುಪರಿಗೂ ಎಂದೋ ನಡೆದಿರಬಹುದಾದ ವೈವಾಹಿಕ ಸಂಬಂಧದ ಪರಿಣಾಮವಾಗಿ 'ಭೂತಾಳಪಾಂಡ್ಯ'ನೆಂದು ರೂಢಿಗೆ ಬಂದಿದೆ" ಎಂದು ಇವರು ಅಭಿಪ್ರಾಯಪಡುತ್ತಾರೆ. ಗೋವಿಂದ ಪೈ ಅವರೇ ತಿಳಿಸಿರುವಂತೆ ಆತನು ತನ್ನ ತಾಯಿಯ ಮೂಲಸ್ಥಾನವಾಗಿದ್ದ ತುಳುನಾಡಿಗೆ ಬಂದಿದ್ದು ತನ್ನ ತಾಯಿಯ ದೊಡ್ಡಪ್ಪನ ಸಾವಿನ ನಂತರ ರಾಜನಾದನೆಂದೂ ಹಾಗೂ ಇದಕ್ಕೆ ಕಾರಣ ಆತನು ಪರಿಚಯಿಸಿದ 'ಅಳಿಯ ಸಂತಾನ ಕಟ್ಟು' ಮುಖ್ಯ ಕಾರಣವೆಂದೂ ಸ್ಪಷ್ಟವಾಗುತ್ತದೆ. ಆದರೆ, ಉಳಿದ ವಿದ್ವಾಂಸರು ಈ ವಾದವನ್ನು ಒಪ್ಪುವುದಿಲ್ಲ.

ಹೀಗಾಗಿ, ಕ್ರಿಸ್ತಶಕದ (ಕ್ರಿ.ಶ.೧–೨ನೇ ಶತಮಾನದಲ್ಲಿ) ಆರಂಭದಲ್ಲಿಯೇ ಆಳುಪರ ಅಸ್ತಿತ್ವದ ಬಗ್ಗೆ ಮೇಲಿನ ಚರ್ಚೆಯಿಂದ ತಿಳಿದುಬಂದರೂ ಅದಕ್ಕೆ ಪೂರಕವಾಗಿ ಯಾವುದೇ ಆಧಾರಗಳೂ ದೊರೆಯುವುದಿಲ್ಲ. "ಪ್ರಾಚೀನ ಆಳುಪರು ತುಳುನಾಡಿನ ಪಾಂಡ್ಯರ ರೀತಿಯಲ್ಲೇ ಮೀನನ್ನು ತಮ್ಮ ರಾಜಲಾಂಛನವಾಗಿ ಹೊಂದಿದ್ದು, ತಮ್ಮನ್ನು ಪಾಂಡ್ಯವಂಶದವರೆಂದೂ ಕರೆದುಕೊಂಡಿರುತ್ತಾರೆ" ಎಂದು ಡಾ॥ ಕೆ.ವಿ.ರಮೇಶ್ ಅಭಿಪ್ರಾಯಪಡುತ್ತಾರೆ. ಆಳುಪರ ಆರಂಭಿಕ ಇತಿಹಾಸವನ್ನು ಅವಲೋಕಿಸಿದರೆ ಕ್ರಿ.ಶ. ಆರನೇ ಶತಮಾನದವರೆಗೂ ಇವರು ಹಲವಾರು ಸಣ್ಣಪುಟ್ಟ ಸಾಮಂತ ರಾಜರುಗಳ ಪೈಕಿ ಒಬ್ಬರಾಗಿದ್ದು, ಸಾಮಂತರ ಆಂತರಿಕ ಕಲಹಗಳಲ್ಲಿ ತಮ್ಮ ಪರಾಕ್ರಮವನ್ನು ಅಂತಿಮವಾಗಿ ನಿರೂಪಿಸಿ ಸ್ವಾತಂತ್ರ್ಯಗೊಂಡು ಪ್ರಬಲ ಸಾಮ್ರಾಟರಾದರೆಂಬ ವಾಸ್ತವಾಂಶವು ಗೋಚರವಾಗುತ್ತದೆ. ಈ ಪ್ರಬಲ ಸಾಮ್ರಾಟನು ಯಾರೆಂದು ಖಚಿತವಾಗಿ ತಿಳಿಯದೇ ಹೋದರೂ ಅವನೇ ಆಳುಪ ರಾಜ್ಯದ ಸಂಸ್ಥಾಪಕನೆಂದು ಪರಿಗಣಿಸಬಹುದು. ಆಳುಪ ರಾಜ್ಯವು ಕ್ರಿ.ಶ. ಆರನೇ ಶತಮಾನದ ಆರಂಭದಲ್ಲಿ ಸಾಕಷ್ಟು ಜನಪ್ರಿಯತೆ ಗಳಿಸಿತ್ತೆಂದು ಖಚಿತವಾಗಿ ನಿರೂಪಿಸಲಾಗುತ್ತದೆ. ಈಗಾಗಲೇ ಪರಿಶೀಲಿಸಿರುವಂತೆ ಕದಂಬ ರವಿವರ್ಮನ (ಕ್ರಿ.ಶ.೫೬೬–೫೯೬) ಶಾಸನದಲ್ಲಿ ಮೊದಲನೇ ಕೀರ್ತಿವರ್ಮನು 'ಆಳುವ' ಪ್ರದೇಶವನ್ನು ವಶಪಡಿಸಿಕೊಂಡ ಬಗ್ಗೆ ತಿಳಿದಿದ್ದರೂ ಯಾವುದೇ ಆಳುಪ ರಾಜನ ಬಗ್ಗೆ ಸುಳಿವು ಸಿಕ್ಕುವುದಿಲ್ಲ. ಆಳುಪ–ಬಾದಾಮಿ ಚಲುಕ್ಯವಂಶಗಳ ನಡುವಣ ಸಂಬಂಧಗಳು ಹೀಗೆಯೇ ಕೀರ್ತಿವರ್ಮನ ಉತ್ತರಾಧಿಕಾರಿ ಮಂಗಲೇಶನ ಆಳ್ವಿಕೆಯಲ್ಲೂ ಮುಂದುವರೆದ ಬಗ್ಗೆ ಶಾಸನದಿಂದ ವ್ಯಕ್ತವಾಗುತ್ತದೆ. ಹಾಗೆಯೇ ಐಹೊಳೆ ಶಾಸನದ ಪ್ರಕಾರ ಇಮ್ಮಡಿ ಪುಲಿಕೇಶಿ (ಕ್ರಿ.ಶ.೬೦೯–೬೪೨)ಯ ಆಡಳಿತಾವಧಿಯಲ್ಲಿ ಆಳುಪರು ತಿರುಗಿಬಿದ್ದಾಗ, ಅವನು ಇವರ ಪ್ರಾಬಲ್ಯವನ್ನು ಹತ್ತಿಕ್ಕಿದ ವಿಚಾರವು ಸ್ಪಷ್ಟವಾಗುತ್ತದೆ. ಅನಂತರ ಮೊದಲನೇ ವಿಕ್ರಮಾದಿತ್ಯನ ಮಗ ವಿನಯಾದಿತ್ಯ (ಕ್ರಿ.ಶ.೬೮೧–೬೯೬) ತನ್ನ ಆಳ್ವಿಕೆಯ ಅವಧಿಯಲ್ಲಿ ಆಳುಪ ರಾಜನೊಬ್ಬನ ಪ್ರಬಲ ನೆರವಿನೊಂದಿಗೆ ಚಲುಕ್ಯ ಸಾಮ್ರಾಜ್ಯವನ್ನು ಅಭಿವೃದ್ಧಿಗೊಳಿಸಿದನೆಂದು ಶಾಸನಗಳಿಂದ ತಿಳಿದುಬರುತ್ತದೆ.

**ಮೊದಲನೇ ಆಳುವರಸ (ಕ್ರಿ.ಶ. ೬೫೦–೬೮೮) :** ಮರಟೂರು ಶಾಸನದಲ್ಲಿ ಉಲ್ಲೇಖಗೊಂಡಿರುವ ಆಳುಕ ಮಹಾರಾಜನನ್ನು (ಕ್ರಿ.ಶ.೬೫೦–೬೮೮) ಮೊದಲನೇ ಆಳುವರಸನೆಂದು ವಿದ್ವಾಂಸರು ಖಚಿತವಾಗಿ ಗುರುತಿಸಿರುತ್ತಾರೆ. ಮೊದಲನೇ ಆಳುವರಸನ ಆಡಳಿತದ ಬಗ್ಗೆ ಉಲ್ಲೇಖಿಸಲಾಗುವ ಶಾಸನಗಳು ಉಡುಪಿ ತಾಲೂಕಿನ ವಡ್ಡರ್ಸೆಯಲ್ಲೂ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲೂಕಿನ ಕಿಗ್ಗಾದಲ್ಲೂ ಪತ್ತೆಯಾಗಿವೆ. ಮರಟೂರು ಶಾಸನದಲ್ಲಿ ಉಲ್ಲೇಖಗೊಂಡಿರುವ ಮಂಗಳಪುರವೇ ಇಂದಿನ ಮಂಗಳೂರು ನಗರವೆಂಬುದು ನಿರ್ವಿವಾದವಾಗಿದ್ದು ಇದನ್ನು ತನ್ನ ರಾಜಧಾನಿಯನ್ನಾಗಿ ಮೊದಲನೇ ಆಳುವರಸನು ಮಾಡಿಕೊಂಡಿದ್ದು, ಆತನ ರಾಣಿ ಮಹಾದೇವಿಯ ಬಗ್ಗೆಯೂ ಈ ಶಾಸನದಲ್ಲಿ ವಿವರಣೆ ಸಿಗುತ್ತದೆ. ಈತನ ಸೇನಾಸಹಾಯವನ್ನು ಮೆಚ್ಚಿದ ಚಲುಕ್ಯ ಚಕ್ರವರ್ತಿಯು ಆಳುವರಸನಿಗೆ ಕದಂಬ ಮಂಡಲ (ಬನವಾಸಿ ನಾಡು) ಹಾಗೂ ಪೊಂಬುಚ್ಚ (ಹುಮಚಾ, ಶಿವಮೊಗ್ಗ ಜಿಲ್ಲೆ) ಪ್ರದೇಶಗಳ ಆಧಿಪತ್ಯವನ್ನು ವಹಿಸಿಕೊಟ್ಟನು.

**ಒಂದನೇ ಚಿತ್ರವಾಹನ (ಕ್ರಿ.ಶ. ೬೮೮–೭೩೦) :** ಒಂದನೇ ಆಳುವರಸನು ಜೀವಂತವಿರುವಾಗಲೇ ಒಂದನೇ ಚಿತ್ರವಾಹನನು ಪೊಂಬುಚ್ಚ ಪ್ರದೇಶದ ಅಧಿಪತಿಯಾಗಿ ಆಡಳಿತಾನುಭವ ಪಡೆಯುತ್ತಿದ್ದನೆಂದು ಅವನ ಕಿಗ್ಗ ಶಾಸನದಿಂದ ತಿಳಿಯಬಹುದಾಗಿದೆ. ತಂದೆಯ ಮರಣಾನಂತರ ಒಂದನೇ ಚಿತ್ರವಾಹನನು ತುಳುನಾಡು ಮತ್ತು ಕದಂಬಮಂಡಲಗಳ ಉತ್ತರಾಧಿಕಾರಿಯಾದನು. ಕದಂಬ ಮಂಡಲದ ಮೇಲೆ ಆಳುಪರ ಆಡಳಿತವು ಕಾಲಕ್ರಮೇಣ ಪ್ರಬಲಗೊಂಡು, ಆಳುವರಸನ ಕಾಲಕ್ಕೆ ಸಾಕಷ್ಟು ಗಾಢವಾದ ಪ್ರಭಾವವನ್ನು ಬೀರಿದ ಅಂಶ ಸೊರಬ, ಹರಿಹರ ಮತ್ತು ಶಿಗ್ಗಾಂವಿ ತಾಮ್ರಶಾಸನಗಳಿಂದ ವಿಶದವಾಗುತ್ತದೆ.

ಕದಂಬ ಮಂಡಲದ ತೊರಮರ ವಿಷಯದ ಚಿತ್ರಸೇತು ಗ್ರಾಮದಲ್ಲಿ ಬೀಡು ಬಿಟ್ಟಿದ್ದ ಚಲುಕ್ಯ ವಿನಯಾದಿತ್ಯನು ಗುಣಸಾಗರ ಆಳುಪೇಂದ್ರ (ಅಂದರೆ ಒಂದನೇ ಆಳುವರಸ)ನ ಮಗ ಚಿತ್ರವಾಹನ ಮಹಾರಾಜನ ಬೇಡಿಕೆಯಂತೆ ದಿವಾಕರಶರ್ಮನೆಂಬ ಬ್ರಾಹ್ಮಣನಿಗೆ ಸಾಲಿವೊಗೆ ಗ್ರಾಮವನ್ನು ದಾನ ಕೊಟ್ಟನೆಂದು ಸೊರಬ ಶಾಸನದಲ್ಲಿ ನಮೂದಿಸಲಾಗಿದೆ. ಹರೇಷಪುರದ ಸಮೀಪದ ಕರುಂಜಪತ್ರ ಗ್ರಾಮದಲ್ಲಿ

ತಂಗಿದ್ದ ವಿನಯಾದಿತ್ಯ ಸತ್ಯಾಶ್ರಯನು ಆಳುವ ರಾಜನ ವಿಜ್ಞಾಪನೆಯಂತೆ ವನವಾಸಿ (ಅಂದರೆ ಕದಂಬ)ಮಂಡಲದ ಎಡೆಬೊಳಲ್ ಭೋಗದ ಕಿರುಕಾಗಾಮಾಸಿ ಗ್ರಾಮವನ್ನು ಈಶಾನಶರ್ಮನೆಂಬ ಬ್ರಾಹ್ಮಣನಿಗೆ ದಾನಮಾಡಿದನೆಂಬುದೇ ಹರಿಹರ ಶಾಸನದ ಮುಖ್ಯ ವಿಷಯ ವಾಗಿದೆ. ಇಲ್ಲಿ ಉಕ್ತನಾಗಿರುವ ಆಳುವರಾಜನು ಒಂದನೇ ಚಿತ್ರವಾಹನನೇ ಎಂಬುದರಲ್ಲಿ ಸಂಶಯವಿಲ್ಲ.

ಕ್ರಿ.ಶ. ೭೦೭ರ ಶಿಗ್ಗಾಂವಿಯ ತಾಮ್ರಶಾಸನವು ಒಂದನೇ ಚಿತ್ರವಾಹನನ ಮಹತ್ವವನ್ನು ಸಾರಿ ಹೇಳುವಂತದ್ದಾಗಿದೆ. ಚಿತ್ರವಾಹನನಿಗೆ ಸಂಬಂಧಿಸಿದಂತೆ ಈ ಶಾಸನದಲ್ಲಿ ಕಂಡುಬರುವ "ಕಿಸುವೊರಿಲ್ನಾಮ ಸ್ಥಾನಮಧಿವಸತಿ ವಿಜಯ ಸ್ಕಾನ್ಧಾವರೇ ಆಳುಪೇಂದ್ರಂ ದೃಷ್ಟಂ ವನವಾಸೀ ಮಾಯಾತವತಿ ವಿಜಯಾದಿತ್ಯ ವಲ್ಲಭೇಂದ್ರೇ ಆಷಾಢ ಪೌರ್ಣಮಾಸ್ಯಂ ಪಾಂಡ್ಯಾಮಲಕುಲಮಲಂಕರ್ವತಃ ಸಕಲಲೋಕವಿದಿತ ಮಹಾ ಪ್ರಭಾವಸ್ಯ ಅನನ್ಯ ಸಾಧಾರಣತ್ಯಾಗೋದಯ ಸಂಪತ್ಸ ಮುತ್ಸಾರಿತಾನ್ಯವದಾನ್ಯ ಕೀರ್ತಿ ಸಂತಾನಸ್ಯ ಸ್ವಕರತಲವಿಧೃತನಿಶಿತನಿಸ್ತ್ರಿಂಶ ಸಂಘಾತವಿತ್ರಸ್ತ ವಿಶೀರ್ಯಮಾಣಾನೇಕರಿಪು ನೃಪತಿ ಮತ್ತ ಮಾತಂಗ ಸಂಘಾತಸ್ಯ ಚಲುಕ್ಯರಾಜ್ಯಾಭಿವೃದ್ಧ ಹೇತುಭೂತಸ್ಯ ಚಿತ್ರವಾಹನ ನರೇಂದ್ರಸ್ಯ ವಿಜ್ಞಾಪನಯೊ ಸ್ವಹೃದಯ ಪ್ರಹ್ಲಾದನ ಕಾರಿಣ್ಯಾ ಹಸ್ತಿರಥಾದ್ಯನೇಕದಾನಪ್ರದಾನ ಪುರಸ್ಸರ ಹಿರಣ್ಯಗರ್ಭಾವಭೃಥಸ್ನಾನಪವಿತ್ರೀಕೃತ ಶರೀರಯೊ ಕುಂಕುಮದೇವ್ಯಾ ಪುರಿಗೆರಿನಗರೇ ಕಾರಿತಂ ಜಿನಭವನ ಮುದ್ದಿಶ್ಯ ನವಕರ್ಮ ಖಂಡಸ್ಫುಟಿತ ಸಂಸ್ಕಾರ ದೇವಪೂಜಾದಾನಶಾಲಾದಿ ಧರ್ಮಪ್ರವರ್ತ್ತ ನಾರ್ಥಂ ಸಕಲಾರ್ಹತ್ಸಮಯತಿಲಕ ಶ್ರೀ ಮೂಲ ಸಂಘೋದ್ಭ ಸೂರಸ್ತ ಧರ್ಮೋಪ ದೇಶೇನಾಶೇಷನಿಕಾಯಸಮಾನ ಸತ್ರಾವಾಸೋ ಗುಡ್ಡಿಗೆರೆ ಗ್ರಾಮೋದತ್ತ"ಎಂಬ ಹೇಳಿಕೆಗಳು ಪ್ರಾಚೀನ ಆಳುಪರ ಇತಿಹಾಸಕ್ಕೆ ಖಚಿತವಾದ ಆಧಾರವನ್ನು ಒದಗಿಸುತ್ತದೆ.

ಈ ಶಾಸನದಲ್ಲಿ ವ್ಯಕ್ತವಾಗಿರುವ ಚಿತ್ರವಾಹನನಿಗೆ ನೀಡಲಾಗಿರುವ ವಿಶೇಷಣಗಳು ಕೇವಲ ಹೊಗಳಿಕೆಯ ಮಾತುಗಳಾಗಿರದೇ ಸಮಕಾಲೀನ ದಕ್ಷಿಣ ಭಾರತದ ರಾಜಕೀಯ ಇತಿಹಾಸವನ್ನು ಸೂಕ್ಷ್ಮವಾಗಿ ಪರೀಕ್ಷಿಸಿದರೇ ಇವುಗಳ ವಾಸ್ತವತೆಯ ಅರಿವಾಗುತ್ತದೆ. ಕ್ರಿ. ಶ. ೩೦೦ ರಿಂದ ೩೩೦ರವರೆಗೆ ಆಳಿದ ತಮಿಳುನಾಡಿನ ಪಾಂಡ್ಯ ಚಕ್ರವರ್ತಿ ಕೋಚ್ಚಡೈಮನನ ಶಾಸನ ಒಂದರಲ್ಲಿ "ಕೊಂಗಲರುನ್ನರುಂ ಪೊರಲ್ವಯ್ ಕುಯಿಲೊಡು ಮಯಿಲಗವುಂ ಮಂಗಲಪುರಮೆನ್ನುಂ ಮಹಾನಗರುಳ್ ಮಹಾರಥರೈ ಎರಿಂದರತ್ತು ಅರೈ ಕಡಲ್ವಳಾಗಂ ಪೊದುಮೊರಿ ಅಗಟ್ರ" ಅಂದರೆ 'ಅರಳುವ ಹೂಗಳಿಂದ ಸುವಾಸಿತವಾದ ಕೆರೆಗಳ ಬದಿಯಲ್ಲಿ ಕೋಗಿಲೆಗಳೊಡಗೂಡಿ ನರ್ತಿಸುವ ನವಿಲುಗಳಿಂದ ಆಹ್ಲಾದಕರವಾದ ಮಂಗಲಪುರವೆಂಬ ಮಹಾನಗರದಲ್ಲಿ ಮಹಾರಥರನ್ನು ಮುರಿಯಬಡಿದು ಕಡಲ ಕರಾವಳಿ ಪ್ರದೇಶದ ಏಕಾಧಿಪತಿಯೆನಿಸಿ ಕೊಂಡನು' ಎಂದು ಅವನ ಮೊಮ್ಮಗ ಜಟಿಲಪರಾಂತಕನ ಆಳಿಕೆಯ ವೇಳ್ವಿಕ್ಕುಡಿ ತಾಮ್ರ ಶಾಸನದಲ್ಲಿ ಹೇಳಲಾಗಿದೆ. ಇಲ್ಲಿ ಉಕ್ತವಾಗಿರುವ ಮಂಗಲಪುರವು ತುಳುನಾಡಿನ ಪ್ರಧಾನ ರೇವುಪಟ್ಟಣವೂ ಪ್ರಾಚೀನ ಆಳುಪರ ರಾಜಧಾನಿಗಳಲ್ಲೊಂದೂ ಆದ ಮಂಗಳೂರೇ ಎಂಬುದರಲ್ಲಿ ಸಂಶಯವಿಲ್ಲ. ಒಂದನೇ ಚಿತ್ರವಾಹನ ಮತ್ತು ಕೋಚ್ಚಡೈಯನ್ ಸಮಕಾಲೀನರಾಗಿದ್ದು, ಅಂದಿನ ತುಳುನಾಡು ಚಲುಕ್ಯರ ಅಧೀನದಲ್ಲಿದ್ದ ಕಾರಣ ಪಾಂಡ್ಯರಾಜನು ಮಂಗಲಪುರದಲ್ಲಿ ಎದುರಿಸಬೇಕಾಗಿ ಬಂದ ಮಹಾರಥರು ಚಲುಕ್ಯ ಸಾಮ್ರಾಜ್ಯದ ಮತ್ತು ತುಳುನಾಡಿನ ಸೇನಾನಿಗಳಿದ್ದಿರಬೇಕು. ಈ ಯುದ್ಧದಲ್ಲಿ ಪಾಂಡ್ಯರಾಜನಿಗೆ ಪೂರ್ಣ ವಿಜಯವು ದೊರೆತಂತೆ ಕಂಡುಬರುವುದಿಲ್ಲ. ಏಕೆಂದರೆ ಮಹಾರಥರನ್ನು ಸೋಲಿಸಿದೆನೆಂದು ಹೇಳಿಕೊಳ್ಳುವ ಕೋಚ್ಚಡೈಯನ್ ಮಂಗಲಪುರದಿಂದ ಮುನ್ನುಗ್ಗಿ ಚಲುಕ್ಯ ಸಾಮ್ರಾಜ್ಯದ ಇತರ ಪ್ರಾಂತಗಳನ್ನೂ ಆಕ್ರಮಿಸಿಕೊಂಡನೆಂಬ ಅಸ್ಪಷ್ಟ ಅಭಿಪ್ರಾಯವಿದೆ. ಬಹುಶಃ ಮಹಾರಥರನ್ನು ಸೋಲಿಸುವ ಪ್ರಯತ್ನದಲ್ಲಿ ಅವನ ಸೇನಾಬಲಕ್ಕೆ ಅಪಾರ ಕಷ್ಟನಷ್ಟಗಳುಂಟಾಗಿ ಬೇರೆ ಮಾರ್ಗವಿಲ್ಲದೆ ಅವನು ಸ್ವದೇಶಕ್ಕೆ ಹಿಂದಿರುಗಿರಬೇಕು. ಹೀಗೆ ಸಾಮ್ರಾಜ್ಯಕ್ಕೆ ಬಂದೊದಗಿದ ಗಂಡಾಂತರವನ್ನು ಮಂಗಲಪುರದ ಯುದ್ಧದಲ್ಲೆ ಬಗೆಹರಿಸಿ ಅತಿಕ್ರಮಣದ ದಳ್ಳುರಿಯು ಸಾಮ್ರಾಜ್ಯದ ಇತರೆಡೆಗಳಲ್ಲಿ ಹರಡದಂತಾಗುವುದಕ್ಕೆ ತುಳುನಾಡಿನ ಅಧಿಪತಿಯಾದ ಒಂದನೇ ಚಿತ್ರವಾಹನನೇ ಮುಖ್ಯ ಕಾರಣನೆಂದು ಊಹಿಸುವುದು ಸಮಂಜಸವೇ ಆಗಿದೆ. ಅವನ ಈ ಮಹತ್ಸಾಧನೆಯೇ ಅವನಿಗೆ 'ಚಲುಕ್ಯ ರಾಜ್ಯಾಭಿವೃದ್ಧಿ ಹೇತುಭೂತಃ' ಎಂಬ ಬಿರುದನ್ನು ಗಳಿಸಿಕೊಟ್ಟಿತು.

ಅಲ್ಲದೆ ಪಾಂಡ್ಯ ರಾಜನನ್ನು ಹಿಮ್ಮೆಟ್ಟಿಸಿದ ಮಹಾಕಾರ್ಯದ ಪ್ರತಿಧ್ವನಿಯೇ ಇರಬಹುದು ಚಿತ್ರವಾಹನನ 'ಪಾಂಡ್ಯ ಕುಲಮಲಂಕುರ್ವಾಣಃ' ಎಂಬ ಬಿರುದು. ಮುಂದೆ ಕ್ರಿ. ಶ. ೧೪ನೆಯ ಶತಮಾನದಲ್ಲಿ ತುಳುನಾಡನ್ನು ಗೆದ್ದುಕೊಂಡ ಹೊಯ್ಸಳ ಚಕ್ರವರ್ತಿ ಮೂರನೇ ವೀರಬಲ್ಲಾಳನು ಪಾಂಡ್ಯ ಚಕ್ರವರ್ತಿಯೆಂಬ ಆಳುಪರ ವಿಶೇಷಣವನ್ನು ತಾನೂ ಉಪಯೋಗಿಸಿಕೊಂಡನೆಂಬ ವಿಷಯವು ಈ ಮೇಲಿನ ಊಹೆಗೆ ಸ್ವಲ್ಪ ಮಟ್ಟಿಗಾದರೂ ಸಮರ್ಥನೆ ನೀಡುತ್ತದೆಯಷ್ಟೆ ಇನ್ನು ಒಂದನೇ ಚಿತ್ರವಾಹನನಿಗೂ ಚಲುಕ್ಯ ವಂಶದವರಿಗೂ ಯಾವ ರೀತಿಯ ಬಾಂಧವ್ಯ ಬೆಳೆದಿತ್ತೆಂಬುದನ್ನು ಪರಿಶೀಲಿಸಿದರೆ, ಪುರಿಗೆರಿನಗರದಲ್ಲಿ ಕುಂಕುಮಮಹಾದೇವಿಯು ಕಟ್ಟಿಸಿದ ಜಿನಭವನಕ್ಕೆ ಚಿತ್ರವಾಹನನ ಬೇಡಿಕೆಯಂತೆ ಚಲುಕ್ಯ ವಿಜಯಾದಿತ್ಯನು ಗುಡಿಗೇರಿ ಗ್ರಾಮವನ್ನು ದಾನಕೊಟ್ಟ ವಿಷಯವನ್ನು ನಮೂದಿಸುವುದೆ ಶಿಗ್ಗಾಂವಿ ತಾಮ್ರ ಶಾಸನದ ಮುಖ್ಯ

ಉದ್ದೇಶವೆಂಬುದು ವ್ಯಕ್ತವಾಗುತ್ತದೆ. ಕುಂಕುಮದೇವಿಗೆ ಅನ್ವಯಿಸುವ 'ಸ್ವಹೃದಯ ಪ್ರಹ್ಲಾದನಕಾರಿಣೀ' ಎಂಬ ವಾಕ್ಸರಣಿಯಲ್ಲಿಯ 'ಸ್ವ' ಶಬ್ಧವು ಚಿತ್ರ ವಾಹನನನ್ನು ಗುರುತಿಸುತ್ತದೆಯೆಂದೂ ಆದ ಕಾರಣ ಕುಂಕುಮಮಹಾದೇವಿಯು ಅವನ ರಾಣಿಯಿದ್ದಳೆಂಬ ಅಂಶವನ್ನು ಡಾ.ಜಿ.ಎಸ್. ಗಾಯಿ ತೋರಿಸಿಕೊಟ್ಟಿದ್ದಾರೆ. ಕ್ರಿ. ಶ. ಒಂದನೇ ಶತಮಾನದ ಗುಡಿಗೆರೆ (ಧಾರವಾಡ ಜಿಲ್ಲೆ)ಯ ಶಾಸನವೊಂದರಲ್ಲಿ 'ಚಲುಕ್ಯ ಚಕ್ರವರ್ತಿ ವಿಜಯಾದಿತ್ಯ ವಲ್ಲಭಾನುಜೆಯಪ್ಪ ಶ್ರೀಮತ್ಕುಂಕುಮ ಮಹಾದೇವಿ ಪುರಿಗೆರಿಯಲು ಮಾಡಿಸಿ ದಾನೆಸೆಜ್ಜೆಯ ಬಸದಿ' ಎಂದು ಹೇಳಲಾಗಿರುವುದರಿಂದ ಒಂದನೇ ಚಿತ್ರವಾಹನನ ಪತ್ನಿಯಾದ ಕುಂಕುಮದೇವಿಯು ವಿಜಯಾದಿತ್ಯನ ತಂಗಿಯಾಗಿದ್ದಳೆಂದು ತಿಳಿದುಬರುತ್ತದೆ. ಹೀಗಾಗಿ ಆಳುಪ ಚಿತ್ರವಾಹನನು ವಿನಯಾದಿತ್ಯ ಸತ್ಯಾಶ್ರಯನ ಆಳಿಯನೂ ವಿಜಯಾದಿತ್ಯ ಸತ್ಯಾಶ್ರಯನ ಭಾವನೂ ಆಗಿದ್ದನು. ಈ ವಿಷಯವೂ ಸಹ ಚಲುಕ್ಯ ಸಾಮ್ರಾಜ್ಯದ ಸಾಮಂತರಲ್ಲಿ ಚಿತ್ರವಾಹನನು ಅಗ್ರಸ್ಥಾನವನ್ನು ಗಳಿಸಿಕೊಂಡಿದ್ದನೆಂಬುದಕ್ಕೆ ಒಂದು ಒಳ್ಳೆಯ ನಿದರ್ಶನ. ಚಿತ್ರವಾಹನನು ಕುಂಕುಮದೇವಿಯನ್ನು ಮದುವೆಯಾದುದು ಕ್ರಿ. ಶ. ೬೯೪ ರಿಂದೀಚೆಗಿದ್ದಿರಬೇಕು. ಏಕೆಂದರೆ ಆ ವರ್ಷದಲ್ಲಿ ನೀಡಲ್ಪಟ್ಟಿರುವ ವಿನಯಾದಿತ್ಯ ಸತ್ಯಾಶ್ರಯನ ಆಳ್ವಿಕೆಯ ಹರಿಹರ ತಾಮ್ರಶಾಸನದಲ್ಲಿ ಆಳುಪರನ್ನು ಚಲುಕ್ಯರ ಭೃತ್ಯರೆಂದೇ ಕರೆಯಲಾಗಿದೆ. ಆ ವೇಳೆಗೆ ಚಿತ್ರವಾಹನನು ವಿನಯಾದಿತ್ಯನ ಅಳಿಯನಾಗಿದ್ದನೆಂಬ ಅಂಶವು ಹರಿಹರ ಶಾಸನದಲ್ಲಿ ಕಂಡುಬಂದರೂ ಇಂತಹ ಹೇಳಿಕೆಯು ಸ್ಪಷ್ಟವಾಗಿರುವುದಿಲ್ಲ.

ಒಂದನೇ ಅಳುವರಸನ ಆಳ್ವಿಕೆಯು ಕ್ರಿ.ಶ. ೬೮೦ರಲ್ಲಿ ಕೊನೆಗೊಂಡು ಅದೇ ವರ್ಷ ಒಂದನೇ ಚಿತ್ರವಾಹನನು ಪಟ್ಟಕ್ಕೆ ಬಂದನೆಂದು ಈಗಾಗಲೇ ಚರ್ಚಿಸಲಾಗಿದೆ. ಚಿತ್ರವಾಹನನು ಕ್ರಿ. ಶ. ೬೯೪ರ ನಂತರವೇ ಕುಂಕುಮದೇವಿಯನ್ನು ಮದುವೆಯಾಗಿದ್ದಲ್ಲಿ ಅವನು ಸಿಂಹಾಸನವನ್ನೇರಿದಾಗ ಚಿಕ್ಕ ಪ್ರಾಯದವನಿದ್ದಿರಬೇಕು. ಹೀಗಾಗಿ ಅವನು ಕ್ರಿ. ಶ. ೭೩೦ರ ವರೆಗಾದರೂ, ಅಂದರೆ ೫೦ ವರ್ಷಗಳ ಕಾಲವಾದರೂ, ರಾಜ್ಯವಾಳಿರಬೇಕು. ನಮಗೆ ತಿಳಿದುಬರುವಂತೆ ಇತರ ಆಳುಪರಾಜರಂತೆ ಅವನೂ ಶೈವಧರ್ಮಾನುಯಾಯಿಯಾಗಿದ್ದನು. ಅವನ ರಾಣಿ ಕುಂಕುಮದೇವಿಯು ಜಿನಭವನವನ್ನು ಕಟ್ಟಿಸಿದಳೆಂಬುದೂ ಆ ಭವನಕ್ಕೆ ಗ್ರಾಮವೊಂದನ್ನು ದಾನಮಾಡುವಂತೆ ಚಕ್ರವರ್ತಿಯನ್ನು ಚಿತ್ರವಾಹನನು ಕೇಳಿಕೊಂಡನೆಂಬುದೂ ವಿವಿಧ ಧರ್ಮಗಳ ಬಗೆಗೆ ಅವನು ತಾಳಿದ ಸಮದೃಷ್ಟಿಗೆ ದೃಷ್ಟಾಂತವಾಗಿದೆ

ಒಂದನೇ ಚಿತ್ರವಾಹನನು ತ್ಯಾಗ ಬುದ್ದಿಯಲ್ಲಿಯೂ ಬೇಡಿದವರಿಗೆ ಧನಸಹಾಯ ನೀಡುವುದರಲ್ಲಿಯೂ ಅನುಪಮನಾಗಿದ್ದನು. ಅನೇಕ ವೈರಿರಾಜರ ಮದಗಜಗಳನ್ನು ಅವನು ಕೊಂದು ಹಾಕಿದ್ದನೆಂದು ಶಿಗ್ಗಾಂವಿ ತಾಮ್ರ ಶಾಸನದಲ್ಲಿ ಹೇಳಿರುವ ಕಾರಣ ಸಾಮ್ರಾಜ್ಯದ ರಕ್ಷಣೆಗಾಗಿಯೂ ವಿಸ್ತರಣೆಗಾಗಿಯೂ ಚಲುಕ್ಯರು ಹೂಡಿದ ಅನೇಕ ಸಮರಗಳಲ್ಲಿ ಇವನೂ ಯಶಸ್ವಿಯಾಗಿ ಭಾಗವಹಿಸಿದ್ದನೆಂದು ಗ್ರಹಿಸಬಹುದಾಗಿದೆ. ಆ ತಾಮ್ರಶಾಸನದಲ್ಲಿ ಇವನನ್ನು 'ಸಕಲ ಲೋಕವಿದೀತ ಮಹಾಪ್ರಭಾವಃ' ಎಂದು ವರ್ಣಿಸಿರುವುದು ಅತಿಶಯೋಕ್ತಿಯಿರಬಹುದಾದರೂ ಇವನ ಪ್ರಭಾವವು ಖಂಡಿತವಾಗಿಯೂ ಸಮಸ್ತ ಕರ್ನಾಟಕ ವಿದೀತವಾಗಿತ್ತೆಂದು ಹೇಳಬಹುದು. ಅದರಿಂದಾಗಿ, ಇವನ ಅಧೀಶ್ವರನೂ ಭಾವನೂ ಆದ ವಿಜಯಾದಿತ್ಯ ಸತ್ಯಾಶ್ರಯನು ಕಿಸುವೊಳಲ್‌ಸ್ಥಾನ (ವಿಜಾಪುರ ಜಿಲ್ಲೆಯ ಇಂದಿನ ಪಟ್ಟದಕಲ್ಲು)ದಲ್ಲಿ ಬೀಡು ಬಿಟ್ಟಿದ್ದಾಗ ಚಿತ್ರವಾಹನ ನರೇಂದ್ರನನ್ನು ಕಾಣುವ ಸಲುವಾಗಿಯೆ ಸಾಕಷ್ಟು ದೂರದಲ್ಲಿದ್ದ ವನವಾಸಿ (ಉತ್ತರ ಕನ್ನಡ ಜಿಲ್ಲೆಯ ಬನವಾಸಿ) ಗೆ ಪ್ರಯಾಣ ಬೆಳೆಸಿದನೆಂಬುದರಲ್ಲಿ ಆಶ್ಚರ್ಯವೇನೂ ಇಲ್ಲವಷ್ಟೆ

ಒಂದನೇ ಚಿತ್ರವಾಹನನ ಆಳ್ವಿಕೆಯ ಕಾಲದಲ್ಲಿ ಆಳುಪರಿಗೂ ಚಲುಕ್ಯರಿಗೂ ನಡುವೆ ಹುಟ್ಟಿ ಬೆಳೆದಿದ್ದ ನಿಕಟ ಬಾಂಧವ್ಯದ ಬಗ್ಗೆ ಪೊಳಲಿ ಅಮುಂಜೆ (ಬಂಟ್ವಾಳ ತಾಲೂಕು)ಯಲ್ಲಿ ದೊರೆತಿರುವ ಒಂದು ಶಾಸನವು ಆಳುಪರಿಗೆ ದೊರೆತಿದ್ದ ಶ್ರೇಷ್ಠ ಸ್ಥಾನಮಾನಗಳಿಗೂ ಸಹ ಉತ್ತಮ ಸಾಕ್ಷಿಯಾಗಿದೆ. ಲಿಪಿಶಾಸ್ತ್ರದೃಷ್ಟಿಯಿಂದ ಕ್ರಿ.ಶ. ೮ನೆಯ ಶತಮಾನದ ಪೂರ್ವಾರ್ಧಕ್ಕೆ ಸರಿಹೋಗುವ ಈ ಶಾಸನದಲ್ಲಿ ಕಂಡುಬರುವ ಒಂದು ಶ್ಲೋಕದ ಪ್ರಕಾರ 'ಕೀರ್ತಿವಂತರೂ ಪ್ರಖ್ಯಾತ ಅರಸು ಮನೆತನಗಳನ್ನು ಆಕರ್ಷಿಸಿದವರೂ ಆದ ಪಾಂಡ್ಯವಂಶದ ಆಳುಪೇಂದ್ರರನ್ನು ಸಪ್ತಮಾತೃಕೆಯರು ರಕ್ಷಿಸಲಿ ಎಂದು ಹೇಳಲಾಗಿದೆ'. ಸಪ್ತಮಾತೃಕೆಯರು ಚಲುಕ್ಯ ಹಾಗೂ ಗಂಗ ವಂಶದ ಅರಸರಿಗೂ ಇಷ್ಟದೇವತೆಯರಾಗಿದ್ದರು. ಹೀಗೆ ವೈಭವದಿಂದ ರಾಜ್ಯವಾಳಿದ ಚಿತ್ರವಾಹನನ ತರುವಾಯ ಅವನ ಮಗನಿದ್ದಿರಬಹುದಾದ ಎರಡನೇ ಆಳುಪರಸನು ಪಟ್ಟಕ್ಕೆ ಬಂದನು.

**ಎರಡನೇ ಆಳುವರಸ (ಕ್ರಿ. ಶ. ೭೩೦–೬೦) :** ರಾಜ್ಯವಿಸ್ತಾರದ ದೃಷ್ಟಿಯಿಂದ ಎರಡನೇ ಆಳುವರಸನ ಆಳ್ವಿಕೆಯ ಕಾಲವನ್ನು ಪ್ರಾಚೀನ ಆಳುಪರ ಇತಿಹಾಸದ ಇಳಿಗಾಲವೆನ್ನಬಹುದು. ತುಳುನಾಡು ಮತ್ತು ಪೊಂಬುಚ್ಚ ಪ್ರದೇಶಗಳ ಮೇಲಿನ ಅಧಿಪತ್ಯವನ್ನು ಇವನು ಉಳಿಸಿಕೊಂಡಿದ್ದನಾದರೂ ಇವನು ಪಟ್ಟಕ್ಕೆ ಬಂದ ಕೆಲವು ವರ್ಷಗಳಲ್ಲೆ ಆಳುಪರು ಕದಂಬಮಂಡಲವನ್ನು ಕಳೆದುಕೊಂಡರು. ಎರಡನೇ

ಆಳುವರಸನ ದೌರ್ಬಲ್ಯಕ್ಕಿಂತಲೂ ಅಂದಿನ ರಾಜಕೀಯ ರಂಗದಲ್ಲಿ ಕಂಡುಬಂದ ಸಂದಿಗ್ಧ ವಿದ್ಯಮಾನವೇ ಇದಕ್ಕೆ ಮುಖ್ಯಕಾರಣವೆನ್ನಬೇಕು. ಎರಡನೇ ಆಳುವರಸನು ಪಟ್ಟಕ್ಕೆ ಬಂದ ವೇಳೆಗೆ ತಾನೇ ಸಾಮ್ರಾಟನಾಗಬೇಕೆಂದು ಬಯಸಿದ್ದ ರಾಷ್ಟ್ರಕೂಟ ಮನೆತನದ ದಂತಿದುರ್ಗನು ಚಲುಕ್ಯ ಸಾಮ್ರಾಜ್ಯದ ಅಡಿಪಾಯವನ್ನು ಶಿಥಿಲಗೊಳಿಸುವ ಕಾಯಕದಲ್ಲಿ ಮಗ್ನನಾಗಿದ್ದನು. ಇವನ ಚಟುವಟಿಕೆಗಳಿಂದಾಗಿ ಚಲುಕ್ಯರ ಅಧಿಕಾರ ವ್ಯಾಪ್ತಿಯು ದಿನೇದಿನೇ ಕುಗ್ಗುತ್ತಾ ಬಂದಿತ್ತು. ಏತನ್ಮಧ್ಯೆ, ತಮಿಳುನಾಡಿನಲ್ಲಿ ಪಲ್ಲವಸಿಂಹಾಸನವನ್ನೇರಿದ ಎರಡನೇ ನಂದಿವರ್ಮನು ತುಳುನಾಡನ್ನು ಆಕ್ರಮಿಸಿಕೊಳ್ಳುವ ಪ್ರಯತ್ನವನ್ನು ನಡೆಸಿದ್ದ. ಅಲ್ಲದೆ, ಎರಡನೇ ನಂದಿವರ್ಮನ ಸಹಾಯ ದೊರೆತರೆ, ಚಲುಕ್ಯರನ್ನು ನಿರ್ನಾಮಗೊಳಿಸುವ ಕಾರ್ಯವು ಇನ್ನಷ್ಟು ಸುಲಭವಾದೀತೆಂದು ಮನಗಂಡ ದಂತಿದುರ್ಗನು ಪಲ್ಲವರೊಡನೆ ಸಖ್ಯ ಬೆಳಸುವ ದಾರಿ ಹಿಡಿದಿದ್ದ. ಇಂತಹ ಪರಿಸ್ಥಿತಿಯಲ್ಲಿ ಪಲ್ಲವರು ತನ್ನ ನಾಡಿನ ಮೇಲೆ ದಂಡೆತ್ತಿ ಬಂದರೆ ಕ್ಷೀಣರಾಗಿದ್ದ ಚಲುಕ್ಯರಿಂದ ಫಲಕಾರಿಯಾದ ಸಹಾಯ ದೊರೆಯುವುದು ಅಸಂಭವವೆಂದು ಎರಡನೇ ಆಳುವರಸನು ಭಾವಿಸಿರಬೇಕು. ಇದರ ಪರಿಣಾಮವಾಗಿ ಆಳುಪರಾಜನು ಚಲುಕ್ಯರ ಆಧಿಪತ್ಯವನ್ನು ತಿರಸ್ಕರಿಸಿ ಪಲ್ಲವರ ಸಾಮಂತನಾದನು. ಅಚ್ಚರಿಯ ಸಂಗತಿಯೆಂದರೆ ಪ್ರಾಚೀನ ಆಳುಪರ ಇತಿಹಾಸದಲ್ಲಿಯ ಈ ಮುಖ್ಯ ರಾಜಕೀಯ ಬದಲಾವಣೆಯನ್ನು ತಿಳಿಯಗೊಡುವ ತಮಿಳುಭಾಷೆಯ ಶಿಲಾಶಾಸನವು ದೂರದ (ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಗೂಡೂರು ತಾಲೂಕಿನಲ್ಲಿರುವ) ಮಲ್ಲಂ ಗ್ರಾಮದಲ್ಲಿ ದೊರೆತಿರುವುದು. ಈ ಶಾಸನವು ಪಲ್ಲವ ವಂಶದ ಎರಡನೇ ನಂದಿವರ್ಮನ ಆಳ್ವಿಕೆಯ ೧೫ನೆಯ ವರ್ಷಕ್ಕೆ ಅಂದರೆ ಕ್ರಿ. ಶ. ೭೪೫–೪೬ಕ್ಕೆ ಸೇರಿದ್ದಾಗಿದ್ದು, ಆಳುವರಸನ ವಿಜ್ಞಾಪನೆಯ ಮೇರೆಗೆ ತಿರುವಾಂಕೂರು (ಅಂದರೆ ಇಂದಿನ ಮಲ್ಲಂ) ಗ್ರಾಮದ ಸುಬ್ರಹ್ಮಣ್ಯದೇವರಿಗೆ ಪಲ್ಲವರಾಜನು ಒಂದಿಷ್ಟು ನಾಣ್ಯಗಳನ್ನು ದಾನಕೊಟ್ಟನೆಂದು ತಿಳಿಸುತ್ತದೆ.

ಎರಡನೇ ನಂದಿವರ್ಮನು ಕ್ರಿ. ಶ. ೭೩೧ರಲ್ಲಿ ಪಲ್ಲವ ಸಾಮ್ರಾಜ್ಯದ ಒಡೆಯನಾದಾಗ ಅವನು ೧೨ ವರ್ಷದ ಬಾಲಕನಿದ್ದನು. ಪಲ್ಲವರನ್ನು ನಿರ್ಮೂಲಗೊಳಿಸಲು ಅದೇ ಸುಸಮಯವೆಂದು ಭಾವಿಸಿದ ಪಾಂಡ್ಯರಾಜ ಒಂದನೇ ರಾಜಸಿಂಹ (ಕ್ರಿ. ಶ. ೭೩೦–೬೫)ನು ಚಿತ್ರಮಾಯನೆಂಬ ಎರಡನೇ ನಂದಿವರ್ಮನ ಎದುರಾಳಿಯನ್ನು ಪಟ್ಟಕ್ಕೆ ತರುವ ನೆಪವಿಟ್ಟುಕೊಂಡು ಸೇನಾಸಮೇತನಾಗಿ ಪಲ್ಲವ ಸಾಮ್ರಾಜ್ಯವನ್ನು ಪ್ರವೇಶಿಸಿದನು. ಆದರೆ ಎರಡನೇ ನಂದಿವರ್ಮನ ಪ್ರಧಾನ ದಂಡನಾಯಕನಾಗಿದ್ದ ಉದಯಚಂದ್ರನು ಪಾಂಡ್ಯರಾಜನನ್ನು ಹಿಮ್ಮೆಟ್ಟಿಸಿ ಬಾಲಕನಾದ ತನ್ನ ಒಡೆಯನನ್ನು ಅಪಾಯದಿಂದ ಪಾರುಮಾಡಿದನಷ್ಟೇ ಅಲ್ಲದೆ, ಪಲ್ಲವರ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸುವ ಸಲುವಾಗಿ ದಿಗ್ವಿಜಯವನ್ನೂ ಕೈಗೊಂಡನು. ಇದರ ಪರಿಣಾಮವಾಗಿ ನೆಲ್ಲೂರು ಜಿಲ್ಲೆಯೂ ಸೇರಿದಂತೆ ಆಂಧ್ರಪ್ರದೇಶದ ಕೆಲವು ಭಾಗಗಳು ಪಲ್ಲವರ ಕೈಸೇರಿದವು. ಕ್ರಿ.ಶ. ೭೪೫–೪೬ರಲ್ಲಿ ಎರಡನೇ ಆಳುವರಸನು ಮಲ್ಲಂ ಗ್ರಾಮದಲ್ಲಿದ್ದ ಕಾರಣ, ಆ ವೇಳೆಗೆ ಅವನು ಪಲ್ಲವರ ಸಾಮಂತನಾಗಿ ಕೆಲವು ವರ್ಷಗಳಾದರೂ ಆಗಿರಬೇಕೆಂದೂ, ಪಲ್ಲವರ ಸೇನೆಯ ದಿಗ್ವಿಜಯ ಸಾಧನೆಯಲ್ಲಿ ಅವನೂ ಭಾಗಿಯಾಗಿದ್ದನೆಂದೂ ಊಹಿಸಬಹುದಾಗಿದೆ. ಮಲ್ಲಂ ಶಾಸನದ ಆಜ್ಞಪ್ತಿಯಾಗಿದ್ದ ಚಲುಕ್ಯ ಅರಸನು ವೇಂಗಿಮಂಡಲವನ್ನಾಳುತ್ತಿದ್ದ ಪೂರ್ವಚಲುಕ್ಯ ಮನೆತನದವನಿದ್ದಿರಬಹುದು.

ಒಂದನೇ ಆಳುವರಸ ಮತ್ತು ಒಂದನೇ ಚಿತ್ರವಾಹನರ ಆಳ್ವಿಕೆಯ ಕಾಲದಲ್ಲಿ ಕದಂಬ ಮಂಡಲದ ಬನವಾಸಿ ಮತ್ತು ತುಳುನಾಡಿನ ಮಂಗಲಪುರಗಳು ಆಳುಪರ ರಾಜಧಾನಿಗಳಾಗಿದ್ದವು. ಕದಂಬಮಂಡಲವನ್ನು ಕಳೆದುಕೊಂಡಿದ್ದ ಎರಡನೇ ಆಳುವರಸನ ಆಳ್ವಿಕೆಯಲ್ಲಿ (ಉಡುಪಿ ತಾಲೂಕಿನ) ಉದ್ಯಾವರವು ಆಳುಪರ ಪ್ರಧಾನ ರಾಜಧಾನಿಯಾಗಿತ್ತು. ಆ ಗ್ರಾಮದಲ್ಲಿ ದೊರೆತಿರುವ ಶಿಲಾಶಾಸನವೊಂದು ಲಿಪಿಶಾಸ್ತ್ರದೃಷ್ಟಿಯಿಂದ ಕ್ರಿ.ಶ. ೮ನೆಯ ಶತಮಾನದ ಮಧ್ಯಭಾಗಕ್ಕೆ ಸೇರಿದ್ದು, ಅದರಲ್ಲಿ ಹೆಸರಿಸಲಾಗಿರುವ ಆಳುವರಸನು ಎರಡನೇ ಆಳುವರಸನೇ ಇರಬೇಕು. ಈ ಶಾಸನದಲ್ಲಿ ರಾಜಧಾನಿಯ ಹೆಸರನ್ನು ಉದಿಯಪುರವೆಂದು ಬರೆಯಲಾಗಿದೆ. ಅಲ್ಲದೆ ಎರಡನೇ ಆಳುವರಸನಿಗೆ ಪಟ್ಟಿಯೊಡೆಯೋನ್ ಎಂಬ ಬಿರುದನ್ನು ಕೊಡಲಾಗಿದೆ. ಪಟ್ಟಿ ಎಂಬುದು ಪೊಂಬುಚ್ಚಪುರದ ಮತ್ತೊಂದು ಹೆಸರಾಗಿದ್ದ ಕಾರಣ, ಕದಂಬಮಂಡಲವನ್ನು ಕಳೆದುಕೊಂಡಿದ್ದರೂ ಎರಡನೇ ಆಳುವರಸನು ಪೊಂಬುಚ್ಚ ಪ್ರದೇಶವನ್ನು ಉಳಿಸಿಕೊಂಡಿದ್ದನೆಂದು ಗೊತ್ತಾಗುತ್ತದೆ. ಇವನು ಕ್ರಿ.ಶ. ಸುಮಾರು ೭೩೦ ರಿಂದ ೭೬೦ ರವರೆಗೆ ರಾಜ್ಯವಾಳಿರಬಹುದು. ಇವನ ತರುವಾಯ ಪಟ್ಟಕ್ಕೆ ಬಂದ ಎರಡನೇ ಚಿತ್ರವಾಹನ ಮತ್ತು ರಣಸಾಗರ ಇವರ ಮಕ್ಕಳಿದ್ದಿರಬಹುದು.

**ಎರಡನೇ ಚಿತ್ರವಾಹನ (ಕ್ರಿ.ಶ. ೭೬೦–೮೦೦) ಮತ್ತು ರಣಸಾಗರ (ಕ್ರಿ.ಶ. ೭೬೦–೮೦೫) :** ಈ ಮೇಲೆ ಪ್ರಸ್ತಾಪಿಸಲಾಗಿರುವ ಮೂವರು ಆಳುಪ ರಾಜರೂ ಮೂಲತಃ ತುಳುನಾಡಿನ ದೊರೆಗಳಾಗಿದ್ದರೂ ಅವರವರ ಆಳಿಕೆಗೆ ಸಂಬಂಧಪಟ್ಟ ವಿಷಯಗಳನ್ನು ತಿಳಿಯುವಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಹೊರಗಿನ ಶಾಸನಗಳೇ ಹೆಚ್ಚು ಸಹಾಯಕವಾಗಿವೆಯೆಂದೂ, ಆ ಮೂವರ ಆಳ್ವಿಕೆಯ ಕಾಲವು

ಒಂದು ಶತಮಾನಕ್ಕೂ ಹೆಚ್ಚಿನದಾಗಿದ್ದರೂ ಅವರಿಗೆ ಸಂಬಂಧಿಸಿದಂತೆ ತುಳುನಾಡಿನಲ್ಲಿ ಇಲ್ಲಿಯವರೆಗೆ ಮೂರೇ ಮೂರು ಶಾಸನಗಳು ಲಭಿಸಿವೆ. (ಒಂದನೇ ಆಳುವರಸನ ವಡ್ಡರ್ಸೆ ಶಾಸನ; ಒಂದನೇ ಚಿತ್ರವಾಹನನ ಕಾಲದ ಪೊಳಲಿ ಅಮ್ಮುಂಜೆ ಶಾಸನ; ಎರಡನೇ ಆಳುವರಸನ ಉದ್ಯಾವರ ಶಾಸನ). ಆದರೆ ಎರಡನೆಯ ಆಳುವರಸನಿಂದೀಚೆಗೆ ಸುಮಾರು ಒಂದೂವರೆ ಶತಮಾನಗಳ ತುಳುನಾಡಿನ ಇತಿಹಾಸಕ್ಕೆ ಸಂಬಂಧಿಸಿದ ಶಾಸನಗಳ ಸಂಖ್ಯೆಯು ಅಷ್ಟೇನೂ ಕಡಿಮೆಯಿಲ್ಲದಿದ್ದರೂ, ಅವುಗಳಲ್ಲಿ ಕಾಲ ನಿರ್ದೇಶವಿಲ್ಲದ ಬರಿಯ ವೀರಗಲ್ಲುಗಳೇ ಹೆಚ್ಚು ಸಂಖ್ಯೆಯಲ್ಲಿರುವ ಕಾರಣ, ಆ ಕಾಲದ ತುಳುನಾಡಿನ ಇತಿಹಾಸವನ್ನು ರಚಿಸುವಲ್ಲಿ ಸಾಂದರ್ಭಿಕ ಆಧಾರದಿಂದೊಡಗೂಡಿದ ಊಹೆಯನ್ನೇ ಹೆಚ್ಚು ಅವಲಂಬಿಸಬೇಕಾಗಿದೆ.

ಎರಡನೇ ಆಳುವರಸನು ಕ್ರಿ. ಶ. ೭೬೦ರಲ್ಲಿ ತೀರಿಕೊಂಡಾಗ ಅವನ ಹಿರಿಯ ಮಗನೂ ಉತ್ತರಾಧಿಕಾರಿಯೂ ಇದ್ದಿರಬಹುದಾದ ಎರಡನೇ ಚಿತ್ರವಾಹನನು ರಾಜಧಾನಿ ಉದ್ಯಾವರದಲ್ಲಿ ನೆಲೆಸದೆ ಪೊಂಬುಚ್ಚ ಪ್ರದೇಶಕ್ಕೆ ತೆರಳಿ ಅಲ್ಲಿಯ ಪೆರ್ಗುಂಜಿಯೆಂಬ ಪಟ್ಟಣದಿಂದ ರಾಜ್ಯವಾಳತೊಡಗಿದನು. ತುಳುನಾಡಿನ ರಾಜ್ಯಭಾರವನ್ನು ಅವನ ತಮ್ಮನಿದ್ದಿರಬಹುದಾದ ರಣಸಾಗರನು ವಹಿಸಿಕೊಂಡನು. ತುಳುನಾಡಿನ ಮಟ್ಟಿಗೆ ರಣಸಾಗರನೆ ನಿಜಸ್ವಾಮಿಯಿದ್ದನೆಂಬುದನ್ನು ಉದ್ಯಾವರದಲ್ಲಿಯ ಅವನ ಆಳ್ವಿಕೆಗೆ ಸೇರಿದ ಶಾಸನವೊಂದರಿಂದ ತಿಳಿಯಬಹುದಾಗಿದೆ. ಚಿತ್ರವಾಹನನ ಪ್ರಸ್ತಾಪವೇ ಕಂಡುಬಾರದ ಈ ಶಾಸನದಲ್ಲಿ ರಣಸಾಗರನು ರಾಜಧಾನಿ ಉದಿಯಪುರದ ಚಂಬುಕಲ್ಲ ದೇವರಿಗೆ ಸುಂಕದ ಹಣವನ್ನು ದಾನಕೊಟ್ಟನೆಂದು ಹೇಳಲಾಗಿದೆ.

ಎರಡನೇ ಚಿತ್ರವಾಹನನು ಹೀಗೆ ತುಳುನಾಡಿನ ರಾಜ್ಯಭಾರವನ್ನು ರಣಸಾಗರನ ಪಾಲಿಗೆ ಬಿಟ್ಟು ಪೊಂಬುಚ್ಚ ಪ್ರದೇಶಕ್ಕೆ ತೆರಳಿ ಅಲ್ಲಿಯ ಪೆರ್ಗುಂಜಿಯನ್ನು ತನ್ನ ಚಟುವಟಿಕೆಗಳ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡದ್ದಕ್ಕೆ ಕಾರಣವಿಲ್ಲದಿರಲಿಲ್ಲ. ಕ್ರಿ.ಶ. ೭೫೩ರಲ್ಲಿ ಚಲುಕ್ಯರನ್ನು ಬದಿಗೊತ್ತರಿಸಿದ ರಾಷ್ಟ್ರಕೂಟರು ತಾವೇ ಕರ್ನಾಟಕದ ಸಾಮ್ರಾಜ್ಯದ ಅಧಿಪತಿಗಳಾಗಿದ್ದು ಸಾಲದಿದ್ದುದಕ್ಕೆ ಮಹಾಕಾಂಕ್ಷಿಗಳಾಗಿದ್ದ ರಾಷ್ಟ್ರಕೂಟ ರಾಜರು ತಮ್ಮ ಮನೆತನದ ಪ್ರಭಾವವನ್ನು ಎಲ್ಲೆಡೆಗಳಲ್ಲೂ ಹರಡುವ ಸಲುವಾಗಿ ಉತ್ತರ ಭಾರತದಲ್ಲೂ ದಕ್ಷಿಣದಲ್ಲೂ ಸದಾಕಾಲವು ಬೇರೆಬೇರೆ ರಾಜ್ಯಗಳ ವಿರುದ್ಧ ಯುದ್ಧ ಹೂಡುತ್ತಲೇ ಇದ್ದರು. ಈ ಕಾರಣಗಳಿಂದ ಅಂದಿನ ಕರ್ನಾಟಕದ ರಾಜಕೀಯ ವಿದ್ಯಮಾನವು ಅನಿಶ್ಚಿತ ವಾತಾವರಣದಿಂದ ಕೂಡಿತ್ತು. ಸ್ವತಃ ಮಹಾಕಾಂಕ್ಷಿಯೂ ಅತಿಪರಾಕ್ರಮಿಯೂ ಆಗಿದ್ದ ಎರಡನೇ ಚಿತ್ರವಾಹನನು ತನ್ನ ಪ್ರಭಾವವನ್ನೂ ರಾಜ್ಯದ ವ್ಯಾಪ್ತಿಯನ್ನೂ ಗಣನೀಯವಾಗಿ ಹೆಚ್ಚಿಸಿಕೊಳ್ಳಲು ಇಂತಹ ಸಂದಿಗ್ಧ ಪರಿಸ್ಥಿತಿಯು ಅನೇಕ ಸುಸಂದರ್ಭಗಳನ್ನು ಒದಗಿಸಿ ಕೊಡಬಹುದೆಂದು ಲೆಕ್ಕಹಾಕಿರಬೇಕು. ಅಂತಹ ಸಂದರ್ಭಗಳಿಂದ ಅನುಕೂಲ ಪಡೆಯಲು ದೂರದ ಉದ್ಯಾವರಕ್ಕಿಂತಲೂ ಕರ್ನಾಟಕದ ಇತರ ಪ್ರಾಂತಗಳನ್ನು ಸುಲಭವಾಗಿ ತಲುಪಲು ಬಾಗಿಲಿನಂತಿದ್ದ ಪೆರ್ಗುಂಜಿಯೆ ಮೊದಲಾದ ನೆಲೆಯೆಂಬುದನ್ನು ಅವನು ಮನಗಂಡಿರಬೇಕು. ಕೊನೆಗೂ ಕ್ರಿ. ಶ. ೭೯೨–೯೩ರಲ್ಲಿ ಅಂತಹ ಸುಸಂದರ್ಭವು ಒದಗಿಬಂದಾಗ ಮಾತ್ರ ಎರಡನೇ ಚಿತ್ರವಾಹನನ ಎಣಿಕೆಗಳು ತಪ್ಪಾಗಿ ಅವನ ಆಶೆ ಆಕಾಂಕ್ಷೆಗಳು ಬರಿಯ ಹಗಲುಗನಸಾದವು. ಕ್ರಿ.ಶ. ೭೯೨ರಲ್ಲಿ ರಾಜ್ಯತ್ಯಾಗ ಮಾಡಿದ ರಾಷ್ಟ್ರಕೂಟ ಧ್ರುವನು ತನ್ನ ಹಿರಿಯ ಮಕ್ಕಳಾದ ಕಂಭ ಮತ್ತು ಕರ್ಕರನ್ನು ಉಪೇಕ್ಷಿಸಿ ಮೂರನೆಯ ಮಗನಾದ ಮೂರನೇ ಗೋವಿಂದನನ್ನು ತನ್ನ ಉತ್ತರಾಧಿಕಾರಿಯೆಂದು ಘೋಷಿಸಿದನು. ಇದರಿಂದ ಅಸಮಾಧಾನಗೊಂಡ ಕಂಭನು ೧೨ ಸಾಮಂತರುಗಳ ಬೆಂಬಲ ಪಡೆದು ಮೂರನೇ ಗೋವಿಂದನಿಗೆದುರಾಗಿ ನಿಂತನು. ಈ ೧೨ ಸಾಮಂತರುಗಳ ಹೆಸರುಗಳು ಯಾವ ಶಾಸನಗಳಲ್ಲಿಯೂ ಉಕ್ತವಾಗಿಲ್ಲವಾದರೂ ಅವರಲ್ಲಿ ಎರಡನೇ ಚಿತ್ರವಾಹನನೂ ಒಬ್ಬನೆಂದು ಊಹಿಸಬಹುದಾಗಿದೆ. ತನ್ನ ಸಹಾಯದಿಂದ ಕಂಭನು ಸಾಮ್ರಾಟನಾದರೆ ನನಗೆ ಲಾಭವಾಗುವುದೆಂದು ಅವನು ನಂಬಿರಬೇಕು. ಕಂಭನನ್ನೂ ಅವನ ಬೆಂಬಲಿಗರನ್ನೂ ರಣರಂಗದಲ್ಲಿ ಸೋಲಿಸಿದ ಮೂರನೇ ಗೋವಿಂದನು, ಅವರನ್ನು ದಂಡಿಸದೆ ಅವರವರ ಸಂಸ್ಥಾನವನ್ನು ಅವರವರಿಗೇ ಹಿಂದಿರುಗಿಸಿದನು. ಅದರಂತೆ, ಪೆರ್ಗುಂಜಿಗೆ ಹಿಂದಿರುಗಿದ ಚಿತ್ರವಾಹನನು ಮಾತ್ರ ಮೂರನೇ ಗೋವಿಂದನ ಪ್ರಭುತ್ವವನ್ನು ಒಪ್ಪಲು ನಿರಾಕರಿಸಿದನು. ಈ ವರ್ತನೆಯಿಂದ ಅವನಿಗುಂಟಾದ ಕಷ್ಟನಷ್ಟಗಳನ್ನು ತಿಳಿಯಗೊಡುವ ಶಿಲಾಶಾಸನವೊಂದು ಮಾವಳಿ (ಸೊರಬ ತಾಲೂಕ, ಶಿವಮೊಗ್ಗ ಜಿಲ್ಲೆ)ಯಲ್ಲಿ ದೊರೆತಿದೆ. ಮೂರನೇ ಗೋವಿಂದನ ಸಾಮಂತನಾದ ರಾಜಾದಿತ್ಯನು ಕದಂಬಮಂಡಲವನ್ನಾಳುತ್ತಿದ್ದಾಗ, ಚಿತ್ರವಾಹನನು ರಾಷ್ಟ್ರಕೂಟ ಚಕ್ರವರ್ತಿಗೆ ಮಣಿಯದಿದ್ದುದನ್ನು ಕಂಡು ಸಿಟ್ಟೆದ್ದ ಕೊಲ್ಲಿಪಲ್ಲವ ನೊಳಂಬನು ಆಳುಪರಾಜನನ್ನು ದಂಡಿಸಲು ಕಾಕರಸನೆಂಬಾತನ ನಾಯಕತ್ವದಲ್ಲಿ ಸೇನೆಯನ್ನು ರವಾನಿಸಿದನೆಂದೂ, ಅದರ ಪರಿಣಾಮವಾಗಿ ನಡೆದ ಭೀಕರ ಯುದ್ಧದಲ್ಲಿ ಆಳುಪಸೇನೆಯು ಕೈ ಮೇಲಾಗುತ್ತಿರುವುದನ್ನು ಕಂಡ ಕಾಕರಸನು ಕುಲಮುದ್ದನೆಂಬಾತನನ್ನು ಸೇನಾ ತುಕಡಿಯೊಂದಿಗೆ ಅಲ್ಲಿಗೆ ಕಳುಹಿಸಿದನೆಂದೂ, ಆ ಕುಲಮುದ್ದನು ಅನುಪಮ ಧೈರ್ಯಸಾಹಸಗಳನ್ನು ತೋರಿ ಚಿತ್ರವಾಹನನನ್ನು ಸೋಲಿಸಿ ಪಲಾಯನಗೇಯುವಂತೆ ಮಾಡಿದರೂ ತಾನು ವೀರಸ್ವರ್ಗವನ್ನೇರಿದನೆಂದು ಈ ಶಾಸನವು ತಿಳಿಸುತ್ತದೆ.

ಹೀಗೆ ಪೆರ್ಗುಂಜಿಯಿಂದ ಕಾಲ್ತೆಗೆಯಬೇಕಾಗಿ ಬಂದಾಗ ಎರಡನೇ ಚಿತ್ರವಾಹನನಿಗೆ ತುಳುನಾಡಿಗೆ ಹಿಂದಿರುಗುವುದೊಂದನ್ನುಳಿದು ಬೇರೆ ಮಾರ್ಗವಿರಲಿಲ್ಲ. ಆದರೆ ಕ್ರಿ. ಶ. ೭೯೩ರ ವೇಳೆಗೆ ೩೦ ವರ್ಷಗಳಿಗೂ ಹೆಚ್ಚುಕಾಲ ತುಳುನಾಡಿನ ದೊರೆಯಾಗಿ ಮೆರೆದಿದ್ದ ರಣಸಾಗರನು ತಾನು ಕುಳಿತಿದ್ದ ಸಿಂಹಾಸನವನ್ನು ಅಣ್ಣನಿಗೆ ಬಿಟ್ಟುಕೊಡಲು ಸಿದ್ಧನಿರಲಿಲ್ಲ. ಪೆರ್ಗುಂಜಿಯ ಕಾಳಗದಲ್ಲಿ ಸಾಕಷ್ಟು ಕಷ್ಟನಷ್ಟಗಳನ್ನು ಅನುಭವಿಸಿ ದುರ್ಬಲವಾಗಿದ್ದ ಎರಡನೇ ಚಿತ್ರವಾಹನನ ಸೈನ್ಯವನ್ನು ಸುಲಭವಾಗಿ ನಿರ್ಮೂಲನಗೊಳಿಸಬಹುದೆಂದು ಎಣಿಕೆ ಹಾಕಿದ ರಣಸಾಗರನು ಯುದ್ಧಕ್ಕೆ ಸಿದ್ಧನಾಗಿ ನಿಂತನು. ಈ ಇಬ್ಬರ ವಿರೋಧದ ನಿಲುವಿನಿಂದ ಹೊರಹೊಮ್ಮಿದ ಒಳಜಗಳದ ಕಿಡಿಯು ಮುಂದಿನ ೨೦–೨೫ ವರ್ಷಗಳ ಕಾಲ ತುಳುನಾಡಿನ ಎಲ್ಲೆಡೆಗಳಲ್ಲೂ ಹಾರಿಹರಡಿ ಆಳುಪ ಅರಸುಮನೆತನದ ಎರಡು ತಲೆಮಾರುಗಳನ್ನು ಬಲಿ ತೆಗೆದುಕೊಳ್ಳುವುದರ ಜೊತೆಗೆ ಜನಸಾಮಾನ್ಯರ ಶಾಂತಿ ಸಮೃದ್ಧಿಗಳನ್ನೂ ಸುಟ್ಟು ಬೂದಿಮಾಡಿತು. ಹೀಗೆ ಆಗಿಹೋದ ಭೀಕರ ಅಂತರ್ಯುದ್ಧಕ್ಕೆ ತುಳುನಾಡಿನ ಕೆಲವೆಡೆಗಳಲ್ಲಿ ಅದರಲ್ಲೂ ಮುಖ್ಯವಾಗಿ ಉದ್ಯಾವರದಲ್ಲಿ ಕಂಡುಬರುವ ಹಲವು ವೀರಗಲ್ಲುಗಳು ಮೂಕಸಾಕ್ಷಿಗಳಂತೆ ನಿಂತಿವೆ.  ಈ ಶಾಸನಗಳಾವುದರಲ್ಲಿಯೂ ಕಾಲನಿರ್ದೇಶಕ ವಿವರಗಳನ್ನು ಕೊಡಲಾಗಿಲ್ಲವಾದರೂ ಲಿಪಿಶಾಸ್ತ್ರದೃಷ್ಟಿಯಿಂದ ಅವು ಕ್ರಿ.ಶ. ೮ನೆಯ ಶತಮಾನದ ಕೊನೆಯ ಮತ್ತು ೯ನೆಯ ಶತಮಾನದ ಪ್ರಾರಂಭಿಕ ದಶಕಗಳಿಗೆ ಸೇರಿದ್ದಾಗಿವೆ. ಆ ಒಳಯುದ್ಧಕ್ಕೆ ಸಂಬಂಧಿಸಿದಂತೆ ಈ ಶಾಸನಗಳಿಂದ ತಿಳಿದುಬರುವ ಘಟನಾವಳಿಯನ್ನು ಈ ರೀತಿ ಅಳವಡಿಸಬಹುದಾಗಿದೆ.

ಎಷ್ಟೇ ಯುದ್ಧಸನ್ನದ್ಧನಾಗಿದ್ದರೂ ರಣಸಾಗರನು ಎರಡನೇ ಚಿತ್ರವಾಹನನ ಪ್ರಥಮ ದಾಳಿಯ ಹೊಡೆತಕ್ಕೆ ಸೋತು ಉದ್ಯಾವರದಿಂದ ಕಾಲ್ತೆಗೆಯಬೇಕಾಯಿತು. ಆಳುಪರ ರಾಜಧಾನಿಯು ಎರಡನೇ ಚಿತ್ರವಾಹನನ ವಶವಾಯಿತು. ಈ ಕಾಳಗದಲ್ಲಿ ಧರೆಗೀಶನ (ಅಂದರೆ ಎರಡನೇ ಚಿತ್ರವಾಹನನ) ಭಟನಾದ ಕಾಲ್ತಿದೆಯೆಂಬಾತನು ರಣಸಾಗರನ ವಿರುದ್ಧ ಕಾದಾಡಿ ಜಯಗಳಿಸಿ ವೀರಸ್ವರ್ಗವನ್ನೇರಿದನೆಂದು ಉದ್ಯಾವರದ ಒಂದು ವೀರಗಲ್ಲಿನಿಂದ  ತಿಳಿದುಬರುತ್ತದೆ. ಯುದ್ಧದಲ್ಲಿ ಸೋತರೂ ಮನಸೋಲದ ರಣಸಾಗರನು ಆಳುಪರ ಮತ್ತೊಂದು ರಾಜಧಾನಿಯಾದ ಮಂಗಳೂರಿನ ಕಡೆಗೆ ಧಾವಿಸಿದನು. ಹಿಮ್ಮೆಟ್ಟಿ ಓಡುತ್ತಿದ್ದ ರಣಸಾಗರನನ್ನು ಅಟ್ಟಿಕೊಂಡು ಹೋದ ಎರಡನೇ ಚಿತ್ರವಾಹನನು ಮತ್ತೊಮ್ಮೆ ಯುದ್ಧಕ್ಕೆ ನಿಲ್ಲುವಂತೆ ತಮ್ಮನಿಗೆ ಕರೆ ನೀಡಿದನು. ಆದರೆ ಮಂಗಳೂರಿನ ಪರಿಸರದಲ್ಲಿ ನಡೆದ ಎರಡನೆಯ ಕಾಳಗದಲ್ಲಿ (ಚಿತ್ರವಾಹ)ನೇ ಸೋಲನ್ನನುಭವಿಸಬೇಕಾಯಿತು. ಈ ಸಮರದಲ್ಲಿ ಎರಡನೇ ಚಿತ್ರವಾಹನನನ್ನು ಸೋಲಿಸಲು ಮುಖ್ಯ ಕಾರಣನಾಗಿದ್ದ ರಣಸಾಗರನ ಭಟ, ನಾಗಮ್ಮ ಶೂದ್ರಕನು ರಣರಂಗದಲ್ಲೆ ಅಸುನೀಗಿದನೆಂದು ತಿಳಿಸುವ ಕರಿಯಂಗಳ (ಬಂಟ್ವಾಳ ತಾಲೂಕು)ದ ಶಾಸನದಲ್ಲಿ ಚಿತ್ರವಾಹನನನ್ನು ಮೋಗೀಶ್ವರ (ಅಂದರೆ ಮಹಿಗೀಶ್ವರ=ಧರಗೀಶ) ನೆಂದು ಹೆಸರಿಸಲಾಗಿದೆ. ಪರಾಭವ ಹೊಂದಿದ ಚಿತ್ರವಾಹನನಿಗೆ ಉದ್ಯಾವರಕ್ಕೆ ಹಿಂದಿರುಗುವುದನ್ನು ಬಿಟ್ಟು ಬೇರೆ ಮಾರ್ಗ ಉಳಿದಿರಲ್ಲಿಲ್ಲ. ತನ್ನ ಮಂಗಳೂರು ವಿಜಯದಿಂದ ಧೈರ್ಯತಾಳಿದ್ದ ರಣಸಾಗರನು ಅಣ್ಣನನ್ನು ಬೆನ್ನಟ್ಟಿ ಹೋಗಿ ಉದ್ಯಾವರಕ್ಕೆ ಮುತ್ತಿಗೆ ಹಾಕಿದನು. ಈ ನಿರ್ಣಾಯಕ ಕದನದ ಪ್ರಾರಂಭದಲ್ಲಿ ಎರಡನೇ ಚಿತ್ರವಾಹನನದೇ ಮೇಲುಗೈಯಾಗಿತ್ತು. ರಣರಂಗದಲ್ಲಿ ಅಸುನೀಗುವ ಮುನ್ನ ನಾಲಿಮಣಿ ನಾಗದೀಕ್ಷಿತ ಮತ್ತು ಅಂಗುಪೆಸಾರಪೊಲೆಗ ಎಂಬ ಎರಡನೇ ಚಿತ್ರವಾಹನನ ಇಬ್ಬರು ಭಟರು ತೋರಿದ ಧೈರ್ಯಸಾಹಸಗಳಿಂದಾಗಿ ಆಳುಪರ ರಾಜಧಾನಿಯು ಇನ್ನಷ್ಟು ದಿನ ಅವನ ವಶದಲ್ಲೆ ಉಳಿಯುವಂತಾಯಿತು. ಆದರೂ ಈ ತೂಗುಯ್ಯಾಲೆಯಾಟದಲ್ಲಿ ಅಂತರ್ಯುದ್ಧದ ಮತ್ತೊಂದು ಕಾಳಗದಲ್ಲಿ ರಣಸಾಗರನು ಚಿತ್ರವಾಹನನನ್ನು ಹೊಡೆದೋಡಿಸಿ ರಾಜಧಾನಿಯನ್ನು ವಶಪಡಿಸಿಕೊಂಡನು. ಮೂರನೆಯ ಬಾರಿಗೆ ರಣಸಾಗರನನ್ನು ಹೊರದೂಡಿ ಉದ್ಯಾವರವನ್ನು ಆಕ್ರಮಿಸಿಕೊಳ್ಳಲು ನಡೆಸಿದ ಪ್ರಯತ್ನದಲ್ಲಿ ಎರಡನೇ ಚಿತ್ರವಾಹನನು ಹತನಾದನು. ಹೀಗೆಂದು ಗ್ರಹಿಸಲು ಅನುವಾಗುವ ಉದ್ಯಾವರದ ಒಂದು ಶಾಸನದಲ್ಲಿ ಎರಡನೇ ಚಿತ್ರವಾಹನನನ್ನು ಮಯ್ಗೀಶ (ಮಹಿಗೀಶ್=ಧರೆಗೀಶ)ನೆಂಬ ದುಷ್ಟನೆಂದು ತಾತ್ಸಾರದೊಂದಿಗೆ ಕರೆಯಲಾಗಿದೆ. ಪೆರ್ಗುಂಜಿಯ ಕಾಳಗದಲ್ಲಿ ಸೋತು ಎರಡನೇ ಚಿತ್ರವಾಹನನು ತುಳುನಾಡಿಗೆ ಹಿಂದಿರುಗಿದ್ದು ಕ್ರಿ.ಶ. ೭೯೩ರ ಸುಮಾರಿಗೆ ಎಂದು ಈಗಾಗಲೇ ತಿಳಿಯಲಾಗಿದೆ. ಅವನಿಗೂ ರಣಸಾಗರನಿಗೂ ಮಧ್ಯೆ ನಡೆದ ಅಂತರ್ಯುದ್ಧದ ಕಣ್ಣಾಮುಚ್ಚಾಲೆಯಾಟವು ಆರೇಳು ವರ್ಷಗಳಾದರೂ ನಡೆದಿರಬೇಕು. ಅಂದಮೇಲೆ ಎರಡನೇ ಚಿತ್ರವಾಹನನು ಕ್ರಿ. ಶ. ೭೬೦ ರಿಂದ ೮೦೦ರವರೆಗೆ ರಾಜ್ಯವಾಳಿದನೆಂದು ಗ್ರಹಿಸಬಹುದಾಗಿದೆ.

ಎರಡನೇ ಚಿತ್ರವಾಹನನ ಮರಣದ ನಂತರ ತುಳುನಾಡಿನ ಪ್ರಭುತ್ವವಷ್ಟೇ ಅಲ್ಲದೆ 'ಪಟ್ಟಿಯೊಡೆಯೋನ್' ಎಂಬ ವಿಶೇಷಣವೂ ರಣಸಾಗರನ ಪಾಲಿಗಾದವು. ಆದರೂ ತುಳುನಾಡಿಗಾಗಲಿ ರಣಸಾಗರನಿಗಾಗಲಿ ಶಾಂತಿ ದೊರೆತಂತಾಗಲಿಲ್ಲ. ತೀರಿಹೋದ ಎರಡನೇ ಚಿತ್ರವಾಹನನ ಮಗನಿದ್ದಿರಬಹುದಾದ ಶ್ವೇತವಾಹನನು ತಂದೆಯ ಸ್ಥಾನದಲ್ಲಿ ನಿಂತು ತಾನೇ ತುಳುನಾಡಿನ ನಿಜಸ್ವಾಮಿಯೆಂದು ಘೋಷಿಸಿ ಉದ್ಯಾವರಕ್ಕೆ ಮುತ್ತಿಗೆ ಹಾಕಿದನು. ಆದರೆ ಅವನ ಮೊದಲನೆಯ ಪ್ರಯತ್ನವು ಫಲಕಾರಿಯಾಗಲಿಲ್ಲ. ಆ ಕಾಳಗದಲ್ಲಿ ಅವನನ್ನು ಸೋಲಿಸುವಲ್ಲಿ

ಕಾಮಕೋಡನೆಂಬ ಸೈನಿಕನು ರಣಸಾಗರನ ಪಕ್ಷವಹಿಸಿ ಯಶಸ್ವಿಯಾಗಿ ಹೋರಾಡಿ ಮಡಿದನೆಂದು ಉದ್ಯಾವರದ ಶಾಸನವೊಂದರಲ್ಲಿ ಹೇಳಲಾಗಿದೆ. ಇದೇ ಶಾಸನದಲ್ಲಿ ರಣಸಾಗರನು ಪಟ್ಟಿಯೊಡೆಯೋನ್ ಎಂಬ ವಿಶೇಷಣಕ್ಕೆ ಪಾತ್ರನಾಗಿದ್ದು, ಪಟ್ಟಿಯೆಂಬುದು (ಹುಮಚ) ಪೊಂಬುಚ್ಚಪುರದ ಮತ್ತೊಂದು ಹೆಸರಾಗಿದ್ದ ಕಾರಣ, ಆಳುಪರು ಪೆರ್ಗುಂಜಿಯನ್ನು ಕಳೆದುಕೊಂಡಿದ್ದರಾದರೂ ಪೊಂಬುಚ್ಚ ಪ್ರದೇಶದ ಒಂದು ಭಾಗವನ್ನಾದರೂ ಉಳಿಸಿಕೊಳ್ಳುವಲ್ಲಿ ಸಫಲರಾಗಿದ್ದರೆಂದು ತಿಳಿಯಬಹುದಾಗಿದೆ.

ಸೋಲನ್ನೊಪ್ಪದ ಶ್ವೇತವಾಹನನು ಎರಡನೆಯ ಬಾರಿಗೆ ಉದ್ಯಾವರದ ಮೇಲೇರಿ ಬಂದಾಗ ನಿರಂತರ ಕಾದಾಟದಿಂದ ಕೈಸೋತಿದ್ದ ರಣಸಾಗರನು ರಣರಂಗದಲ್ಲೇ ಅಸುನೀಗಿದನು. ಇವನೊಂದಿಗೆ ಎರಡನೇ ಆಳುವರಸನ ಪೀಳಿಗೆಯು ಕೊನೆಗೊಂಡು ಶ್ವೇತವಾಹನನ ಪ್ರತಿಸ್ಪರ್ಧಿಯಾಗಿ ರಣಸಾಗರನ ಮಗನಿದ್ದಿರಬಹುದಾದ ಪೃಥ್ವೀಸಾಗರನು ಬೆಳಕಿಗೆ ಬಂದನು. ರಣಸಾಗರನು ಬಹುಶಃ ಕ್ರಿಶ. ೭೬೦ ರಿಂದ ೮೦೫ ರವರೆಗೆ ರಾಜ್ಯವಾಳಿರಬಹುದು.

**ಶ್ವೇತವಾಹನ (ಕ್ರಿಶ. ೮೦೫–೧೦) ಮತ್ತು ಪೃಥ್ವೀಸಾಗರ (ಕ್ರಿಶ. ೮೧೦–೪೦) :** ರಣರಂಗದಲ್ಲಿ ಶ್ವೇತವಾಹನನನ್ನು ಎದುರಿಸುವುದಕ್ಕೆ ಪೂರ್ವಭಾವಿಯಾಗಿ ಪೃಥ್ವೀಸಾಗರನು ಉದ್ಯಾವರದ ಹೊರವಲಯದಲ್ಲಿ ನೆಲೆಸಿ ತಾನೇ ತುಳುನಾಡಿನ ನ್ಯಾಯವಾದ ರಾಜನೆಂದು ಘೋಷಿಸಿ ಪಟ್ಟಾಭಿಷೇಕವನ್ನೂ ಮಾಡಿಸಿಕೊಂಡನು. ಅಲ್ಲದೆ ಎರಡನೇ ಚಿತ್ರವಾಹನನು ಧರಿಸಿದ್ದ 'ಧರೇಗೀಶ' ಎಂಬ ಬಿರುದನ್ನು ತಾನೇ ಧರಿಸಿಕೊಂಡು, ರಾಜಧಾನಿ ಉದ್ಯಾವರಕ್ಕೆ ಮುತ್ತಿಗೆ ಹಾಕಿದನು. ಆಗ ನಡೆದ ಕಾಳಗದಲ್ಲಿ ಅವನೇ ಜಯಗಳಿಸಿದನು. ಶ್ವೇತವಾಹನನು ಸೋತು ರಣರಂಗದಲ್ಲೆ ವೀರಮರಣವನ್ನಪ್ಪಿದನು. ಅವನೊಂದಿಗೆ ಈ ಒಳಯುದ್ಧದ ದಳ್ಳುರಿಯು ನಂದಿಹೋಯಿತು.ಅವನು ಐದು ವರ್ಷಗಳಿಗೂ ಹೆಚ್ಚು ಕಾಲ ರಾಜ್ಯವಾಳಿದನೆಂದು ಊಹಿಸಬಹುದಾಗಿದೆ.

ಶ್ವೇತವಾಹನನ ಮರಣದಿಂದ ಪೃಥ್ವೀಸಾಗರ (ರಣಸಾಗರನ ಮಗ)ನಿಗೆ ಆಳುಪರ ಸಿಂಹಾಸನವು ಸ್ಥಿರವಾಯಿತು; ತುಳುವರಿಗೆ ರಾಜಕೀಯ ಶಾಂತಿ ಮತ್ತು ಸಾಮಾಜಿಕ ಮತ್ತು ಆರ್ಥಿಕ ಸಮೃದ್ಧಿ ಲಭಿಸಿತು. ನೆತ್ತರುಕೊಡುಗೆಗಳನ್ನು ಉಲ್ಲೇಖಿಸುವ ವೀರಗಲ್ಲುಗಳಿಗೆ ಬದಲಾಗಿ ದಾನಶಾಸನಗಳು ದೊರೆಯಲಾರಂಭಿಸುತ್ತವೆ. ಪೃಥ್ವೀಸಾಗರನು ಪಟ್ಟಕ್ಕೆ ಬಂದಾಗಿನಿಂದೀಚೆಯ ಸುಮಾರು ಒಂದು ಶತಮಾನದ ಅವಧಿವನ್ನು ಪ್ರಾಚೀನ ಆಳುಪರ ಇತಿಹಾಸದ ಶಾಂತಿಯುಗವೆಂದು ಕರೆಯಬಹುದು. ಈ ಶಾಂತಿಯುಗಕ್ಕೆ ಸೇರಿದ ಪೃಥ್ವೀಸಾಗರನ ಆಳ್ವಿಕೆಯ ಶಾಸನವೊಂದು ಉದ್ಯಾವರದಲ್ಲೆ ದೊರತಿದ್ದು ಆಳುಪರು ಸೋಮವಂಶಜರೆಂದು ಹೇಳುವ ಶಾಸನಗಳಲ್ಲಿ ಇದೇ ಪ್ರಾಚೀನತಮದ್ದಾಗಿದೆ. ಇಲ್ಲಿ ಪೃಥ್ವೀಸಾಗರನನ್ನು ಉದಯಾದಿತ್ಯ, ಉತ್ತಮಪಾಂಡ್ಯ ಮತ್ತು ಮೂರನೇಆಳುವರಸನೆಂದೂ ಹೆಸರಿಸಲಾಗಿದೆ. ಇವನ ಕೆಳಗಿನ ಅಧಿಕಾರಿ ಬೋಯ್ಗವರ್ಮನೆಂಬಾತನು ಉದ್ಯಾವರದ ಸುತ್ತಮುತ್ತಲಿನ ನಾಡಿನ ಆಡಳಿತಗಾರನಾಗಿ ಸೇವೆ ಸಲ್ಲಿಸುತ್ತಿದ್ದನೆಂದು ಈ ಶಾಸನದಿಂದ ತಿಳಿದುಬರುತ್ತದೆ. ಆದುದರಿಂದ ಇವನು ಕ್ರಿ. ಶ. ಸುಮಾರು ೮೧೦ ರಿಂದ ೮೪೦ರವರೆಗೆ ರಾಜ್ಯವಾಳಿರಬಹುದೆಂದು ಊಹಿಸಬಹುದಾಗಿದೆ

**ವಿಜಯಾದಿತ್ಯ ಮಾರಮ್ಮ (ಕ್ರಿ. ಶ. ೮೪೦–೭೦) :** ಪೃಥ್ವೀಸಾಗರನ ತರುವಾಯ ಅವನ ಮಗನಿದ್ದಿರಬಹುದಾದ ಮಾರಮ್ಮನು ಪಟ್ಟಕ್ಕೆ ಬಂದನು. ಇವನ ಆಳ್ವಿಕೆಯ ನಾಲ್ಕು ಶಾಸನಗಳು ಉದ್ಯಾವರದಲ್ಲೇ ದೊರೆತಿದ್ದು, ಇವುಗಳಿಂದ ಅವನಿಗೆ ವಿಜಯಾದಿತ್ಯ, ಉತ್ತಮಪಾಂಡ್ಯ ಮತ್ತು (೪ನೆಯ) ಆಳುವರಸ ಎಂಬ ಅನ್ಯನಾಮಗಳಿದ್ದವೆಂದು ತಿಳಿಯಬರುತ್ತದೆ. ಎರಡನೇ ಚಿತ್ರವಾಹನನನ್ನು ಪೆರ್ಗುಂಜಿಯಿಂದ ಹೊಡೆದೋಡಿಸಿದ ಮೇಲೆ ರಾಷ್ಟ್ರಕೂಟರು ತುಳುವ ನಾಡಿನ ಕಡೆಗೆ ಗಮನ ಕೊಟ್ಟಿರಲಿಲ್ಲ. ಅಲ್ಲದೆ ಶ್ವೇತವಾಹನನೊಂದಿಗೆ ಕುಲಕಲಹವು ಕೊನೆಗೊಂಡು ಎಲ್ಲೆಡೆಗಳಲ್ಲೂ ಶಾಂತಿಯು ಪುನಃ ಸ್ಥಾಪಿತವಾಗಿತ್ತು. ತುಳುನಾಡಿನ ಮಟ್ಟಿಗೆ ತನ್ನ ಏಕಾಧಿಪತ್ಯವು ಸುರಕ್ಷಿತವೆಂದು ಮನಗಂಡ ಮಾರಮ್ಮನು 'ಪರಮೇಶ್ವರ' 'ಅಧಿರಾಜರಾಜ' ಮುಂತಾದ, ಚಕ್ರೇಶ್ವರರಿಗೇ ಮೀಸಲಾದ ಬಿರುದುಗಳನ್ನು ಉಪಯೋಗಿಸುತ್ತಿದ್ದನೆಂದು ಅವನ ಶಾಸನಗಳಿಂದ ತಿಳಿದುಬರುತ್ತವೆ. ಉದ್ಯಾವರದಲ್ಲಿ ದೊರೆತ ಇವನ ಆಳಿಕೆಯ ನಾಲ್ಕು ಶಾಸನಗಳಲ್ಲೊಂದರಲ್ಲಿ ಕರಸಿನಾಯಕನೆಂಬುವನು ಕೊಳಲನಕರ (ಅಂದರೆ ಇಂದಿನ ಕೊಳಲಗಿರಿ)ದ ಅಧಿಕಾರಿಯಾಗಿದ್ದನೆಂದೂ ಮತ್ತೊಂದರಲ್ಲಿ ಅರಕೆಲನೆಂಬಾತನು ಉದಯಪುರದ ಸುತ್ತಮುತ್ತಲಿನ ನಾಡಿನ ಆಡಳಿತ ಮಾಡುತ್ತಿದ್ದನೆಂದೂ ಹೇಳಲಾಗಿದೆ.

ಮಂಗಳೂರು ತಾಲೂಕಿನ ಬಂಟ್ರ ಮತ್ತು ಬಂಟ್ವಾಳ ತಾಲೂಕಿನ ಪೊಳಲಿಯ ಎರಡು ಶಾಸನಗಳು ಲಿಪಿಶಾಸ್ತ್ರದೃಷ್ಟಿಯಿಂದ ಇದೇ ಕಾಲಕ್ಕೆ ಅಂದರೆ ಕ್ರಿಶ. ೯ನೆಯ ಶತಮಾನದ ಉತ್ತರಾರ್ಧಕ್ಕೆ ಸೇರಿದ್ದು, ಬಂಟ್ರ ಶಾಸನವು ತುಳುನಾಡಿನ ನಾಲ್ಕು ಸಣ್ಣಪುಟ್ಟ ಸಂಸ್ಥಾನಗಳ

ದೊರೆಗಳು ಒಂದುಗೂಡಿ ತಮ್ಮತಮ್ಮೊಳಗಿನ ಪರಸ್ಪರ ವೈರ, ಹೊಡೆದಾಟಗಳನ್ನು ಕೊನೆಗೊಳಿಸಬೇಕೆಂಬ ಒಡಂಬಡಿಕೆಯನ್ನು ಮಾಡಿಕೊಂಡರೆಂದು ತಿಳಿಸುತ್ತವೆ. ನೃಪಮಲ್ಲ ರಾಜ, ಕದಂಬಕುಲದ ಓರ್ವ ಅರಸು (ಇವನ ಹೆಸರು ಶಾಸನದಲ್ಲಿ ಉಕ್ತವಾಗಿಲ್ಲ), ರಾಚಮಲ್ಲನ ದುಗರಾಜ ಮತ್ತು ನರಸಿಂಗನ್ ದುಗರಾಜ ಇವರೇ ಆ ನಾಲ್ಕು ದೊರೆಗಳಾಗಿದ್ದು, ಇವರೆಲ್ಲರೂ ವಿಜಯಾದಿತ್ಯ ಮಾರಮ್ಮನ ಸಾಮಂತರಿದ್ದಿರಬೇಕು. ನೃಪಮಲ್ಲ, ರಾಚಮಲ್ಲ ಎಂಬೀ ಹೆಸರುಗಳು ತಳಕಾಡಿನ ಗಂಗಮನೆತನದವರಲ್ಲಿ ಹೆಚ್ಚಾಗಿ ಬಳಕೆಯಲ್ಲಿದ್ದು ಬಂದಿದ್ದ ಕಾರಣ ಬಂಟ್ರ ಶಾಸನವು ಆಳುಪರಿಗೂ ಗಂಗರಿಗೂ ಏನೋ ಒಂದು ರೀತಿಯ ಸಂಬಂಧವಿದ್ದಿರಬೇಕೆಂದು ಸೂಚಿಸುತ್ತಿದ್ದು, ಪೊಳಲಿಯ ಶಾಸನವೂ ಈ ಸೂಚನೆಗೆ ಪೋಷಕವಾಗಿದೆ.

ಅಲ್ಲಿಯವರೆಗೆ ರಾಷ್ಟ್ರಕೂಟರ ಸಾಮಂತರೆನಿಸಿದ್ದ ತಳಕಾಡಿನ ಗಂಗರು ಮಾರಮ್ಮನ ಕಾಲಕ್ಕೆ ರಾಷ್ಟ್ರಕೂಟರ ವಿರುದ್ಧ ದಂಗೆಯೆದ್ದಿದ್ದರು. ಎರಡನೇ ಚಿತ್ರವಾಹನನಿಗೆ ರಾಷ್ಟ್ರಕೂಟ ಮೂರನೇ ಗೋವಿಂದನಿಂದಾದ ಪರಾಭವದಿಂದಾಗಿ, ಆಳುಪರಿಗೆ ರಾಷ್ಟ್ರಕೂಟರ ಬಗ್ಗೆ ವೈಮನಸ್ಯ ಬೆಳೆದಿತ್ತು. ಅಂದ ಮೇಲೆ ಗಂಗರಿಗೂ ಆಳುಪರಿಗೂ ಮಧ್ಯೆ ಸಖ್ಯ ಬೆಳೆದುದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ಸಖ್ಯದ ಪರಿಣಾಮವಾಗಿ ಸೇವ್ಯ ಅರಕೆಲ್ಲನು (ಇವನು ಉದ್ಯಾವರದ ಶಾಸನದಲ್ಲಿ ಉಕ್ತನಾಗಿರುವ ಅರಕೆಲ್ಲನೇ ಇರಬೇಕು) ಯಾವುದೋ ರಾಜಕಾರ್ಯದ ಮೇಲೆ ತಳಕಾಡಿಗೆ ತೆರಳಿದ್ದನೆಂದೂ ಅಲ್ಲಿ ಅವನು ಮರಣ ಹೊಂದಿದನೆಂದೂ, ಆ ಸುದ್ದಿಯನ್ನು ಕೇಳಿ ದುಃಖದ ತಾಪವನ್ನು ತಾಳಲಾರದೆ ಅವನ ಅನುಯಾಯಿಯಾದ ಪಲ್ಯಮಣಳಿಗಾನಪ್ಪನು ಅಗ್ನಿಪ್ರವೇಶಮಾಡಿ ಅಸುನೀಗಿದನೆಂದೂ ಪೊಳಲಿಯ ಶಾಸನವು ತಿಳಿಸುತ್ತದೆ. ವಿಜಯಾದಿತ್ಯ ಮಾರಮ್ಮನು ಕ್ರಿ. ಶ. ಸುಮಾರು ೮೪೦ ರಿಂದ ೮೭೦ರವರೆಗೆ ರಾಜ್ಯವಾಳಿರಬಹುದು. ಕ್ರಿಶ. ೮೭೦ ರಿಂದ ೯೫೦ರವರೆಗೆ ಆಳುಪ ರಾಜ ವಂಶದ ಚಾರಿತ್ರಿಕ ಘಟನೆಗಳ ಬಗ್ಗೆ ಯಾವುದೇ ನಿಖರ ದಾಖಲೆಗಳು ಲಭ್ಯವಿಲ್ಲದಿರುವುದರಿಂದ ವಿವರಗಳು ತಿಳಿದುಬರುವುದಿಲ್ಲ. ಆದರೆ ವೇಣೂರಿನ ಶಾಸನದಿಂದ ಆಳುಪ ಕುಂದವರ್ಮನು ಕ್ರಿಶ. ೯೫೦ ರಿಂದ ೯೮೦ರವರೆಗೆ ಆಳ್ವಿಕೆ ಮಾಡಿದ ವಿಚಾರವು ತಿಳಿದುಬರುತ್ತಿದ್ದು, ಇದರೊಂದಿಗೆ ಮಧ್ಯಯುಗದ ಆಳುಪರ ಆಳ್ವಿಕೆಯು ಆರಂಭವಾಗುತ್ತದೆ.

### ಮಧ್ಯಯುಗದ ಆಳುಪರು

**ಕುಂದವರ್ಮ (ಕ್ರಿಶ.೯೫೦–೮೦) :** ವೇಣೂರಿನ ಭಗ್ನಶಾಸನವು ಕುಂದವರ್ಮನು ಕ್ರಿಶ.೯೫೦ ರಿಂದ ೯೮೦ ರವರೆಗೆ ಸುಮಾರು ೩೦ ವರ್ಷಗಳ ಕಾಲ ಆಳ್ವಿಕೆ ಮಾಡಿದನೆಂದು ದಾಖಲಿಸಿದೆ. ಈತನ ಕಾಲದ ಕ್ರಿಶ. ೯೬೮ರ ಶಾಸನವು ಕದ್ರಿಯ ಮಂಜುನಾಥ ದೇವಾಲಯದಲ್ಲಿ ಶಿಲಾಮೂರ್ತಿಯ ಪೀಠದಲ್ಲಿ ದೊರೆತಿದ್ದು, ಗ್ರಂಥಲಿಪಿಯನ್ನು ಹೊಂದಿದೆ. ಇದರಲ್ಲಿ ದತ್ತ ಆಳುಪನೆಂಬ ದೇಶದ್ರೋಹಿಯನ್ನು ಪದಚ್ಯುತಗೊಳಿಸಿ ಸಾಮ್ರಾಜ್ಯವನ್ನು ಸುಧಾರಿಸಿದ ವಿವರಗಳಿದ್ದು ರಾಜನು ಬಾಲಚಂದ್ರ ಶಿಖಾಮಣಿಯ (ಶಿವ) ಪರಮಭಕ್ತನೆಂದೂ, ಮದ್ಯಪಾನ ಸೇವನೆಯನ್ನು ಕೈಬಿಟ್ಟವನೆಂದೂ, ಬ್ರಾಹ್ಮಣರಿಗಾಗಿ ಅನೇಕ ಅಗ್ರಹಾರಗಳನ್ನು ನೀಡಿ, ದಾನ ,ಸರಳತೆಯಲ್ಲಿ ಕರ್ಣನ ಗುಣಗಳನ್ನೂ, ಪರಾಕ್ರಮದಲ್ಲಿ ಅರ್ಜುನನ್ನು, ಸಂಪತ್ತಿನಲ್ಲಿ ಇಂದ್ರನನ್ನೂ, ಜ್ಞಾನ ಹಾಗೂ ಬೌದ್ಧಿಕ ಪ್ರೌಢಿಮೆಯಲ್ಲಿ ಬೃಹಸ್ಪತಿಯನ್ನೂ ಮಾದರಿಯಾಗಿ ಅನುಕರಣೆ ಮಾಡಿದ್ದನೆಂದು" ದಾಖಲಿಸಲಾಗಿದೆ. ಕುಂದವರ್ಮನು ರಾಷ್ಟ್ರಕೂಟರ ಸಾಮಂತರಾಜನಾಗಿಯೇ ಮುಂದುವರೆದನೆಂಬುದು ದಾಖಲೆಗಳಿಂದ ಸ್ಪಷ್ಟವಾಗಿದೆ. ಮೇಲೆ ಹೇಳಿರುವ ವೇಣೂರಿನ ಶಾಸನದಲ್ಲಿ ರಾಜನನ್ನು 'ಮೀನಲಾಂಛನೋಪೇತ, ಸತ್ಯ ಶೌಚಾಚಾರ, ನಯವಿನಯ, ವೀರಲಕ್ಷ್ಮೀ ವಾಸಸ್ಥಳ, ಭೃತ್ಯ ಚಿಂತಾಮಣಿ ಮುಂತಾದ ವಿಶೇಷಣೆಗಳೊಂದಿಗೆ ಹೆಸರಿಸಿದೆ. ಆದರೆ ಕುಂದವರ್ಮನ ತರುವಾಯ ಕ್ರಿ.ಶ. ೯೮೦ ರಿಂದ ಕ್ರಿ.ಶ. ೧೦೨೦ರ ವರೆಗಿನ ಆಳುಪರ ರಾಜಕೀಯ ಇತಿಹಾಸದ ಬಗ್ಗೆ ಯಾವುದೇ ದಾಖಲೆಗಳು ಲಭಿಸಿರುವುದಿಲ್ಲ. ನಂತರ ಕುಂದವರ್ಮನ ಮಗ ಒಂದನೇ ಬಂಕಿದೇವ ಆಳುಪೇಂದ್ರನು ಕ್ರಿ.ಶ. ೧೦೨೦ – ೫೦ರ ನಡುವೆ ಆಳ್ವಿಕೆ ಮಾಡಿದ ವಿವರಗಳು ಲಭ್ಯವಿದೆ.

**ಒಂದನೇ ಬಂಕಿದೇವ (ಕ್ರಿಶ.೧೦೨೦–೫೦):** ಒಂದನೇ ಬಂಕಿದೇವ ಆಳುಪೇಂದ್ರನು ಕುಂದವರ್ಮರಸನ ಮಗನಿದ್ದಿರಬಹುದು. ೧೦೨೦ರಲ್ಲಿ ತನ್ನ ತಂದೆಯ ಸಾವಿನ ನಂತರ ಅಧಿಕಾರಕ್ಕೆ ಬಂದನು. ಚೋಳರ ಅತಿಕ್ರಮಣದ ಆತಂಕದಲ್ಲಿ ಮುಳುಗಿದ್ದ ತುಳುವನಾಡನ್ನು ಪುನಃ ಸ್ವಾತಂತ್ರ್ಯದ ಬೆಳಕಿಗೆ ತಂದ ಕೀರ್ತಿ ಮೊದಲನೇ ಬಂಕಿದೇವನದು. ಚೋಳರಾಜೇಂದ್ರನಿಂದ ಆಳುಪರು ಪರಾಜಿತರಾದ ಸಮಯದಿಂದಲೂ ಕೇರಳ ಮತ್ತು ತುಳುವ ರಾಜರುಗಳು ಆಗಿಂದಾಗ್ಗೆ ದಂಗೆಯೇಳುತ್ತಿದ್ದರು. ರಾಜರಾಜ ಚೋಳನು ಕ್ರಿಶ.೧೦೧೪ರಲ್ಲಿ ನಿಧನನಾದ ಮೇಲೆ ಚೋಳ ಸಾಮ್ರಾಜ್ಯದ ಆಡಳಿತವು ರಾಜೇಂದ್ರಚೋಳನ ಪಾಲಾಯಿತು. ನಂತರ ರಾಜೇಂದ್ರನು ಕರಾವಳಿಯ ಅನೇಕ ಪ್ರಾಂತೀಯ ರಾಜರುಗಳನ್ನು ಸೋಲಿಸಿದನೆಂದು, ಅವನ ಆಳ್ವಿಕೆಯ ತಿರುವಾಲಂಗಾಡು ತಾಮ್ರಶಾಸನದಲ್ಲಿ ಹೇಳಲಾಗಿದೆ. ಕಾಲದ ದೃಷ್ಟಿಯಿಂದ

ಪಶ್ಚಿಮ ಕರಾವಳಿಯ ಅನೇಕ ರಾಜರುಗಳ ಪೈಕಿ ತುಳುನಾಡಿನ ಮೊದಲನೇ ಬಂಕಿದೇವ ಹಾಗೂ ಅವನ ಸಾಮಂತರು ಸೇರಿದ್ದರು. ಮೊದಲನೇ ಬಂಕಿದೇವನ ಆಳ್ವಿಕೆಯ ಕಾಲದ ಮತ್ತು ಲಿಪಿಶಾಸ್ತ್ರದ ದೃಷ್ಟಿಯಿಂದ ಕ್ರಿ.ಶ.೧೧ನೇ ಶತಮಾನದ ಪೂರ್ವಾರ್ಧಕ್ಕೆ ಸೇರುವ ಬಾರಕೂರಿನ ಶಾಸನವೊಂದು ಬಂಕಿದೇವ 'ಮಾರಿ ಮೇಲೆ ವಂದ ಚೋಳನ ದಂಡಂ ಬೆಂಕೊಂಡರೆಯಟ್ಟಿದನೆಂದು' ದಾಖಲಿಸುತ್ತದೆ.

ಬಾರಕೂರಿನ ಭಾಗವಾದ ಮೂಡಕೇರಿಯ ಸೋಮೇಶ್ವರ ದೇವಾಲಯದ ಆವರಣದಲ್ಲಿರುವ ಎರಡು ಭಗ್ನ ಶಾಸನಗಳಲ್ಲಿ ರಾಜನ ಹಲವು ಬಿರುದುಗಳು ಮತ್ತು ವಿವಿಧ ಎಲ್ಲೆಗಳನ್ನೊಳಗೊಂಡಂತೆ ವಿವರಗಳು ಮಾತ್ರ ತಿಳಿದುಬರುತ್ತವೆ. ಇದರಲ್ಲಿ ತನ್ನ ಭುಜಬಲದಿಂದ ತುಳು ವಿಷಯ(ಪ್ರಾಂತ)ದಲ್ಲಿ ನಿಜಾಜ್ಞೆಯನ್ನು ಸ್ಥಾಪಿಸಿ ಆ ಪ್ರಾಂತವನ್ನೂ ಏಳುಕೊಂಬು (ಕೊಡಗು) ಪ್ರಾಂತವನ್ನೂ ತನ್ನ ದೊರೆ ಬಂಕಿ ಆಳುಪೇಂದ್ರದೇವನಿಗೆ ಶಾಂತರ ರಾಜನು ದಯಪಾಲಿಸಿದನೆಂದೂ, ದಂಡೆತ್ತಿ ಬಂದ ಚೋಳನನ್ನು ಹೊಡೆದೋಡಿಸಿದನೆಂದೂ, ಕೊಮರದಂಡನೂ ಸೇರಿದಂತೆ ನೂರಿಪ್ಪತ್ತು ಮಾಂಡಳಿಕರನ್ನು ತನ್ನ ದೊರೆ ಬಂಕಿಯಾಳುಪೇಂದ್ರದೇವನಿಗೆ ಒಪ್ಪಿಸಿದನೆಂದೂ ಸಾಂತಳಿಗೆ ಸಾಸಿರವನ್ನು ಏಕಾಗ್ರಚಿತ್ತನಾಗಿ ಆಳುತ್ತಿದ್ದನೆಂದು ದಾಖಲಿಸಲಾಗಿದೆ. ಶಾಸನದಲ್ಲಿ 'ಕೊಂಕಣ(ಭ)ಯಂಕರಂ' ಎಂದಿದ್ದು ಉಳಿದ ಭಾಗ ಭಗ್ನಗೊಂಡಿದೆ. ಇದೇ ದೇವಾಲಯದ ಎಡಬದಿಯಲ್ಲಿರುವ ಇನ್ನೊಂದು ಭಗ್ನ ವೀರಗಲ್ಲು ಶಾಸನವು ಮೇಲೆ ವಿವರಿಸಿರುವ ಶಾಸನದ ಒಂದು ಅಪೂರ್ಣ ಪ್ರತಿಯಾಗಿರುತ್ತದೆ. ಬಂಕಿದೇವನು ತನ್ನ ಮಗಳು ಮಂಕಬ್ಬರಸಿಯನ್ನು ಅಮ್ಮಣನ ಮಗನಾದ ತೈಲಪನಿಗೆ ಮದುವೆ ಮಾಡಿಕೊಟ್ಟಿದ್ದನೆಂದು ವ್ಯಕ್ತವಾಗುತ್ತದೆ.

ಕ್ರಿ.ಶ. ಸುಮಾರು ೧೦೨೦ ರಿಂದ ೧೦೫೦ರವರೆಗೆ ಆಳ್ವಿಕೆ ಮಾಡಿದ ಮೊದಲನೇ ಬಂಕಿದೇವನ ತರುವಾಯ ಅನುಕ್ರಮವಾಗಿ ಆಳುಪ ಸಿಂಹಾಸನವೇರಿದ ಐವರು ರಾಜರುಗಳ ಹೆಸರುಗಳನ್ನು ವರಂಗ (ಕಾರ್ಕಳ ತಾಲೂಕು) ಶಾಸನದಲ್ಲಿ ದಾಖಲಿಸಲಾಗಿದೆ. ಬಹುಶ: ಆಳುಪರ ವಂಶಾವಳಿಯನ್ನು ಕೊಡಲಾಗಿರುವ ಏಕೈಕ ಶಾಸನವು ಇದಾಗಿದೆ. ಈ ಶಾಸನವು ಕ್ರಿ.ಶ.೧೩ನೇ ಶತಮಾನದ ಪೂರ್ವಾರ್ಧದ ಲಕ್ಷಣವುಳ್ಳ ಲಿಪಿಯನ್ನು ಹೊಂದಿದ್ದು ಆಳುಪ ವಂಶದ ಐವರು ರಾಜರುಗಳ ಹೆಸರುಗಳನ್ನು ಪಟ್ಟಿಯೊಡೆಯ, ಪಾಂಡ್ಯ ಪಟ್ಟಿಯೊಡೆಯ, ಕವಿ ಆಳುಪ, ಪಟ್ಟಿಯೊಡೆಯ ಕುಲಶೇಖರ ಮತ್ತು ಕುಂದಣರ ಹೆಸರುಗಳನ್ನೂ ಉಲ್ಲೇಖಿಸುತ್ತದೆ. ಈ ರಾಜರುಗಳ ಪೈಕಿ ಕವಿ ಆಳುಪನು ಕ್ರಿ.ಶ.೧೧೧೦ ರಿಂದ ೧೧೬೦ರವರೆಗೆ ತುಳುನಾಡನ್ನು ಆಳಿದನೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ. ಆದುದರಿಂದ ಮೊದಲನೇ ಬಂಕಿದೇವನ ಆಳ್ವಿಕೆಯ ಅಂತಿಮ ವರ್ಷವಾದ ೧೦೫೦ ರಿಂದ ಕವಿ ಆಳುಪನ ಆಳ್ವಿಕೆಯ ಮೊದಲ ವರ್ಷವಾದ ಕ್ರಿ.ಶ.೧೧೧೦ ರವರೆಗೆ ೬೦ ವರ್ಷಗಳ ಕಾಲದಲ್ಲಿ ಪಟ್ಟಿಯೊಡೆಯ ಮತ್ತು ಆತನ ಉತ್ತರಾಧಿಕಾರಿಯಾದ ಪಾಂಡ್ಯ ಪಟ್ಟಿಯೊಡೆಯರುಗಳು ಆಳ್ವಿಕೆ ಮಾಡಿದರೆಂಬ ಅಭಿಪ್ರಾಯವಿದೆ.

**ಪಟ್ಟಿಯೊಡೆಯ (ಕ್ರಿ.ಶ.೧೦೫೦–೧೦೮೦) :** ಪ್ರಾಚೀನ ಆಳುಪರಲ್ಲಿ ರಣಸಾಗರನು ಪಟ್ಟಿಯೊಡೆಯನ್ ಎಂಬ ವಿಶೇಷಣಕ್ಕೆ ಪಾತ್ರನಾಗಿದ್ದು ಪಟ್ಟಿಯೆಂಬುದು ಪೊಂಬುಚ್ಚಪುರ (ಹುಮಚ)ದ ಮತ್ತೊಂದು ಹೆಸರಾಗಿದ್ದ ಕಾರಣ, ಆಳುಪರು ಪೆರ್ಗುಂಜಿಯನ್ನು ಕಳೆದುಕೊಂಡಿದ್ದರೂ ಪೊಂಬುಚ್ಚ ಪ್ರದೇಶದ ಸ್ವಲ್ಪ ಭಾಗವನ್ನು ತಮ್ಮ ಆಧಿಪತ್ಯದಲ್ಲಿ ಉಳಿಸಿಕೊಂಡಿದ್ದರೆಂಬ ಅಸ್ಪಷ್ಟ ಅಭಿಪ್ರಾಯವಿದೆ. "ಸೋಲನ್ನೊಪ್ಪದ ಶ್ವೇತವಾಹನನು ಎರಡನೇ ಬಾರಿಗೆ ಉದ್ಯಾವರದ ಮೇಲೇರಿ ಬಂದಾಗ ನಿರುತರ ಕಾದಾಟದಿಂದ ಕೈಸೋತಿದ್ದ ರಣಸಾಗರನು ರಣರಂಗದಲ್ಲೇ ಅಸುನೀಗಿದನು. ಇವನೊಂದಿಗೆ ಎರಡನೇ ಆಳುವರಸ ಪಟ್ಟಿಯೊಡೆಯನ ಪೀಳಿಗೆಯು ಕೊನೆಗೊಂಡು ಶ್ವೇತವಾಹನನ ಪ್ರತಿಸ್ಪರ್ಧಿಯಾಗಿ ರಣಸಾಗರನ ಮಗನಿದ್ದಿರಬಹುದಾದ ಪೃಥ್ವೀಸಾಗರನು ಪಟ್ಟಕ್ಕೆ ಬಂದಾಗಿನಿಂದೀಚೆಯ ಸುಮಾರು ಒಂದು ಶತಮಾನದ ಕಾಲವನ್ನು ಆಳುಪರ ಇತಿಹಾಸದ ಶಾಂತಿಯುಗವೆಂದು ಕರೆಯಬಹುದೆಂದು" ಎಂದು ಡಾ॥ ಕೆ.ವಿ.ರಮೇಶ್ ಅವರು ಅಭಿಪ್ರಾಯಪಡುತ್ತಾರೆ. ಪಟ್ಟಿಯೊಡೆಯನಿಗೆ ಆಳ್ವರಸ ಅಂದರೆ (ಐದನೆಯ) ಆಳುವರಸನೆಂಬ ನಿಜನಾಮವಿತ್ತು. ಪಟ್ಟಿಯೊಡೆಯ ಅಥವಾ ಐದನೇ ಆಳುವರಸನು ತನ್ನ ಮಗಳಾದ ಅಚಲದೇವಿಯನ್ನು ಶಾಂತಾರ ರಾಜ ವಂಶದ ವೀರಶಾಂತಾರನಿಗೆ ವಿವಾಹ ಮಾಡಿಕೊಟ್ಟಿದುದು ರಾಜಕೀಯವಾಗಿ ಆತನ ಪ್ರಗತಿಗೆ ಮೂಲಕಾರಣವಾಗಿತ್ತು. ಈತನು ಆರಂಭದಿಂದಲೂ ದುಷ್ಟರ ದಮನ ಮತ್ತು ಶಿಷ್ಟರ ರಕ್ಷಣೆಯನ್ನು ಯಶಸ್ವಿಯಾಗಿ ತನ್ನ ಆಡಳಿತದಲ್ಲಿ ಜಾರಿಗೊಳಿಸಿದ್ದನೆಂದು ವರಂಗ ಶಾಸನದಲ್ಲಿ ದಾಖಲಿಸಲಾಗಿದೆ. ಈ ವೀರಶಾಂತಾರರಸನ ತಂದೆ ಒಂದನೇ ಬಂಕಿದೇವನ ಅಳಿಯನಾದ ತೈಲಪ; ಮತ್ತು ತಾಯಿ ಗಂಗ ಮನೆತನದ ಪಾಲಯದೇವನ ಮಗಳಾದ ಕೆಳೆಯಬ್ಬರಸಿ. ಕಲ್ಯಾಣ ಚಾಳುಕ್ಯ ಚಕ್ರವರ್ತಿ ಆರನೇ ವಿಕ್ರಮಾದಿತ್ಯ (ಕ್ರಿ.ಶ.೧೦೭೬ ರಿಂದ ೧೧೨೬)ನ ಸಾಮಂತನೂ ಗೋವೆಯ ಕದಂಬರಾಜನೂ ಆದ ಒಂದನೇ ಜಯಕೇಶಿಯು ತುಳವರ ಮೇಲೆ ದಂಡೆತ್ತಿ ಬಂದು ಪಟ್ಟಿಯೊಡೆಯನನ್ನು ಯುದ್ಧದಲ್ಲಿ ಸೋಲಿಸಿದಾಗ ಅವನು ಚಾಳುಕ್ಯರ ಅಧಿಪತ್ಯವನ್ನು ಒಪ್ಪಿಕೊಳ್ಳಬೇಕಾಯಿತು. ಈತನು ಕ್ರಿ.ಶ.೧೦೫೦ ರಿಂದ ೧೦೮೦ರವರೆಗೆ ರಾಜ್ಯವಾಳಿದನು.

**ಪಾಂಡ್ಯ ಪಟ್ಟಿಯೊಡೆಯ (ಕ್ರಿ.ಶ.೧೦೮೦–೧೧೧೦) :** ಸುಮಾರು ೭–೮ನೇ ಶತಮಾನದ ಲಿಪಿ ಲಕ್ಷಣವಿರುವ ಪೊಳಲಿ ಅಮ್ಮುಂಜೆಯ ದುರ್ಗಾಪರಮೇಶ್ವರಿ ದೇವಾಲಯದ ಎದುರಿನಲ್ಲಿರುವ ಸ್ತಂಭ ಶಾಸನದಲ್ಲಿ ಪ್ರಭಾವಶಾಲಿ ಚಕ್ರವರ್ತಿಗಳನ್ನು ವಶೀಕರಿಸುವಂತಹ ಪಾಂಡ್ಯವಂಶದ ಆಳುಪೇಂದ್ರರನ್ನು ಸಪ್ತಮಾತೃಕೆಯರು ರಕ್ಷಿಸುವರು ಎಂದು ದಾಖಲಿಸಲಾಗಿದೆ. 'ಉದಯಾದಿತ್ಯ ಅರಸ'ನೆಂದು ಉಲ್ಲೇಖಿಸಿರುವ ಭುಜಬಲ ಕವಿ ಆಳುಪೇಂದ್ರನ ಕಾಲದ ಶಾಸನವು ಇದೇ ಪಾಂಡ್ಯ ಪಟ್ಟಿಗದೇವ ಆಳುಪನೆಂದು ಗ್ರಹಿಸಲಾಗಿದೆ. ಮೇಲೆ ಗಮನಿಸಲಾಗಿರುವ ಪೊಳಲಿಯ ದುರ್ಗಾಪರಮೇಶ್ವರಿ ದೇವಾಲಯದ ಆವರಣದಲ್ಲಿರುವ ಶಾಸನದಲ್ಲಿ ಆಳುಪೇಂದ್ರ ರಾಜನು ಪರಮ ಅಧಿಪತ್ಯದ ಬಿರುದುಗಳನ್ನು ಗಳಿಸಿ ಸ್ವತಂತ್ರ ರಾಜನೆಂದು ವಿವರಿಸಲಾಗಿದೆ. ಪಾಂಡ್ಯ ಜಯಸಿಂಗರಸನ ಬಂಟ್ವಾಳ ತಾಲೂಕಿನ ಕರಿಯಂಗಳದ ಬಡಕಬೈಲ ಗದ್ದೆಯಲ್ಲಿರುವ ಕ್ರಿ.ಶ.೧೧–೧೨ನೇ ಶತಮಾನದ ಲಕ್ಷಣವಿರುವ ಶಾಸನವು ಆಳುಪ ಅರಸುಕುಮಾರ ಪಾಂಡ್ಯ ಜಯಸಿಂಗರಸನಿಗೆ ಪಾಂಡ್ಯ ಮಹಾರಾಜಾಧಿರಾಜ, ಪರಮೇಶ್ವರ, ಪರಮಭಟಾರಕ ಎಂಬ ಸಾರ್ವಭೌಮತ್ವ ಸೂಚಕ ಬಿರುದುಗಳನ್ನು ನೀಡಿ ಹೊಳಲಭಟ್ಟಾರಕ ದೇವಿಗೆ ರಾಜನು 'ಪಣ್ಡಿಕರ' ಎಂಬ ಭೂಮಿಯನ್ನು ದಾನ ನೀಡಿದ ವಿಷಯವನ್ನು ದಾಖಲಿಸುತ್ತದೆ. ಇದರಿಂದ ಈತನು ಚಾಳುಕ್ಯ ರಾಜ ಆರನೇ ವಿಕ್ರಮಾದಿತ್ಯನ ಪರಮಾಧಿಪತ್ಯವನ್ನು ಆಳುಪ ಪಾಂಡ್ಯಪಟ್ಟಿಯೊಡೆಯನು ತಿರಸ್ಕರಿಸಿದನೆಂದು ವ್ಯಕ್ತವಾಗುತ್ತದೆ. ಇದರ ಪರಿಣಾಮವಾಗಿ ವಿಕ್ರಮಾದಿತ್ಯನ ಆದೇಶದಂತೆ, ಆತನ ಸಾಮಂತನಾಗಿದ್ದ ಹೊಯ್ಸಳ ವಿಷ್ಣುವರ್ಧನನ ಸೇನಾಧಿಪತಿ ಸೆಟ್ಟಿಗಾವುಂಡನು ತನ್ನ ಪ್ರಬಲಸೇನೆಯೊಂದಿಗೆ ಆಳುಪ ಸಾಮ್ರಾಜ್ಯದ ಮೇಲೆ ದಾಳಿ ಮಾಡಿ, ವಿಜಯಶಾಲಿಯಾಗಿ ಹಿಂದಿರುಗುವಾಗ ಕರಿವಿಡಿ ಹಿರಿಯೂರಿನ ಗಾವುಂಡನನ್ನು ತನ್ನ ವಶಕ್ಕೆ ತೆಗೆದುಕೊಂಡ ಸೆಟ್ಟಿಗಾವುಂಡನು ಪರಾಕ್ರಮಿಯೆಂದು ಶಾಸನಗಳಲ್ಲಿ ದಾಖಲಿಸಲಾಗಿದೆ. ಪಾಂಡ್ಯ ಪಟ್ಟಿಯೊಡೆಯನು ಈತನೊಂದಿಗೆ ಹೋರಾಡುತ್ತಾ ರಣರಂಗದಲ್ಲಿ ಮರಣ ಹೊಂದಿದನೆಂದು ಗ್ರಹಿಸಲಾಗುತ್ತದೆ. ಆದರೆ ಈ ಸೋಲಿನಿಂದ ಆಳುಪ ರಾಜರಿಗೆ ರಾಜ್ಯ ವಿಸ್ತಾರದ ದೃಷ್ಟಿಯಿಂದ ಮತ್ತು ರಾಜಕೀಯ ಸ್ಥಾನಮಾನಗಳ ದೃಷ್ಟಿಯಿಂದ ಅಂಥ ನಷ್ಟವೇನೂ ಸಂಭವಿಸಲಿಲ್ಲ.

**ಭುಜಬಲ ಕವಿ ಆಳುಪೇಂದ್ರ (ಕ್ರಿ.ಶ.೧೧೧೦–೧೧೬೦) :** ಪಾಂಡ್ಯ ಪಟ್ಟಿಯೊಡೆಯನ ತರುವಾಯ ಅವನ ಮಗನಿದ್ದಿರಬಹುದಾದ ಕವಿ ಆಳುಪೇಂದ್ರನು ಸಿಂಹಾಸನವನ್ನೇರಿದನು. ಈತನ ಆಳ್ವಿಕೆಗೆ ಸೇರಿದ ಹಲವು ಶಾಸನಗಳು ಕ್ರಿ.ಶ.೧೧೧೪–೧೫ ರಿಂದ ೧೧೫೫ ರವರೆಗೆ ಲಭ್ಯವಿರುವುದರಿಂದ ಇವನು ಕನಿಷ್ಠ ಪಕ್ಷ ೫೦ವರ್ಷಗಳಾದರೂ ರಾಜ್ಯವಾಳಿದನೆಂದು ಗ್ರಹಿಸಬಹುದಾಗಿದೆ. 'ಭುಜಬಲ'ವೆಂಬುದು ಕವಿ ಆಳುಪೇಂದ್ರನು ಧರಿಸಿದ್ದ ಒಂದು ಬಿರುದೆಂದು ಕ್ರಿ.ಶ.೧೧೩೯ ಶಾಸನದಿಂದ ವ್ಯಕ್ತವಾಗುತ್ತದೆ. ಈತನ ಅತ್ಯಂತ ಪ್ರಾಚೀನ ಶಾಸನದಲ್ಲಿ (ಕ್ರಿ.ಶ.೧೧೧೪–೧೧೧೫) ಇವನನ್ನು 'ಕುಮಾರ ಉದಯಾದಿತ್ಯರಸ' ಎಂದು ಉಲ್ಲೇಖಿಸಲಾಗಿದೆ.

ಮೂಡಬಿದ್ರಿ ಹೋಬಳಿಯ, ವೇಣೂರಿನ ಗೊಮ್ಮಟನಮೂರ್ತಿಯ ಬಳಿ ಇರುವ ಕ್ರಿ.ಶ.೧೧೧೮ರ ಶಾಸನದಲ್ಲಿ ಮಹಾಮಂಡಳೇಶ್ವರ ಸೇವ್ಯಗೆಲ್ಲರಸನು ಪೂಂಜಳ್ಕೆ ಮತ್ತು ಚಾಲೂಳ್ಕೆ ಪ್ರಾಂತ್ಯಗಳನ್ನು ಆಳುತ್ತಿದ್ದಾಗ ಅವನು ಸಾವಿರ ವರ್ಷ ಬದುಕಬೇಕೆಂದು ಬಯಸಿ ಕಾಜುವ ಮೈಂದುವಾಲ್ದನ ಆಜ್ಞೆಯ ಮೇರೆಗೆ ಈ ಕಲ್ಲನ್ನು ಸ್ಥಾಪಿಸಿದ್ದಾಗಿ ದಾಖಲಿಸಲಾಗಿದೆ. ಕುಂದಾಪುರ ತಾಲೂಕಿನ ಬಸರೂರಿನ ಮಹಾಲಿಂಗೇಶ್ವರ ದೇವಾಲಯದಲ್ಲಿರುವ ಕವಿ ಆಳುಪೇಂದ್ರನ ಕ್ರಿ.ಶ.೧೧೫೪ರ ಶಾಸನವು ಪಾಂಡ್ಯ ಚಕ್ರವರ್ತಿ ಭುಜಬಲ ವೀರ ಕವಿಯಾಳುಪೇಂದ್ರನು ಆಳುತ್ತಿದ್ದಾಗ, ಬಸುರೆಪುರದ ನಖರೇಶ್ವರ ದೇವರ ನೈವೇದ್ಯಕ್ಕೆಂದು ಮೌನಯೋಗಿ ಎಂಬ ದಾತಾರನು 'ಸಮಸ್ತ ನಖರ' ಮತ್ತು ಊರ ಒಕ್ಕಲುಗಳ ಸಮಕ್ಷಮದಲ್ಲಿ ಪಾಂಡ್ಯ ಗದ್ಯಾಣವೆಂಬ ಬಂಗಾರದ ನಾಣ್ಯಗಳನ್ನು ದಾನಕೊಟ್ಟ ವಿವರಗಳನ್ನು ಉಲ್ಲೇಖಿಸುತ್ತದೆ. ಇದೇ ರೀತಿ ಉಡುಪಿ ತಾಲೂಕಿನ ಉಪ್ಪೂರಿನ ವಿನಾಯಕ ದೇವಾಲಯದಲ್ಲಿರುವ ಶಾಸನ, ಭುಜಬಲಕವಿ ಆಳುಪೇಂದ್ರನನ್ನು 'ಪಾಂಡ್ಯ ಚಕ್ರವರ್ತಿ' ಎಂದು ಕರೆದಿರುವುದು ಹಾಗೂ ಪಾರಪಳ್ಳಿ ನಾಯಕನೆಂಬ ಜನಪ್ರಿಯ ವ್ಯಕ್ತಿಯು ಬಂಗಾರದ ನಾಣ್ಯಗಳನ್ನು ದಾನಕೊಟ್ಟಿರುವುದಾಗಿ ಹೇಳುತ್ತದೆ. ತುಳುನಾಡಿನ ಜನತೆಯಲ್ಲಿ ಗಾಢವಾಗಿರುವ ಸಾಂಪ್ರದಾಯಿಕ ಮತ್ತು ಪೌರಾಣಿಕ ನಂಬುಗೆಯ ಪ್ರಕಾರ ಪಾರಪಳ್ಳಿ ನಾಯಕ ಅಥವಾ ಪಾಲಿಪತ ನಾಯಕನೆಂದು ಇಂದಿಗೂ ಪರಿಗಣಿಸಲಾಗುತ್ತದೆ. ಕವಿ ಆಳುಪೇಂದ್ರನ ಪಟ್ಟದರಾಣಿ ಪಾಂಡ್ಯ ಮಹಾದೇವಿಯು ಪನ್ನಿರ್ಪಳ್ಳಿ (ಉಡುಪಿ ತಾಲೂಕು) ಎಂಬ ಗ್ರಾಮದ ಆಡಳಿತ ಸೂತ್ರವನ್ನು ವಹಿಸಿದ್ದಳೆಂದು ಕ್ರಿ.ಶ.೧೧೫೫ರ ಕೋಟೇಶ್ವರಿಯ ಪಂಚಲಿಂಗೇಶ್ವರ ದೇವಾಲಯದಲ್ಲಿರುವ ಶಾಸನವು ತಿಳಿಸುತ್ತದೆ. ಇದೇ ಶಾಸನದಲ್ಲಿ ಬಾರ್ಕೂರನ್ನು 'ಬಾರಹಕನ್ಯಾಪುರ' ವೆಂದು ಉಲ್ಲೇಖಿಸಲಾಗಿದೆ. ಈ ಸ್ಥಳವು ಕ್ರಿ.ಶ.೯ನೇ ಶತಮಾನದಿಂದ ಕ್ರಿ.ಶ.೧೩ನೇ ಶತಮಾನದವರೆಗೆ ಆಳುಪರ ರಾಜಧಾನಿಯಾಗಿದ್ದು, ನಂತರ ಕುಂದವರ್ಮರಸನ ಆಳ್ವಿಕೆಯಲ್ಲಿ ಮಂಗಳಪುರ (ಮಂಗಳೂರು)ಕ್ಕೆ ವರ್ಗಾಯಿಸಲ್ಪಟ್ಟಿತೆಂಬ ಅಭಿಪ್ರಾಯವೂ ಇದೆ. ಆ ಸಂದರ್ಭದಲ್ಲಿ ಹಲವಾರು ಬಿರುದುಗಳನ್ನು ಧರಿಸಿದ ಭುಜಬಲಕವಿ ಆಳುಪೇಂದ್ರನು ಸ್ವತಂತ್ರವಾಗಿ ಆಳ್ವಿಕೆ ಪ್ರಾರಂಭಿಸಿದನೆಂದು ಪ್ರತೀತಿಯಿದೆ. ಹೊಯ್ಸಳ ವಿಷ್ಣುವರ್ಧನನು ಕ್ರಿ.ಶ.೧೧೧೭ರಲ್ಲಿ ತುಳುವನಾಡಿನ ಮೇಲೆ ದಾಳಿ ಮಾಡಿದನೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಆದರೆ, ಯಾವುದೇ ರೀತಿಯ ರಾಜಕೀಯ ಪರಿವರ್ತನೆಗಳೂ

ಈ ದಾಳಿಯಿಂದ ಸಂಭವಿಸಿದಂತೆ ಕಾಣುವುದಿಲ್ಲ. ಹಲವು ಹೊಯ್ಸಳರ ಶಾಸನಗಳಲ್ಲಿ ವಿಷ್ಣುವರ್ಧನನನ್ನು 'ಉತ್ಪಾಟಿತ ಘಟ್ಟಕ ಪಾಟನ', 'ತುಳು ನೃಪಾಳ ಹೃದಯವಿದಳನ ರಣಕೇಲಿ' ಎಂದು ಮುಂತಾಗಿ ಹೊಗಳುತ್ತವೆ. ಏತನ್ಮಧ್ಯೆ, ಕವಿ ಆಳುಪೇಂದ್ರನ ಕಾಲದಲ್ಲಿ ಆಳುಪ ಸಾಮ್ರಾಜ್ಯದ ರಾಜಧಾನಿಯನ್ನು ಉದಯಾವರ(ಉದ್ಯಾವರ)ದಿಂದ ಬಾರಕೂರಿಗೆ ವರ್ಗಾಯಿಸಲಾಯಿತು.

**ಒಂದನೇ ಕುಲಶೇಖರ ಆಳುಪೇಂದ್ರ (ಕ್ರಿ.ಶ.೧೧೬೦ – ೧೨೨೦) :** ಕುಲಶೇಖರ ಆಳುಪೇಂದ್ರ ಅಥವಾ ಚಕ್ರವರ್ತಿ ವೀರ ಕುಲಶೇಖರ ಆಳುಪೇಂದ್ರನು ಭುಜಬಲ ಕವಿ ಆಳುಪೇಂದ್ರನ ತರುವಾಯ ಕ್ರಿ.ಶ.೧೧೬೦ರಲ್ಲಿ ಸಿಂಹಾಸನವನ್ನೇರಿದನು. ಈತನೂ ಸಹ ದೀರ್ಘಕಾಲ ಆಡಳಿತವನ್ನು ನಡೆಸಿದನೆಂದು ಶಾಸನಗಳಿಂದ ತಿಳಿದುಬರುತ್ತದೆ. ವೀರ ಕುಲಶೇಖರನ ಬಸರೂರಿನ ಮಹಾಲಿಂಗೇಶ್ವರ ದೇವಾಲಯದಲ್ಲಿರುವ ಕ್ರಿ.ಶ.೧೧೬೭ರ ಶಾಸನವು ಆಳುಪ ಅರಸು ವೀರ ಕುಲಶೇಖರ ದೇವನಿಗೆ ಸಮಸ್ತ ಭುವನ, ವಿಖ್ಯಾತ ಪಾಂಡ್ಯ, ಮಹಾರಾಜಾಧಿರಾಜ, ಪರಮೇಶ್ವರ, ಭಟ್ಟಾರಕ ಪಾಂಡ್ಯ ಚಕ್ರವರ್ತಿ ಮೊದಲಾದ ಬಿರುದುಗಳನ್ನು ನೀಡಲಾಗಿದೆ. ಇದರಲ್ಲಿ ಬಸರೂರು ಪಟ್ಟಣದ ನಖರೇಶ್ವರ ದೇವರಿಗೆ ರಾಜಪ್ಪ ಸೆಟ್ಟಿಯ ಮಗಳು ಚಂಡಬ್ಬೆ ನೀಡಿದ ದಾನಗಳ ಬಗ್ಗೆ ದಾಖಲಿಸಲಾಗಿದೆ. ಕುಲಶೇಖರ ಆಳುಪೇಂದ್ರನು ಮಂಗಳೂರಿನ ಕೆನರಾ ಪ್ರೌಢಶಾಲೆಯ ಆವರಣದಲ್ಲಿರುವ ಕ್ರಿ.ಶ.೧೨೦೪ರ ಶಾಸನವು ರಾಜಧಾನಿ ಮಂಗಲಾಪುರದ ಹಿರಿಯ ಅರಮನೆಯ ಭುವನಾಶ್ರಯವೆಂಬ ಮೊಗಸಾಲೆಯಲ್ಲಿ ಎಲ್ಲಾ ಮಂತ್ರಿಗಳೂ, ಸೇನಾಪತಿಗಳೂ ಒಡಗೂಡಿ ಒಡ್ಡೋಲಗದಲ್ಲಿ ಕುಳಿತಿರುವಾಗ, ತನ್ನ ಅಳಿಯ ವೀರ ಬಂಕಿದೇವರಸನಿಗೆ ಮುಗುರು ನಾಡಿನ ರಾಜ್ಯಭಾರವನ್ನು ವಹಿಸಿಕೊಟ್ಟನೆಂಬ ವಿಚಾರ ಹಾಗೂ ಕುಲಶೇಖರನೂ ಅಳಿಯ ಬಂಕಿದೇವನೂ ಸೇರಿ ಬಂಕೇಶ್ವರ ದೇವರಿಗೆ ದಾನ ಮಾಡಿದ ವಿವರಗಳನ್ನು ಇದರಲ್ಲಿ ದಾಖಲಿಸಲಾಗಿದೆ. ಮೂಡಬಿದಿರೆಯ ಪ್ರಾಂತ ಎಂಬಲ್ಲಿರುವ ಗೌರೀ ದೇವಾಲಯದ ಕ್ರಿ.ಶ.೧೨೦೫ರ ಶಾಸನವು ಪಾಂಡ್ಯ ಚಕ್ರವರ್ತಿ ಒಂದನೇ ಕುಲಶೇಖರನ ಆಳ್ವಿಕೆಯ ಅವಧಿಯಲ್ಲಿ ಮೂಡಬಿದಿರೆಯ ದುರ್ಗಾದೇವಿಗೆ ಹಿಂದೆ ನೀಡಲಾಗಿದ್ದ ದವಸ–ಧಾನ್ಯಗಳ ದಾನದ ಜೊತೆಗೆ ಕೊಡಲಾದ ಮತ್ತೊಂದು ದಾನವನ್ನೂ ಮುಂದುವರಿಸುವಲ್ಲಿ ಕಾರ್ಯಲೋಪ ಮಾಡಿದರೇ ಅವರಿಗೆ ವಿಧಿಸಬೇಕಾದ ಶಿಕ್ಷೆಗಳ ಬಗ್ಗೆ ದಾಖಲಿಸುತ್ತದೆ. ಇದೇ ದೇವಾಲಯದಲ್ಲಿರುವ ಎರಡನೇ ಶಾಸನವು ಕ್ರಿ.ಶ.೧೨೧೫ ಒಂದನೇ ಆಳುಪೇಂದ್ರನ ಆಳ್ವಿಕೆಯಲ್ಲಿ ಇದೇ ಸ್ಥಳದ ಮೂವರು ಬ್ರಾಹ್ಮಣರು ತಮ್ಮ ಭೂಮಿಯ ಉತ್ಪಾದನೆಯ ದವಸ ಹಾಗೂ ಐವತ್ತು ಬಾರಕೂರು ಗದ್ಯಾಣ ಮತ್ತು ಐವತ್ತು ಮಂಗಲೂರ ಗದ್ಯಾಣಗಳನ್ನು ಬಿದಿರಿಯ (ಮೂಬಿದಿರೆ) ದೇವಿಗೆ ದಾನಕೊಟ್ಟ ಮಹತ್ವದ ವಿವರಗಳನ್ನು ದಾಖಲಿಸುತ್ತದೆ.

**ಕುಂಡಣ (ಕ್ರಿ.ಶ.೧೨೨೦–೩೦) :** ಕುಂಡಣ ಆಳುಪರಾಜನು ಕುಲಶೇಖರ ಆಳುಪೇಂದ್ರನನ್ನು ಉತ್ತರಾಧಿಕಾರಿಯಾಗಿ ಅಧಿಕಾರಕ್ಕೆ ಬಂದನು. ಈತನು ಶಾಂತಳಿಗೆ ನಾಡನ್ನು ಆಳುತ್ತಿದ್ದ ತ್ರಿಭುವನಮಲ್ಲ ಶಾಂತರನ ಕಿರಿಯ ತಮ್ಮನಾಗಿದ್ದನೆಂದು ವರಾಂಗದ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಆಳುಪ ವಂಶದ ರಾಜಕುಮಾರಿಯನ್ನು ಇವನು ವಿವಾಹವಾಗಿದ್ದನೆಂಬ ಅಭಿಪ್ರಾಯವಿದೆ. ಕುಲಶೇಖರ ಆಳುಪೇಂದ್ರನು ನಿಧನನಾದ ಮೇಲೆ ಅವನ ಮಗ ವಲ್ಲಭದೇವನು ಅಪ್ರಾಪ್ತ ವಯಸ್ಕನಾಗಿದ್ದ ಕಾರಣ ಕುಂಡಣನು ಆತನ ಪರವಾಗಿ ತುಳು ದೇಶವನ್ನು ಆಳಿದನು. ಕುಂಡಣನು **'ಅಖಿಳ ದಿಕ್ಪಾಳನಿಳಯಮಂ ನಿಜಕೀರ್ತಿಯಿಂಧವಳಿಸಿದ'** ಎಂದು ವರಂಗ ಶಾಸನವು ದಾಖಲಿಸಿದೆ.ಡಾ॥ ಕೆ.ವಿ. ರಮೇಶ್ ಸಹ **"ಸೂರ್ವಾಡಿ ಚಕ್ರವರ್ತಿ"** ಮತ್ತು ವಿಭುದಾವಸು ಕುಲಶೇಖರನ ಉತ್ತರಾಧಿಕಾರಿಯಾಗಿರಲಿಲ್ಲವೆಂದೂ, ವರಂಗದ ಶಾಸನದಲ್ಲೂ ಇವನ ಹೆಸರು ಕುಂಡಣ ಎಂದೇ ಉಲ್ಲೇಖಿತವಾಗಿದ್ದು, ಇವನು ತ್ರಿಭುವನಮಲ್ಲ ಶಾಂತಾರನ ವಂಶದವನೆಂದು ಅಭಿಪ್ರಾಯ ಪಡುತ್ತಾರೆ.

ಕಾರ್ಕಳ ತಾಲೂಕಿನ ವರಂಗದ ನೇಮೀಶ್ವರ ಬಸದಿಯಲ್ಲಿರುವ ಸುಮಾರು ಕ್ರಿ.ಶ.೧೩ನೇ ಶತಮಾನದ ಲಕ್ಷಣವನ್ನು ಹೊಂದಿರುವ ಶಾಸನವು ಮೇಷ ಪಾಷಾಣಗಚ್ಛದ ಜೈನಯತಿಗಳಾದ ಮಲಧಾರಿದೇವ, ಮಾಧವಚಂದ್ರ, ಪ್ರಭಾಚಂದ್ರ, ನೇಮಿ ಚಂದ್ರ ಮತ್ತು ಶ್ರೀ ಚಂದ್ರಮುನಿಗಳ ಬಗ್ಗೆ ಉಲ್ಲೇಖಿಸುತ್ತದೆ. ಇವರ ಪೈಕಿ ಶ್ರೀ ಚಂದ್ರಮುನಿಗಳು ವರಂಗದ ಜೈನ ಬಸದಿಯನ್ನೂ ಒಂದು ಕೆರೆಯನ್ನೂ ನಿರ್ಮಿಸಿದರೆಂದೂ ಕುರುಳಿಕುಂದ (ಕಂಡಾಣ) ಮತ್ತು ಜೈನ ಬಸದಿಗಳನ್ನು ನಿರ್ಮಿಸಿದರೆಂದೂ ಈ ಶಾಸನದಲ್ಲಿ ದಾಖಲಿಸಲಾಗಿದೆ. ಅನಂತರ ಪಟ್ಟಿಯೊಡೆಯ, ಪಾಂಡ್ಯ ಪಟ್ಟಿಯೊಡೆಯ, ಕವಿಯಾಳುಪ ಮತ್ತು ಪಟ್ಟಿಯೊಡೆಯ ಕುಲಶೇಖರದೇವ ಇವರುಗಳು ಅನುಕ್ರಮವಾಗಿ ಆಳುಪ ಸಿಂಹಾಸನವನ್ನಲಂಕರಿಸಿ ರಾಜ್ಯವಾಳಿದರೆಂದೂ, ಕುಲಶೇಖರನ ತರುವಾಯ ಆಳುಪ ಸಿಂಹಾಸನವು ಶಾಂತರ ಮನೆತನದ ಕುಂಡಣನ ಪಾಲಾಯಿತೆಂದೂ ಈ ಶಾಸನದಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಆಳುಪ ದೇಶದ ರಾಜನಾದ ಈ ಕುಂಡಣನು ಹಿಂದೆ ವರಂಗನೆಂಬ ಮಹಾಪುರುಷನು ಮಾಡಿದ ಭೂಮಿಯ ದಾನವನ್ನು ಸ್ವೀಕರಿಸಿದನೆಂದು ಈ ಶಾಸನದಿಂದ ತಿಳಿದುಬಂದರೂ, ಈ ದಾನವನ್ನು ಪಡೆದ ವ್ಯಕ್ತಿ ಯಾರೆಂದು ಸ್ಪಷ್ಟವಾಗಿ ಉಲ್ಲೇಖಿಸದಿದ್ದರೂ ಈ ದಾನವು ವರಂಗದ ನೇಮೀಶ್ವರ ಬಸದಿಗೆ ಸೇರಿದ್ದೆಂದು ಊಹಿಸಬಹುದಾಗಿದೆ

**ವಲ್ಲಭದೇವ ಎರಡನೆಯ ದತ್ತಾಳುಪ (ಕ್ರಿ.ಶ.೧೨೩೦–೫೦) :** ಕುಂಡಣನ ನಂತರ ವಲ್ಲಭದೇವ ಆಳುಪೇಂದ್ರ ಅಥವಾ ಎರಡನೇ ದತ್ತಪಾಲೇಂದ್ರನು ಹಾಗೂ ಶಾಸನೋಕ್ತ ಒಡ್ಡಮರಾಜ, ದತ್ತಾಳುಪೇಂದ್ರ ಶ್ರೀಮಾರ ಒಡ್ಡಮಾದೇವ ಎಂದು ವಿಧವಿಧವಾಗಿ ಕರೆಯಲ್ಪಡುವ ಈತನು ಸಿಂಹಾಸನವನ್ನೇರಿದನು. ಈತನು ತನ್ನ ರಾಜಧಾನಿಯಾದ ಬರಹ–ಕನ್ಯಾಪುರ (ಬಾರಕೂರು) ದಿಂದ ಆಳ್ವಿಕೆ ಮಾಡುತ್ತಿದ್ದನೆಂದು ಶಾಸನದಿಂದ ವ್ಯಕ್ತವಾಗುತ್ತದೆ. ಬಾರಕೂರಿನ ಸಮೀಪ ಮೂಡಕೇರಿಯ ಸೋಮೇಶ್ವರ ದೇವಾಲಯದ ಪೂರ್ವ ಗೋಡೆಯ ಹತ್ತಿರ ನಿಲ್ಲಿಸಲಾಗಿರುವ ಶಾಸನವು ಸುಮಾರು ೧೩ನೇ ಶತಮಾನದ ಪೂರ್ವಾರ್ಧದ ಲಕ್ಷಣವನ್ನು ವ್ಯಕ್ತಪಡಿಸುತ್ತಿದ್ದು ದತ್ತಾಳ್ವೇಂದ್ರ ಶ್ರೀ ಮಾರ ವೊಡ್ಡಮ ದೇವರಸನು ಬಾರಹಕನ್ಯಾಪುರದ (ಬಾರಕೂರಿನ) ಅರಮನೆಯಲ್ಲಿ ಒಡ್ಡೋಲಗದಲ್ಲಿರುವಾಗ ದೂರ್ವಾಸ ಮುನೀಂದ್ರರ ವಂಶಸ್ಥರಾದ ಗಗನ ಶಿವಾಚಾರ್ಯರಿಗೆ ಭೂಮಿದಾನ ಕೊಟ್ಟ ವಿಷಯವನ್ನು ದಾಖಲಿಸುತ್ತದೆ. ಈ ಶಾಸನದಿಂದ ಬಾರಕೂರು ಅಥವಾ ಬಾರಹಕನ್ಯಾಪುರವು ಆಳುಪರ ರಾಜಧಾನಿಯಾಗಿತ್ತೆಂಬ ಅಂಶವು ಸ್ಪಷ್ಟವಾಗುತ್ತದೆ.

ಈತನ ತರುವಾಯ ವೀರಪಾಂಡ್ಯದೇವನು ಅಧಿಕಾರಕ್ಕೆ ಬಂದನು. ವೀರಪಾಂಡ್ಯದೇವನ (ಕ್ರಿ.ಶ.೧೨೫೦–೭೫) ಶಾಸನಗಳು ಕೋಟ, ಬ್ರಹ್ಮಾವರ, ನೀಲಾವರ, ಕೋಟೇಶ್ವರ ಮತ್ತು ಕುಂದಾಪುರಗಳಲ್ಲಿ ಕಂಡುಬರುತ್ತವೆ. "ಈತನ ಆಳ್ವಿಕೆಯ ಅವಧಿಯಲ್ಲಿ ದೊರೆತಿರುವ ಶಾಸನಗಳಿಂದ ತುಳುನಾಡಿನ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಪರಿಸ್ಥಿತಿಗಳ ಬಗ್ಗೆ ಹಲವಾರು ವಿವರಗಳು ತಿಳಿದುಬರುತ್ತದೆ ಮತ್ತು ಈತನ ಆಳ್ವಿಕೆಯು ಕರ್ನಾಟಕದ ಶ್ರೇಷ್ಠ ಸಾಮ್ರಾಟರಲ್ಲಿ ಒಬ್ಬನಾದ ಚಾಳುಕ್ಯ ಚಕ್ರವರ್ತಿ ಆರನೇ ವಿಕ್ರಮಾದಿತ್ಯ (ಕ್ರಿ.ಶ.೧೦೭೬–೧೧೨೬)ನ ಆಳ್ವಿಕೆಯನ್ನು ನೆನಪಿಸುತ್ತದೆ" ಎಂದು ಡಾ॥ ಕೆ.ವಿ.ರಮೇಶ್ ಅವರು ಅಭಿಪ್ರಾಯಪಡುತ್ತಾರೆ. ಕೋಟೇಶ್ವರ ಮತ್ತು ಕುಂದಾಪುರಗಳಲ್ಲಿ ದೊರೆತಿರುವ ಶಾಸನಗಳಲ್ಲಿ ಇವನನ್ನು ಒಂದನೇ ವೀರಪಾಂಡ್ಯದೇವ ಆಳುಪೇಂದ್ರನೆಂದೂ ಹಾಗೂ ಆತನ ತಾಯಿ ರಾಣಿ ಪಟ್ಟಮಹಾದೇವಿಯು ಆತನೊಂದಿಗೆ ಜೊತೆಯಾಗಿ ಆಳುತ್ತಿದ್ದಳೆಂದೂ ತಿಳಿಸುತ್ತವೆ. ಕೆಲವು ವಿದ್ವಾಂಸರ ಅಭಿಪ್ರಾಯದಂತೆ, ಹೊಯ್ಸಳರ ಸಾಮಂತನಾಗಿದ್ದ, ಶಾಂತಾರ ವಂಶದ ವೀರಜಗದೇವರಸನು ವೀರಪಾಂಡ್ಯದೇವ ಆಳುಪೇಂದ್ರನ ಸಹ–ಆಡಳಿತಗಾರನಾಗಿದ್ದನೆಂದು ತಿಳಿದುಬರುತ್ತದೆ. ಜಗದೇವರಸನು ಪಟ್ಟಮಹಾದೇವಿಯ ತಮ್ಮನೆಂದು ವ್ಯಕ್ತವಾಗುತ್ತದೆ. ಆದುದರಿಂದ, ವೀರಪಾಂಡ್ಯದೇವನು ಅಪ್ರಾಪ್ತ ವಯಸ್ಕನಾಗಿದ್ದ ಕಾರಣ ಆಕೆಯು ಜಗದೇವರಸನ ಸಹಾಯವನ್ನು ಆಡಳಿತ ವಿಚಾರಗಳಲ್ಲಿ ಉಪಯೋಗಿಸಿರಬಹುದೆಂದು ಊಹಿಸಬಹುದಾಗಿದೆ. ವೀರಪಾಂಡ್ಯದೇವ ಆಳುಪೇಂದ್ರನ ಮಂತ್ರಿಮಂಡಲದಲ್ಲಿ ನರಸಿಂಗ ಹೆಗ್ಗಡೆಯು ಮಹಾಪ್ರಧಾನಿಯಾಗಿಯೂ, ರಾಜನ ಅಳಿಯ ಬಂಕಿದೇವ ಮೈದುನ ಒಡ್ಡಮ ದೇವಬಲ್ಲವೆರ್ಗಡೆ ಮತ್ತು ಮಾರದಮ್ಮ ಅಧಿಕಾರಿ ಪ್ರಧಾನರಾಗಿಯೂ ಸೇವೆ ಸಲ್ಲಿಸುತ್ತಿದ್ದರು. ಈತನು ರಾಜಧಾನಿ ಬಾರಹಕನ್ಯಾಪುರದ ಅರಮನೆಯಲ್ಲಿ ಸಿಂಹಾಸನಾರೂಢನಾಗಿ ಒಡ್ಡೋಲಗ ನಡೆಸುತ್ತಿದ್ದನೆಂದೂ, ಸಮಸ್ತ ಪ್ರಧಾನರೂ, ರಾಣಿವಾಸದವರೂ, ರಾಜಕುಮಾರರೂ, ಋಷಿಪುರೋಹಿತರೂ ರಾಜನ ಸನ್ನಿಧಾನದಲ್ಲಿ ಹಾಜರಿರುತ್ತಿದ್ದರೆಂದೂ ಇವನ ಶಾಸನಗಳಿಂದ ವ್ಯಕ್ತವಾಗುತ್ತದೆ. ಕುಂದಾಪುರ ತಾಲೂಕಿನ ಕೋಟೇಶ್ವರದ ಕೋಟೇಶ್ವರ ದೇವಾಲಯದ ಒಳಪ್ರಾಕಾರದ ಪೂರ್ವಭಾಗದಲ್ಲಿರುವ ಕ್ರಿ.ಶ.೧೨೬೧ರ ಶಾಸನವು ವೀರಪಾಂಡ್ಯದೇವ ಆಳುಪೇಂದ್ರನು ಬಾರಹಕನ್ಯಾಪುರ (ಬಾರಕೂರು)ದ ಹಿರಿಯ ಅರಮನೆಯಲ್ಲಿ ಸಿಂಹಾಸನಾರೂಢನಾಗಿ ರಾಜ್ಯವಾಳುತ್ತಿದ್ದಾಗ ಅವನ ಮೈದುನ ವಡ್ಡಮಶ್ರೀದೇವ, ನರಸಿಂಗ ಹೆಗ್ಗಡೆ, ಮಾರದಯ ಅಧಿಕಾರಿ ಮುಖ್ಯವಾದ ಎಲ್ಲಾ ಪ್ರಧಾನ ಪುರೋಹಿತರೂ ಆಸ್ಥಾನದಲ್ಲಿ ಕೂಡಿದ್ದಾಗ ಕುಡಿಕೂರು ಗ್ರಾಮದ ಮುನ್ನೂರ್ವರೂ, ಅದೇ ಊರಿನ ಪೊಳಲ ಹೆಗ್ಗಡೆ ಮತ್ತು ಕೋಟಿ ಮೇಲಂಟರು ಎಂಬ ಅಧಿಕಾರಿಯು ಬರೆಯಿಸಿದ. ಇದರ ಪ್ರಕಾರ ಕುಡಿಕೂರಿನವರು ವರ್ಷವೊಂದಕ್ಕೆ ೧೮೦ ಸಮುದಾಯ ಗದ್ಯಾಣಗಳನ್ನು ರಾಜ್ಯದ ಬೊಕ್ಕಸಕ್ಕೆ ತೆರಬೇಕಾದ ನಿಯಮವನ್ನು ಹಾಗೂ ಇತರೆ ವಿವರಗಳನ್ನು ದಾಖಲಿಸುತ್ತದೆ. ಈ ಶಾಸನವನ್ನು ರಚಿಸಿದವನು ಶ್ರೀಕರಣ ಮಾಚಯ್ಯ ಸೇನಬೋವನೆಂದು ಶಾಸನದಲ್ಲಿ ದಾಖಲಿಸಲಾಗಿದೆ. ಇದೇ ದೇವಾಲಯದ ಪ್ರಾಕಾರದಲ್ಲಿರುವ ಎರಡನೇ ಶಾಸನವು ಕ್ರಿ.ಶ.೧೨೬೭ರಲ್ಲಿ ಪಾಂಡ್ಯದೇವ ಆಳುಪೇಂದ್ರನು ಬಾರಹಕನ್ಯಾಪುರದಲ್ಲಿ ಆಡಳಿತ ಮಾಡುತ್ತಿದ್ದಾಗ ವಡ್ಡಮದೇವ, ನರಸಿಂಗ ಹೆಗ್ಗಡೆ, ಕೋಟಿಯಡಹ, ಲಖೆಯ ಸೇನಬೋವ ಮತ್ತು ದೇಸಿಪುರುಷರು ಆಸ್ಥಾನದಲ್ಲಿ ಪ್ರಸನ್ನರಿದ್ದಾಗ ಕುಂದಾಪುರ ಗ್ರಾಮಕ್ಕೆ ವರ್ಷವೊಂದಕ್ಕೆ ಸಲ್ಲಿಸಬೇಕಾದ ಕರವನ್ನು ೧೪೦ ಗದ್ಯಾಣವೆಂದು ನಿರ್ಧರಿಸಿದ್ದ ಬಗ್ಗೆ ವಿವರಿಸುತ್ತದೆ. ಕ್ರಿ.ಶ.೧೨೭೫ರಲ್ಲಿ ವೀರಪಾಂಡ್ಯದೇವನು ತೀರಿಕೊಂಡಾಗ, ಅವನ ಮಗ ನಾಗದೇವರಸನು ಅಪ್ರಾಪ್ತವಯಸ್ಕನಾಗಿದ್ದ ಕಾರಣ ಈತನ ಪಟ್ಟದ ರಾಣಿ ಬಲ್ಲಮಹಾದೇವಿಯೇ ಸಿಂಹಾಸನವನ್ನೇರಿದಳು.

**ಬಲ್ಲಮಹಾದೇವಿ (ಕ್ರಿ.ಶ.೧೨೭೫–೯೨) :** ವೀರಪಾಂಡ್ಯನ ಪಟ್ಟದರಾಣಿ ಬಲ್ಲಮಹಾದೇವಿಯು, ಪತಿ ಜೀವಿಸಿದ್ದಾಗಲೇ ರಾಜ್ಯಾಡಳಿತದಲ್ಲಿ ನೆರವಾಗುತ್ತಿದ್ದಳೆಂಬುದನ್ನು ಈಗಾಗಲೇ ಗಮನಿಸಲಾಗಿದೆ. ತನ್ನ ಮಗ ನಾಗದೇವರಸನೂ ಇನ್ನೂ ಅಪ್ರಾಪ್ತವಯಸ್ಕನಾಗಿದ್ದ ಕಾರಣ ವೀರಪಾಂಡ್ಯದೇವ ಆಳುಪೇಂದ್ರನ ನಿಧನನಾದ ಮೇಲೆ ತಾನೇ ಸಿಂಹಾಸನವನ್ನೇರಿದಳು. ಈಕೆಯು ಸಹ ಇತರೆ ಆಳುಪ ರಾಜರಂತೆ

ಪಾಂಡ್ಯ ಚಕ್ರವರ್ತಿ, ಮಹಾರಾಜಾಧಿರಾಜ ಮುಂತಾದ ಬಿರುದುಗಳನ್ನು ತಾನೂ ಉಪಯೋಗಿಸತೊಡಗಿದಳು. ನೀಲಾವರದ ಕ್ರಿ.ಶ.೧೨೭೭ರ ಶಾಸನ ಬಲ್ಲಮಹಾ "ಪಟ್ಟದ ಪಿರಿಯರಸಿ" ಎಂಬ ಬಿರುದು ಧರಿಸಿದ್ದ ಬಗ್ಗೆ ವಿವರ ನೀಡುತ್ತದೆ. "ಉಡುಪಿ ತಾಲೂಕಿನ ಕೆಂಜೂರಿನ ಕ್ರಿ.ಶ.೧೨೮೧ರ ಶಾಸನದಲ್ಲಿ ಇವಳು ಮಾನಭರಣೇಶ್ವರ ದೇವರ ವಂಶೋದ್ಭವಳೆಂದು ಉಕ್ತಾಗಿದ್ದು ಕ್ರಿ.ಶ.೧೧ನೇ ಶತಮಾನದಲ್ಲಿ ಸಿಲೋನ್ ದೇಶದಲ್ಲಿ ಮಾನಾಭರಣನೆಂಬ ರಾಜನೊಬ್ಬನು ಆಳಿ ಹೋದನೆಂಬುದು ಬಲ್ಲಮಹಾದೇವಿಯು ಆ ದೇಶದ ರಾಜಕುಮಾರಿಯಿದ್ದಿರಬಹುದೆಂಬ ಊಹೆಗೆ ಕಾರಣವಾಗಿದೆ" ಎಂದು ಡಾ॥ ಕೆ.ವಿ.ರಮೇಶ್ ಅವರು ಅಭಿಪ್ರಾಯಪಡುತ್ತಾರೆ. ಇವರೇ ಹೇಳುವಂತೆ ತುಳುನಾಡಿನ ರಾಜನೊಬ್ಬನು ದೂರದ ಸಿಲೋನ್ ದೇಶದ ರಾಜಕುಮಾರಿಯ ಕೈಹಿಡಿದನೆಂಬುದು ಸಾಧ್ಯವಿಲ್ಲದ ಮಾತು. ವೀರಪಾಂಡ್ಯದೇವನ ಮಂತ್ರಿಮಂಡಲದಲ್ಲಿ ಪ್ರಧಾನನಾಗಿದ್ದ ವೊಡ್ಡಮದೇವ ಬಲ್ಲರ್ವೆಗ್ಗಡೆಯು ರಾಜನ ಮೈದುನನಿದ್ದನೆಂದು ಕ್ರಿ.ಶ.೧೨೫೪ರ ಕೋಟೆ ಮತ್ತು ಬ್ರಹ್ಮಾವರ ಶಾಸನಗಳಿಂದ ವ್ಯಕ್ತವಾಗುತ್ತದೆ. ಆದುದರಿಂದ, ಬಲ್ಲಮಹಾದೇವಿಯು ಈ ವೊಡ್ಡಮದೇವನ ಸಹೋದರಿಯಾಗಿರಬೇಕು ಹಾಗೂ ಮಾನಾಭರಣ ವಂಶವು ತುಳುನಾಡಿನ ಅಪ್ರಧಾನ ಅರಸುಮನೆತನಗಳ ಪೈಕಿ ಒಂದಾಗಿರಬೇಕೆಂದು ತಿಳಿದುಬರುತ್ತದೆ. ವೀರಪಾಂಡ್ಯದೇವನ ಅಳಿಯನಾಗಿದ್ದ ಬಂಕಿದೇವನು ಕ್ರಿ.ಶ.೧೨೮೫ರಲ್ಲಿ ಬಲ್ಲಮಹಾದೇವಿಯೊಡನೆ ಒಂದು ಸಂದರ್ಭದಲ್ಲಿ ಕೈಜೋಡಿಸಿ ಸಹಾಯ ನೀಡಿದ್ದವನು ತಾನೇ ರಾಜನಾಗಬೇಕೆಂಬ ಹಂಬಲದಿಂದ ಬಲ್ಲಮಹಾದೇವಿಯ ವಿರುದ್ಧವೇ ಬಂಡಾಯವೆದ್ದಿದ್ದನು. ಇದರ ಪರಿಣಾಮವಾಗಿ ಆಕೆಯು ತನ್ನ ಸಾಮ್ರಾಜ್ಯವನ್ನು ಎರಡು ಭಾಗಗಳಾಗಿ ವಿಭಜಿಸಿ ಮಂಗಳೂರಿನ ಭಾಗವನ್ನು ಬಂಕಿದೇವನಿಗೆ ನೀಡಬೇಕಾದುದು ಐತಿಹಾಸಿಕ ಅನಿವಾರ್ಯವಾಗಿತ್ತು. ಹೀಗಾಗಿ ಆಳುಪ ಸಾಮ್ರಾಜ್ಯಕ್ಕೆ ಮಂಗಳೂರು ಮತ್ತು ಬಾರಕೂರುಗಳಲ್ಲಿ ಎರಡು ಆಡಳಿತದ ಸಿಂಹಾಸನಗಳು ಏಕಕಾಲದಲ್ಲಿ ನಿರ್ಮಾಣವಾಗಿ ಕಾರ್ಯರೂಪಕ್ಕೆ ಬಂದುವು. ಬಂಕಿದೇವನ ಈ ರಾಜ್ಯಲೋಭಕ್ಕೆ ಕಾರಣವಿಲ್ಲದಿರಲಿಲ್ಲ. ಆಳುಪರು ತಮ್ಮ ಕೊನೆಯ ದಿನಗಳವರೆಗೂ ಅಳಿಯಸಂತಾನಕಟ್ಟನ್ನು ಅನುಸರಿಸಿದವರಲ್ಲ. ಅನಂತರ, ಕ್ರಿ.ಶ.೧೩ನೇ ಶತಮಾನದ ಮಧ್ಯಭಾಗದಲ್ಲಿ ತುಳುನಾಡಿನ ಉತ್ತರಕ್ಕೆ ಪ್ರಬಲರಾಗುತ್ತಿದ್ದ ನಗಿರೆ ಮತ್ತು ಹಾಡುವಳ್ಳಿ ರಾಜ್ಯಗಳವರು ಅಳಿಯಸಂತಾನಕಟ್ಟನ್ನು ಪಾಲಿಸುತ್ತಿದ್ದರೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಈ ಅನುಕ್ರಮ ಪದ್ಧತಿಯೇ ಅಳಿಯ ಬಂಕಿದೇವನಲ್ಲಿ ತಾನೂ ಆಳುಪ ಸಿಂಹಾಸನದ ಹಕ್ಕುದಾರನೆಂಬ ಭಾವನೆ ಮೂಡಿಸಿರಬೇಕೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಹೀಗಾಗಿ ಕ್ರಿ.ಶ.೧೨೮೫ ರಿಂದ ೧೩೦೦ರವರೆಗೆ ತುಳುನಾಡಿನಲ್ಲಿ ಎರಡು ಆಳುಪ ಸಿಂಹಾಸನಗಳು ಅಸ್ತಿತ್ವಕ್ಕೆ ಬಂದುವು. ಬಲ್ಲಮಹಾದೇವಿ ಮತ್ತು ಅವಳ ಮಗ ನಾಗದೇವರಸ ರಾಜಧಾನಿ ಬಾರಹಕನ್ಯಾಪುರದಿಂದಲೂ (ಬಾರಕೂರು) ಮತ್ತು ಅಳಿಯ ಬಂಕಿದೇವನು ರಾಜಧಾನಿ ಮಂಗಳಪುರ (ಮಂಗಳೂರು) ದಿಂದಲೂ ಏಕಕಾಲದಲ್ಲಿ ರಾಜ್ಯವಾಳುತ್ತಿದ್ದುದು ವಾಸ್ತವಿಕಾಂಶವಾಗಿತ್ತು. ನಾಗದೇವರಸನು ಪ್ರಾಪ್ತ ವಯಸ್ಸಿಗೆ ಬಂದ ಮೇಲೆ ಆತನ ತಾಯಿಯಾದ ಬಲ್ಲಮಹಾದೇವಿಯು ತನ್ನ ಆಳ್ವಿಕೆಯ ಕೊನೆಯ ವರ್ಷದಲ್ಲಿ ನಾಗದೇವರಸನನ್ನು ತುಳುನಾಡಿನ ಜಂಟಿ ಅಧಿಪತಿಯೆಂದು ಘೋಷಿಸಿದ್ದಳು.

**ಎರಡನೇ ಬಂಕಿದೇವ (ಕ್ರಿ.ಶ.೧೨೮೫–೧೩೧೫) ಮತ್ತು ನಾಗದೇವರಸ (೧೨೯೨–೧೩೦೦) :** ವೀರಪಾಂಡ್ಯದೇವ ಆಳುಪೇಂದ್ರ ಮತ್ತು ಬಲ್ಲಮಹಾದೇವಿಯರ ತರುವಾಯ ಅವರ ಮಗನಾದ ನಾಗದೇವರಸನು ಬಾರಕೂರಿನಲ್ಲಿ ಕ್ರಿ.ಶ.೧೨೯೦ರಲ್ಲಿ ಆಳುಪರ ಸಿಂಹಾಸನವನ್ನೇರಿದನು. ಆದರೆ, ಎರಡನೇ ಬಂಕಿದೇವನು ಕ್ರಿ.ಶ.೧೩೦೦ರಲ್ಲಿ ಪ್ರಬಲಗೊಂಡು ನಾಗದೇವರಸನನ್ನು ಪದಚ್ಯುತಗೊಳಿಸಿ ಆಳುಪರ ಎರಡೂ ಪ್ರದೇಶಗಳಿಗೆ ಏಕಮೇವಾ ದ್ವಿತೀಯ ರಾಜನೆಂದು ಘೋಷಿಕೊಂಡು ಆಡಳಿತವನ್ನು ಮುಂದುವರೆಸಿದನು. ಗೊಲ್ಲರ ಗಣಪತಿ ದೇವಾಲಯದಲ್ಲಿರುವ ಕ್ರಿ.ಶ.೧೩೦೨ರ ಶಾಸನವು ಎರಡನೇ ಬಂಕಿದೇವ (ಕ್ರಿ.ಶ.೧೨೮೫–೧೩೧೫) ನನ್ನು 'ಪಾಂಡ್ಯ ಚಕ್ರವರ್ತಿ' ಮತ್ತು 'ರಾಯಗಜಾಂಕುಶ'ನೆಂದು ವಿವಿಧ ಬಿರುದುಗಳಿಂದ ಸಂಭೋದಿಸಿರುವ ಬಗ್ಗೆ ಉಲ್ಲೇಖಿಸುತ್ತದೆ. ತನ್ನ ಮೃತಳಾದ ಪತ್ನಿ ಮೋಚಲಾದೇವಿಯ ನೆನಪಿಗಾಗಿ ಇದೇ ಶಾಸನದಲ್ಲಿ ಮಂಗಳಾಪುರದ ಅರಮನೆಯಲ್ಲಿರುವ ಮೊಗಸಾಲೆಯಲ್ಲಿ ರಾಜನು ದರ್ಬಾರು ನಡೆಸಿದ ವಿಚಾರವನ್ನೂ ಮತ್ತು ದೇವಾಲಯಕ್ಕೆ ನೀಡಿದ ಹಲವು ದಾನಗಳನ್ನೂ ದಾಖಲಿಸಲಾಗಿದೆ. ಕ್ರಿ.ಶ.೧೩೦೫ರ ಸುಜೇರು ಶಾಸನದಲ್ಲಿ ಆಳುಪರ ಆಡಳಿತದ ಅವಧಿಯಲ್ಲಿ ರಾಜನು ತನ್ನ ಪ್ರಜೆಗಳ ಆರ್ಥಿಕ ಹಾಗೂ ಸರ್ವತೋಮುಖ ಪ್ರಗತಿಯ ಬಗ್ಗೆ ಆಸಕ್ತಿವಹಿಸಿದ ವಿವರಗಳನ್ನು ದಾಖಲಿಸಲಾಗಿದೆ. ಎರಡನೇ ಬಂಕಿದೇವ ಆಳುಪೇಂದ್ರನ ಆಳ್ವಿಕೆಯ ಅವಧಿಯಲ್ಲಿ ತೀವ್ರವಾದ ಕ್ಷಾಮ ಉಂಟಾಗಿ ಜನಸಾಮಾನ್ಯರು ಅನುಭವಿಸುತ್ತಿದ್ದ ಬವಣೆಗೆ ರಾಜನು ಸ್ಪಂದಿಸಿದ್ದೇ ಅಲ್ಲದೇ ತಿಮಿರೇಶ್ವರ ದೇವರಿಗೆ ಸುಭೀಕ್ಷ ಮಳೆಯ ಸಂಕಲ್ಪ ಮಾಡಿ ವಿಶೇಷ ಪೂಜೆಯನ್ನು ಮಾಡಿ ದೇವರ ನಿರಂತರ ಸೇವೆಗೆ ಅನುಕೂಲವಾಗುವಂತೆ ಭೂಮಿಯನ್ನು ದಾನಮಾಡಿದ ವಿವರಗಳನ್ನು ಮೇಲ್ಕಂಡ ಶಾಸನದಲ್ಲಿ ದಾಖಲಿಸಲಾಗಿದೆ. ಇಡಿಯಾಗಿ ತುಳುನಾಡಿಗೂ ತಾನೇ ಏಕಾಧಿಪತಿಯಾದ ಮೇಲೂ ಎರಡನೇ ಬಂಕಿದೇವನು ರಾಜಧಾನಿ ಮಂಗಳಪುರದ ಹಿರಿಯ ಅರಮನೆ ಭುವನಾಶ್ರಯದಲ್ಲೇ ನೆಲೆಸಿ ರಾಜ್ಯಾಡಳಿತವನ್ನು ಮುಂದುವರಿಸಿದನು. ಅಳಿಯ ಬಂಕಿದೇವನು ತನ್ನನ್ನು ದತ್ತಾಳ್ವರ ಅಳಿಯನೆಂದು ಕರೆದುಕೊಳ್ಳುತ್ತಾನೆ.

**ಸೋಯಿದೇವ ಆಳುಪೇಂದ್ರ (ಕ್ರಿ.ಶ.೧೩೧೫–೩೫):** ಶಾಸನಗಳಲ್ಲಿ ಉಲ್ಲೇಖವಾಗಿರುವಂತೆ ಸೋಯಿದೇವ ಆಳುಪೇಂದ್ರದೇವನು ಎರಡನೇ ಬಂಕಿದೇವ ಆಳುಪೇಂದ್ರ ದೇವನ ಉತ್ತರಾಧಿಕಾರಿಯಾಗಿ ಕ್ರಿ.ಶ.೧೩೧೫ರಲ್ಲಿ ಅಧಿಕಾರಕ್ಕೆ ಬಂದನೆಂದು ದಾಖಲಿಸಲಾಗಿದೆ. ಈತನು ಕೈಗೊಂಡ ಪ್ರಥಮ ನಿರ್ಧಾರವೆಂದರೇ ಮಂಗಳಾಪುರದಿಂದ ರಾಜಧಾನಿಯನ್ನು ಬಾರಹಕನ್ಯಾಪುರಕ್ಕೆ (ಬಾರಕೂರು) ವರ್ಗಾಯಿಸಿದ್ದೇ ಆಗಿದೆ. ಕ್ರಿ.ಶ.೧೩೧೫ರ ಶಾಸನದಲ್ಲಿ ಈತನನ್ನು ಪಾಂಡ್ಯ ಚಕ್ರವರ್ತಿ ಮತ್ತು ಅರಿರಾಯ ಬಸವ ಶಂಕರ ಎಂದು ಉಲ್ಲೇಖಿಸಲಾಗಿದೆ. ಕುಡುಪುವಿನ ಅನಂತಪದ್ಮನಾಭ ದೇವಾಲಯದಲ್ಲಿರುವ ಕ್ರಿ.ಶ.೧೩೩೫ರ ಶಾಸನವು ಸೋಯಿದೇವನಿಗಿದ್ದ ಹಲವಾರು ಬಿರುದುಗಳಲ್ಲಿ 'ರಾಜ್ಯಗಜಾಂಕುಶ' ಎಂಬ ಬಿರುದನ್ನು ವಿಶೇಷವಾಗಿ ದಾಖಲಿಸುತ್ತದೆ. ಈ ಬಿರುದು ಬಾವುಲಿಗಳಿಂದ ಈತನೊಬ್ಬ ಪ್ರಬಲ ಸ್ವತಂತ್ರ ರಾಜನಾಗಿದ್ದನೆಂಬ ಅಂಶವು ವ್ಯಕ್ತವಾಗುತ್ತದೆ. ಸೋಯಿದೇವನು ತನ್ನ ತಂದೆ ಎರಡನೇ ಬಂಕಿದೇವನು ರಾಜನಾಗಿದ್ದಾಗಲೇ ಆಡಳಿತ ಕ್ಷೇತ್ರದಲ್ಲಿ ತನ್ನ ಪ್ರತಿಭೆಯನ್ನು ಪ್ರದರ್ಶಿಸಿದ್ದನು. ಎರಡನೇ ಬಂಕಿದೇವನು ಕ್ರಿ.ಶ.೧೪ನೇ ಶತಮಾನದದ ಆರಂಭದಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ವಶಪಡಿಸಿಕೊಂಡು ಅದರ ಆಡಳಿತದ ಸೂತ್ರವನ್ನು ತನ್ನ ಮಗನಾದ ಸೋಯಿದೇವ ಆಳುಪೇಂದ್ರನಿಗೆ ವಹಿಸಿಕೊಟ್ಟನು. ಹೀಗಾಗಿ, ಕ್ರಿ.ಶ.೧೩೧೫ರಲ್ಲಿ ಈತನು ಆಳುಪ ಸಿಂಹಾಸನವನ್ನು ಅಲಂಕರಿಸಿದಾಗ ಉತ್ತರ ಕನ್ನಡದ ಆಡಳಿತವನ್ನು ಬಸವದೇವನೆಂಬ ಅಧಿಕಾರಿಗೆ ವಹಿಸಿಕೊಟ್ಟನು. ಹೊನ್ನಾವರ ತಾಲೂಕಿನ ಚಂದಾವರವು ಬಸವದೇವನ ಆಡಳಿತದ ಕೇಂದ್ರಸ್ಥಾನವಾಯಿತು. ನಂತರ ಹೊಯ್ಸಳ ರಾಜ ಮೂರನೇ ಬಲ್ಲಾಳನು ತನ್ನ ಯಶಸ್ವಿ ದಿಗ್ವಿಜಯಗಳ ಪರಿಣಾಮವಾಗಿ ಆಳುಪರ ಸಾಮ್ರಾಜ್ಯವನ್ನೂ ಸಂಪೂರ್ಣ ಹತೋಟಿಗೆ ತೆಗೆದುಕೊಂಡನು. ಚಿಕ್ಕಾಯಿತಾಯಿ ಎಂಬ ಆಳುಪ ರಾಜಕುಮಾರಿಯನ್ನು ಮೂರನೇ ಬಲ್ಲಾಳನು ವಿವಾಹವಾಗಿ ಆಕೆಯನ್ನು ತನ್ನ ಪಟ್ಟದ ಪಿರಿಯರಸಿ ಎಂದು ನಾಮಕರಣ ಮಾಡಿದನು. ಈ ಅವಧಿಯಲ್ಲಿ ಆಳುಪರು ಮತ್ತು ಹೊಯ್ಸಳರ ಸಹಕಾರದೊಂದಿಗೆ ಸಾಮ್ರಾಜ್ಯದ ಆಡಳಿತವನ್ನು ದಕ್ಷಿಣ ಕನ್ನಡಾದ್ಯಂತ ನಡೆಸಿದ್ದುದರ ಬಗ್ಗೆ ಕ್ರಿ.ಶ.೧೩೩೩ ರಿಂದ ೧೩೮೪ರವರೆಗೆ ಲಭ್ಯವಿರುವ ಶಾಸನಗಳು ನೇರವಾಗಿ ಉಲ್ಲೇಖಿಸದಿದ್ದರೂ ಸೂಕ್ಷ್ಮವಾಗಿ ಗಮನಿಸಿದರೆ ವೇದ್ಯವಾಗುತ್ತದೆ. ಉಡುಪಿ ತಾಲೂಕಿನ ಮೂಡನಿಡಂಬೂರಿನ ಮಹಾಲಿಂಗೇಶ್ವರ ದೇವಾಲಯದಲ್ಲಿರುವ ಸೋಯಿದೇವ ಆಳುಪೇಂದ್ರನ ಕ್ರಿ.ಶ.೧೩೨೭ರ ಶಾಸನದಲ್ಲಿ ವೀರ ಸೋಯಿದೇವ ಆಳುಪೇಂದ್ರದೇವರಸನ ಮಹಾಪ್ರಧಾನ ಸಿಂಗಣ, ಸಾಹಣಿ, ಬೊಪ್ಪಣ ಅಧಿಕಾರಿ, ನಡೆಪಿನ ಕೊಡಕಲ್ಲನಾಯರು ಮತ್ತು ಊರಿನವರು ಒಂದಾಗಿ ಬನ್ನಿಂಜೆಯ ಐದು ಬೇಡಿಕೆಗಳಿಗೆ ಮೂವತ್ತು ಗದ್ಯಾಣಗಳನ್ನೂ ತಾಳಿಗುಡೆಯ ದೇವರಿಗೆ ಒಂದು ಗದ್ಯಾಣ ಮತ್ತು ಮೂಡಲಕಾಡನ್ನೂ ದಾನ ಕೊಟ್ಟ ಬಗ್ಗೆ ಉಲ್ಲೇಖವಿದ್ದು, ಶಾಸನದ ಕೊನೆಯಲ್ಲಿ ನಾಗರಿಲಿಪಿಯಲ್ಲಿ 'ಶ್ರೀಧರನಾಥ' ಎಂಬ ಉಲ್ಲೇಖವಿದೆ. ಕಾರ್ಕಳ ತಾಲೂಕಿನ ಹಿರಿಯಂಗಡಿಯ ಗುರುಗಳ ಬಸದಿಯ ಗೋಡೆಯಲ್ಲಿ ಭೂವಿದೇವರಸರ ಪಟ್ಟದ ರಾಣಿ ಸಿದ್ಧಲದೇವಿಯ ಮಗ ಹಾಗೂ ಶಾಂತರ ಮನೆತನದವನೂ ಆದ ಮಹಾಮಂಡಳೇಶ್ವರ ಲೋಕನಾಥದೇವರಸನ ಕ್ರಿ.ಶ.೧೩೩೪ರ ಶಾಸನವಿದೆ. ಅದರಲ್ಲಿ ಈತನಿಗೆ ಉತ್ತರ ಮಧುರಾಧೀಶ್ವರಂ ಪಟ್ಟಿಪೊಂಬುಚ್ಚ (ಹುಮಚಾ) ಪುರವಾಧೀಶ್ವರಂ, ಮಹೋಗ್ರವಂಶ ಲಲಾಮಂ, ಮೊದಲಾದ ಬಿರುದುಗಳನ್ನು ಧರಿಸಿದ್ದ ಶಾಂತಾರ ಮನೆತನದ ಹೊಯ್ಸಳರ ಮಂಡಳೇಶ್ವರನಾದ ಲೋಕನಾಥದೇವರಸನು 'ಬಲ್ಲಾಳರಾಯ ಚಿತ್ತಚಮತ್ಕಾರರ್' ಎಂದು ಹೊಗಳಿಸಿಕೊಂಡಿರುವ ಚಾರುಕೀರ್ತಿ ಪಂಡಿತದೇವರ ಆರಾಧಕನೆಂದು ದಾಖಲಿಸಲಾಗಿದ್ದು, ಶಾಂತಿನಾಥ ಬಸದಿಗೆ ನೀಡಿದ ಹಲವಾರು ದಾನಗಳನ್ನು ದಾಖಲಿಸುವುದರ ಜೊತೆಗೆ ಬಸದಿಯ ಜೀರ್ಣೋದ್ಧಾರಕ್ಕೂ ಅನುಕೂಲವಾಗುವಂತೆ ದಾನವನ್ನು ನೀಡಿರುವ ವಿವರಗಳೂ ಇವೆ. ಆಳುಪರಂತೆಯೇ ಹೊಯ್ಸಳರಿಗೂ ಬಾರಹಕನ್ಯಾಪುರ(ಬಾರಕೂರು)ವು ಪ್ರಾಂತೀಯ ರಾಜಧಾನಿಯಾಗಿದ್ದ ಅಂಶವು ದಾಖಲೆಗಳಿಂದ ವ್ಯಕ್ತವಾಗುತ್ತದೆ.

**ಎರಡನೇ ಕುಲಶೇಖರ (ಕ್ರಿ.ಶ.೧೩೩೫–೪೬) ಮತ್ತು ಹೊಯ್ಸಳರು :** ಹೊಯ್ಸಳರ ಮಾಂಡಲೀಕರಾಗಿ ಮುಂದುವರಿದ ಆಳುಪರ ಸಿಂಹಾಸನವನ್ನು ಎರಡನೇ ಕುಲಶೇಖರನು ಕ್ರಿ.ಶ.೧೩೩೫ರಲ್ಲಿ ಅಲಂಕರಿಸಿದನು. ಈತನ ಆಡಳಿತವು ದುರ್ಬಲಗೊಂಡ ಕಾರಣ ಹೊಯ್ಸಳ ಚಕ್ರವರ್ತಿ ಮೂರನೇ ಬಲ್ಲಾಳನು ಶಾಂತಾರ ಮನೆತನದ ಲೋಕನಾಥದೇವರಸನನ್ನು ಕಾರ್ಕಳ ಪ್ರದೇಶದ ರಾಜ್ಯಪಾಲನನ್ನಾಗಿ ನೇಮಕಮಾಡಿದನು. ಕ್ರಿ.ಶ.೧೩೩೩ ರಿಂದ ೧೩೪೨ರವರೆಗಿನ ಹೊಯ್ಸಳರ ತುಳುನಾಡಿನ ಹೆಚ್ಚಿನ ಶಾಸನಗಳಲ್ಲಿ ವೀರಬಲ್ಲಾಳನೊಂದಿಗೆ ಅವನ ಪಟ್ಟದರಸಿ ಚಿಕ್ಕಾಯಿತಾಯಿಯ ಹೆಸರನ್ನೂ ಉಲ್ಲೇಖಿಸಲಾಗಿದೆ. ಮೂರನೇ ಬಲ್ಲಾಳನ ನಿಧನಾ ನಂತರ ಚಿಕ್ಕಾಯಿತಾಯಿಯು ತನ್ನ ಮಗನಾದ ಎರಡನೇ ಕುಲಶೇಖರನನ್ನು ಸಹ ಆಡಳಿತಗಾರನನ್ನಾಗಿ ನೇಮಕ ಮಾಡಿದಳೆಂದು ವ್ಯಕ್ತವಾಗುತ್ತದೆ. ಬಾರಕೂರಿನ ಸೋಮೇಶ್ವರ ದೇವಾಲಯದ ಗೋಡೆಯಲ್ಲಿರುವ ಕ್ರಿ.ಶ.೧೩೩೬ರ ಮೂರನೇ ಬಲ್ಲಾಳ ಮತ್ತು ಚಿಕ್ಕಾಯಿತಾಯಿಯ ಶಾಸನವು ಯಾದವ ಚಕ್ರವರ್ತಿ ಅರಿರಾಯ ಬಸವಶಂಕರ ಹೊಯ್ಸಳ ಮೂರನೇ ಬಲ್ಲಾಳನ ಪಟ್ಟಮಹಿಷಿ ಚಿಕ್ಕಾಯಿತಾಯಿ ಇಬ್ಬರೂ ರಾಜ್ಯವಾಳುತ್ತಿದ್ದಾಗ ಮಹಾಪ್ರಧಾನ

ವೈಜಪ್ಪ ದಣ್ಣಾಯಕರೂ, ಅಜ್ಜಣ ಮತ್ತು ಸಾಹಣಿಗಳೂ ಅವಳ ಪ್ರಧಾನಿಗಳಾಗಿ ಸೇವೆ ಮಾಡುತ್ತಿದ್ದಾಗ ಚಾಕಿಸೆಟ್ಟಿಯ ಮಕ್ಕಳಾದ ಸೋಮಣ್ಣ ಮತ್ತು ಚಾಕಣ್ಣ ಎಂಬುವರು ಹಾಡಿಯ ದೇವಸ್ವದ ಭೂಮಿಯಲ್ಲಿ ಬೆಳೆದ ೧೪೦ ಮೂಡೆ ಭತ್ತವನ್ನು ಬಾರಕೂರಿನ ಮೂಡಕೇರಿಯ ಸೌಮ್ಯದೇವರಿಗೆ ದಾನಕೊಟ್ಟ ವಿವರಗಳನ್ನು ದಾಖಲಿಸುತ್ತದೆ.

**ಮೂರನೇ ಬಂಕಿದೇವ (ಕ್ರಿ.ಶ.೧೩೪೬–೫೫) :** ಶಾಸನಗಳ ಪ್ರಕಾರ ಎರಡನೇ ಕುಲಶೇಖರ ಆಳುಪೇಂದ್ರನು ಕ್ರಿ.ಶ.೧೩೪೬ರವರೆಗೆ ಆಳುಪ ಸಾಮ್ರಾಜ್ಯದ ಆಡಳಿತದ ಹತೋಟಿಯನ್ನು ತನ್ನಲ್ಲಿ ಕೇಂದ್ರೀಕರಿಸಿದ್ದನೆಂದು ವ್ಯಕ್ತವಾಗುವುದರಿಂದ ತುಳುವನಾಡು ವಿಜಯನಗರ ಅರಸರ ಆಡಳಿತಕ್ಕೆ ವಶವಾದುದು ಈತನ ಕಾಲದಲ್ಲಿ ಎಂದು ಸ್ಪಷ್ಟವಾಗುತ್ತದೆ. ಈ ಆಡಳಿತ ಪರಿವರ್ತನೆಗೆ ವಿಜಯನಗರದವರು ತಮ್ಮ ಸೇನಾಬಲವನ್ನು ಉಪಯೋಗಿಸಿದರೋ ಇಲ್ಲವೋ ಎಂಬುದು ಅಸ್ಪಷ್ಟವಾಗಿದೆ. ಹೊಯ್ಸಳರು ಕಾಲಕ್ರಮೇಣ ಪ್ರಬಲರಾಗುತ್ತಿದ್ದಂತೆ ತುಳುವನಾಡಿನಲ್ಲಿ ಆಳುಪರ ಪ್ರಾಬಲ್ಯವೂ ಕುಂಠಿತವಾಗತೊಡಗಿತು. ಆದರೇ, ಮೂರನೇ ಬಲ್ಲಾಳನ ತರುವಾಯ ಹೊಯ್ಸಳರ ರಾಜಕೀಯ ಶಕ್ತಿಯೂ ಸಹ ದುರ್ಬಲಗೊಂಡಿತೆಂಬುದು ವ್ಯಕ್ತವಾಗುತ್ತದೆ. ಈ ಸಂದರ್ಭದಲ್ಲಿ ವಿಜಯನಗರದ ಪ್ರಾಬಲ್ಯವು ಕ್ರಮೇಣ ಬಲಗೊಂಡ ಅಂಶವು ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಎರಡನೇ ಕುಲಶೇಖರನ ನಂತರ ಅಧಿಕಾರಕ್ಕೆ ಬಂದ ಮೂರನೇ ಬಂಕಿದೇವನು ಕ್ರಿ.ಶ.೧೩೫೫ರವರೆಗೆ ಆಳಿದನೆಂದು ತಿಳಿದುಬರುತ್ತದೆ. ಈತನ ತರುವಾಯ ಆಳುಪರು ದುರ್ಬಲಗೊಂಡು ಈ ವಂಶದವನೇ ಆದ ಮೂರನೇ ಕುಲಶೇಖರನು ಕ್ರಿ.ಶ.೧೩೫೫–೬೦ರವರೆಗೆ ಆಳ್ವಿಕೆ ಮಾಡಿದನು. ಈತನ ಆಡಳಿತಾವಧಿಯಲ್ಲಿ ರಾಜಧಾನಿಯು ಬಾರಕೂರಿನಿಂದ ಬಿದಿರೆ ಅಂದರೇ ಮೂಡಬಿದಿರೆಗೆ ಸ್ಥಳಾಂತರಗೊಂಡಿತೆಂದು ಪ್ರತೀತಿಯಿದೆ. "ಈತನ ಜೀವಿತಾವಧಿಯಲ್ಲಿ ವಿಜಯನಗರ ಸಾಮ್ರಾಜ್ಯದ ರಾಜ್ಯಪಾಲರುಗಳ ಸಾಮ್ರಾಜ್ಯಶಾಹಿ ಧೋರಣೆಯಿಂದಾಗಿ ಇವನ ಘನತೆಗೆ ಕುಂದುಂಟಾಗುತ್ತಿದ್ದುದೇ ಮೂರನೇ ಕುಲಶೇಖರನ ಈ ತೀರ್ಮಾನಕ್ಕೆ ಮೂಲಕಾರಣವಾಗಿರಬೇಕೆಂದು" ಡಾ॥ ಕೆ.ವಿ. ರಮೇಶ್ ಅವರು ಅಭಿಪ್ರಾಯಪಡುತ್ತಾರೆ. ಈತನ ಆಳ್ವಿಕೆಯ ಕೊನೆಯ ದಿನಗಳಲ್ಲಿ ಇವನ ಮಗನಿದ್ದಿರಬಹುದಾದ ಎರಡನೇ ವೀರಪಾಂಡ್ಯದೇವನು ಸಿಂಹಾಸನವನ್ನೇರಿದನು. ಕ್ರಿ.ಶ.೧೩೯೬–೯೭ಕ್ಕೆ ಸೇರಿದ ಈತನ ಆಳ್ವಿಕೆಯ ಮೂಡಬಿದಿರೆಯ ಶಾಸನವು ಇಲ್ಲಿಯವರೆಗೆ ದೊರೆತಿರುವ ಆಳುಪರ ಶಾಸನಗಳ ಪೈಕಿ ಇತ್ತೀಚಿನದು. ಮಂಗಳೂರು ತಾಲೂಕಿನ ಮೂಡಬಿದಿರೆಯ ಪ್ರಾಂತದ ಗೌರಿದೇವಾಲಯದಲ್ಲಿರುವ ಕ್ರಿ.ಶ.೧೩೯೬ರ ಶಾಸನವು ಸಮಸ್ತ ಭುವನ ವಿಖ್ಯಾತ ಪಾಂಡ್ಯಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಮೊದಲಾದ ಬಿರುದುಗಳನ್ನು ಧರಿಸಿದ್ದ ಆಳುಪರಾಜ ಎರಡನೇ ವೀರಪಾಂಡ್ಯದೇವನ ಆಳ್ವಿಕೆಯ ಅವಧಿಯಲ್ಲಿ ಮೂಡಬಿದಿರೆಯ ದುರ್ಗಾದೇವಿಗೆ ಅಗ್ರವನ್ನು ಸಲ್ಲಿಸುವ ಸಲುವಾಗಿ ಕೆಡುವಿಂಬೆಟ್ಟಿನವರೂ, ಕೊಡಂಗೊಡಲವರೂ, ಮುಕ್ಕಾಲಟ್ಟಿಯವರೂ ಹಾಗೂ ಪಾದ ಮೂಲದವರೂ ಮಾಡಿದ ದಾನಗಳನ್ನು ದಾಖಲಿಸುತ್ತದೆ. ಆಳುಪರ ನಂತರ ತುಳುನಾಡಿನ ಆಡಳಿತವು ವಿಜಯನಗರದ ಹತೋಟಿಯಲ್ಲಿ ಮುಂದುವರೆಯುವಂತಾಯಿತು. ಆಳುಪರು ಸುಮಾರು ಕ್ರಿ.ಶ. ಐದನೆಯ ಶತಮಾನದಿಂದ ೧೪ನೇ ಶತಮಾನದವರೆಗೆ ಅಸ್ತಿತ್ವದಲ್ಲಿದ್ದು, ತುಳುವನಾಡಿನ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿದ್ದರು. 'ಆಳುಪ' ಎಂಬ ಹೆಸರು ಧರಿಸಿಕೊಂಡು ಬಾಳಿದ ಕೆಲವು ಹೆಸರುಗಳು ವಿಜಯನಗರದ ಆಡಳಿತದ ಅವಧಿಯ ತುಳುನಾಡಿನ ಶಾಸನಗಳಲ್ಲಿ ಉಲ್ಲೇಖಗೊಂಡಿದ್ದು, ಬಹುಶ: ಇವರು ಆಳುಪ ವಂಶಸ್ಥರಿರಬೇಕೆಂದು ಊಹಿಸಲಾಗಿದೆ. ವಿಜಯನಗರ ಸಾಮ್ರಾಜ್ಯವು ಪ್ರಬಲಗೊಳ್ಳುತ್ತಿದ್ದಂತೆ ಆಳುಪರ ಆಡಳಿತವು ಅಂತ್ಯಗೊಂಡಿತ್ತು.

**ವಿಜಯನಗರದ ಕಾಲ (ಕ್ರಿ.ಶ.೧೩೩೬–೧೫೬೫)**

ವಿಜಯನಗರ ಸಾಮ್ರಾಜ್ಯವು ಸಂಗಮವಂಶದ ಹರಿಹರ, ಬುಕ್ಕ, ಮಾರಪ್ಪ, ಮುದ್ದಪ್ಪ ಮತ್ತು ಕಂಪಣ ಸೋದರರ ಪ್ರಯತ್ನದಿಂದಾಗಿ ಕ್ರಿ.ಶ.೧೩೩೬ರಲ್ಲಿ ಅಸ್ತಿತ್ವಕ್ಕೆ ಬಂದಿತು. ಸಾಮ್ರಾಜ್ಯ ಸ್ಥಾಪನೆಗೊಂಡ ಕೂಡಲೇ ವಿಜಯನಗರದ ಅರಸರು ಕರ್ನಾಟಕದ ಅಸಂಘಟಿತ ಹಾಗೂ ಕಡಿದು ಹೋಗಿದ್ದ ಪ್ರದೇಶಗಳನ್ನು ತಮ್ಮ ಆಡಳಿತದ ವ್ಯಾಪ್ತಿಗೆ ತೆಗೆದುಕೊಳ್ಳಲು ಪ್ರಯತ್ನಿಸಿದರು. ಈ ಸಂದರ್ಭದಲ್ಲಿ ಪಶ್ಚಿಮ ಕರಾವಳಿಯ ಆಳ್ವಖೇಡವನ್ನೂ ತಮ್ಮ ವಶಕ್ಕೆ ತೆಗೆದುಕೊಂಡರು. ಮುಸಲ್ಮಾನರ ದಾಳಿಗಳಿಂದ ತತ್ತರಿಸಿದ್ದ ದಕ್ಷಿಣ ಭಾರತದಲ್ಲಿ ಆತ್ಮವಿಶ್ವಾಸದಿಂದ ಸದೃಢವಾದ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿ ಜನಜೀವನದಲ್ಲಿ ನಿರಂತರ ಶಾಂತಿ ಹಾಗೂ ಪ್ರಗತಿಯನ್ನು ಕ್ರಮೇಣ ಮೂಡಿಸುವುದು ಹಾಗೂ ಮರೆಯಾಗುತ್ತಿದ್ದ ಸನಾತನ ಸಂಸ್ಕೃತಿಯನ್ನು ಪುನರುತ್ಥಾನಗೊಳಿಸುವುದು ವಿಜಯನಗರ ಸಾಮ್ರಾಜ್ಯದ ಮೂಲ ಉದ್ದೇಶವಾಗಿತ್ತು. ದಕ್ಷಿಣ ಕನ್ನಡದ ಕಡಲ ತೀರದಲ್ಲಿ ಆ ವೇಳೆಗಾಗಲೇ ಆಳುಪರು ಮತ್ತು ಹೊಯ್ಸಳರು ಕರ್ನಾಟಕದಲ್ಲಿ ದುರ್ಬಲರಾಗಿದ್ದರು. ಹೀಗಾಗಿ ಕ್ರಿ.ಶ.೧೩೪೫ರಲ್ಲಿ ತುಳುವನಾಡು ಬಹುಶ: ಯಾವುದೇ ಹೋರಾಟವಿಲ್ಲದೆಯೇ ವಿಜಯನಗರ ಸಾಮ್ರಾಜ್ಯದಲ್ಲಿ ವಿಲೀನವಾಯಿತು. ವಿಜಯನಗರದ ಆಳ್ವಿಕೆಯ ಅವಧಿಯಲ್ಲಿ ತುಳುನಾಡನ್ನು ಬಾರಕೂರು ಮತ್ತು ಮಂಗಳೂರು ರಾಜ್ಯಗಳೆಂದು ಎರಡು ಭಾಗಗಳನ್ನಾಗಿ

ವಿಂಗಡಿಸಿ ಆಡಳಿತವನ್ನು ಎರಡೂ ಕೇಂದ್ರಗಳಿಂದ ನಿರ್ವಹಿಸಲಾದ ವಿಷಯ ಶಾಸನಗಳಿಂದ ತಿಳಿದುಬರುತ್ತದೆ. ಈ ಪ್ರದೇಶದಲ್ಲಿ ದೊರೆತ ವಿಜಯನಗರದ ಕಾಲದ ಅತ್ಯಂತ ಪ್ರಾಚೀನ ಶಾಸನವೆಂದರೇ ಕ್ರಿ.ಶ.೧೩೪೫ರ ಮಂಗಳೂರಿನ ಬಳಿಯ ಅತ್ತಾವರದ್ದು. ಇದರ ಪ್ರಕಾರ ಮಹಾಮಂಡಳೇಶ್ವರ ವೀರಬುಕ್ಕಣ್ಣ ಒಡೆಯನ ಅಧೀನದಲ್ಲಿ ಶಂಕರ ಒಡೆಯನು ಮಂಗಳೂರು ರಾಜ್ಯದ ರಾಜ್ಯಪಾಲನಾಗಿದ್ದು ಅತ್ತಾವರದ ಗೋಪಿನಾಥ ದೇವರಿಗೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ.

ಆಳುಪರ ರಾಜಕೀಯ ಸ್ವಾತಂತ್ರ್ಯವನ್ನು ವಿಜಯನಗರದ ಅರಸರು ಕ್ರಿ.ಶ.೧೪ನೇ ಶತಮಾನದ ಕೊನೆಯವರೆಗೂ ಕಸಿದುಕೊಳ್ಳುವ ಪ್ರಯತ್ನ ಮಾಡಲೇ ಇಲ್ಲವೆನ್ನಬಹುದು. ಆದರೆ, ಆಳುಪರ ದೌರ್ಬಲ್ಯವನ್ನು ಅರಿತ ವಿಜಯನಗರದ ಅರಸರು ಕ್ರಮೇಣ ತಮ್ಮ ಆಡಳಿತ ಹತೋಟಿಯನ್ನು ಬಲಪಡಿಸುತ್ತಾ ಬಂದಿದ್ದರು. ತುಳುನಾಡಿನಲ್ಲಿ ವಿಜಯನಗರ ಕಾಲದ ಹಲವಾರು ಶಾಸನಗಳು ದೊರೆತಿವೆ. ಮಂಗಳೂರಿನ ಬಳಿಯ ಅತ್ತಾವರದಲ್ಲಿ ದೊರೆತ ಕ್ರಿ.ಶ.೧೩೪೫ರ ವಿಜಯನಗರದ ಕಾಲದ ಪ್ರಾಚೀನ ಶಾಸನದ ಪ್ರಕಾರ ವಿಜಯನಗರದ ಅರಸರು ಆಳುಪರ ಸಾಂಪ್ರದಾಯಿಕ ರಾಜಧಾನಿಗಳಾಗಿದ್ದ ಬಾರಕೂರು ಮತ್ತು ಮಂಗಳೂರುಗಳಿಂದಲೇ ತಮ್ಮ ಆಡಳಿತವನ್ನು ನಡೆಸಿದುದು ವ್ಯಕ್ತವಾಗುತ್ತದೆ. ಪಶ್ಚಿಮದ ಕಡಲತೀರವು ಪ್ರಾಚೀನ ಕಾಲದಿಂದಲೂ ಸಾಗರೋತ್ತರ ವ್ಯಾಪಾರಕ್ಕೆ ಜನಪ್ರಿಯವಾಗಿದ್ದಂತೆಯೇ ವಿಜಯನಗರ ಕಾಲದಲ್ಲೂ ಸಾಗರೋತ್ತರ ವ್ಯಾಪಾರದಿಂದಾಗಿ ಪ್ರಾಮುಖ್ಯತೆ ಪಡೆಯಿತು. ಎರಡನೇ ಹರಿಹರನು ಧರಿಸಿದ್ದ ಹಲವಾರು ಬಿರುದುಗಳ ಪೈಕಿ ಪೂರ್ವ–ಪಶ್ಚಿಮ ಹಾಗೂ ದಕ್ಷಿಣ ಸಮುದ್ರಾಧಿಪತಿ ಎಂಬುದೂ ಒಂದಾಗಿದ್ದು, ಇದು ಆತನ ಸಾಗರೋತ್ತರ ಅಧಿಪತ್ಯಕ್ಕೆ ಉತ್ತಮ ನಿದರ್ಶನವಾಗಿದೆ. ಕ್ರಮೇಣ ನೌಕಾಬಲವನ್ನು ವೃದ್ಧಿಪಡಿಸಿಕೊಂಡ ವಿಜಯನಗರ ಸಾಮ್ರಾಟರು ತಮ್ಮ ನೌಕಾಧಿಕಾರಿ 'ನೌಕಾಪ್ರಭುಗಳನ್ನು' ನೇಮಿಸಿ ಸ್ಥಳೀಯ ತುಳುವರನ್ನೊಳಗೊಂಡ ನೌಕಾಪಡೆಯನ್ನು ರಚಿಸಿಕೊಂಡ ಬಗ್ಗೆ ಅವರ ಅನೇಕ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಕಡಲತೀರದ ಪ್ರದೇಶಗಳ ಪೈಕಿ ಹೈವೆ ಮತ್ತು ಕೊಂಕಣ ಪ್ರಾಂತ್ಯಗಳೂ ವಿಜಯನಗರದ ಹತೋಟಿಗೆ ಒಳಪಟ್ಟಿದ್ದವು. ಅರೇಬಿಯಾ ಮತ್ತು ಪರ್ಷಿಯಾ ದೇಶಗಳಿಂದ ಜಾತ್ಯಶ್ವಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಅವನ್ನು ತುಳುನಾಡಿನ ಮಂಗಳೂರು, ಬಾರಕೂರು, ಭಟಕಳ ಮತ್ತು ಹೊನ್ನಾವರ ಬಂದರುಗಳಿಂದ ಒಳನಾಡಿನ ಪ್ರದೇಶಗಳಿಗೆ ರವಾನಿಸಲಾಗುತ್ತಿತ್ತು. ತಮ್ಮ ಸೇನಾಶಕ್ತಿಯಲ್ಲಿ ಅಶ್ವಸೇನಾ ದಳವನ್ನು ವಿಜಯನಗರದ ಅರಸರು ಆಗಿಂದಾಗ್ಗೆ ಬಲಪಡಿಸಲು ಜಾತ್ಯಾಶ್ವಗಳನ್ನು ಆಮದು ಮಾಡಿಕೊಳ್ಳುವುದು ಅತ್ಯವಶ್ಯವಾಗಿತ್ತು. ಪಶ್ಚಿಮ ಕರಾವಳಿಯ ಪ್ರದೇಶದಲ್ಲಿ ವಿಜಯನಗರ ಸಾಮ್ರಾಜ್ಯದ ವಿಸ್ತರಣೆಯ ಬಗ್ಗೆ ಆಫ್ರಿಕಾದ ಯಾತ್ರಿಕ ಇಬನ್ ಬತೂತಾ ದಾಖಲಿಸುತ್ತಾ "ತಾನು ಸದಾಶಿವಗಡದ ಮುಖೇನ ಕಲ್ಲಿಕೋಟೆಗೆ ೧೩೪೨ರಲ್ಲಿ ಪ್ರಯಾಣಿಸುವ ಮಾರ್ಗದಲ್ಲಿ 'ಹೊನೊರ್' (ಹೊನ್ನಾವರ)ನಲ್ಲಿದ್ದ ಮುಸಲ್ಮಾನ ರಾಜ್ಯಪಾಲನೊಬ್ಬನು ವಿಜಯನಗರದ ಸಾಮಂತನಾಗಿದ್ದನೆಂದು" ತಿಳಿಸುತ್ತಾನೆ. ಆರಂಭದಲ್ಲಿ ಕರಾವಳಿಯನ್ನೊಳಗೊಂಡಂತೆ ಹಲವಾರು ಪ್ರಾಂತೀಯ ರಾಜರು, ಬಾರ್ಕೂರಿನಲ್ಲಿದ್ದ 'ಒಡೆಯರ್' ಎಂಬ ವಿಜಯನಗರದ ರಾಜ್ಯಪಾಲನಿಗೆ ಸಾಮಂತರಾಗಿದ್ದುದೇ ಅಲ್ಲದೇ ಕೆಲವು ನೇರ ಆಡಳಿತದ ಪ್ರದೇಶಗಳನ್ನು ತೆರಿಗೆ ಮತ್ತು ಕಂದಾಯಗಳಿಂದ ಮುಕ್ತಗೊಳಿಸಿದ್ದರೆಂಬುದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಇಬನ್ ಬತೂತನು ಕೆನರಾದ ಕರಾವಳಿಗೆ ಕ್ರಿ.ಶ.೧೩೪೨ರಲ್ಲಿ ಭೇಟಿ ಕೊಟ್ಟಿದ್ದಾಗ ತಾನು ಪಯಣಿಸಿದ ಮಾರ್ಗವನ್ನು ಹೆಸರಿಸುತ್ತಾ 'ಫಾಕನೂರು' ಮತ್ತು 'ಮಂಜರೂರು' ಎಂಬ ಸ್ಥಳನಾಮಗಳನ್ನು ಉದಾಹರಿಸಿರುವುದು. 'ಬಾರಕೂರು' ಹಾಗೂ 'ಮಂಗಳೂರು'ಗಳೆಂದು ವಿದ್ವಾಂಸರು ಗುರುತಿಸಿರುತ್ತಾರೆ. ಆತನೇ ದಾಖಲಿಸಿರುವಂತೆ ಕರಾವಳಿಯ ಮಾರ್ಗಗಳಲ್ಲಿ ಎರಡೂ ಕಡೆ ಬೃಹದಾಕಾರದ ಸಾಲುಮರಗಳಿದ್ದು ಯಾತ್ರಿಕರಿಗೆ ಸದಾ ನೆರಳನ್ನು ಒದಗಿಸುತ್ತಿದ್ದ ಅಂಶವು ಉಲ್ಲೇಖಾರ್ಹ. ಪ್ರತೀ ಅರ್ಧ ಮೈಲಿಗೆ ವಿಶ್ರಾಂತಿ ಗೃಹಗಳಿದ್ದು ಕುಡಿಯುವ ನೀರಿನ ಸೌಲಭ್ಯಕ್ಕಾಗಿ ನೆಲಬಾವಿಗಳಿದ್ದು ಇವುಗಳ ರಕ್ಷಣೆಗೆ ಸರ್ಕಾರವು ವ್ಯಕ್ತಿಗಳನ್ನು ನೇಮಕ ಮಾಡುತ್ತಿತ್ತೆಂದೂ ತನ್ನ ವರದಿಯಲ್ಲಿ ವಿವರಿಸಿರುವನು. ಈತನು ಪಶ್ಚಿಮ ಕರಾವಳಿಯು ಅತ್ಯಂತ ಅಭಿವೃದ್ಧಿ ಪಡೆದ ಪ್ರದೇಶವಾಗಿದ್ದರೂ ಎಲ್ಲೂ ಚಕ್ರಗಳಿರುವ ವಾಹನಗಳು ತನ್ನ ಕಣ್ಣಿಗೆ ಬೀಳಲಿಲ್ಲವೆಂದೂ ದಾಖಲಿಸಿರುವನು. ಶ್ರೀಮಂತರು ಮತ್ತು ರಾಜಮನೆತನದವರು ಅಡ್ಡಪಲ್ಲಕ್ಕಿಗಳಲ್ಲಿ ಚಲಿಸುವುದು ಸಾಮಾನ್ಯ ದೃಶ್ಯವಾಗಿತ್ತೆಂದು ತಿಳಿಸುತ್ತಾನೆ. ಕಾಂತಾವರದ ಕ್ರಿ.ಶ.೧೩೪೮ರ ಶಾಸನವು ಶಂಕರ ಒಡೆಯನ ಉತ್ತರಾಧಿಕಾರಿಯಾಗಿದ್ದ ಪ್ರಧಾನ ಹಡಪದ ಗೌತರಸನು (ಕ್ರಿ.ಶ.೧೩೪೮) ಮಂಗಳೂರು ರಾಜ್ಯದ ರಾಜ್ಯಪಾಲನಾಗಿದ್ದನೆಂಬ ಅಂಶವನ್ನು ದಾಖಲಿಸುತ್ತದೆ. ಬಂಟ್ವಾಳದ ಖಾಸಗಿ ಜಮೀನಿನಲ್ಲಿರುವ ಕ್ರಿ.ಶ.೧೩೬೪ರ ಶಾಸನವು ವೀರಬುಕ್ಕಣ್ಣ ಒಡೆಯನ ಆಳ್ವಿಕೆಯಲ್ಲಿ ಮಂಗಳೂರಿನ ಮಾದರಸನೆಂಬ ರಾಜನು ಮಂಜುನಾಥದೇವರ ಸೇವೆಗಾಗಿ ಪುದು ಗ್ರಾಮದ ಹಲವು ಬ್ರಾಹ್ಮಣರಿಗೆ ಹಲವು ತೆರಿಗೆಗಳನ್ನು ಮನ್ನಾ ಮಾಡಿದ ವಿಚಾರವನ್ನು ದಾಖಲಿಸುತ್ತದೆ. ಕುಂದಾಪುರ ತಾಲೂಕಿನ ಕೋಟೇಶ್ವರದ ದೇವಾಲಯದಲ್ಲಿರುವ ಕ್ರಿ.ಶ.೧೫೫೭ರ ಶಾಸನವು ವಿಜಯನಗರದ ಬುಕ್ಕಣ್ಣ ಒಡೆಯನ ಆಳ್ವಿಕೆಯ ಅವಧಿಯಲ್ಲಿ ಮಲೆಯ ದಣ್ಣಾಯಕನ ಮಂತ್ರಿಯಾದ ರಾವಳದೇವನು ವಿಷ್ಣುತಿರ್ಲ ಎಂಬುವವನಿಂದ ಖರೀದಿಸಿದ ಭೂಮಿಯನ್ನು ಕೋಟೇಶ್ವರ ದೇವಾಲಯಕ್ಕೆ ದತ್ತಿಬಿಟ್ಟ

ವಿಚಾರವನ್ನು ದಾಖಲಿಸುತ್ತದೆ. ಇದೇ ದೇವಾಲಯದಲ್ಲಿರುವ ಕ್ರಿ.ಶ.೧೩೬೪ರಲ್ಲಿ ಬುಕ್ಕಣ್ಣ ಒಡೆಯನ ಆಳ್ವಿಕೆಯಲ್ಲಿ ಬಾರಕೂರು ರಾಜ್ಯವನ್ನು ಮಲೆಯ ದಣ್ಣಾಯಕನು ಆಡಳಿತ ಮಾಡುತ್ತಿದ್ದ ಬಗ್ಗೆ ಮತ್ತು ಚಕ್ಕರೆ ಗ್ರಾಮದ ಮೂವತ್ತು ಕುಟುಂಬಗಳು ಕೋಟೇಶ್ವರ ದೇವರಿಗೆ ದೈನಂದಿನ ಕೈಂಕರ್ಯಕ್ಕಾಗಿ ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಕೋಟೇಶ್ವರ ದೇವಾಲಯದ ಕ್ರಿ.ಶ.೧೩೬೫ರ ಶಾಸನವು ಮಹಾಮಂಡಳೇಶ್ವರ ವೀರಬುಕ್ಕಣ್ಣ ಒಡೆಯನ ಆಳ್ವಿಕೆಯಲ್ಲಿ ಮುದೆಯನ ಮಗ ಧರಣೀ ದೇವನ ಆದೇಶದ ಮೇರೆಗೆ ವಿವಿಧ ಭೂಮಿಗಳನ್ನು ಖರೀದಿಸಿ ಕೋಟೇಶ್ವರ ದೇವರ ಕೈಂಕರ್ಯವನ್ನು ನೆರವೇರಿಸುವ ಸಲುವಾಗಿ ಹಲವು ಬ್ರಾಹ್ಮಣರಿಗೆ ನೀಡಿದ ದತ್ತಿಯ ಬಗೆಗೆ ತಿಳಿಸುತ್ತಾ, ಮಲ್ಲೆಯ ದಣ್ಣಾಯಕನು ಬಾರಕೂರು ರಾಜ್ಯವನ್ನು ಆಳುತ್ತಿದ್ದನೆಂದೂ ದಾಖಲಿಸುತ್ತದೆ.

ದಕ್ಷಿಣ ಕನ್ನಡವನ್ನೊಳಗೊಂಡಂತೆ ತುಳುವನಾಡನ್ನು ಕ್ರಿ.ಶ.೧೩೪೫ರಲ್ಲಿ ತಮ್ಮ ಸಂಪೂರ್ಣ ಹತೋಟಿಗೆ ತೆಗೆದುಕೊಂಡ ಹರಿಹರ ಮತ್ತು ಬುಕ್ಕರು ಸುಸೂತ್ರ ಆಡಳಿತವನ್ನು ನಿರ್ವಹಿಸುವ ದೃಷ್ಟಿಯಿಂದ ಈ ಕರಾವಳಿ ಪ್ರದೇಶವನ್ನು ಬಾರಕೂರು ಮತ್ತು ಮಂಗಳೂರು ರಾಜ್ಯಗಳೆಂದು ಎರಡು ಆಡಳಿತ ಕೇಂದ್ರಗಳಾಗಿ ವಿಂಗಡಿಸಿದರು. ಕ್ರಿ.ಶ.೧೩೪೫ ರಿಂದ ೧೩೭೭ರವರೆಗೆ ಇವರು ತಮ್ಮ ಪ್ರತಿನಿಧಿಗಳನ್ನು ನೇಮಿಸಿ ಅವರ ಮೂಲಕ ರಾಜ್ಯಭಾರ ಮಾಡಿದ ವಿಚಾರ ಶಾಸನಗಳಿಂದ ವ್ಯಕ್ತವಾಗುತ್ತದೆ.

**ಬಾರಕೂರು** ರಾಜ್ಯದಲ್ಲಿದ್ದ ವಿಜಯನಗರದ ಕೆಲವು ರಾಜ್ಯಪಾಲರುಗಳೆಂದರೇ ಮಹಾಪ್ರಧಾನ ಮಲೆಯ ದಂಡನಾಯಕ (ಕ್ರಿ.ಶ.೧೩೪೫–೬೫), ಮಹಾಪ್ರಧಾನ ಗೋಪರಸ ಒಡೆಯ (ಕ್ರಿ.ಶ.೧೩೬೬–೭೩) ಮತ್ತು ಮಹಾಪ್ರಧಾನ ಬಾಚರಸ ಒಡೆಯ (ಕ್ರಿ.ಶ.೧೩೭೩).

**ಮಂಗಳೂರು** ರಾಜ್ಯದಲ್ಲಿದ್ದ ವಿಜಯನಗರದ ಕೆಲವು ರಾಜ್ಯಪಾಲರುಗಳೆಂದರೇ ಶಂಕರದೇವ ಒಡೆಯ (ಕ್ರಿ.ಶ.೧೩೪೫) ಹಡಪದ ಗೌತರಸ (ಕ್ರಿ.ಶ.೧೩೪೮) ಮಾದರಸ (ಕ್ರಿ.ಶ.೧೩೬೪) ಮತ್ತು ಪಂಡರಿದೇವ ಒಡೆಯ (ಕ್ರಿ.ಶ.೧೩೭೫–೭೭).

ಬಾರಕೂರಿನಲ್ಲಿರುವ ಪುರಾತನ ಕೋಟೆಯನ್ನು ಹರಿಹರರಾಯನು ನಿರ್ಮಿಸಿದನೆಂಬ ಪ್ರತೀತಿಯಿದೆ. ಈತನು ತುಳುನಾಡಿನಲ್ಲಿ ತನ್ನ ಆಳ್ವಿಕೆಯ ಕಾಲದಲ್ಲಿ ತೆರಿಗೆ ಪದ್ಧತಿಯನ್ನು ಸುಧಾರಣೆಗೊಳಿಸಿದ್ದೇ ಅಲ್ಲದೇ ಭೂಕಂದಾಯವನ್ನು ನಿರ್ಧರಿಸುವಾಗ ಬೆಳೆಯ ಒಂದೂವರೆ ಪಟ್ಟನ್ನು ರೈತರಿಗೂ, ನಾಲ್ಕನೇ ಒಂದು ಭಾಗವನ್ನು ಭೂಮಾಲೀಕರಿಗೂ, ಹನ್ನೆರಡನೇ ಒಂದು ಭಾಗವನ್ನು ಬ್ರಾಹ್ಮಣರು ಮತ್ತು ದೇವಾಲಯಗಳಿಗೂ ಹಾಗೂ ಆರನೇ ಒಂದು ಭಾಗವನ್ನು ಸರ್ಕಾರಕ್ಕೂ ನೀಡಬೇಕೆಂದು ಪ್ರಥಮ ಬಾರಿಗೆ ನಿಗದಿಪಡಿಸಿದನು. ಅಧಿಕಾರಕ್ಕೆ ಬಂದ ಹಲವು ವರ್ಷಗಳಲ್ಲಿಯೇ ಮೊದಲನೇ ಹರಿಹರನು ತನ್ನ ತಮ್ಮನಾದ ಮೊದಲನೇ ಬುಕ್ಕ (ಕ್ರಿ.ಶ.೧೩೫೬–೧೩೭೭)ರಾಯನನ್ನು ಸಹ ರಾಜನನ್ನಾಗಿ ನೇಮಕ ಮಾಡಿದನು. ಈಗಾಗಲೇ ಉಲ್ಲೇಖಿಸಿರುವ ಕ್ರಿ.ಶ.೧೩೪೫ರ ಅತ್ತಾವರದ ಶಾಸನವು ಮಹಾಮಂಡಳೇಶ್ವರ ಬುಕ್ಕಣ್ಣ ಒಡೆಯ (ಮೊದಲನೇ ಬುಕ್ಕ) ಮತ್ತು ಶಂಕರ ಒಡೆಯರುಗಳು ಮಂಗಳೂರು ರಾಜ್ಯವನ್ನು ರಾಜ್ಯಭಾರ ಮಾಡುತ್ತಿದ್ದರೆಂದು ದಾಖಲಿಸುತ್ತದೆ. ನಂತರ ಎರಡನೇ ಹರಿಹರನು ತನ್ನ ಮಗನಾದ ಮಹಾಮಂಡಲೇಶ್ವರ ಕುಮಾರ (ಎರಡನೇ) ಪ್ರತಾಪ ಬುಕ್ಕರಾಯನಿಗೆ ಆಡಳಿತ ಕ್ಷೇತ್ರದಲ್ಲಿ ಶಿಕ್ಷಣ ನೀಡುವ ದೃಷ್ಟಿಯಿಂದ ನೀರುವಾರ (ಉಡುಪಿ ತಾಲೂಕಿನ ನೀಲಾವರ) ಗ್ರಾಮದ ಆಡಳಿತವನ್ನು ಅವನಿಗೆ ವಹಿಸಿಕೊಟ್ಟನೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ. ವಿಜಯನಗರದ ಅರಸರು ಬಾರಕೂರನ್ನು ತಮ್ಮ ವಶಕ್ಕೆ ತೆಗೆದುಕೊಂಡ ಕ್ಷಣದಿಂದ ಮಲೆಯ ದಣ್ಣಾಯಕನು ಈ ಪ್ರದೇಶದ ಒಡೆತನವನ್ನು ವಹಿಸಿಕೊಂಡನೆಂದು ಕ್ರಿ.ಶ.೧೩೬೫ರ ಶಾಸನವು ದಾಖಲಿಸುತ್ತದೆ. ನಂತರ ಈತನೇ ಬಾರಕೂರಿನ ರಾಜ್ಯಪಾಲನಾದನು. ಈ ಅವಧಿಯಲ್ಲಿ ಆಳುಪ ಸಿಂಹಾಸನವನ್ನು ಎರಡನೇ ಕುಲಶೇಖರ (ಕ್ರಿ.ಶ.೧೩೩೫–೪೬), ಮೂರನೇ ಬಂಕಿದೇವ (ಕ್ರಿ.ಶ.೧೩೪೬–೧೩೫೫) ಮತ್ತು ಮೂರನೇ ಕುಲಶೇಖರ (ಕ್ರಿ.ಶ.೧೩೫೫–೧೩೯೦) ಒಬ್ಬರ ತರುವಾಯ ಒಬ್ಬರು ಅಧಿಕಾರಕ್ಕೇರಿದ್ದರೂ ಮಲೆಯ ದಣ್ಣಾಯಕನು ವಿಜಯನಗರದ ಪ್ರತಿನಿಧಿಯಾಗಿ ಕ್ರಮೇಣ ತನ್ನ ಹತೋಟಿಯನ್ನು ಬಲಪಡಿಸಿಕೊಂಡನು. ಕೋಟೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ಕ್ರಿ.ಶ.೧೩೭೭ರ ಶಾಸನವು ವೀರಬುಕ್ಕಣ್ಣನ ಮಗನಾದ ಹರಿಯಪ್ಪನ ಆಳ್ವಿಕೆಯಲ್ಲಿ ಬಾರಕೂರು ರಾಜ್ಯವನ್ನು ಬೊಮ್ಮರಸನೆಂಬ ರಾಜನು ಆಳುತ್ತಿರುವ ಅವಧಿಯಲ್ಲಿ ಮಹಾಪ್ರಧಾನ ಮುದ್ದೇ ದಣ್ಣಾಯಕನು ಕೋಟೇಶ್ವರ ದೇವರಿಗೆ ದೈನಂದಿನ ಪೂಜಾ ಕೈಂಕರ್ಯಕ್ಕಾಗಿ ಹಲವು ಪ್ರಮಾಣದ ಭೂಮಿಯನ್ನು ಖರೀದಿಸಿ ಅಲ್ಲಿಯ ೧೩ ಬ್ರಾಹ್ಮಣ ವಿದ್ವಾಂಸರಿಗೆ ದತ್ತಿ ಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಅಲ್ಲದೇ, ಮುದ್ದೇಯದಣ್ಣಾಯಕನು ದೇವಾಲಯಕ್ಕೆ ಭೇಟಿ ಕೊಡಲು ಅನುವಾಗುವಂತಹ ವ್ಯವಸ್ಥಿತ ರಸ್ತೆ (Golden Roads)ಯನ್ನು ನಿರ್ಮಿಸಿದನೆಂದು ದಾಖಲಿಸುತ್ತದೆ. ಇದೇ ಶಾಸನದಲ್ಲಿ ದೇವರಿಗೆ ಚಾಮರ ಸೇವೆಯನ್ನು ಮಾಡುತ್ತಿದ್ದ ಇಬ್ಬರು ಮಹಿಳೆಯರಿಗೆ ಮಾಸಿಕ ವೇತನವನ್ನು ನಿಗಧಿಪಡಿಸಿದ ಬಗ್ಗೆ ದಾಖಲಿಸಲಾಗಿದೆ.

ತುಳುನಾಡಿನಲ್ಲಿ ವಿಜಯನಗರ ಸಾಮ್ರಾಟರ ಪ್ರಭುತ್ವವನ್ನು ಕೊನೆಗೊಳಿಸುವ ಅನೇಕ ಪ್ರಯತ್ನಗಳು ನಡೆದವು. ಕ್ರಿ.ಶ.೧೩೯೦ರ ಮೂಡಬಿದಿರೆ ಶಾಸನದಲ್ಲಿ ಉಲ್ಲೇಖಗೊಂಡಿರುವ ವಿಕ್ರ(ವಿಕ್ರಮ ?)ಚೌಟ ಅಥವಾ ಇವನ ಉತ್ತರಾಧಿಕಾರಿಯೇ ಈ ದಂಗೆಯ ಮೂಲಪ್ರಚೋದಕನಿರಬೇಕು. ಕ್ರಿ.ಶ.೧೨ನೇ ಶತಮಾನದ ಉತ್ತರಾರ್ಧದಲ್ಲೇ ತುಳುನಾಡಿನ ಉಳ್ಳಾಲ ಸೋಮೇಶ್ವರ ಪ್ರಾಂತದಲ್ಲಿ ಪ್ರಬಲರಾಗಿದ್ದರೆಂದು ಇತರ ಆಧಾರಗಳಿಂದ ತಿಳಿಯಬಹುದಾದ ಈ ಚೌಟರು ಶಾಸನಗಳಲ್ಲಿ ಬೆಳಕಿಗೆ ಬಂದಿರುವುದು ಕ್ರಿ.ಶ.೧೩೯೦ರ ಶಾಸನದಲ್ಲಿ ಮಾತ್ರ. ಹೀಗೆ ತಕ್ಷಣ ಉದ್ಭವಿಸಿದ ಚೌಟರ ದಂಗೆಯನ್ನು ಅಡಗಿಸುವ ಜವಾಬ್ದಾರಿಯು ಮಹಾಪ್ರಧಾನ ಮಂಗಪ್ಪ ದಂಡನಾಯಕನದ್ದಾಯಿತು. ಈತನು ಕ್ರಿ.ಶ.೧೩೯೮ರ ವೇಳೆಗೆ ನಗಿರೆ ರಾಜ್ಯದಲ್ಲಿ ಇರಿಸಲಾಗಿದ್ದ ಸೇನಾತುಕಡಿಯ ನಾಯಕನಾಗಿದ್ದನು. ಮಂಗಪ್ಪ ದಂಡನಾಯಕನು ನಗಿರೆ ರಾಜ್ಯದ ದೊರೆಯಾದ ಮಹಾಮಂಡಲೇಶ್ವರ ಹಯಿವರಸನ ಸಹಾಯದೊಂದಿಗೆ ವಿಜಯನಗರ ಆಡಳಿತದ ವಿರುದ್ಧದ ದಂಗೆಯನ್ನು ಯಶಸ್ವಿಯಾಗಿ ಅಡಗಿಸಿದನು. ಚೌಟರ ಹಾವಳಿಯಿಂದ ನಗಿರೆಯ ಸೇನೆಯನ್ನು ರಕ್ಷಿಸುವ ಪ್ರಯತ್ನದಲ್ಲಿ ಹಯಿವರಸನ ಭಟರಾದ ಜಕ್ಕಣ್ಣನಾಯಕ ಮತ್ತು ತಮ್ಮಯ್ಯನಾಯಕರು ವೀರಸ್ವರ್ಗ ಸೇರಿದ ವಿಚಾರವನ್ನು ಕಾಯ್ಕಿಣಿ (ಭಟಕಳ ತಾಲೂಕು ಉತ್ತರ ಕನ್ನಡ ಜಿಲ್ಲೆ)ಯ ಎರಡು ಶಾಸನಗಳಿಂದ ವ್ಯಕ್ತವಾಗುತ್ತದೆ. ಕುಂದಾಪುರ ತಾಲೂಕಿನ ಶಂಕರನಾರಾಯಣದ ಖಾಸಗಿ ಜಮೀನಿನಲ್ಲಿರುವ ಕ್ರಿ.ಶ.೧೪೦೧ರ ಶಾಸನವು ದೋರಸಮುದ್ರವನ್ನು ತನ್ನ ಹತೋಟಿಯಲ್ಲಿ ಹೊಂದಿದ್ದ ಹರಿಹರರಾಯನ ಆಳ್ವಿಕೆಯಲ್ಲಿ ಬಸವಣ್ಣ ಒಡೆಯನು ಬಾರಕೂರು ರಾಜ್ಯವನ್ನು ಆಳುತ್ತಿದ್ದಾಗ ತನ್ನ ಪ್ರತಿನಿಧಿ ಮಹಾಪ್ರಧಾನ ಗೋಪಯದಣ್ಣಾಯಕ ಒಡೆಯನ ಮಡದಿ ತೋಜಹಳು ಶಂಕರನಾರಾಯಣ ದೇವರಿಗೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಉಡುಪಿ ತಾಲೂಕಿನ ಏರ್ಮಾಳದ ಜನಾರ್ದನ ದೇವಾಲಯದ ಪ್ರಾಕಾರದಲ್ಲಿರುವ ಕ್ರಿ.ಶ.೧೪೦೨ರ ಶಾಸನವು ಹರಿಹರರಾಯನ ಆಳ್ವಿಕೆಯಲ್ಲಿ ಕಾಳಲಿಗೆಯ ಲಕ್ಕಪ್ಪನ ಮಗ ಗಣಪಣ್ಣನು ಏರ್ಮಾಳದ ಜನಾರ್ದನ ದೇವರಿಗೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತಾ ಆಗ ಬಾರಕೂರು ರಾಜ್ಯವನ್ನು ಬಸವಣ್ಣ ಒಡೆಯನು ಆಳುತ್ತಿದ್ದನೆಂದೂ ತಿಳಿಸುತ್ತದೆ.

ಎರಡನೇ ಹರಿಹರನ (೧೩೭೭–೧೪೦೪) ಕಾಲದಲ್ಲಿ ತುಳುವ ನಾಡಿನಲ್ಲಿ ಹಲವಾರು ರಾಜ್ಯಪಾಲರುಗಳಿದ್ದರೆಂದು ಸ್ಪಷ್ಟವಾಗುತ್ತದೆ. ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಹಲವು ಹೆಸರುಗಳೆಂದರೇ ಬೊಮ್ಮರಸ ಒಡೆಯನ ಅಧೀನದಲ್ಲಿದ್ದ ಮುದ್ದಿಯ ದಣ್ಣಾಯಕ, ಹರಿಯಪ್ಪ ದಣ್ಣಾಯಕ, ಬಸವಣ್ಣ ಒಡೆಯರು ಮತ್ತು ಬಾಚಣ್ಣ ಒಡೆಯರು. ಕ್ರಿ.ಶ.೧೩೮೭ರ ಶಾಸನದಲ್ಲಿ ಬಾರಕೂರು ಮತ್ತು ಮಂಗಳೂರು ರಾಜ್ಯಗಳಲ್ಲಿ ತುಳುವನಾಡಿನ ಬಹುತೇಕ ಪ್ರದೇಶಗಳು ಒಳಪಟ್ಟಿದ್ದವು. ಬಾರಕೂರು ರಾಜ್ಯವನ್ನು ಕ್ರಿ.ಶ.೧೩೮೬ರಲ್ಲಿ ಜಕ್ಕಣ್ಣ ಒಡೆಯ ಹಾಗೂ ೧೩೮೭ರಲ್ಲಿ ಮಲ್ಲಪ್ಪ ಒಡೆಯರು ಆಳುತ್ತಿದ್ದು, ಕ್ರಿ.ಶ.೧೩೯೦ರಲ್ಲಿ ಮಂಗಳೂರು ರಾಜ್ಯವನ್ನು ಮಂಗರಸ ಒಡೆಯನೂ ಹಾಗೂ ಮೂಡಬಿದಿರೆಯನ್ನು ಮಂಜಣ್ಣ ಅಧಿಕಾರಿಯೂ ಆಳ್ವಿಕೆ ಮಾಡುತ್ತಿದ್ದ ಅಂಶ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ತುಳು ರಾಜ್ಯವನ್ನು ಬಾರಕೂರಿನಿಂದ ಸಿಂಗಣ್ಣ ಒಡೆಯನು ಕ್ರಿ.ಶ.೧೩೯೨ರಲ್ಲಿ ಮತ್ತು ಕ್ರಿ.ಶ.೧೪೦೧ರಲ್ಲಿ ಬಸವಣ್ಣ ಒಡೆಯನು ಆಳುತ್ತಿದ್ದರೆಂಬುದು ಶಾಸನಗಳಿಂದ ತಿಳಿದುಬರುತ್ತದೆ. ಮೊದಲನೇ ದೇವರಾಯ ಮತ್ತು ಸಿಂಗಣ್ಣ ದಣ್ಣಾಯಕರುಗಳು ಕ್ರಿ.ಶ.೧೪೩೪–೩೫ರವರೆಗೆ ಪ್ರಬಲರಾಗಿ ಆಳ್ವಿಕೆ ಮಾಡುತ್ತಿದ್ದರು. ಇವರುಗಳ ಸೂಚನೆಯ ಮೇರೆಗೆ ಬಾರಕೂರು ರಾಜ್ಯವನ್ನು ಪಾಲಿಸುತ್ತಿದ್ದ ಅಣ್ಣಪ್ಪ ಒಡೆಯನು ಯಾವುದೋ ಕಾರಣದಿಂದ ಶಿವಳ್ಳಿ ಗ್ರಾಮದ ಮೇಲೆ ದಾಳಿಮಾಡಿದ ಪರಿಣಾಮವಾಗಿ ಉಡುಪಿಯ ಶ್ರೀಕೃಷ್ಣಮಠದ ಅನ್ನಮಾನ್ಯಗಳು ತಪ್ಪಿ ಶ್ರೀಕೃಷ್ಣ ದೇವರ ಪ್ರತಿಮೆಯು ಸ್ಥಾನಾಂತರಗೊಂಡು ಪೂಜಾ ಕೈಂಕರ್ಯಗಳು ಸ್ಥಗಿತಗೊಂಡಿದ್ದವು. ಇದರಿಂದ ಮನನೊಂದ ಶಿವಳ್ಳಿ ಗ್ರಾಮದವರನ್ನು ಸಂತೈಸಿದ ಬಾರಕೂರು ನಗರದ ಪ್ರಮುಖರು ಕೃಷ್ಣ ಮಠವು ಯಥಾಸ್ಥಿತಿಗೆ ಹಿಂದಿರುಗುವಂತೆ ಮಾಡಬೇಕೆಂದು ಒಂದನೇ ದೇವರಾಯನಲ್ಲಿ ಕೋರಿದರು. ಇದಕ್ಕೆ ಸ್ಪಂದಿಸಿದ ರಾಯನು ಅಣ್ಣಪ್ಪ ಒಡೆಯನಿಗೆ ದೇವಾಲಯದ ದುರಸ್ತಿಗೆ ಆಜ್ಞೆ ಮಾಡಿದ್ದೇ ಅಲ್ಲದೆ ಕೃಷ್ಣಮಠಕ್ಕೆ ಹಲವು ದಾನಗಳನ್ನು ನೀಡಿದನು. ವಿಜಯನಗರದ ಆಳ್ವಿಕೆಯ ಕಾಲದ ಬಾರಕೂರಿನ ಕ್ರಿ.ಶ.೧೪೦೫ರ ಶಾಸನದಲ್ಲಿ ಬಾರಕೂರು ರಾಜ್ಯದ ರಾಜ್ಯಪಾಲನಾಗಿದ್ದ ಮಹಾಬಲದೇವನು ಬಾರಕೂರಿನ ನುರ ಹಂಜಮಾನನು ಹತ್ತೂರಕೇರಿಯ ಹಲರು, ಸೆಟ್ಟಿಕಾಣದ ಅಧಿಕಾರ ಹಾಗೂ ಕಾರ್ಯನಿರ್ವಹಣೆಯಲ್ಲಿ ಅನಾವಶ್ಯಕವಾಗಿ ಮಧ್ಯಪ್ರವೇಶಿಸಿದಾಗ ಎರಡನೇ ಬುಕ್ಕರಾಯನು ಗೋವೆಯ ಮಹಾಪ್ರಧಾನ ಬಾಚಣ್ಣನನ್ನು ವಿಚಾರಣೆ ನಡೆಸಿ ತನಗೆ ವರದಿ ಸಲ್ಲಿಸಬೇಕೆಂದು ನಿರ್ದೇಶಿಸಿದನು. ಎರಡನೇ ಬುಕ್ಕರಾಯನ ಆದೇಶದ ಮೇಲೆ ಈತನು ತೆರಳಿ ನಷ್ಟವನ್ನನುಭವಿಸಿದವರಿಗೆ ಪ್ರತಿ ಪಕ್ಷದ ವ್ಯಕ್ತಿಗಳು ತಪ್ಪು ದಂಡವನ್ನು ನೀಡಬೇಕು ಎಂದು ತೀರ್ಮಾನ ನೀಡಿದ ಮಹತ್ತರವಾದ ವಿಚಾರವನ್ನು ದಾಖಲಿಸುತ್ತದೆ. ಹೀಗಾಗಿ ಇದರ ತರುವಾಯ ವಿಜಯನಗರದ ಅರಸರು ಬಾರಕೂರಿನ ರಾಜ್ಯಪಾಲರಿಗೆ ಸ್ವಾಯತ್ತತೆಯಿಂದ ಅಧಿಕಾರ ನಿರ್ವಹಿಸಲು ನಿರ್ಬಂಧ ಹೇರುವಂತಾಯಿತು. ಬಾರಕೂರಿನ ಮಣಿಗಾರ ಕೇರಿಯ ಸೋಮನಾಥೇಶ್ವರ ದೇವಾಲಯದಲ್ಲಿರುವ ಶಾಸನವು ವೀರಪ್ರತಾಪ ದೇವರಾಯ

ಮಹಾರಾಯರ ನಿರೂಪದಿಂದ ಶಂಕರದೇವ ಒಡೆಯರು ಬಾರಕೂರು ರಾಜ್ಯವನ್ನು ಆಳುತ್ತಿದ್ದಾಗ ಹರಿಹರದೇವ ಅಯ್ಯನವರು ಬಾರಕೂರೊಳಗಿನ ಹೊಸಕೆರೆಯ ಬ್ರಹ್ಮಪುರಿ ಮೊದಲಾದ ಗೃಹಕ್ಷೇತ್ರಗಳಿಗೆ ಅರಮನೆಯ ತೆರಿಗೆ ಪರಿಹೃತವಾದ (ವಿನಾಯತಿ) ಸಂಕೇತವಾಗಿ ಮಣಿಗಾರಕೇರಿಯ ಸೋಮನಾಥ ದೇವರಿಗೆ ದೀಪದಾನವನ್ನು ಹಾಗೂ ಭೂಮಿಯನ್ನು ದತ್ತಿಬಿಟ್ಟ ವಿಚಾರಗಳನ್ನು ದಾಖಲಿಸುತ್ತದೆ.

ಎರಡನೇ ದೇವರಾಯನ ಆಳ್ವಿಕೆ (ಕ್ರಿ.ಶ.೧೪೨೪–೧೪೪೬)ಯಲ್ಲಿ ಮಂಗಳೂರು ಮತ್ತು ಬಾರಕೂರು ರಾಜ್ಯಗಳಿಗೆ ಸುಮಾರು ಎಂಟು ಮಂದಿ ರಾಜ್ಯಪಾಲರುಗಳನ್ನು ನೇಮಿಸಲಾಗಿತ್ತು. ಪ್ರಾಂತೀಯ ಆಡಳಿತ ವ್ಯವಸ್ಥೆಯಲ್ಲಿ ಇದೇ ರೀತಿಯ ಮುಂದುವರಿಕೆಯು ಮುಂದಿನ ವಿಜಯನಗರದ ಮಲ್ಲಿಕಾರ್ಜುನನ (ಕ್ರಿ.ಶ.೧೪೪೬–೧೪೬೫) ಕಾಲದಲ್ಲೂ ಮುಂದುವರಿಯುವಂತಾಯಿತು. ಒಬ್ಬ ಪಂಡರಿದೇವನೆಂಬ ರಾಜ್ಯಪಾಲನು ಬಾರಕೂರಿನಲ್ಲಿ ೧೪೫೫, ೧೪೬೫, ೧೪೭೮ ಮತ್ತು ೧೪೮೨ (ಮಧ್ಯದಲ್ಲಿ ಇತರೆ ರಾಜ್ಯಪಾಲರುಗಳೂ ಇದ್ದರು) ಆಳುತ್ತಿದ್ದನೆಂದು ಶಾಸನಗಳಲ್ಲಿ ಪದೇಪದೇ ಉಲ್ಲೇಖಿಸಲಾಗಿದೆ. ಬಹುಶಃ ಪಂಡರಿದೇವನೊಬ್ಬ ದಕ್ಷ ಹಾಗೂ ಅತಿ ಪರಿಶ್ರಮತೆಯುಳ್ಳ ಅಧಿಕಾರಿಯಾಗಿದ್ದನೆಂದು ವ್ಯಕ್ತವಾಗುತ್ತದೆ. ಮೂಡಬಿದಿರೆಯ ಹೊಸಬಸದಿಯ ದ್ವಾರದ ಎಡಭಾಗದಲ್ಲಿರುವ ಕ್ರಿ.ಶ.೧೪೨೯ರ ಶಾಸನವು ಎರಡನೇ ದೇವರಾಯನ ಆಳ್ವಿಕೆಯ ಅವಧಿಯಲ್ಲಿ ಅಭಿನವ ಚಾರುಕೀರ್ತಿಯ ಶಿಷ್ಯರಾದ ಬಿದಿರೆನಗರದ ಸಮಸ್ತ ಹಲರು 'ತ್ರಿಭುವನ ಚೂಡಾಮಣಿ' ಎಂಬ ಮಹಾಚೈತ್ಯಾಲಯವನ್ನು ನಿರ್ಮಿಸಿದ ಬಗ್ಗೆ ದಾಖಲಿಸುತ್ತದೆ. ನಗಿರೆ ರಾಜ್ಯದ ಭೈರವರಾಜನು ಮತ್ತು ಅವನ ರಾಣಿ ನಾಗಲಾದೇವಿಯರು ವೇಣುಪುರದ ಚಂದ್ರ ಜಿನಮಂದಿರದಲ್ಲಿ (ಚೂಡಾಮಣಿ ಚೈತ್ಯಾಲಯ) ಮಾಡಿದ ಹಲವು ದಾನಗಳನ್ನೂ ಸಹ ತಿಳಿಸುತ್ತದೆ. ಇದೇ ಜೈನ ಬಸದಿಯಲ್ಲಿರುವ ಎರಡನೇ ದೇವರಾಯನ ಇನ್ನೊಂದು ಶಾಸನವು ಕ್ರಿ.ಶ.೧೪೩೦ರಲ್ಲಿ ಮಹಾಪ್ರಧಾನ ಪೆರುಮಾಳದೇವ ದಣ್ಣಾಯಕನು ರಾಜ್ಯವನ್ನು ರಕ್ಷಿಸುತ್ತಿದ್ದಾಗ ನಾಗಮಂಗಲದ ದೇವರಾಜ ಒಡೆಯರ್ ಮಂಗಳೂರ ರಾಜ್ಯವನ್ನು ಆಳುತ್ತಿದ್ದಾಗ ಚೈತ್ಯಾಲಯವನ್ನು ನಿರ್ಮಿಸುವುದಕ್ಕಾಗಿ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ. ಸುಮಾರು ಮೂರು ಶತಮಾನಗಳ ಕಾಲ, ಅಂದರೇ ಕ್ರಿ.ಶ.೧೨ನೇ ಶತಮಾನದ ಕೊನೆಯವರೆಗೆ ಪ್ರಬಲರಾಗಿ ಆಳ್ವಿಕೆ ಮಾಡಿದ ಶಾಂತರರು ಕ್ರಿ.ಶ.೧೩ನೇ ಶತಮಾನದ ಮಧ್ಯಭಾಗದಲ್ಲಿ ತುಳುವನಾಡಿನ ರಾಜಕೀಯ ಇತಿಹಾಸದಿಂದ ದುರ್ಬಲರಾಗಿ ಸ್ವಲ್ಪ ಕಾಲ ಮರೆಯಾಗಿದ್ದರು. ತಮ್ಮ ರಾಜ್ಯದ ಬಹುತೇಕ ಪ್ರದೇಶಗಳನ್ನು ಕಳೆದುಕೊಂಡಿದ್ದ ಶಾಂತಾರರು ಕೇವಲ ಕಳಸ (ಚಿಕ್ಕಮಗಳೂರು ಜಿಲ್ಲೆ) ಗ್ರಾಮದ ಸುತ್ತಮುತ್ತಲ ಪ್ರದೇಶವನ್ನು ಮಾತ್ರ ತಮ್ಮ ಹತೋಟಿಯನ್ನು ಹೊಂದಿದ್ದರು. ನಂತರ ಕ್ರಿ.ಶ.೧೫ನೇ ಶತಮಾನದ ಆರಂಭದಲ್ಲಿ ಮೊದಲನೇ ಭೈರವರಸನು ಕಳಸ ರಾಜ್ಯದ ಒಡೆಯನಾಗಿದ್ದಾಗ ತುಳುನಾಡಿನ ಕಾರ್ಕಳ ಪ್ರದೇಶವೂ ಈ ಮನೆತನದವರ ಪಾಲಾಯಿತು. ಈ ಮನೆತನಕ್ಕೆ ಸೇರಿದಂತೆ ತುಳುನಾಡಿನಲ್ಲಿ ದೊರೆತಿರುವ ಶಾಸನಗಳಲ್ಲಿ ಕ್ರಿ.ಶ.೧೪೦೮ರಲ್ಲಿ ಹುಟ್ಟಿದ ಮರ್ಣೆ (ಕಾರ್ಕಳ ತಾಲೂಕು) ಶಾಸನವೇ ಪುರಾತನವಾದುದಾಗಿದೆ. ಕಾರ್ಕಳದ ನೇಮೀಶ್ವರ ಚೈತ್ಯವನ್ನು ಕಟ್ಟಿಸಿದವನು ಮೊದಲನೇ ಭೈರವನೆಂದು ಕ್ರಿ.ಶ.೧೫೨೩ಕ್ಕೆ ಸೇರಿದ ವರಂಗ ಶಾಸನದಲ್ಲಿ ದಾಖಲಿಸಲಾಗಿದೆ. ಈತನ ತರುವಾಯ ಮೊದಲನೇ ಭೈರವ ವೀರಪಾಂಡ್ಯ ಅಥವಾ ಅಭಿನವ ಚಾಮುಂಡರಾಯನು ಕಳಸ ಹಾಗೂ ಕಾರ್ಕಳಕ್ಕೆ ಏಕಾಧಿಪತಿಯಾದನು. ಈತನು ಕಾರ್ಕಳದ ಬೃಹದಾಕಾರದ ಗೊಮ್ಮಟೇಶ್ವರನನ್ನು ಬೆಟ್ಟದ ಮೇಲೆ ಕ್ರಿ.ಶ.೧೪೩೨ರಲ್ಲಿ ಗುರು ಲಲಿತಕೀರ್ತಿದೇವರ ಆಶಯದಂತೆ ಪ್ರತಿಷ್ಠಾಪಿಸಿದ ಅಂಶ ಇದೇ ಶಾಸನದಿಂದ ವ್ಯಕ್ತವಾಗುತ್ತದೆ.

ಎರಡನೇ ದೇವರಾಯನ ಆಡಳಿತಾವಧಿಯ ಮತ್ತೊಂದು ಸಾಮಾಜಿಕ ಮಹತ್ವದ ವಿಚಾರವನ್ನೊಳಗೊಂಡ ಸೋಮೇಶ್ವರ ದೇವಾಲಯದಲ್ಲಿರುವ ಕ್ರಿ.ಶ.೧೪೩೦ರ ಶಾಸನವು ವೀರಪ್ರತಾಪ ದೇವರಾಯನು ವಿಜಯನಗರದ ರಾಜಧಾನಿಯಿಂದ ಸಾಮ್ರಾಜ್ಯವನ್ನಾಳುತ್ತಿದ್ದಾಗ ಅವನ ನಿರೂಪದಿಂದ ಮಹಾಪ್ರಧಾನ ಚಂಡರಸ ಒಡೆಯರು ಬಾರಕೂರು ತುಳುರಾಜ್ಯವನ್ನು ಪ್ರತಿಪಾಲಿಸುವ ಕಾಲದಲ್ಲಿ ಬಾರಕೂರ ಚೌಳಯಕೇರಿ ಮತ್ತು ಮೂರುಕೇರಿಯ ನಿವಾಸಿಗಳ ನಡುವೆ ಸಕ್ಕರೆ(ಉಪ್ಪು ?) ಮತ್ತಿತರ ಸರಕುಗಳ ಮಾರಾಟದ ವಿಚಾರದಲ್ಲಿ ವಿವಾದ ಉದ್ಭವಿಸಿದಾಗ ಎರಡೂ ಕೇರಿಗಳ ನಡುವೆ ವೈಷಮ್ಯ ಉಂಟಾಯಿತು. ಇದರ ಪರಿಣಾಮವಾಗಿ ಹಿಂಸಾಕೃತ್ಯಗಳು ತಲೆದೋರಿದಾಗ ರಾಜ್ಯಪಾಲನು ಎರಡೂ ಕೇರಿಯವರನ್ನೂ ಕರೆಯಿಸಿ ಬುದ್ಧಿ ಹೇಳಿ ಇಬ್ಬರೂ ಸಾಮರಸ್ಯದಿಂದ ತಮ್ಮ ತಮ್ಮ ವ್ಯವಹಾರಗಳನ್ನು ಮುಂದುವರಿಸಿಕೊಂಡು ಹೋಗುವಂತೆ ಸಂಧಾನವನ್ನೇರ್ಪಡಿಸಿದನೆಂದು ದಾಖಲಿಸುತ್ತದೆ.

ಈತನ ಆಡಳಿತಾವಧಿಯಲ್ಲಿ ಹಿಂದೆ ಅಧಿಕಾರ ಕಲಹದಲ್ಲಿ ನಿರತರಾಗಿದ್ದ ಕೆಲವು ಗುಂಪುಗಳು ಮತ್ತೆ ತಲೆಯೆತ್ತಿ ರಾಜನ ವಿರುದ್ಧ ತಮ್ಮ ಹೋರಾಟವನ್ನು ಮುಂದುವರಿಸಿದರು. ಹೀಗಾಗಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಲ್ಲಿ ರಾಜಕೀಯ ಅಶಾಂತಿಯುಂಟಾಯಿತು. ಆ ಸಂದರ್ಭದಲ್ಲಿ ಪ್ರಾಂತೀಯ ರಾಜ್ಯಪಾಲನಾಗಿದ್ದ ಸಾಳುವ ನರಸಿಂಹನು ವಿಜಯನಗರದ ಆಡಳಿತವನ್ನು ಕ್ರಿ.ಶ.೧೪೮೫ರಲ್ಲಿ ತನ್ನ

ಹತೋಟಿಗೆ ತೆಗೆದುಕೊಂಡನು. ಈತನು ಕ್ರಿ.ಶ.೧೪೯೧ರವರೆಗೂ ತನ್ನ ಆಡಳಿತವನ್ನು ಮುಂದುವರೆಸಿದನು. ಈತನ ಆಳ್ವಿಕೆಯು ಅಲ್ಪಾವಧಿ ಕಾಲ ನಡೆದರೂ ಅತ್ಯಂತ ಪರಾಕ್ರಮಶಾಲಿಯೂ ಸಾಮ್ರಾಜ್ಯನಿಷ್ಠನೂ ಆಗಿದ್ದನು. ಸಾಳುವ ನರಸಿಂಹನು ಆರಂಭದಲ್ಲಿ ಸಾಮ್ರಾಟನ ವಿರುದ್ಧ ದಂಗೆ ಎದ್ದಿದ್ದ ಸಾಮಂತರಗಳನ್ನೆಲ್ಲಾ ಸೋಲಿಸಿ ಅವರುಗಳನ್ನು ಪುನ: ನಿಷ್ಠಾವಂತರನ್ನಾಗಿ ಪರಿವರ್ತಿಸಿದನು. ಇದರ ಪರಿಣಾಮವಾಗಿ ತುಳುನಾಡಿನ ಬಾರಕೂರು ರಾಜ್ಯದ ಅನೇಕ ಭಾಗಗಳು ಮತ್ತೊಮ್ಮೆ ವಿಜಯನಗರ ಸಾಮ್ರಾಜ್ಯದ ಆಡಳಿತದ ವ್ಯಾಪ್ತಿಗೆ ಒಳಪಡುವಂತಾಯಿತು. ಆಗ ಮಲ್ಲಪ್ಪನಾಯಕನು ಬಾರಕೂರಿನ ರಾಜ್ಯಪಾಲನಾಗಿದ್ದನು. ಸಾಂಪ್ರದಾಯಿಕವಾದ ಜಾತ್ಯಶ್ವಗಳ ವ್ಯಾಪಾರವು ಮಂಗಳೂರು, ಬಾರಕೂರು, ಭಟಕಳ, ಹೊನ್ನಾವರ ಹಾಗೂ ಇತರೆ ಕಡಲತೀರದ ಬಂದರುಗಳಲ್ಲಿ ನಡೆಯುತ್ತಿದ್ದು ಸ್ವಲ್ಪ ಕಾಲದವರೆಗೆ ಸ್ಥಗಿತಗೊಂಡಿದ್ದವು. ಆದರೆ, ಸಾಳುವ ನರಸಿಂಹನ ಆಡಳಿತಾವಧಿಯಲ್ಲಿ ಪುನ: ಜಾತ್ಯಶ್ವಗಳ ವ್ಯಾಪಾರವು ಚುರುಕುಗೊಂಡಿದ್ದೇ ಅಲ್ಲದೇ ಜನಪ್ರಿಯಗೊಳ್ಳುವಂತಾಯಿತು. ಅಧಿಕಾರಕ್ಕೆ ಬಂದ ಐದನೇ ವರ್ಷದಲ್ಲಿ ಅಂದರೇ ಕ್ರಿ.ಶ.೧೪೯೧ರಲ್ಲಿ ಸಾಳುವ ನರಸಿಂಹನು ನಿಧನನಾದನು. ಈತನ ಉತ್ತರಾಧಿಕಾರಿಯಾಗಿ ಸಿಂಹಾಸನವನ್ನೇರಿದ ಅವನ ಮಗ ಹಿರಿಯ ತಿರುಮಲನು ಅಧಿಕಾರಕ್ಕೆ ಬಂದ ಸ್ವಲ್ಪ ಸಮಯದಲ್ಲೇ ಅರಮನೆಯ ಒಳಸಂಚಿನ ಪರಿಣಾಮವಾಗಿ ಕೊಲ್ಲಲ್ಪಟ್ಟನು. ಬೈಂದೂರೂ ದೇವಾಲಯದಲ್ಲಿ ವಿದೇಶಿ ಯಾತ್ರಿಕ ಬುಕಾನನ್ ಪತ್ತೆ ಹಚ್ಚಿದ ಶಾಸನದ ಪ್ರಕಾರ ತುಳುವ ವೀರನರಸಿಂಹನ (ಕ್ರಿ.ಶ.೧೫೦೫–೧೫೦೯) ಆಳ್ವಿಕೆಯಲ್ಲಿ ಕೆಂಡದ ಬಸವರಸನು ೧೫೦೭ರಲ್ಲಿ ಬಾರಕೂರಿನ ರಾಜ್ಯಪಾಲನಾಗಿದ್ದನೆಂದು ತಿಳಿದುಬರುತ್ತದೆ.

**ಕೃಷ್ಣದೇವರಾಯ(ಕ್ರಿ.ಶ.೧೫೧೦–೧೫೨೯):** ಕೃಷ್ಣದೇವರಾಯನು ವಿಜಯನಗರ ಸಾಮ್ರಾಜ್ಯದ ಅತ್ಯಂತ ಪ್ರಬಲ ಹಾಗೂ ಸಮರ್ಥ ರಾಜನಾಗಿದ್ದು, ರಾಜಕೀಯವಾಗಿ ದಕ್ಷಿಣ ಭಾರತಾದ್ಯಂತ ಜನಪ್ರಿಯತೆಯನ್ನು ಹೊಂದಿದ್ದನು. ಈತನ ಆಡಳಿತಾವಧಿಯಲ್ಲಿ ತುಳುವ ನಾಡನ್ನು ಆಳ್ವಿಕೆ ಮಾಡಿದ ಶಾಸನೋಕ್ತ ನಾಲ್ಕು ರಾಜ್ಯಪಾಲರುಗಳೆಂದರೇ ರತ್ನಪ್ಪ ಒಡೆಯರ್ (೧೫೧೨), ವಾಜಯಪ್ಪ ಒಡೆಯರ್ (೧೫೧೯), ವಿಠಲರಸ ದಣ್ಣಾಯಕ (೧೫೨೩) ಮತ್ತು ಅಳಿಯ ತಿಂಮಣ್ಣ ಒಡೆಯರ್ ಅಥವಾ ತಿಮ್ಮರಸ (೧೫೨೮). ಈ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಸಣ್ಣಪುಟ್ಟ ಪಾಳೆಯಗಾರರು, ಕೃಷ್ಣದೇವರಾಯನ ವ್ಯಕ್ತಿತ್ವ ಪ್ರಭಾವದಿಂದಾಗಿ ದಕ್ಷತೆ ಹಾಗೂ ಕಾರ್ಯತತ್ಪರತೆಯನ್ನು ಪ್ರದರ್ಶಿಸುತ್ತಿದ್ದ ಹಿನ್ನೆಲೆಯಲ್ಲಿ ಮಂಗಳೂರು ರಾಜ್ಯಕ್ಕೆ ಪ್ರತ್ಯೇಕ ರಾಜ್ಯಪಾಲನನ್ನು ನೇಮಿಸದೇ ಇರುವುದು ಗಮನೀಯವಾಗಿದೆ. ಕೃಷ್ಣದೇವರಾಯನು ಅಧಿಕಾರಕ್ಕೆ ಬಂದ ಕೆಲವು ವರ್ಷಗಳಲ್ಲಿ ನಗಿರೆ ರಾಜ್ಯದ ಅರಸುಗಳು ಪುನ: ವಿಜಯನಗರದ ಸಾಮಂತರಾದರು. ಕ್ರಿ.ಶ.೧೫೧೫ರಲ್ಲಿ ಭೈರರಸನು ನಿಧನನಾದಾಗ ಅವನ ಮಲತಮ್ಮನಿದ್ದಿರಬಹುದಾದ ಇಮ್ಮಡಿ ದೇವರಾಯ ಒಡೆಯನು ನಗಿರೆ ರಾಜ್ಯದ ಅಧಿಪತಿಯಾದನು. ಇವನನ್ನು ಶಾಸನಗಳಲ್ಲಿ ಇಮ್ಮಡಿ ಸಾಳುವ ಕೃಷ್ಣದೇವರಸ ಒಡೆಯನೆಂದೂ ಕರೆಯಲಾಗಿದೆ. ಭಟ್ಕಳ ತಾಲೂಕಿನ ಬಸ್ತಿಮಕ್ಕಿಯ ಶಾಸನದಲ್ಲಿ ಕ್ರಿ.ಶ.೧೫೧೫ರಲ್ಲಿ ಈತನು ನಗಿರೆ, ಹೈವೆ, ತುಳು, ಕೊಂಕಣ ರಾಜ್ಯಗಳನ್ನಾಳುತ್ತಿದ್ದನೆಂದು ದಾಖಲಿಸಲಾಗಿದೆ. ಆದರೇ, ಚೌಟ ಕುಂದ ಹೆಗ್ಗಡೆ–ಕಿನ್ನಿಕ ಹೆಗ್ಗಡೆಯರ ಒಕ್ಕೂಟವೂ ಇವನನ್ನು ತುಳುವದಿಂದ ಪದಚ್ಯುತಗೊಳಿಸಲು ಪ್ರಯತ್ನಿಸುತ್ತಿತ್ತು ಎಂದು ಅಭಿಪ್ರಾಯವಿದೆ. ಕೃಷ್ಣದೇವರಾಯನು ತುಳುನಾಡಿನಿಂದ ನಿರ್ಗಮಿಸುವ ಮೊದಲು ಐದನೇ ಭೈರರಸನಿಗೆ ಕಳಸ–ಕಾರ್ಕಳ ರಾಜ್ಯದ ಪ್ರಭುತ್ವವನ್ನು ಪುನಃ ಒಪ್ಪಿಸಲು ತೀರ್ಮಾನಿಸಿದನು.

ಕುಂದಾಪುರ ತಾಲೂಕಿನ ಬಸರೂರಿನ ವೆಂಕಟರಮಣ ದೇವಾಲಯದ ಪ್ರಾಕಾರದಲ್ಲಿರುವ ಕ್ರಿ.ಶ.೧೫೦೬ರ ಶಾಸನವು ವಿಜಯನಗರದ ವೀರನರಸಿಂಗದೇವನ ಆಳ್ವಿಕೆಗೆ ಬಸವರಸ ಒಡೆಯನೆಂಬ ಮಾಂಡಲಿಕನು ಕಂದಉರುದ (ಕಂದಾವರ) ಬಾಡಕೆರೆ ಗ್ರಾಮದಲ್ಲಿದ್ದ ಜಮೀನಿನ ಉತ್ಪತ್ತಿಯನ್ನು ಸೇರಿದ್ದು ಬಸರೂರಿನ ಪಡುವಕೇರಿಯ ತಿರುಮಲ ದೇವರಿಗೆ ನಿರಂತರ ಎಣ್ಣೆ ದೀಪಕ್ಕಾಗಿ ಹಾಗೂ ಇತರೆ ಪೂಜಾ–ಕೈಂಕರ್ಯಕ್ಕಾಗಿ ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಬಸರೂರಿನ ಮಹಾಲಿಂಗೇಶ್ವರ ದೇವಾಲಯದ ಪ್ರಾಕಾರದಲ್ಲಿರುವ ಕ್ರಿ.ಶ.೧೫೦೬ರ ಶಾಸನವು ವಿಜಯನಗರದ ನರಸಿಂಗದೇವ ಮಹಾರಾಯನ ಆಳ್ವಿಕೆಯಲ್ಲಿ ಆತನ ಆದೇಶದನ್ವಯ ಕುರುಗೋಡಿನ ಸೋವಣ್ಣನಾಯಕನ ಕಿರಿಯ ತಮ್ಮನಾದ ಮಲ್ಲಪ್ಪನಾಯಕನು ಬಾರಕೂರು ರಾಜ್ಯವನ್ನು ಆಳುತ್ತಿದ್ದಾಗ ಬಸರೂರಿನ ಪಡುವಕೇರಿಯ ವರ್ತಕರು ನೀಡಿದ ಕಾಣಿಕೆಗಳನ್ನು ಮತ್ತು ಪಡುವ ಹರಳುನಾಡಿನ ಬೆಳತ್ತೂರು ಹಾಗೂ ಮೂಡ ಬೆಳತ್ತೂರು ಗ್ರಾಮಗಳಲ್ಲಿದ್ದ ಜಮೀನುಗಳ ಉತ್ಪತ್ತಿಯನ್ನು ಬಸರೂರಿನ ಮಹಾದೇವ ದೇವರಿಗೆ ದತ್ತಿಬಿಟ್ಟ ವಿಚಾರವನ್ನು ದಾಖಲಿಸುತ್ತದೆ. ಶಾಸನದಲ್ಲಿ ಇದೇ ಊರಿನ ಬೆಮ್ಮಣಭಂಡಾರಿಯ ಮರಿಮಗಳಾದ ಸಂಕಮ್ಮ ಮೊದಲಿತಿಯು ೬೦ ವರಹಗಳನ್ನು ವಾರ್ಷಿಕವಾಗಿ ಇದೇ ದೇವರಿಗೆ ದತ್ತಿಬಿಟ್ಟ ವಿಚಾರವನ್ನು ದಾಖಲಿಸಲಾಗಿದೆ. ಕೃಷ್ಣದೇವರಾಯನ ಆಳ್ವಿಕೆಯ ಕಾಲದ ಮೂಡಬಿದಿರೆಯ ಗುರುಗಳ ಬಸದಿಯಲ್ಲಿರುವ ಕ್ರಿ.ಶ.೧೫೧೫ರ ಶಾಸನವು ಕೃಷ್ಣರಾಯ ಮಹಾರಾಯನ ಆಜ್ಞೆಯ ಮೇರೆಗೆ ರತ್ನಪ್ಪ ಒಡೆಯನು ಮಂಗಲೂರು ಬಾರಕೂರು ರಾಜ್ಯಗಳನ್ನು ಆಳುತ್ತಿದ್ದಾಗ ಮುನಿಭದ್ರ ದೇವರು ಉಪದೇಶದಿಂದ ಬಿದಿರೆಯ(ಮೂಡಬಿದಿರೆ) ಸಮಸ್ತ ಹಲರ ಅನುಮತಿಯಿಂದ ಜೈನಧರ್ಮದ ಶಾಸ್ತ್ರದಾನಕ್ಕಾಗಿ ನೀಡಿದ ದಾನಗಳನ್ನು

ದಾಖಲಿಸುತ್ತದೆ. ಕೃಷ್ಣದೇವರಾಯನಿಗೆ ಮೊದಲು ಆಳ್ವಿಕೆ ಮಾಡಿದ ಎರಡನೇ ಸಾಳುವ ನರಸಿಂಹನ (ಕ್ರಿ.ಶ.೧೪೯೧–೧೫೦೫) ಆಳ್ವಿಕೆಯ ಅವಧಿಯಲ್ಲಿ ದಕ್ಷಿಣ ಭಾರತದ ಮಲಬಾರ್ ಕರಾವಳಿಯ ಕಲ್ಲಿಕೋಟೆಗೆ ಪೋರ್ಚುಗೀಸ್ ನಾವಿಕ ವಾಸ್ಕೋ–ಡ–ಗಾಮನು ಕ್ರಿ.ಶ.೧೪೯೮ರಲ್ಲಿ ಬಂದನು. ಆತನು ಹಾಗೆ ನೌಕಾಯಾನ ಮಾಡುತ್ತಿದ್ದ ಮಾರ್ಗದ ಮಧ್ಯದಲ್ಲಿ ಉಡುಪಿಯ ಸಮೀಪವಿರುವ ನಡುಗಡ್ಡೆ (ದ್ವೀಪ) ಯಲ್ಲಿ ಏಸುಕ್ರಿಸ್ತನ ಶಿಲುಬೆಯನ್ನು ಸ್ಥಾಪಿಸಿ ಆ ದ್ವೀಪಕ್ಕೆ 'ಎಲ್ ಪಾಡ್ರನ್ ಡೆ ಸನೆಬಾ ಮಾರಿಯ' ಎಂದು ಕರೆದಿದ್ದು, ಇದು ಬಹುಶ: 'ಸೈಂಟ್ ಮೇರೀಸ್ ಐಲ್ಯಾಂಡ್' ಎಂದು ಗುರುತಿಸಲ್ಪಟ್ಟಿದೆ. ಅನಂತರ ಕ್ರಿ.ಶ.೧೫೦೫ರಲ್ಲಿ ವಿಜಯನಗರದ ರಾಯಭಾರಿಯೊಬ್ಬನು ನೀಡಿದ ಅನುಮತಿಯ ಮೇರೆಗೆ ಪೋರ್ಚುಗೀಸರು ತಮ್ಮ ಆಡಳಿತದ ಎಲ್ಲೆಯೊಳಗೆ ಅವರು ಇಚ್ಛಿಸುವ ಸ್ಥಳದಲ್ಲಿ ಕೋಟೆಯನ್ನು ನಿರ್ಮಿಸಬಹುದೆಂದು ಸೂಚಿಸಿದನೆಂದು ವ್ಯಕ್ತವಾಗುತ್ತದೆ. ಆದರೇ ದಕ್ಷಿಣ ಕನ್ನಡ ಪ್ರದೇಶಕ್ಕೆ ಸಂಬಂಧಿಸಿದಂತೆ ಪೋರ್ಚುಗೀಸರು ಯಾವುದೇ ಕೋಟೆಯ ನಿರ್ಮಾಣವನ್ನೂ ಮಾಡದೇ ಇರುವುದು ಗಮನೀಯವಾಗಿದೆ.

ಪೋರ್ಚುಗೀಸ್ ಯಾತ್ರಿಕ ಡ್ಯೂರೇಟ್ ಬಾರ್ಬೋಸ ದಕ್ಷಿಣಕನ್ನಡ ಜಿಲ್ಲೆಯ ಕರಾವಳಿಗೆ ಭೇಟಿಕೊಟ್ಟಿದ್ದ ಬಗ್ಗೆ ಆತನ ಪ್ರವಾಸಿ ಕಥನದಲ್ಲಿ ವ್ಯಕ್ತವಾಗುತ್ತದೆ. ಈತನು ತುಳುನಾಡನ್ನು 'ತುಳುನಾಬ್' ಎಂದು ಹೆಸರಿಸಿರುವುದಲ್ಲದೇ, ಈ ಪ್ರದೇಶವು 'ಹೋನೋರ್'ನ (ಹೊನ್ನಾವರ) ಉತ್ತರ ಭಾಗದಿಂದ ಆರಂಭಗೊಂಡಿದೆ ಎಂದು ದಾಖಲಿಸುತ್ತಾ ಈ ಕಡಲತೀರದಲ್ಲಿ ಹಲವಾರು ನದಿಗಳು, ಆಕರ್ಷಕ ಕಡಲತೀರದ ತಾಣಗಳು ಹಾಗೂ ವ್ಯಾಪಾರ ಮತ್ತು ವಾಣಿಜ್ಯಕ್ಕೆ ಅನುಕೂಲವಾಗುವ ಬಂದರುಗಳಿವೆ ಎಂದು ವಿವರಿಸಿರುವನು. ಈತನೇ ತಿಳಿಸಿರುವಂತೆ ಬೈಂದೂರಿನಲ್ಲಿ ಉತ್ತಮ ಜಾತಿಯ ಅಕ್ಕಿಯನ್ನು ಸಂಗ್ರಹಿಸಿ ಭಟ್ಕಳಕ್ಕೆ ಕಳುಹಿಸಲಾಗುತ್ತಿತ್ತೆಂದು ವ್ಯಕ್ತವಾಗುತ್ತದೆ. 'ಬರಸೋಲ' ಅಥವಾ ಬಸರೂರು 'ನರಸಿಂಗ'ನ ಸಾಮ್ರಾಜ್ಯದ ರಾಜಧಾನಿಯಾಗಿತ್ತೆಂದು ಹಾಗೂ ಈ ಊರಿನ ಬಂದರಿಗೆ ಮಲಬಾರ್, ಓರ್ಮಾಸ್, ಏಡನ್, ಚೌಲ್ ಮುಂತಾದ ಸ್ಥಳಗಳಿಂದ ಹಡಗುಗಳು ಆಗಿಂದಾಗ್ಗೆ ಭೇಟಿಕೊಡುತ್ತಿದ್ದುವೆಂದು ಬಾರ್ಬೋಸ ದಾಖಲಿಸಿರುತ್ತಾನೆ. ಈತನ ಪ್ರಕಾರ "ಮಂಗಳೂರು ಒಂದು ದೊಡ್ಡನಗರ. 'ಮಾರ್ಸ್' ಮತ್ತು 'ಜೆಂಟೆಲ್ಸ್' ಎಂಬ ಜನಗಳು ಮಂಗಳೂರಿನಲ್ಲಿ ವಾಸಿಸುತ್ತಿದ್ದು ಅಲ್ಲಿ ಎತ್ತರವಾದ ಯೂರೋಪಿಯನ್ ಶೈಲಿಯ ಗೋಪುರಗಳುಳ್ಳ ಪ್ರಾರ್ಥನಾ ಮಂದಿರಗಳನ್ನು ಕಾಣಬಹುದಾಗಿದೆ. ಮುಸಲ್ಮಾನರ ಮಸೀದಿಗಳು ಸಹ ಅಲ್ಲಲ್ಲಿ ಕಂಡುಬರುತ್ತವೆಂದು ಈತನೇ ದಾಖಲಿಸಿರುವನು. ಕೃಷ್ಣದೇವರಾಯನು ಕ್ರಿ.ಶ.೧೫೧೦ರಲ್ಲಿ ವಿಜಯನಗರದ ಸಿಂಹಾಸನವನ್ನೇರಿದ ತರುವಾಯ ಪೋರ್ಚುಗೀಸರೊಡನೆ ಸೌಹಾರ್ದಪೂರ್ಣವಾದ ಸಂಬಂಧವನ್ನು ಮುಂದುವರಿಸಿದ ಪರಿಣಾಮವಾಗಿ ಪಶ್ಚಿಮ ಕರಾವಳಿಯ ಸಾಗರೋತ್ತರ ವಾಣಿಜ್ಯ–ವ್ಯಾಪಾರದಲ್ಲಿ ಬಲವಾದ ಪ್ರಗತಿಯನ್ನೂ ಅವರು ಸಾಧಿಸಿದರೆಂದು ವ್ಯಕ್ತವಾಗುತ್ತದೆ. ಇದರಿಂದಾಗಿ ಅರಬ್ ಮತ್ತು ಮೋಪ್ಲಾಹದ ಬಂದರುಗಳಲ್ಲಿ ಆ ವೇಳೆಗಾಗಲೇ ಕೈಗೊಂಡಿದ್ದ ವಿದೇಶಿ ವ್ಯಾಪಾರಗಳು ಹಿನ್ನಡೆ ಅನುಭವಿಸುವಂತಾದುವು. ಏತನ್ಮಧ್ಯೆ ಕ್ರಿ.ಶ.೧೫೨೪ರಲ್ಲಿ ವಾಸ್ಕೋಡ–ಗಾಮನು ಪೋರ್ಚುಗೀಸರ ವ್ಯಾಪಾರ–ವಾಣಿಜ್ಯ ವಹಿವಾಟುಗಳನ್ನು ಕಲ್ಲಿಕೋಟೆ, ಮಂಗಳೂರು ಮತ್ತು ಬಸರೂರು ಬಂದರುಗಳಲ್ಲಿ ತಡೆಗಟ್ಟುತ್ತಿದ್ದ ಮುಸಲ್ಮಾನ್ ವ್ಯಾಪಾರಿಗಳ ಬಗ್ಗೆ ಎಚ್ಚರವಹಿಸಿ ಸೂಕ್ತ ನಿರ್ಬಂಧವನ್ನು ಈ ಬಂದರುಗಳಲ್ಲಿ ವಿಧಿಸುವಂತೆ ತನ್ನ ರಾಜನಿಗೆ ಸೂಕ್ತ ಮಾರ್ಗದರ್ಶನ ನೀಡಿದನು. ಇದೇ ಸಂದರ್ಭದಲ್ಲಿ ಪೋರ್ಚುಗೀಸರು ಅನುಸರಿಸುತ್ತಿದ್ದ ಆಡಳಿತದ ಸೂತ್ರಗಳು ಮುಖ್ಯವಾಗಿ ಕ್ರೈಸ್ತ ಧರ್ಮಪ್ರಚಾರಕ್ಕೆ ಉತ್ತೇಜನಕಾರಿಯಾಗಿದ್ದುದರಿಂದ, ಅವರುಗಳು ಹಲವು ಸ್ಥಳೀಯ ಮಾಂಡಳಿಕರೊಡನೆ ಸೌಹಾರ್ದಯುತ ಸಂಬಂಧವನ್ನು ಬೆಳೆಸಿಕೊಳ್ಳಬೇಕಾಯಿತು. ಕ್ರಿ.ಶ.೧೫೨೬ರಲ್ಲಿ ಪೋರ್ಚುಗೀಸರ ವೈಸ್‌ರಾಯ್ ಆಗಿದ್ದ ಲೋಪ್ಸ್‌ವಾಸ್ ಡೆ ಸಾಂಪಯೋ ಮಂಗಳೂರು ರಾಜ್ಯವನ್ನು ಹಲವು ಸ್ಥಳೀಯ ಸೆಣೆಸಾಟದ ಮೂಲಕ ತನ್ನ ಹತೋಟಿಗೆ ತೆಗೆದುಕೊಂಡನು. ಧರ್ಮಪ್ರಚಾರಕನಾಗಿದ್ದ ಫ್ರಾನ್ಸಿಸ್ ಫ್ರೇಯರ್ ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು ಮಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಕ್ರೈಸ್ತ ಧರ್ಮಪ್ರಚಾರವನ್ನು ಕೈಗೊಂಡನೆಂದು ಪ್ರತೀತಿಯಿದೆ. ಹೀಗಾಗಿ ಅಲ್ಪಕಾಲದಲ್ಲೇ ಪೋರ್ಚುಗೀಸರು ಮಂಗಳೂರು ಮತ್ತು ಇತರೆ ಪ್ರದೇಶಗಳ ಕಡಲ ವಾಣಿಜ್ಯ–ವ್ಯಾಪಾರದ ಸಂಪೂರ್ಣ ಹತೋಟಿಯನ್ನು ಪಡೆಯುವಂತಾಯಿತು. ಕಾಲಕ್ರಮೇಣ ಪಶ್ಚಿಮ ಕರಾವಳಿಯಿಂದ ರಫ್ತಾಗುತ್ತಿದ್ದ ಸರಂಜಾಮುಗಳ ಮೇಲೆ ತೆರಿಗೆ ವಿಧಿಸಲಾರಂಭಿಸಿದರು.

ಮಂಗಳೂರು ಕೋಟೆಯನ್ನು ಕ್ರಿ.ಶ.೧೫೩೦ರಲ್ಲಿ ಪೋರ್ಚುಗೀಸರು ಆಕ್ರಮಿಸಿಕೊಂಡ ಸಂದರ್ಭದಲ್ಲಿ ಸ್ಥಳೀಯ ವರ್ತಕನೊಬ್ಬನು ವಿರೋಧವೊಡ್ಡಿದ ಪರಿಣಾಮವಾಗಿ ಅಕ್ಕಿಯ ವಾಣಿಜ್ಯ ವಹಿವಾಟಿನಲ್ಲಿ ಹಲವು ನಿರ್ಬಂಧಗಳನ್ನು ವಿಧಿಸಲಾಯಿತು. ಆ ಸಮಯದಲ್ಲಿ ಪೋರ್ಚುಗೀಸ್ ರಾಜ್ಯಪಾಲನಾಗಿದ್ದ ಡಿಯೋಗೋ–ಡೆ–ಸಿಲ್‌ವೇರಿಯು ಪೋರ್ಚುಗೀಸರ ಹತೋಟಿಯನ್ನು ಪ್ರಬಲಗೊಳಿಸಲು ನೌಕಾಪಡೆಯನ್ನು ಮಂಗಳೂರಿನ ಕಡಲಿಗೆ ರವಾನಿಸಿದನು. ಮಂಗಳೂರಿನ ಸ್ಥಳೀಯರು ಪೋರ್ಚುಗೀಸರ ಈ ನೌಕಾಪಡೆಯ ಮೇಲೆ ಬಿಲ್ಲು ಬಾಣಗಳಿಂದ ಪ್ರತಿ ದಾಳಿ ಮಾಡಿ ಮಂಗಳೂರಿನ ಕೋಟೆಯನ್ನು ರಕ್ಷಿಸಿಕೊಳ್ಳಲು ವಿಫಲ ಪ್ರಯತ್ನ ಮಾಡಿದರು. ಈ ಸೆಣಸಾಟದಲ್ಲಿ

ಮಂಗಳೂರಿನ ಹೋರಾಟಗಾರರಿಗೆ ಪರಾಭವವುಂಟಾಗಿ ಮಂಗಳೂರಿನ ವರ್ತಕನಾಯಕನು ನದಿಯ ಮೂಲಕ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ಸಾವಿಗೀಡಾದನು. ಹೀಗಾಗಿ, ಮಂಗಳೂರು ಕಡಲ ವ್ಯಾಪಾರವು ಪೋರ್ಚುಗೀಸರ ಸಂಪೂರ್ಣ ಹತೋಟಿಗೆ ಒಳಪಡುವಂತಾಯಿತು.

ಕೃಷ್ಣದೇವರಾಯನು ತೀರಿಕೊಂಡ ತರುವಾಯ ವಿಜಯನಗರ ಸಾಮ್ರಾಜ್ಯದಲ್ಲಿ ಪಿತೂರಿ ಒಳಸಂಚುಗಳ ನಂತರ ಅಚ್ಚುತದೇವರಾಯ ಸಿಂಹಾಸನವನ್ನಲಂಕರಿಸಿ ಹನ್ನೆರಡು ವರ್ಷಗಳ ಕಾಲ ಆಳ್ವಿಕೆ ಮಾಡಿದನು. ಕ್ರಿ.ಶ.೧೫೩೦ರಿಂದ ೧೫೬೫ರವರೆಗೆ ತುಳುನಾಡಿನ ಶಾಸನಗಳಲ್ಲಿ ಉಲ್ಲೇಖವಾಗಿರುವ ಬಾರಕೂರು ರಾಜ್ಯದ ರಾಜಪಾಲರುಗಳೆಂದರೇ ಕೊಂಡಪ್ಪ (ಅಥವಾ ಕೊಂಡ) ಒಡೆಯ (೧೫೩೩–೩೬), ಪಂಡರಿದೇವ ಒಡೆಯ (ಕ್ರಿ.ಶ.೧೫೩೭–೪೨), ಅಚ್ಚಪ್ಪ ಒಡೆಯ (ಕ್ರಿ.ಶ.೧೫೪೨–೪೬), ಎಕದಳಖಾನ ಒಡೆಯ(ಕ್ರಿ.ಶ.೧೫೫೧) ಮತ್ತು ಮಲ್ಲಪ್ಪ ಒಡೆಯ (ಕ್ರಿ.ಶ.೧೫೬೦–೬೨). ಉಡುಪಿ ತಾಲೂಕಿನ ಉಪ್ಪೂರು ಗ್ರಾಮದ ಕ್ರಿ.ಶ.೧೫೩೬ರ ಅಚ್ಯುತರಾಯನ ಆಳ್ವಿಕೆಯ ಶಾಸನವು ಬಾರಕೂರು ಮತ್ತು ಮಂಗಳೂರು ರಾಜ್ಯಗಳನ್ನು ಸುಂಕಣನಾಯಕನಿಗೆ ಪಾಲಿಸಿದವನಾಗಿ ಕೊಂಡಪ್ಪ ಒಡೆಯನು ಬಾರಕೂರು ರಾಜ್ಯವನ್ನು ಪ್ರತಿಪಾಲಿಸುತ್ತಿದ್ದನೆಂದು ದಾಖಲಿಸಲಾಗಿದೆ. ಕ್ರಿ.ಶ.೧೫೫೧ರ ಶಾಸನದಲ್ಲಿ ಬಾರಕೂರು ರಾಜ್ಯದ ರಾಜ್ಯಪಾಲನಾದ ಏಕದಳ ಒಡೆಯನು ಕೋಟೇಶ್ವರ ದೇವಾಲಯದಲ್ಲಿ ನಡೆಯಬೇಕಾಗಿ ಬಂದ ಪ್ರಾಯಶ್ಚಿತ್ತ ಕರ್ಮಗಳ ವೆಚ್ಚಕ್ಕಾಗಿ ನೀಡಿದ ಕೆಲವು ದಾನಗಳನ್ನು ದಾಖಲಿಸುತ್ತದೆ. ತುಳುನಾಡಿನಲ್ಲಿ ಅಧಿಕಾರ ನಡೆಸಿದ ವಿಜಯನಗರದ ರಾಜ್ಯಪಾಲರುಗಳ ಪೈಕಿ ಈತನೊಬ್ಬನೇ ಇಸ್ಲಾಂ ಧರ್ಮಕ್ಕೆ ಸೇರಿದವನೆಂದು ಈವರೆಗೆ ದೊರೆತ ಶಾಸನಗಳಿಂದ ತಿಳಿದುಬರುತ್ತದೆ.

ವಿಜಯನಗರ ಸಾಮ್ರಾಜ್ಯವನ್ನು ಪ್ರಬಲವಾಗಿ ಆಳಿದ ಅಳಿಯ ರಾಮರಾಯನು ಪೋರ್ಚುಗೀಸರೊಡನೆ ಸ್ನೇಹ ಸಂಬಂಧವನ್ನಿರಿಸಿಕೊಳ್ಳುವುದರಿಂದ ತನ್ನ ರಾಜಕೀಯ ಘನತೆ ಹಾಗೂ ಸುಭದ್ರತೆ ಹೆಚ್ಚುವುದೆಂದು ಪರಿಗಣಿಸಿ ಕ್ರಿ.ಶ.೧೫೪೭ರಲ್ಲಿ ಅವರೊಂದಿಗೆ ಪರಸ್ಪರ ಸಹಕಾರದ ಒಪ್ಪಂದವನ್ನು ಮಾಡಿಕೊಂಡನೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಇದರ ಪರಿಣಾಮವಾಗಿ ಸಾಗರೋತ್ತರ ರಫ್ತು ಮತ್ತು ಆಮದು ವ್ಯವಹಾರಗಳು ವಾಸ್ತವವಾಗಿ ಪೋರ್ಚುಗೀಸರ ಹತೋಟಿಗೆ ವರ್ಗವಾಯಿತು. ಈ ರೀತಿಯ ವಿಜಯನಗರ ಸಾಮ್ರಾಜ್ಯದ ಒಪ್ಪಂದವು ಸಹಜವಾಗಿಯೇ ಸ್ಥಳೀಯ ನಾಯಕರುಗಳಿಗೆ ಸಮ್ಮತಿಯಾಗಲಿಲ್ಲ. ಇವರು ತಮ್ಮ ಸಂಘಟಿತ ವಿರೋಧವನ್ನು ಪೋರ್ಚುಗೀಸರಿಗೆ ಸಲ್ಲಿಸಬೇಕಾದ ಧಾನ್ಯ ರೂಪದ ಕಪ್ಪವನ್ನು ತಿರಸ್ಕರಿಸುವ ಮೂಲಕ ವ್ಯಕ್ತಪಡಿಸಿದರು. ಹಲವು ವೇಳೆ ಈ ರೀತಿಯ ವಿರೋಧಗಳು ಪೋರ್ಚುಗೀಸರೊಡನೆ ಪರಸ್ಪರ ಸೆಣೆಸಾಟಕ್ಕೂ ಎಡೆಮಾಡಿಕೊಡುತ್ತಿದ್ದವು. ಅಳಿಯ ರಾಮರಾಯನು ರಕ್ಕಸಗಿ ಮತ್ತು ತಂಗಡಗಿ ನಿರ್ಣಾಯಕ ಯುದ್ಧದಲ್ಲಿ ಕ್ರಿ.ಶ.೧೫೬೫ರಲ್ಲಿ ಪರಾಭವಗೊಂಡು ನಿಧನನಾದ ಮೇಲೆ ಪೋರ್ಚುಗೀಸರ ವಿರುದ್ಧ ಸ್ಥಳೀಯ ನಾಯಕರುಗಳ ಬಂಡಾಯವು ಉಗ್ರರೂಪಕ್ಕೆ ತಿರುಗಿದವು. ಇದಕ್ಕೆ ಪೂರಕವೆಂಬಂತೆ ಅಳಿಯ ರಾಮರಾಯನ ವಿರುದ್ಧ ಒಕ್ಕೂಟವನ್ನು ಸ್ಥಾಪಿಸಿಕೊಂಡಿದ್ದ ಅಹಮದ್‌ನಗರ್, ಬಿಜಾಪುರ ಮತ್ತು ಕಲ್ಲಿಕೋಟೆ ಮೊದಲಾದ ಶಕ್ತಿಗಳು ಸಹಜವಾಗಿಯೇ ದಕ್ಷಿಣ ಕನ್ನಡ ಜಿಲ್ಲೆಯ ಸ್ಥಳೀಯ ನಾಯಕರುಗಳೊಂದಿಗೆ ಗೋಪ್ಯವಾಗಿ ಪೋರ್ಚುಗೀಸರ ವಿರುದ್ಧ ಒಂದಾಗಿದ್ದವೆಂಬುದು ವ್ಯಕ್ತವಾಗುತ್ತದೆ. ಭಾರತದ ಕರಾವಳಿಯಿಂದ ಇವರನ್ನು ಹೊಡೆದೋಡಿಸುವುದು ಈ ಒಪ್ಪಂದದ ಮೂಲ ಉದ್ದೇಶವಾಗಿತ್ತು. ಇವೆಲ್ಲಾ ಪ್ರಯತ್ನಗಳು ಕಾಲಕ್ರಮೇಣ ದುರ್ಬಲಗೊಂಡು ವಿಫಲವಾದುವು, ಏಕೆಂದರೇ, ನಂತರ ಕ್ರಿ.ಶ.೧೫೭೧ರಲ್ಲಿ ಪೋರ್ಚುಗೀಸರು ಬಿಜಾಪುರದ ಅಲಿ ಆದಿಲ್‌ಷಾ ನಡುವೆ ಗೋವಾದ ಬಳಿ ನಡೆದ ಯುದ್ಧದಲ್ಲಿ ಪೋರ್ಚುಗೀಸರು ವಿಜಯಶಾಲಿಗಳಾಗುವ ಮೂಲಕ ಸ್ಥಳೀಯ ನಾಯಕರುಗಳ ಸಂಚಿನ ಹೋರಾಟಗಳು ಅಂತ್ಯಗೊಂಡವು.

## ಬಂಗಾಡಿಯ ಬಂಗರಸರು

ಕರಾವಳಿ ಕರ್ನಾಟಕವನ್ನಾಳಿದ ಹಲವಾರು ಸಣ್ಣಪುಟ್ಟ ಅರಸು ಮನೆತನಗಳ ಪೈಕಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಬಂಗಾಡಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಬಂಗ ಅರಸು ಮನೆತನವೂ ಒಂದಾಗಿದೆ. ಪ್ರಸ್ತುತ ಲಭ್ಯವಿರುವ ದಾಖಲೆಗಳ ಪ್ರಕಾರ ಬಂಗರು ತುಳವನಾಡಿನ ಒಂದು ಮೂಲರಾಜವಂಶದವರೆಂದು ತಿಳಿದುಬರುತ್ತದೆ. ಇವರ ಬಗ್ಗೆ ನಮಗಿರುವ ಮಾಹಿತಿಯು ವಿಜಯವರ್ಣಿಯು ರಚಿಸಿರುವ 'ಶೃಂಗಾರಾರ್ಣವ ಚಂದ್ರಿಕಾ' ಎಂಬ ಸಂಸ್ಕೃತ ಕಾವ್ಯದಿಂದ ಸಂಗ್ರಹಿಸಲಾಗಿದೆ. ಈ ಕವಿಯು ಕಾಮಿರಾಯ ಬಂಗನೆಂಬ ರಾಜನ ಆಸ್ಥಾನದಲ್ಲಿ ಜೀವಿಸಿದ್ದನೆಂದು ತಿಳಿದುಬರುತ್ತದೆ. ಜಿಲ್ಲೆಯಲ್ಲಿ ದೊರೆತಿರುವ ಕ್ರಿ.ಶ.೧೪೬೧, ೧೪೮೯ ಮತ್ತು ೧೪೭೩ರ ಶಾಸನಗಳಿಂದ, ಕಾಮಿರಾಯರಸನು ಬಂಗವಾಡಿಯ ದೊರೆಯಾಗಿ ಜನಪ್ರಿಯತೆಯನ್ನು ಪಡೆದಿದ್ದ ಅಂಶ ಇನ್ನಷ್ಟು ಸ್ಪಷ್ಟವಾಗುತ್ತದೆ.

ಗಣಪತಿರಾವ್ ಐಗಳರು ಕ್ರಿ.ಶ. ೧೨ನೇ ಶತಮಾನದಿಂದಲೇ ಬಂಗರಸರು ದಕ್ಷಿಣ ಕನ್ನಡದಿಂದ ಆಳುತ್ತಿದ್ದರೆಂದು ಅಭಿಪ್ರಾಯ ಪಡುತ್ತಾರೆ. ಶೃಂಗಾರಾರ್ಣವ ಚಂದ್ರಿಕಾ ಎಂಬ ಗ್ರಂಥದಲ್ಲಿ ತನ್ನ ಪ್ರಭುವಿಗಿಂತ ಮೊದಲು ಆಳಿದ ಈ ವಂಶದ ರಾಜರುಗಳ ಬಗ್ಗೆ ಉಲ್ಲೇಖವಿರುತ್ತದೆ. ಇವರ ಪೈಕಿ ಪ್ರಥಮ ಅರಸನಾದ ವೀರನರಸಿಂಹ ಬಂಗನಿಗೆ ೧೧೫೭ರಲ್ಲಿ ಪಟ್ಟಾಭಿಷೇಕ ಮಾಡಿದ ಬಗ್ಗೆ ತಿಳಿದುಬರುತ್ತದೆ. ವಿಜಯವರ್ಣಿಯ ಪ್ರಕಾರ ವೈಭವಕ್ಕೆ ಜನಪ್ರಿಯವಾಗಿದ್ದ ಕದಂಬ ವಂಶದವನೆಂದು ಹೇಳಿಕೊಳ್ಳುವ ವೀರನರಸಿಂಹ ಬಂಗನು 'ಬಂಗವಾಡಿಪುರ'ದಲ್ಲಿ ಆಳುತ್ತಿದ್ದನೆಂದು ತಿಳಿದುಬರುತ್ತದೆ. ಇದೇ ಕವಿಯು ದಾಖಲಿಸಿರುವಂತೆ ವೀರನರಸಿಂಹ ಬಂಗನ ಕಿರಿಯ ತಮ್ಮನಾದ ಪಾಂಡ್ಯ ಬಂಗನು ವಿಠಲಾಂಬಳೆಂಬ ಸೋದರಿಯನ್ನು ಪಡೆದಿದ್ದನೆಂದು ವ್ಯಕ್ತವಾಗುತ್ತದೆ. ಆ ವಿಠಲಾಂಬೆಯ ಪುತ್ರನೇ ಈ ಕವಿಯ ಆಶ್ರಯದಾತನಾದ ಕಾಮಿರಾಯಬಂಗನೆಂದು ದಾಖಲಿಸಲಾಗಿದೆ. ಮಂಗಳೂರು ತಾಲೂಕಿನ ಮುಲ್ಕಿಯ ಬಳಿಯಿರುವ ಬಪ್ಪನಾಡಿನ ಕ್ರಿ.ಶ.೧೪೧೧ರ ಶಾಸನವು ಬಂಗರಸರ ಪ್ರಮುಖ ರಾಣಿ ವಿಠಲಾದೇವಿಯ ಮಗ ಪಾಂಡ್ಯಪ್ಪರಸನೆಂದು ದಾಖಲಿಸುತ್ತದೆ. ಇದರಿಂದ ವಿಠಲಾದೇವಿಯ ಜೇಷ್ಠ ಪುತ್ರನೇ ಪಾಂಡ್ಯಬಂಗನೆಂದು ವಿಷದವಾಗುತ್ತದೆ. ಆದರೆ, ಬಂಗರು ಕದಂಬ ವಂಶದೊಡನೆ ತಮ್ಮನ್ನು ಗುರುತಿಸಿಕೊಳ್ಳುವ ಸಂಬಂಧವಿನ್ನೂ ಅಸ್ಪಷ್ಟವಾಗಿಯೇ ಉಳಿದಿದೆ.

ಬಂಗಾಡಿಯ ಬಂಗರು, ಪುತ್ತಿಗೆ ಮತ್ತು ಮೂಡಬಿದ್ರಿಯ ಚೌಟರಸರ ನಡುವೆ ವೈಷಮ್ಯಗಳು ಆಗಾಗ ತಲೆದೋರುತ್ತಿದ್ದುದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಅನಂತರ ಪ್ರಬಲಗೊಂಡ ಬಂಗರು, ಗಣಪತಿರಾವ್ ಐಗಳ್ ಅವರು ತಿಳಿಸಿರುವಂತೆ "ಚಂದ್ರಶೇಖರನ ಮಗನಾದ ವೀರನರಸಿಂಹಬಂಗನು ಗಂಗವಾಡಿಯ ಗಂಗರ ಸಂಬಂಧೀ ಎಂಬ ಅಭಿಪ್ರಾಯವೂ ಇದ್ದು, ಈತನು ಹೊಯ್ಸಳ ವಿಷ್ಣುವರ್ಧನನ ಮಗ ನರಸಿಂಹ ಎಂಬ ವಾದವೂ ಇದ್ದು, ಆಗ ತಾನೇ ಶೈಶವಾವಸ್ಥೆಯಲ್ಲಿದ್ದ ನರಸಿಂಹನು ಈ ಪ್ರದೇಶದ ಅಧಿಕಾರವನ್ನು ಪಡೆದಿದ್ದನೆಂಬುದೂ" ಸಂದೇಹಾಸ್ಪದವಾಗಿದೆ. ಬಂಗರ ಮೂಲದ ಬಗ್ಗೆ ಹಲವಾರು ಅಭಿಪ್ರಾಯಗಳನ್ನು ಈಗಾಗಲೇ ಚರ್ಚಿಸಲಾಗಿದೆ. ಡಾ. ಪಿ. ಗುರುರಾಜ ಭಟ್ಟ ಪ್ರಕಾರ ಬಂಗರು ಮೂಲತಃ ಬೆಳ್ತಂಗಡಿ ತಾಲೂಕಿನಲ್ಲಿರುವ ಬಂಗಾಡಿಯವರೆಂದು ತಿಳಿದುಬಂದರೂ ಹಳೆಯ ಮೈಸೂರಿನ ಕೋಲಾರ ಜಿಲ್ಲೆಯ ಮುಳಬಾಗಿಲ ಬಳಿಯಲ್ಲಿರುವ ಬಂಗವಾಡಿಯು ಸುಮಾರು ಕ್ರಿ.ಶ. ೧೩ನೇ ಶತಮಾನಕ್ಕೂ ಮೊದಲೇ ನೊಳಂಬರ ಆಡಳಿತದ ಕೇಂದ್ರವಾಗಿತ್ತೆಂದು ಅಲ್ಲೇ ದೊರತಿರುವ ಶಾಸನದಿಂದ ವ್ಯಕ್ತವಾಗುತ್ತದೆ. ಇರಿವನೊಳಂಬನೆಂಬ ಅರಸನು ಕೆರೆಯೊಂದನ್ನು ಕಟ್ಟಿಸಿದ ವಿಚಾರವನ್ನು ಅದು ತಿಳಿಸುತ್ತದೆ. ಇದೇ ಸ್ಥಳದಲ್ಲಿ ದೊರೆತಿರುವ ಇನ್ನೊಂದು ಶಾಸನವು ಕ್ರಿ.ಶ. ೯೫೦ರಲ್ಲಿ ಶ್ರೀಮನ್ ವಿಕ್ರಮಾದಿತ್ಯ ತಿರುವಯ್ಯ ಎಂಬ ಅರಸನು ಬಂಗವಾಡಿಯ ಕೆರೆಗೆ ನೀಡಿದ ಧನಸಹಾಯದ ಬಗ್ಗೆ ದಾಖಲಿಸುತ್ತದೆ. ಇದೇ ರೀತಿ ತುರುವೆಕೆರೆ ತಾಲೂಕಿನ ಸೂಳೆಕೆರೆಯ ಕ್ರಿ.ಶ.೧೧೧೩ರ ಶಾಸನದಲ್ಲಿಯೂ ಸಹ ಬಂಗವಾಡಿಯ ಬಗ್ಗೆ ಉಲ್ಲೇಖವಿದೆ. ಭೌಗೋಳಿಕವಾಗಿ ಈ ಬಂಗವಾಡಿಗಳಿಗೂ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಬಂಗವಾಡಿಗೂ ಯಾವುದೇ ರೀತಿಯ ಸಂಬಂಧವಿಲ್ಲ. ಒಟ್ಟಾರೆ, ಕ್ರಿ.ಶ.೧೪ನೇ ಶತಮಾನದಲ್ಲಿ ಆರಂಭಗೊಂಡ ಬಂಗರ ಅಧಿಕಾರವು, ಬ್ರಿಟೀಷರು ತುಳುನಾಡಿನ ಅಧಿಕಾರವನ್ನು ಸಂಪೂರ್ಣವಾಗಿ ವಹಿಸಿಕೊಳ್ಳುವವರೆಗೂ ವ್ಯಾಪಿಸಿದ್ದ ಅಂಶ ದಾಖಲೆಗಳಿಂದ ಸ್ಪಷ್ಟವಾಗುತ್ತದೆ". ಬಂಗರು ಹೊಂದಿದ್ದ ೧೫ ಮಾಗಣೆಗಳೆಂದರೆ ಮೆಲ್‌ಬಂಗಾಡಿ, ಕೆಳಬಂಗಾಡಿ, ಮಣಿನಾಲ್ಕೂರು, ಮಾಯಬಯಲು, ಬೆಳ್ತಂಗಡಿ, ಉಪ್ಪಿನಂಗಡಿ, ಪುತ್ತೂರು ಮೊಗರ್ನಾಡು, ಮಣಿನಾಲ್ಕೂರು, ಬಡಗ ಕಜೇಕಾರು, ಬಂಟವಾಳ, ಕೊಡಿಯಾಲ, ಸಜಿಪ, ಹರೇಕಳ, ವರ್ಕಾಡಿ ಮತ್ತು ಮಂಜೇಶ್ವರ. ಅಲ್ಲದೆ ಬಜಾಲಸೀಮೆ, ಮಾಣಿಲಸೀಮೆ, ಮುಂಡುಕೂರು ಸೀಮೆ, ಬಯಲುಸೀಮೆ, ಪೋಮಂಜೂರು ಸೀಮೆ ಮತ್ತು ನೀರು ಮಾರ್ಗಸೀಮೆ ಪ್ರದೇಶಗಳನ್ನು ಆಳುತ್ತಿದ್ದರು" ಎಂದು ಡಾ.ಪಿ.ಗುರುರಾಜ ಭಟ್ಟ ಅವರು ಅಭಿಪ್ರಾಯಪಡುತ್ತಾರೆ. ಅವರೇ ದಾಖಲಿಸಿರುವಂತೆ, ಕುಕ್ಕೆ ಸುಬ್ರಹ್ಮಣ್ಯದ ಶಾಸನವೊಂದರಲ್ಲಿ ಈ ದೇವಾಲಯಕ್ಕೆ ಬಂಗರ ವಾಡ ಠಾಣದ ಸ್ಥಾನಿಕರು ೨೭೦ ಗದ್ಯಾಣ ಹೊನ್ನನ್ನು ದಾನವಾಗಿ ನೀಡಿದ ಬಗ್ಗೆ ಹಾಗೂ ಕ್ರಿ.ಶ.೧೪೬೯ರಲ್ಲಿ ವಿಠಲರಸ ಒಡೆಯನೆಂಬ ವಿಜಯನಗರದ ರಾಜ್ಯಪಾಲನು ಮಂಗಳೂರು ಬಳಿಯ ಕೊಡಿಯಾಲದ ಕಾಮಿರಾಯರಸನೆಂಬ ನಾಯಕನ ಅರಮನೆಯನ್ನು ನಾಶಮಾಡಿದ ವಿವರಗಳು ಸ್ಪಷ್ಟವಾಗುತ್ತದೆ. ಈ ಶಾಸನದಿಂದ ಬಂಗರು ಮಂಗಳೂರಿನವರೆವಿಗೂ ತಮ್ಮ ಅಧಿಪತ್ಯವನ್ನು ವಿಸ್ತರಿಸಿಕೊಂಡಿದುದು ವ್ಯಕ್ತವಾಗುತ್ತದೆ. ವೀರನರಸಿಂಹ ಬಂಗನ ಉಲ್ಲೇಖವಿರುವ ಕ್ರಿ.ಶ.೧೫೨೮ರ ಸುಜೇರು ಶಾಸನದ ತರುವಾಯ ಈ ಮನೆತನದ ಪ್ರಸ್ತಾಪವಿರುವ ಶಾಸನಗಳು ಲಭ್ಯವಿಲ್ಲ. ಕ್ರಿ.ಶ.೧೫೬೫ರಲ್ಲಿ ರಕ್ಕಸತಂಗಡಿ ಯುದ್ಧ ನಡೆದಾಗ ಬಂಗವಾಡಿಯು ಲಕ್ಷ್ಮಪ್ಪರಸ ಬಂಗನ ಆಳ್ವಿಕೆಗೊಳಗಾಗಿತ್ತೆಂದು ತಿಳಿದುಬರುತ್ತದೆ. ಕೆಳದಿಯ ಅರಸು ಒಂದನೇ ವೆಂಕಟಪ್ಪನ ದಾಳಿಯ ಪರಿಣಾಮವಾಗಿ ತುಳುನಾಡಿನ ಇನ್ನಿತರ ರಾಜಮನೆತನಗಳಂತೆಯೇ ಬಂಗವಂಶವೂ ತನ್ನ ಅಧಿಕಾರವನ್ನು ಕಳೆದುಕೊಂಡಿತು.

## ಉಳ್ಳಾಲದ ರಾಣಿ ಅಬ್ಬಕ್ಕಾದೇವಿ

ಬಂಗರಾಜನ ಪತ್ನಿಯಾದ ಉಳ್ಳಾಲದ ರಾಣಿ ಅಬ್ಬಕ್ಕಾದೇವಿಯು ಪೋರ್ಚುಗೀಸರ ಅಧಿಪತ್ಯವನ್ನು ಆರಂಭದಿಂದಲೂ ವಿರೋಧಿಸುತ್ತಾ ಅವರ ಅಧಿಕಾರದ ವಿಸ್ತರಣೆಗೂ ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸುತ್ತಿದ್ದುದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ರಾಣಿ ಅಬ್ಬಕ್ಕಾದೇವಿಯು ಮಲಬಾರಿನ ನಾಯಕರನ್ನೂ ತನ್ನೊಡನೆ ಗುರುತಿಸಿಕೊಂಡಿದ್ದೇ ಅಲ್ಲದೇ ಪೋರ್ಚುಗೀಸರೊಡನೆ ಗೋಪ್ಯ ಸ್ನೇಹವಿರಿಸಿಕೊಂಡಿದ್ದ ತನ್ನ ಪತಿಯನ್ನೂ ವಿರೋಧಿಸಿದ್ದು ಪ್ರಶಂಸನೀಯವಾಗಿದೆ. ಪೋರ್ಚುಗೀಸರು ಈಕೆಯ ಸ್ನೇಹ ಸಂಕೇತವಾಗಿದ್ದ ಕಣ್ಣಾನೂರಿನ ನಾಯಕರೊಡನೆ ನಡೆಸಿದ ಸೆಣೆಸಾಟದ ಪರಿಣಾಮವಾಗಿ ಅಬ್ಬಕ್ಕರಾಣಿಯು ಪೋರ್ಚುಗೀಸರಿಗೆ ನೀಡುತ್ತಿದ್ದ ಕಪ್ಪಕಾಣಿಕೆಯನ್ನು ನಿಲ್ಲಿಸುತ್ತಾಳೆ. ಆದರೇ, ನಂತರ ಕ್ರಿ.ಶ.೧೫೫೫ರಲ್ಲಿ ಮಂಗಳೂರು ನಗರವನ್ನು ೨೧ ನೌಕೆಗಳನ್ನೊಳಗೊಂಡ ನೌಕಾಪಡೆಯು ಡಾಮ್ ಆಲ್‌ವೇರ್ಸ್‌ಡ ಸಿಲ್‌ವೇರಿಯಾನ ಮುಖಂಡತ್ವದಲ್ಲಿ ವಶಪಡಿಸಿಕೊಳ್ಳಲು ಪ್ರಯತ್ನಿಸಿದಾಗ ಕಲ್ಲಿಕೋಟೆಯ ಪೋರ್ಚುಗೀಸರ ರಾಜ್ಯಪಾಲ ಜಾಮೋರಿನ್ ಯಶಸ್ವಿಯಾಗಿ ತಡೆಗಟ್ಟಿ ಅಬ್ಬಕ್ಕರಾಣಿ ಮತ್ತು ಪೋರ್ಚುಗೀಸರ ನಡುವೆ ಒಪ್ಪಂದವನ್ನೇರ್ಪಡಿಸಿದನು. ಹಲವು ವರ್ಷಗಳ ನಂತರ ಕಣ್ಣಾನೂರಿನ ರಾಜನ ಸಹಯೋಗದಲ್ಲಿ ಲೂಯಿ ಡೆಮೆಲೊ ಎಂಬ ನೌಕಾಧಿಕಾರಿಯ ಪ್ರಬಲ ನೌಕೆಯೊಂದು ಮಂಗಳೂರಿನ ಪೋರ್ಚುಗೀಸರ ಮೇಲೆ ದಾಳಿ ಮಾಡಿದಾಗ ಅಬ್ಬಕ್ಕರಾಣಿಯು ಕಣ್ಣಾನೂರಿನ ರಾಜನಿಗೆ ಗೋಪ್ಯವಾಗಿ ಬೆಂಬಲ ನೀಡಿದ ಕಾರಣ ಮತ್ತೊಮ್ಮೆ ಈಕೆ ಪೋರ್ಚುಗೀಸರ ಶತೃತ್ವಕ್ಕೆ ಗುರಿಯಾದಳು.

ಲೂಯಿ ಡೆಮೆಲೋನ ಪರಾಕ್ರಮದ ಪರಿಣಾಮವಾಗಿ ಮಂಗಳೂರನ್ನು ನಾಶಪಡಿಸಿ ವಿಜಯಶಾಲಿಯಾಗಿ ತನ್ನ ಸಾಗರದ ದಾಳಿಯನ್ನು ಮುಂದುವರಿಸಿದನು. ಅನಂತರ ಹಲವು ವರ್ಷಗಳ ಕಾಲ ರಾಣಿ ಅಬ್ಬಕ್ಕಳಿಗೂ ಮತ್ತು ಪೋರ್ಚುಗೀಸರಿಗೂ ಪುನಃ ಶಾಂತಿ ಸಂಬಂಧಗಳು ಏರ್ಪಟ್ಟರೂ, ತನ್ನ ತೀವ್ರವಾದ ದೇಶಪ್ರೇಮದ ಪರಿಣಾಮವಾಗಿ ಗೋವಾದ ಪೋರ್ಚುಗೀಸರಿಗೆ ಸಲ್ಲಿಸಬೇಕಾದ ಕಪ್ಪಕಾಣಿಕೆಗಳನ್ನು ಮತ್ತೊಮ್ಮೆ ನಿಲ್ಲಿಸಿದಳು. ಇದಕ್ಕೆ ಮುಖ್ಯ ಕಾರಣವೆಂದರೇ ಕ್ರಿ.ಶ.೧೫೬೭ರಲ್ಲಿ ಪೋರ್ಚುಗೀಸರು ಈಕೆಯ ಪುರಾತನ ಮಿತ್ರನಾಗಿದ್ದ ಕಣ್ಣಾನೂರಿನ ರಾಜನ ಮೇಲೆ ಅವರು ಪುನಃ ದಾಳಿಮಾಡಿದ್ದೇ ಆಗಿತ್ತು. ಇದಕ್ಕೆ ಉತ್ತರವಾಗಿ ಪೋರ್ಚುಗೀಸರ ರಾಜ್ಯಪಾಲನು ಜೋಯಾವೋ ಪಿಕ್ಸೋಟ್‌ನ ನೇತೃತ್ವದಲ್ಲಿ ಹಲವು ದಾಳಿಗಳನ್ನು ಉಳ್ಳಾಲ ರಾಣಿಯ ಮೇಲೆ ಕೈಗೊಂಡನು. ಆದರೇ, ಪೋರ್ಚುಗೀಸರ ಈ ಪ್ರತಿನಿಧಿಯು ಅನಾರೋಗ್ಯದಿಂದ ಬಳಲುತ್ತಿದ್ದ ಕಾರಣ ಈ ದಾಳಿಗಳು ದುರಂತದಲ್ಲಿ ಅಂತ್ಯಗೊಂಡವು.

ಈ ದಾಳಿಗಳ ವೈಫಲ್ಯದಿಂದ ಉದ್ರೇಕಗೊಂಡ ಪೋರ್ಚುಗೀಸರ ರಾಜ್ಯಪಾಲನಾದ ಡೋಮೋ ಅಂಟಾವೋ ಡೆ ನರೋನ್ಹ ಸ್ವತಃ ತಾನೇ ಗೋವಾದಿಂದ ಪ್ರಾಚೀನ ರೋಮನ್ನರ ಅಥವಾ ಗ್ರೀಕರ ಏಳು ಯುದ್ಧ ನೌಕೆಗಳು, ಸ್ಪೇನ್ ದೇಶದ ೨೦ ದೊಡ್ಡ ಹಡಗು ಮತ್ತು ೨೬ ವಿಶೇಷ ಯುದ್ಧ ನೌಕೆಗಳೊಡಗೂಡಿದ ಪ್ರಬಲ ನೌಕಾಪಡೆಯನ್ನೊಳಗೊಂಡ, ಪೋರ್ಚುಗೀಸರ ಸಮರ ನೌಕಾಶಕ್ತಿಯೊಂದಿಗೆ, ಉಳ್ಳಾಲದ ಅಬ್ಬಕ್ಕರಾಣಿಯನ್ನು ಸದೆ ಬಡೆಯಲು ಕ್ರಿ.ಶ.೧೫೬೭ರ ಸೆಪ್ಟೆಂಬರ್‌ನಲ್ಲಿ ತುಳುವ ದೇಶದ ಕಡಲಿಗೆ ಧಾವಿಸಿದನು. ಪ್ರಸಿದ್ಧ ಪೋರ್ಚುಗೀಸ್ ಇತಿಹಾಸಕಾರ ಫಾದರ್ ಫ್ರಾನ್ಸಿಸ್ಕೊ–ಡೆ–ಡಿಸೋಜ಼ಾ ರಚಿಸಿರುವ 'Oriente conquislado' ಎಂಬ ಗ್ರಂಥದಲ್ಲಿ ಮಂಗಳೂರನ್ನು ವಶಪಡಿಸಿಕೊಂಡ ಈ ಪ್ರಬಲ ನಿರ್ಣಾಯಕ ನೌಕಾಯುದ್ಧದ ಬಗ್ಗೆ ಕುತೂಹಲಕಾರಿಯಾದ ವರ್ಣನೆ ನೀಡಿರುವನು. ಇದರ ಪ್ರಕಾರ ಪೋರ್ಚುಗೀಸರು ಪ್ರಬಲ ಪಡೆಯೊಂದಿಗೆ ಮುತ್ತಿಗೆ ಹಾಕಿದಾಗ ಮಂಗಳೂರು ಕೋಟೆಯನ್ನು ರಕ್ಷಿಸುತ್ತಿದ್ದ ಮುಸಲ್ಮಾನ (ಸೇನಾ) ಪಡೆಯು ತಕ್ಷಣ ಪಾದರಸದಂತೆ ಮುಂದುವರೆದು ಪೋರ್ಚುಗೀಸರನ್ನು ಗೋಪ್ಯವಾಗಿ ಅನಿರೀಕ್ಷಿತವಾಗಿ ತಲ್ಲಣಗೊಳಿಸಿದತು. ಇದಕ್ಕೆ ಮೂಲಕಾರಣವೆಂದರೇ ರಾತ್ರಿಯ ಕತ್ತಲೆಯಿದ್ದುದೆಂದು ಡೆಸೋಜ಼ಾ ದಾಖಲಿಸಿರುವನು. ಆದರೇ ನೌಕಾಪಡೆಯ ಹಿಂದೆಯೇ ಬಂದ ಪೋರ್ಚುಗೀಸರ ವೈಸ್‌ರಾಯ್ ತಕ್ಷಣ ಕೋಟೆಯ ಗೋಡೆಯನ್ನು ನಾಶಗೊಳಿಸಿ ಅದರ ಸುತ್ತಲೂ ಕಂದಕವನ್ನು ತೋಡುವಂತೆ ಆದೇಶಿಸಿದನು. ಇದರ ತರುವಾಯ ಹಲವು ತಿಂಗಳುಗಳ ನಂತರ ಜನವರಿ ೧೫೬೮ರಲ್ಲಿ ಸಂಭವಿಸಿದ್ದ ಭೀಕರ ಯುದ್ಧದಲ್ಲಿ ಪೋರ್ಚುಗೀಸರು ಮಹತ್ವದ ವಿಜಯವನ್ನು ಸಾಧಿಸಿದಾಗ, ಉಳ್ಳಾಲದ ರಾಣಿ ಅಬ್ಬಕ್ಕ ಮಂಗಳೂರಿನಿಂದ ದೂರ ಸರಿದು, ಬೆಟ್ಟದಲ್ಲಿ ಆಶ್ರಯ ಪಡೆಯುವಂತಾಯಿತು. ಈ ಯುದ್ಧದ ಪ್ರತ್ಯಕ್ಷದರ್ಶಿಯ ವರದಿಯ ಪ್ರಕಾರ " ಮಂಗಳೂರು ನಗರವು ಬೆಂಕಿಯ ಪ್ರಚಂಡ ಜ್ವಾಲೆಗೆ ಆಹುತಿಯಾಗಿ, ನಗರದ ಸುತ್ತಮುತ್ತ ವ್ಯಾಪಿಸಿದ್ದ ತೆಂಗು ಹಾಗೂ ಅಡಿಕೆ ತೋಟಗಳು ಧ್ವಂಸವಾದುವು" ಎಂದು ತಿಳಿದುಬರುತ್ತದೆ. ಇದರ ತರುವಾಯವೇ ಪೋರ್ಚುಗೀಸರ ವೈಸ್‌ರಾಯ್ ತನ್ನ ಮೂಲ ನೆಲೆಗೆ ಹಿಂದಿರುಗಿದನೆಂದು ವರದಿ ವಿವರಿಸುತ್ತದೆ. ಆ ನಂತರ ಪೋರ್ಚುಗೀಸರು ತಾವು ಆಕ್ರಮಿಸಿಕೊಂಡ ಉತ್ತರದ ಬೆಟ್ಟದ ಮೇಲೆ ಎತ್ತರವಾದ ಕೋಟೆಯನ್ನು ನಿರ್ಮಿಸಿದರು, ನಂತರ ಇದನ್ನು ಆಕ್ರಮಿಸಿಕೊಂಡ ಸೈಂಟ್ ಸೆಬಾಸ್ಟಿಯನ್ ಎಂಬ ಪಾದ್ರಿಯಿಂದಾಗಿ ಇದಕ್ಕೆ ಹೆಸರು ರೂಢಿಯಲ್ಲಿ ಬಂದಿತು.

ಇಷ್ಟೆಲ್ಲಾ ವ್ಯಾಪಕ ಹಾಗೂ ದೀರ್ಘ ಹೋರಾಟಗಳು ನಡೆದಿದ್ದರೂ ಉಳ್ಳಾಲದ ರಾಣಿಯು ಪೋರ್ಚುಗೀಸರ ಆಡಳಿತದ ಮುಷ್ಟಿಯಿಂದ ತಪ್ಪಿಸಿಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಿದ್ದಳು. ಪೋರ್ಚುಗೀಸರ ಮಂಗಳೂರಿನ ಕೋಟೆಗೆ ಎದುರಿಗೆ ಉಳ್ಳಾಲದಲ್ಲಿ ಎತ್ತರವಾದ ಕೋಟೆಯನ್ನು ನಿರ್ಮಿಸಿಕೊಂಡಳು. ಇದೇ ಸಮಯಕ್ಕೆ ಆಕೆ ತನ್ನ ಹೋರಾಟ ಪ್ರವೃತ್ತಿಯನ್ನು ಶಮನಗೊಳಿಸಿ ಪೋರ್ಚುಗೀಸರೊಡನೆ ಶಾಂತಿ ಒಪ್ಪಂದವನ್ನು ಮಾಡಿಕೊಂಡಳು. ಹೀಗೆ ಉಳ್ಳಾಲದ ಅಬ್ಬಕ್ಕ ರಾಣಿಯು ತುಳುವನಾಡಿನ ಇತಿಹಾಸದಲ್ಲಿ ವಿದೇಶಿಯರೊಡನೆ ಯಶಸ್ವಿಯಾಗಿ ಹಾಗೂ ನಿರಂತರವಾಗಿ ಹೋರಾಟ ಮಾಡಿ ಭಾರತದ ಪ್ರಬಲ ಪ್ರಥಮ ರಾಣಿ ಎಂದು ರಾಜಕೀಯವಾಗಿ ಹೆಸರು ಪಡೆದಳು ಮತ್ತು ಇದೇ ರೀತಿ ಸಾಗರೋತ್ತರ ವ್ಯಾಪಾರದಲ್ಲಿ ಗಳಿಸಿದ ಮಹತ್ತರವಾದ ಪ್ರಗತಿಯಿಂದಾಗಿ ಈಕೆಗೆ 'ಮೆಣಸಿನ ರಾಣಿ' ಎಂಬ ಹೆಸರೂ ರೂಢಿಗೆ ಬಂದಿರುವುದು ವ್ಯಕ್ತವಾಗುತ್ತದೆ. ಉಳ್ಳಾಲ ಸಾಮ್ರಾಜ್ಯದ ಸಂಪೂರ್ಣ ಅವಸಾನವು ಕ್ರಿ.ಶ.೧೫೭೦ರ ವೇಳೆಗೆ ಆಕೆಯ ಮರಣದೊಂದಿಗೆ ಆಯಿತೆಂದು ಹಲವು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಪೋರ್ಚುಗೀಸರಿಂದ ಮುಕ್ತಳಾಗಿದ್ದರೂ ಕೆಳದಿಯ ವೆಂಕಟಪ್ಪನಾಯಕನ ಹಿಡಿತವನ್ನು ತನ್ನ ಕೊನೆಯ ದಿನಗಳಲ್ಲಿ ಆಕೆ ಒಪ್ಪಿಕೊಳ್ಳುವಂತಾಯಿತು. ಈತನು ಒಪ್ಪಂದವನ್ನು ಮಾಡಿಕೊಂಡು ಆಕೆಗೆ ಸಂಪೂರ್ಣ ರಾಜಕೀಯ ನೆರವನ್ನು ಒದಗಿಸಿದನು. ವೆಂಕಟಪ್ಪನಾಯಕನು ಬಾರಕೂರು, ಬೆಣ್ಣೆವಳ್ಳಿ, ಸಾಗರ, ಬೇಳೂರು, ಕೊಡೆಯಾಳ ಮೊದಲಾದ ಸ್ಥಳಗಳಲ್ಲಿ ವೀರಶೈವ ಮಠಗಳನ್ನು ನಿರ್ಮಿಸಿದನೆಂದು ಪ್ರತೀತಿಯಿದೆ. ಇದೇ ರೀತಿ ಬಾರಕೂರು, ಕಂದಾಲೂರು ಮತ್ತು ಮಲ್ಲಿಕಾರ್ಜುನ ಗಿರಿಗಳಲ್ಲಿ ಭದ್ರವಾದ ಕೋಟೆಗಳನ್ನೂ ಈತನು ನಿರ್ಮಿಸಿದನೆಂದು ದಾಖಲಿಸಲಾಗಿದೆ.

ಇಟಲಿಯ ಯಾತ್ರಿಕ ಪಿಯಾತ್ರೋ ಡೆಲ್ಲಾವೆಲ್ಲೆ ಕ್ರಿ.ಶ.೧೬೨೩ರಲ್ಲಿ ದಕ್ಷಿಣ ಭಾರತದ ಪಶ್ಚಿಮ ಕರಾವಳಿಗೆ ಭೇಟಿ ಕೊಟ್ಟಿದ್ದಾಗ ಈತನು ಪೋರ್ಚುಗೀಸರ ರಾಯಭಾರಿಯಾಗಿ ಸಂಚರಿಸಿದ ಮಾರ್ಗವನ್ನು ಗೋವಾದಿಂದ ಇಕ್ಕೇರಿಗೆ ಗುರುತಿಸಿದಾಗ ಅನೇಕ ಕುತೂಹಲಕಾರಿ ವಿಷಯಗಳು ಬೆಳಕಿಗೆ ಬಂದಿರುತ್ತವೆ. ಈತನ ವರದಿಯಿಂದ ಇಕ್ಕೇರಿ ಸಾಮಂತರಿಗೂ ಹಾಗೂ ತುಳುವ ನಾಡಿನ ಸಣ್ಣಪುಟ್ಟ ಪಾಳೆಯಗಾರರಿಗೂ ಬೆಳೆದಿದ್ದ ಸೌಹಾರ್ದ ಸಂಬಂಧಗಳ ಬಗ್ಗೆ ಹಲವಾರು ಆಸಕ್ತಿಯುತ ಅಂಶಗಳು ತಿಳಿದುಬರುತ್ತವೆ. ಡೆಲ್ಲಾವೆಲ್ಲೆಯು ದಾಖಲಿಸಿರುವಂತೆ ಪೋರ್ಚುಗೀಸರ ಸ್ನೇಹವನ್ನು ಬೆಳೆಸಿಕೊಂಡಿದ್ದ ಬಂಗರಾಜನು ಪುನಃ ಪ್ರಬಲಗೊಂಡ ಬಗ್ಗೆ ಹಾಗೂ ವೆಂಕಟಪ್ಪನಾಯಕನು ಕಾಸರಗೋಡಿಗೆ ಪಲಾಯನ ಮಾಡಿದ ಮಹತ್ವವಾದ ವಿಚಾರ ವ್ಯಕ್ತವಾಗುತ್ತದೆ. ಈ ವಿಚಾರಗಳನ್ನು ಸಂಗ್ರಹಿಸುವಾಗ ತಾನೊಬ್ಬ ಪೋರ್ಚುಗೀಸರ ರಾಯಭಾರಿಯೆಂದು ತನ್ನನ್ನು ತಾನು ಗುರುತಿಸಿಕೊಂಡಿರುವನು. ಅನಂತರ, ಈತನು ಉಳ್ಳಾಲಕ್ಕೆ ಬಂದಾಗ ಉಳ್ಳಾಲದ ರಾಣಿಗೂ ಆಕೆಯ ಗಂಡ ಬಂಗವಂಶದ ರಾಜನಿಗೂ ನಡೆದ ಗೃಹಕಲಹದ ಪರಿಣಾಮವಾಗಿ ಸಂಭವಿಸಿದ ವಿವಾಹ ವಿಚ್ಛೇದನದ ಬಗ್ಗೆ ವಿವರಿಸುತ್ತಾ ರಾಣಿಯು ಕೆಳದಿಯ ವೆಂಕಟಪ್ಪನಾಯಕನ ನೆರವನ್ನು ಗಳಿಸಿದ್ದುದರ ಬಗ್ಗೆ ದಾಖಲಿಸುತ್ತಾನೆ. ಇದರ ಪರಿಣಾಮವಾಗಿ ಬಂಗರಾಜ ಮತ್ತು ಪೋರ್ಚುಗೀಸರ ವಿರುದ್ಧ ಉಳ್ಳಾಲದ ರಾಣಿ ಗಳಿಸಿದ ವಿಜಯದ ಬಗ್ಗೆಯೂ ಈತನೇ ವಿವರಿಸಿರುವನು. ಒಮ್ಮೆ ಪಿಯಾತ್ರೋ ಡೆಲ್ಲಾವೆಲ್ಲೆ ಉಳ್ಳಾಲದ ಬಜಾರಿನಲ್ಲಿ ಸಂಚರಿಸುತ್ತಿದ್ದಾಗ ಆಕಸ್ಮಿಕವಾಗಿ ರಾಣಿ ಅಬ್ಬಕ್ಕನನ್ನು ಭೇಟಿ ಮಾಡಿದಾಗ ಆಕೆಗೆ ನಮಸ್ಕರಿಸಿ ಕುದುರೆಯಿಂದ ಇಳಿದು ತನ್ನನ್ನು ರೋಮ್ ದೇಶದ ಕ್ರೈಸ್ತ ಧರ್ಮಾನುಯಾಯಿ ಪಿಯಾತ್ರೋ ಡೆಲ್ಲಾವೆಲ್ಲೆ ಎಂದು ಪರಿಚಯ ಮಾಡಿಕೊಂಡು ಸಂವಾದಕ್ಕೆ ತಮ್ಮೊಡನೇ ಯಾರಾದರೂ ಇರುವರೇ ಎಂದು ಕೇಳಿದಾಗ ನರಸು ಎಂಬ ಒಬ್ಬ ಬ್ರಾಹ್ಮಣನು ದುಬಾಷಿಯ ಕೆಲಸ ಮಾಡಬಲ್ಲನೆಂದು ಆತನು ರಾಣಿಗೆ ಸಲಹೆ ಮಾಡಿದನು. ಇದಕ್ಕೊಪ್ಪಿದ ರಾಣಿಯು ಸಂವಾದಕ್ಕೆ ಆರಂಭಿಸಿ ಆತನು ಯಾವಯಾವ ದೇಶಗಳನ್ನು ಮತ್ತು ಯಾರ ಯಾರ ರಾಜರುಗಳ ಒಡ್ಡೋಲಗಗಳನ್ನು ನೋಡಿರುವುದಾಗಿ ಪ್ರಶ್ನಿಸಿದಾಗ, ಇದಕ್ಕೆ ಉತ್ತರವಾಗಿ ತನ್ನ ಪ್ರವಾಸ ಕಥನದ ಸೂಕ್ಷ್ಮ ವಿವರಗಳನ್ನು ಆಕೆಗೆ ತಿಳಿಸಿದನು. ಆತನ ವಿವರಗಳಲ್ಲಿ ಟರ್ಕ್ ದೇಶದ ಭವ್ಯ ಸಾಮ್ರಾಜ್ಯ, ಭವ್ಯವಾದ ಪರ್ಷಿಯನ್ ರಾಜನ ಅರಮನೆ, ಇಕ್ಕೇರಿಯ ವೆಂಕಟಪ್ಪನಾಯಕನ ಅರಮನೆಗಳ ಬಗ್ಗೆ ಕೆಲವು ಕುತೂಹಲ ವಿಚಾರಗಳನ್ನು ಕೇಳಿದ ಮೇಲೆ ಆಕೆ ಆತನಿಗೆ ಏನು ನೀವು ಉಳ್ಳಾಲದ (ಆಡಂಬರವಿಲ್ಲದ) ಕಾಡನ್ನು ನೋಡಲು ಬಂದುದೇಕೆ" ಎಂದು ಪ್ರಶ್ನಿಸಿದಳು. ತಾನು ಉಳ್ಳಾಲಕ್ಕೆ ಬಂದದ್ದು ಜನಪ್ರಿಯತೆ ಪಡೆದಿರುವ ರಾಣಿಯನ್ನು ನೋಡಲು ಎಂದನು. ಮುಂದೆ ಎಲ್ಲಿಗೆ ಹೋಗಬೇಕೆಂದು ಯೋಜನೆ ಇದೆ ಎಂದು ಆಕೆ ಕೇಳಿದಾಗ ಪುನಃ ತನ್ನ ಸ್ವದೇಶಕ್ಕೆ ಹಿಂದಿರುಗಬೇಕೆಂದು ತನ್ನ ದೇವರು ಆಜ್ಞೆ ನೀಡಿರುವನೆಂದು ತಿಳಿಸಿದಾಗ, ಆಕೆ ತನ್ನ ವಸತಿಯಲ್ಲಿರಬೇಕೆಂದು ನಂತರ ತನಗೆ ಅನುಕೂಲವಾದ ಸಮಯ ಹಾಗೂ ದಿನಾಂಕವನ್ನು ತೀರ್ಮಾನಿಸಿ ಕಳುಹಿಸುತ್ತೇನೆಂದು ರಾಣಿ ತಿಳಿಸಿ ನಿರ್ಗಮಿಸಿದಳೆಂದು ಡೆಲ್ಲಾವೆಲ್ಲೆ ದಾಖಲಿಸಿರುವನು. ತುಳುವ ನಾಡಿನ ಕಿರಿದಾದ ಹಾಗೂ ಕಡಿದಾದ ಮಾರ್ಗಗಳಲ್ಲಿ ಸಂಚರಿಸುವಾಗ ತಾನು ಕೇವಲ ಕುದುರೆಯ ರಾವುತ ಮತ್ತು ಒಬ್ಬನೇ ಅಂಗರಕ್ಷಕನ ಜೊತೆಗೆ ಪಯಣಿಸಬೇಕಾದ ಪರಿಸ್ಥಿತಿಯನ್ನು ಡೆಲ್ಲಾವೆಲ್ಲೆ ವರ್ಣಿಸುತ್ತಾ ವೆಂಕಟಪ್ಪನಾಯಕನ ಆಳ್ವಿಕೆಯಲ್ಲಿ ಏಕಾಂಗಿಯಾಗಿ ಸಂಚರಿಸಿದರೂ ಈ ಘಟ್ಟದ ರಸ್ತೆಗಳು ಭದ್ರತೆಯಿಂದ ಕೂಡಿದ್ದವೆಂದು ದಾಖಲಿಸಿರುವನು. ಆತನು ಪಯಣಿಸುತ್ತಿದ್ದ

ಮಾರ್ಗದಲ್ಲಿ ಮಣೇಲದ ರಾಣಿಯೊಬ್ಬಳು ಅವಳೇ ನಿರ್ಮಿಸಿದ ನೀರಾವರಿ ಕಾಲುವೆಯೊಂದನ್ನು ಪರೀಕ್ಷಿಸುವ ಸಮಯದಲ್ಲಿ ಈತನಿಗೆ ಸಂಧಿಸಿದಾಗ ಅವಳ ಸೌಜನ್ಯಯುತವಾದ ಭಾಷೆ ಹಾಗೂ ಸರಳ ಉಡುಪಿನಿಂದ ಪ್ರಭಾವಿತನಾದ ಡೆಲ್ಲಾವೆಲ್ಲೆ ಅವಳು ರಾಣಿಯ ಹಾಗೆ ತನಗೆ ಗೋಚರಿಸಲಿಲ್ಲವೆಂದು ಈತನು ದಾಖಲಿಸಿರುವನು.

**ಕೆಳದಿಯ ಅರಸರು (ಕ್ರಿ.ಶ.೧೬೦೦–೧೭೦೦)**

ಸದಾಶಿವರಾಯನು ಕ್ರಿ.ಶ.೧೫೫೦ರ ವೇಳೆಗೆ ಕೆಳದಿಯ ಅರಸು ಮನೆತನದ ಸದಾಶಿವನಾಯಕನಿಗೆ ಇಡಿಯ ತುಳುರಾಜ್ಯವನ್ನು 'ಅಮರ ಮಾಗಣಿ' ಯಾಗಿ ಬಿಟ್ಟುಕೊಟ್ಟನೆಂದು ಸ್ಪಷ್ಟವಾಗುತ್ತದೆ. ವಿಜಯನಗರ ಸಾಮ್ರಾಜ್ಯವು ಕ್ರಿ.ಶ.೧೫೬೫ರಲ್ಲಿ ಪತನವಾದ ಮೇಲೆ ತುಳುನಾಡಿನ ಆಡಳಿತವು ಸಂಪೂರ್ಣವಾಗಿ ಕೆಳದಿ ಅರಸರ ವಶವಾಯಿತೆನ್ನಬಹುದು. ವಿಜಯನಗರದ ಚಕ್ರಾಧಿಪತ್ಯವು ಕ್ಷೀಣಿಸುತ್ತಾ ಬಂದ ಕಾಲದಲ್ಲಿ ದಕ್ಷಿಣ ಕನ್ನಡದ ಗಡಿಗಳಿಗೆ ಸಮೀಪವಿದ್ದ ಕೆಳದಿಯಲ್ಲಿ ಮೂಲತ: ವೀರಶೈವರಾಗಿದ್ದ ಹಾಗೂ ಕೃಷಿಕರಾಗಿದ್ದ 'ಕೆಳದಿ ಅರಸು' ಮನೆತನವು ಕ್ರಮೇಣ ಪ್ರಭಾವಶಾಲಿಯಾಗಿ ಬೆಳೆದುಬಂದಿತು. ಈ ಮನೆತನದ ಚೌಡಪ್ಪ ಗೌಡನೆಂಬ ಅಧಿಕಾರಿಯನ್ನು (ಕ್ರಿ.ಶ.೧೫೦೦–೧೫೦೪) ವಿಜಯನಗರದ ಸಾಮ್ರಾಜ್ಯವು ತುಳುನಾಡಿನ ಆಡಳಿತವನ್ನು ನಿರ್ವಹಿಸಲು ನಾಯಕನೆಂದು ನೇಮಕ ಮಾಡಿತು. ವಿಜಯನಗರದ ಸದಾಶಿವರಾಯನ ರಾಜಕೀಯ ಪ್ರತಿನಿಧಿ ಅಳಿಯ ರಾಮರಾಯನು ಕೆಳದಿ ಸದಾಶಿವ ನಾಯಕನನ್ನು (ಕ್ರಿ.ಶ.೧೫೩೦–೧೫೬೬) ಮಂಗಳೂರು, ಬಾರಕೂರು ಮತ್ತು ಗುತ್ತಿ ರಾಜ್ಯಗಳ ಆಡಳಿತದ ನಿರ್ವಹಣೆಗಾಗಿ ನೇಮಕ ಮಾಡಿದನು. ಉಡುಪಿ ತಾಲೂಕಿನ ಕಾಪು ಗ್ರಾಮದಲ್ಲಿ ದೊರೆತ ಕ್ರಿ.ಶ.೧೫೫೬ರ ಕೆಳದಿ ಸದಾಶಿವನಾಯಕನ ತಾಮ್ರ ಶಾಸನವು ವಿಜಯನಗರದ ವೀರಪ್ರತಾಪ ಸದಾಶಿವರಾಯನು ಅಳಿಯ ರಾಮರಾಯ ಇಬ್ಬರೂ ಜೊತೆಯಾಗಿ ಆಳ್ವಿಕೆ ಮಾಡುತ್ತಿದ್ದ ಕಾಲದಲ್ಲಿ ಬಾರಕೂರು ಹಾಗೂ ಮಂಗಲೂರು ರಾಜ್ಯಗಳನ್ನು ಸದಾಶಿವನಾಯಕನು ಆಳುತ್ತಿದ್ದಾಗ ತಿರುಮಲರಸರಾದ ಮದ್ದಹೆಗ್ಗಡೆ ಮತ್ತು ಅವನ ನಾಡಿನವನಾದ ಗಣಪಣ್ಣ ಸಾಮಂತರು ತಮ್ಮ ಸೀಮೆಯೊಳಗೆ ಭೂಮಿದಾನ ಮಾಡಿದ ವಿವರಗಳನ್ನು ದಾಖಲಿಸುತ್ತದೆ. ಸದಾಶಿವನಾಯಕನು ಅತ್ಯಂತ ಪರಾಕ್ರಮಶಾಲಿ ಹೋರಾಟಗಾರನಾಗಿದ್ದು ವಿಜಯನಗರ ಸಾಮ್ರಾಜ್ಯದ ಸದಾಶಿವರಾಯನ ಸೇನೆಯ ಅನೇಕ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದನೆಂದು ಪ್ರತೀತಿಯಿದೆ. ಈತನು ವಿಜಯನಗರದ ಪರವಾಗಿ ಕೈಗೊಂಡ ಒಂದು ಮುಖ್ಯವಾದ ಆಕ್ರಮಣವೆಂದರೇ ದಕ್ಷಿಣ ದಿಕ್ಕಿನ ಕಾಸರಗೋಡಿನವರೆಗೆ ದಾಳಿ ಮಾಡಿ ಅಲ್ಲಿ ವಿಜಯನಗರ ಸಾಮ್ರಾಜ್ಯದ ವಿಜಯಸ್ತಂಭವನ್ನು ನಿರ್ಮಿಸಿದನೆಂದು ದಾಖಲಿಸಲಾಗಿದೆ. ಈ ಮನೆತನದ ರಾಜರು ವಿಜಯನಗರದ ಮಾಂಡಳಿಕರಾಗಿಯೇ ಮುಂದುವರೆದರು. ಆದರೇ, ಮೊದಲನೇ ವೆಂಕಟಪ್ಪನಾಯಕನು ಕ್ರಿ.ಶ.೧೬೧೩ರಲ್ಲಿ ಸ್ವತಂತ್ರರಾಜನೆಂದು ಘೋಷಿಸಿಕೊಂಡನು. ವೆಂಕಟಪ್ಪನಾಯಕನು ಕ್ರಿ.ಶ.೧೫೮೬ರಿಂದ ೧೬೨೯ ರವರೆಗೆ ಆಳ್ವಿಕೆ ಮಾಡಿದನು. ಈತನ ಕಾಲದ ಶಾಸನಗಳಲ್ಲಿ ವಜ್ರ ಖಚಿತವಾದ ಆನೆಗಳು ಹಾಗೂ ಕೆಳದಿಯ ಲಾಂಛನಗಳೆರಡೂ ಜೊತೆಜೊತೆಯಾಗಿ ಉಬ್ಬು ಶಿಲ್ಪಗಳಲ್ಲಿ ಕೆತ್ತಿರುವುದು ಕಂಡುಬರುತ್ತದೆ.

ವೆಂಕಟಪ್ಪನಾಯಕನ ತರುವಾಯ ಈತನ ಮೊಮ್ಮಗನಾದ ಶಿವಪ್ಪನಾಯಕನು (ಕ್ರಿ.ಶ.೧೬೨೯–೧೬೪೫) ಕೆಳದಿ ಸಿಂಹಾಸನವನ್ನೇರಿದನು. ಈತನು ಅಧಿಕಾರಕ್ಕೆ ಬಂದ ಎರಡು ವರ್ಷದ ನಂತರ ಕ್ರಿ.ಶ. (೧೬೩೧) ಪೋರ್ಚುಗೀಸರು ಇವನೊಡನೆ ಸೌಹಾರ್ದ ಸಂಬಂಧಕ್ಕಾಗಿ ಒಪ್ಪಂದ ಮಾಡಿಕೊಂಡರು. ಈ ಒಪ್ಪಂದವು ಬಹುತೇಕ ಇಬ್ಬರ ನಡುವೆ ಪರಸ್ಪರ ಹೊಂದಾಣಿಕೆಯ ಲಕ್ಷಣವನ್ನು ವ್ಯಕ್ತಪಡಿಸುವಂತಹದ್ದಾಗಿತ್ತು. ಈತನು ತನ್ನ ಆಡಳಿತವನ್ನು ಮತ್ತಷ್ಟು ಕೇಂದ್ರೀಕರಿಸುವ ದೃಷ್ಟಿಯಿಂದ ಇಕ್ಕೇರಿಯಿಂದ ತನ್ನ ರಾಜಧಾನಿಯನ್ನು ಬಿದನೂರಿಗೆ ಕ್ರಿ. ಶ. ೧೬೩೯ರಲ್ಲಿ ವರ್ಗಾಯಿಸಿಕೊಂಡನು. ಕೆಳದಿ ಅರಸನಿಗೆ ಪುತ್ರ ಸಂತಾನವಿಲ್ಲದಿದ್ದ ಕಾರಣ ತನ್ನ ದೊಡ್ಡಪ್ಪನಾದ ಶಿವಪ್ಪ ನಾಯಕನಿಗೆ ತನ್ನ ಅಧಿಕಾರವನ್ನು ವಹಿಸಿಕೊಟ್ಟನು. ವೆಂಕಟಪ್ಪನಾಯಕನ ನಂತರ ಅಧಿಕಾರಕ್ಕೆ ಬಂದ ಶಿವಪ್ಪನಾಯಕನನ್ನು (೧೬೪೫–೧೬೬೦) ಕೆಳದಿಯ ಪ್ರಬಲ ನಾಯಕನೆಂದು ಪರಿಗಣಿಸಲಾಗುತ್ತದೆ. ವೆಂಕಟಪ್ಪನಾಯಕನ ಆಳ್ವಿಕೆಯ ಅವಧಿಯಲ್ಲಿ ತುಳುವ ನಾಡಿನ ಆಂತರಿಕ ವಿಚಾರದಲ್ಲಿ ಆತನು ನಿರಂತರ ಹಸ್ತಕ್ಷೇಪ ಮಾಡಿದ ಪರಿಣಾಮವಾಗಿ ಆಗಿಂದಾಗ್ಗೆ ಅನಾವಶ್ಯಕ ಯುದ್ಧಗಳಲ್ಲಿ ಕೆಳದಿ ನಾಯಕರು ಭಾಗವಹಿಸಬೇಕಾಗುತ್ತಿತ್ತು. ಆದರೇ, ಶಿವಪ್ಪನಾಯಕನು ಅತ್ಯಂತ ಚಾಣಾಕ್ಷ ರಾಜತಂತ್ರವನ್ನು ಪ್ರಯೋಗಿಸಿಕೊಂಡ ಕಾರಣ ಯುದ್ಧಗಳ ಸಂಖ್ಯೆ ಕಡಿಮೆಯಾಗಿದ್ದರೂ ತನ್ನ ಸೇನಾಶಕ್ತಿಯನ್ನು ಭದ್ರಪಡಿಸಿ ನೆರೆಯ ಸಾಮಂತರುಗಳ ಬಗ್ಗೆ ಎಚ್ಚರಿಕೆಯಿಂದ ನಿಗಾವಹಿಸಿದನು. ಈತನು ಕಾಸರಗೋಡು ಚಂದ್ರಗಿರಿ ಮತ್ತು ಬೇಕಲ್‌ಗಳಲ್ಲಿ ಸುಭದ್ರವಾದ ಕೋಟೆಗಳನ್ನು ನಿರ್ಮಿಸಿದನೆಂದು ಪ್ರತೀತಿಯಿದೆ. ಅಧಿಕಾರಕ್ಕೆ ಬರುವ ಮೊದಲೇ ಕಾರ್ಕಳದ ಭೈರರಸ(ಅತ್ಯಂತ ಬಲಿಷ್ಠ ಸ್ಥಳೀಯ ಅರಸು)ನನ್ನು ಶಿವಪ್ಪ ನಾಯಕನು ಸದೆಬಡಿದಿದ್ದನು. ತನ್ನ ರಾಜಕೀಯ ತಂತ್ರಗಳನ್ನು ಪುನರ್ ರೂಪಿಸಿಕೊಂಡ ಪರಿಣಾಮವಾಗಿ ಈತನ ಸಾಮ್ರಾಜ್ಯದ ಎಲ್ಲೆಗಳು ದಕ್ಷಿಣದ ನೀಲೇಶ್ವರದವರೆಗೆ ವಿಸ್ತೃತಗೊಂಡವು.

**ಪೋರ್ಚುಗೀಸರೊಡನೆ ಯುದ್ಧಗಳು**

ಶಿವಪ್ಪನಾಯಕನ ಆಳ್ವಿಕೆಯ ಅವಧಿಯಲ್ಲಿ ಬಿದನೂರಿಗೂ ಮತ್ತು ಪೋರ್ಚುಗೀಸರ ನಡುವಣ ಸಂಬಂಧಗಳು ವಿದೇಶಿಯರ ಜಟಿಲವಾದ ರಾಜಕೀಯ ನೀತಿಯ ಪರಿಣಾಮವಾಗಿ ಹದಗೆಟ್ಟವು. ಕ್ರಿ. ಶ. ೧೬೫೨ ರಿಂದ ೧೬೫೩ರವರೆಗೆ ಸಂಭವಿಸಿದ ಯುದ್ಧಗಳ ಪರಿಣಾಮವಾಗಿ ಪೋರ್ಚುಗೀಸರು ತಮ್ಮ ಹತೋಟಿಯಲ್ಲಿದ್ದ ಹಲವು ಪ್ರಮುಖ ಕೇಂದ್ರಗಳನ್ನು ಶಿವಪ್ಪನಾಯಕನಿಗೆ ಕಳೆದುಕೊಳ್ಳುವಂತಾಯಿತು. ಈ ಯುದ್ಧಗಳು ಅಂತಿಮಗೊಳ್ಳುವ ವೇಳೆಗೆ ಪೋರ್ಚುಗೀಸರು ದುರ್ಬಲಗೊಂಡ ಪರಿಣಾಮವಾಗಿ ಇಕ್ಕೇರಿಯ ಶಿವಪ್ಪನಾಯಕನು ಕರ್ನಾಟಕದ ಪಶ್ಚಿಮ ಕರಾವಳಿಯ ಏಕೈಕ ಪ್ರಬಲ ಅಧಿಪತಿಯಾದನೆಂದು ಇತಿಹಾಸಕಾರರು ದಾಖಲಿಸಿರುವರು. ಈತನು ವಾಣಿಜ್ಯ ಮತ್ತು ಸಾಗರೋತ್ತರ ವ್ಯಾಪಾರಕ್ಕೂ ಉತ್ತೇಜನ ನೀಡಿದ್ದೇ ಅಲ್ಲದೇ ಶಿವ ಮತ್ತು ಪಾರ್ವತಿಯರ ಸಂಕೇತಗಳಿರುವ ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತಂದನು. ಈ ನಾಣ್ಯಗಳ ಹಿಂಭಾಗದಲ್ಲಿ, ಶ್ರೀ ಸದಾಶಿವ' ಎಂಬ ನಾಗರಿ ಭಾಷೆಯ ಹೆಸರನ್ನು ಮುದ್ರಿಸಿದ್ದನು.

ಅನಂತರ, ಮೊದಲನೇ ಸೋಮಶೇಖರನ (ಕ್ರಿ. ಶ. ೧೬೬೩–೧೯೭೧) ಆಳ್ವಿಕೆಯ ಸಮಯದಲ್ಲಿ ಪೋರ್ಚುಗೀಸರು ಪುನಃ ಪ್ರಬಲಗೊಳ್ಳಲಾರಂಭಿಸಿದರು. ನಂತರ ಕ್ರಿ. ಶ. ೧೬೭೧ರಲ್ಲಿ ಪೋರ್ಚುಗೀಸರು ಹಾಗೂ ಇಕ್ಕೇರಿ ಅರಸರ ನಡುವೆ ಏರ್ಪಟ್ಟ ಒಪ್ಪಂದದ ಪ್ರಕಾರ ರಾಜನು ಪೋರ್ಚುಗೀಸರಿಗೆ ಹೊನ್ನಾವರ, ಮಂಗಳೂರು ಮತ್ತು ಬಾರ್ಸಿಲೋರ್‌ಗಳಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಲು ಅನುಮತಿ ನೀಡಬೇಕು. ಹೀಗೆ ನಿರ್ಮಿಸುವ ಕೈಗಾರಿಕಾ ಘಟಕದ ಸುತ್ತಲೂ ಎತ್ತರವಾದ ಕೋಟೆಯಂಥಹ ಗೋಡೆಗಳನ್ನು ನಿರ್ಮಿಸಬಾರದು ಹಾಗೂ ಎಣ್ಣೆ ತಯಾರಿಕೆಯ ಕಾರ್ಖಾನೆಗಳನ್ನು ತಯಾರಿಸಬಾರದೆಂಬ ಕೆಲವು ನಿರ್ಬಂಧಗಳನ್ನು ವಿಧಿಸಲಾಯಿತು. ಹಾಗೆಯೇ ಈ ಕಾರ್ಖಾನೆಗಳನ್ನು ತಲುಪಲು ಪೋರ್ಚುಗೀಸರ ದೋಣಿ ಅಥವಾ ಸಣ್ಣಪುಟ್ಟ ಹಡಗುಗಳು ಮುಕ್ತವಾಗಿ ಈ ಬಂದರುಗಳಿಗೆ ಬಂದು ಹೋಗಲು ಪೂರ್ವಾನುಮತಿಯನ್ನು ಸಹ ನೀಡಲಾಗಿದೆ ಎಂದು ಈ ಒಪ್ಪಂದದಲ್ಲಿ ದಾಖಲಿಸಲಾಗಿದೆ. ಈ ರೀತಿಯ ವಾಣಿಜ್ಯ ನಿರ್ಬಂಧಗಳ ಜೊತೆಗೆ ಪೋರ್ಚುಗೀಸರು ಯಾವುದೇ ಕಾರಣಕ್ಕೂ ಸ್ಥಳೀಯ ಜನತೆಯೊಂದಿಗೆ ಅನಾವಶ್ಯಕವಾದ ಸಂವಾದಗಳಲ್ಲಿ ತೊಡಗಬಾರದೆಂಬ ನಿಯಮವನ್ನೂ ವಿಧಿಸಲಾಯಿತು. ಮೇಲೆ ವರ್ಣಿಸಲಾದ ಒಪ್ಪಂದದಿಂದಾಗಿ ಬಿದನೂರಿನ ನಾಯಕರೂ ಮತ್ತು ಪೋರ್ಚುಗೀಸರ ಸಂಬಂಧಗಳು ಸೌಹಾರ್ದಯುತವಾಗಿ ಮುಂದುವರಿಯುವಂತಾಯಿತು.

ಆದರೆ, ಕ್ರಿ.ಶ. ೧೬೭೮ರಲ್ಲಿ ಸೋಮಶೇಖರ ನಾಯಕನ ನಿಧನಾನಂತರ ವಿಧವೆ ರಾಣಿಯಾದ ಚನ್ನಮ್ಮಾಜಿ (ಕ್ರಿ. ಶ. ೧೬೭೭–೧೯೯೭) ಮತ್ತು ಪೋರ್ಚುಗೀಸರ ನಡುವೆ ಮತ್ತೊಂದು ಒಪ್ಪಂದ ಮಾಡಿಕೊಳ್ಳಲಾಯಿತು. ಇದರ ಪ್ರಕಾರ ಅವರಿಗೆ ಮೀರ್‌ಜಿಯೋ (ಮೀರ್‌ಜಾನ್) ಚಂದೋರ್, ಭಟ್ಕಳ್ ಮತ್ತು ಕಲ್ಯಾಣಗಳಲ್ಲಿ ಚರ್ಚ್‌ಗಳನ್ನು ನಿರ್ಮಿಸಲು ಅನುಮತಿಯನ್ನು ಬಿದನೂರಿನ ರಾಣಿಯು ನೀಡದ್ದಳೆಂದು ದಾಖಲಿಸಲಾಗಿದೆ. ಈ ಒಪ್ಪಂದದ ಮಹತ್ತರವಾದ ಬೆಳವಣಿಗೆ ಎಂದರೇ ಪೋರ್ಚುಗೀಸರು ಅರೆಬ್ಬಿಯರನ್ನು ಭಾರತದ ಕಡಲ ತೀರದಿಂದ ಹೊಡೆದೋಡಿಸುವುದರಲ್ಲಿ ಯಶಸ್ವಿಯಾದುದೇ ಆಗಿದೆ. ಅರೆಬ್ಬಿಯನ್ನರು ಇದಕ್ಕೆ ಪ್ರತ್ಯುತ್ತರವಾಗಿ ಮಂಗಳೂರು ಮತ್ತು ಬಸರೂರು ನಗರಗಳಿಗೆ ಬೆಂಕಿ ಹಚ್ಚಿ ಶ್ರೀಮಂತವಾದ ಸಂಪತ್ತನ್ನು ಲೂಟಿ ಮಾಡಿದರು ಎಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಬಿದನೂರಿನ ಸೋಮೇಶ್ವರ ನಾಯಕನು ನಿಧನನಾದ ತಕ್ಷಣ ತುಳುವ ದೇಶದ ಸಾಮಂತ ರಾಜರುಗಳು ಬಂಡಾಯವೆದ್ದ ಕಾರಣ ರಾಣಿ ಚನ್ನಮ್ಮಾಜಿಯು ಯಶಸ್ವಿಯಾಗಿ ಸದೆಬಡೆದು, ಶಾಂತಿ ನೆಲಸುವಂತೆ ಮಾಡಿದಳು.

**ಪೋರ್ಚುಗೀಸರ ಮರುಕಳಿಸಿದ ದಾಳಿಗಳು**

ರಾಣಿ ಚೆನ್ನಮ್ಮಾಜಿಯ ನಂತರ ಮೊದಲನೇ ಬಸವಪ್ಪ ನಾಯಕನು (ಕ್ರಿ. ಶ. ೧೯೯೭–೧೭೧೪) ಸಿಂಹಾಸನವನ್ನೇರಿದ ಮೇಲೆ ಬಿದನೂರು ಮತ್ತು ಪೋರ್ಚುಗೀಸರ ನಡುವಣ  ಸಂಬಂಧಗಳೂ ಪುನಃ ಹದಗೆಟ್ಟಿತು. ಅರೆಬ್ಬಿಯನ್ನರ ಮತ್ತು ಪೋರ್ಚುಗೀಸರ ನಡುವೆ ಪ್ರಾರಂಭದಿಂದಲೂ ಉದ್ಭವಿಸಿದ್ದ ವಾಣಿಜ್ಯ ಹಾಗೂ ವ್ಯಾಪಾರ ಕಲಹಗಳು ಈ ಸಂದರ್ಭದಲ್ಲಿ ಜಟಿಲಗೊಂಡವು. ಈ ಕಾರಣಗಳಿಂದಾಗಿ ಪೋರ್ಚುಗೀಸರು ಮತ್ತು ಬಿದನೂರಿನ ಸೇನೆಗಳು ಕ್ರಿ. ಶ. ೧೭೦೪–೧೭೦೭ರ ನಡುವೆ ಹಲವಾರು ಸೆಣಸಾಟಗಳು ನಿರಂತರವಾಗಿ ನಡೆಯುತ್ತಿದ್ದವು. ಅಂತಿಮವಾಗಿ ಕ್ರಿ. ಶ. ೧೭೧೩–೧೪ರಲ್ಲಿ ದೀರ್ಘ ಪ್ರಮಾಣದ ಯುದ್ಧ ನಡೆದು ಗೋವೆಯಿಂದ ಬಂದಿದ್ದ ಪ್ರಬಲ ನೌಕಾಪಡೆಯೊಂದರ ಪರಾಕ್ರಮಿ ಮುಖಂಡನೊಬ್ಬನು ಬಸರೂರು ಮತ್ತು ಕಲ್ಲಿನಾಪುರ ಬಂದರುಗಳ ಮೇಲೆ ಆಕ್ರಮಣ ಮಾಡಿ ಬಿದನೂರಿನ

ಹಲವಾರು ವ್ಯಾಪಾರಿ ಹಡಗುಗಳನ್ನು ನಾಶಗೊಳಿಸಿದನು. ಇವುಗಳ ಜೊತೆಗೆ ಮಂಗಳೂರು, ಕುಮಟಾ, ಗೋಕರ್ಣ ಮತ್ತು ಮಿರ್‌ಜಿಯೋ (ಮೀರ್‌ಜಾನ್) ಬಂದರುಗಳ ಮೇಲೂ ಆಕ್ರಮಣ ಮಾಡಲಾಗಿತ್ತು. ಕೊನೆಗೆ ಬಿದನೂರಿನ ನಾಯಕನು ಕ್ರಿ. ಶ. ೧೭೧೪ರಲ್ಲಿ ಪೋರ್ಚುಗೀಸರೊಂದಿಗೆ ಒಪ್ಪಂದ ಮಾಡಿಕೊಂಡನು, ಇದರ ಪ್ರಕಾರ ಇನ್ನು ಮುಂದೆ ಅರಬ್ಬರ ಹಡಗುಗಳು ಕೆನರಾದ ಕಡಲಿಗೆ ಪ್ರವೇಶಿಸದಿರುವಂತೆ ನಿರ್ಬಂಧವನ್ನು ಹೇರಲಾಯಿತು. ತರುವಾಯ ಅಧಿಕಾರಕ್ಕೆ ಬಂದ ಎರಡನೇ ಸೋಮಶೇಖರ ನಾಯಕನ (ಕ್ರಿ. ಶ. ೧೭೧೪–೧೭೩೯) ಕಾಲದಲ್ಲಿ ನೀಲೇಶ್ವರದ ರಾಜನು ಸುಮಾರು ೧೨ ವರ್ಷಗಳ ಸೆಣಸಾಟದ ಪರಿಣಾಮವಾಗಿ ಕೆಳದಿ ಆಡಳಿತಕ್ಕೆ ಶರಣಾಗತನಾದನು. ಈ ಯಶಸ್ಸಿನಲ್ಲಿ ಆಂಗ್ಲರು ಮತ್ತು ಫ್ರೆಂಚರು ಪ್ರಮುಖ ಪಾತ್ರವಹಿಸಿದ್ದರೆಂಬುದು ಹಲವು ವಿದ್ವಾಂಸರ ಅಭಿಪ್ರಾಯವಾಗಿದೆ.

ಬಿದನೂರಿನ ಅರಸು ಎರಡನೇ ಬಸವಪ್ಪ ನಾಯಕನು ಕ್ರಿ. ಶ. ೧೭೩೯ ರಿಂದ ೧೭೫೪ರ ವರೆಗೆ ಪ್ರಬಲನಾಗಿ ಆಳ್ವಿಕೆ ಮಾಡಿದನು. ಮಲ್ಪೆಯ ಸಮೀಪದ ದರಿಯಾಬಾದ್‌ಗಡ ಮತ್ತು ಕಾಪುವಿನ ಮನೋಹರಗಡ, ಮಲ್ಲೂರು, ತೋಣಸೆ ಮತ್ತು ಕುಂದಾಪುರಗಳ ಕೋಟೆಗಳು ಹಾಗೂ ಬೆಣ್ಣೆಗೆರೆಯ ಅರಮನೆಗಳನ್ನು ಈ ಅರಸನೇ ನಿರ್ಮಿಸಿದನೆಂದು ಪ್ರತೀತಿಯಿದೆ. ಈತನ ತರುವಾಯ ಬಿದನೂರಿನ ರಾಣಿ ವೀರಮ್ಮಾಜಿಯು ಆಡಳಿತವನ್ನು ಉಸ್ತುವಾರಿ ಮಾಡುತ್ತಿದ್ದ ಸಮಯದಲ್ಲಿ ಕಣ್ಣಾನೂರಿನ ಅಲಿ ರಾಜನು ಮರಾಠಿ ಅನುಯಾಯಿಗಳು ಕೈ ಜೋಡಿಸಿ ತುಳುನಾಡಿನ ಕರಾವಳಿಯನ್ನು ಆಕ್ರಮಣ ಮಾಡಲು ಆರಂಭಿಸಿದರು. ಈ ದಾಳಿಗಳಿಗೆ ಮಂಜೇಶ್ವರ ಮತ್ತು ಕೊಲ್ಲೂರಿನ ಉತ್ತರ ಭಾಗಗಳು ತುತ್ತಾಗಿ ಅಲ್ಲಿಯ ಶ್ರೀಮಂತ ವ್ಯಾಪಾರಿ ಕೇಂದ್ರಗಳನ್ನು ಲೂಟಿ ಮಾಡಲಾಯಿತು. ಕೊಲ್ಲೂರಿನ ಮೂಕಾಂಬಿಕಾ ದೇವಾಲಯದ ಮೇಲೂ ದಾಳಿ ಮಾಡಿ ದೇವಿಯ ಒಡವೆಗಳನ್ನು ಲೂಟಿ ಮಾಡಲಾಯಿತು. ಈ ರೀತಿಯ ಯೋಜಿತ ದಾಳಿಗಳಿಗೆ ಮಣಿದು ಬಿದನೂರಿನ ವೀರಮ್ಮಾಜಿಯು ತನ್ನ ಸಂಪೂರ್ಣ ಅಧಿಕಾರವನ್ನೂ ಕಳೆದುಕೊಂಡಳೆಂದು ಪ್ರತೀತಿಯಿದೆ. ಬಿದನೂರಿನ ಆಂತರಿಕ ವೈಷಮ್ಯಗಳನ್ನು ಉಪಯೋಗಿಸಿಕೊಂಡು ಶ್ರೀರಂಗಪಟ್ಟಣದಲ್ಲಿ ಸಿಂಹಾಸನವನ್ನೇರಿದ್ದ ಹೈದರಾಲಿಯು ಕ್ರಿ. ಶ. ೧೭೬೩ ರಲ್ಲಿ ಬಿದನೂರನ್ನು ತನ್ನ ಆಡಳಿತದ ವ್ಯಾಪ್ತಿಗೆ ಒಳಪಡಿಸಿಕೊಂಡನು.

ಅನಂತರ ಕೆನರಾದ ಕರಾವಳಿಯ ಹಲವು ಕೇಂದ್ರಗಳಿಗೆ ಕ್ರಿ. ಶ. ೧೬೭೩ರಲ್ಲಿ ಭೇಟಿಕೊಟ್ಟ ಡಾ.ಫ್ರೈಯರ್ ಎಂಬ ಆಂಗ್ಲ ಯಾತ್ರಿಕನು ತನ್ನ ದೀರ್ಘವಾದ ವರದಿಯಲ್ಲಿ ಹಲವಾರು ಕುತೂಹಲಕಾರಿ ವಿಷಯಗಳನ್ನು ದಾಖಲಿಸಿರುವನು. ಈತನ ಪ್ರಕಾರ "ಈ ಪ್ರದೇಶದಲ್ಲಿ ಕ್ರೈಸ್ತಧರ್ಮಕ್ಕೆ ಅಸಂಖ್ಯಾತ ಹಿಂದೂಗಳನ್ನು ಪರಿವರ್ತಿಸಿದ್ದರೂ ಅಷ್ಟೇ ಪ್ರಮಾಣದ ಜನರು ತಮ್ಮ ಅಚಲ ಮನಸ್ಸಿನಿಂದ ಪರಿವರ್ತಿತರಾಗದೇ ಉಳಿದಿರುವುದು ತನ್ನ ಗಮನಕ್ಕೆ ಬಂದಿದೆ" ಎಂದು ತಿಳಿಸುತ್ತಾನೆ. ಆತನ ವರದಿಯಿಂದ, ಈ ಭಾಗದಲ್ಲಿ ಭೂತಾರಾಧನೆಯು ಒಂದು ಪ್ರಮುಖ ಆರಾಧನಾ ವಿಧಾನವಾಗಿತ್ತೆಂದು ವೇದ್ಯವಾಗುತ್ತದೆ. ಕಡಲ ಜಿಲ್ಲೆಯಾದ ಅಂದಿನ ಕೆನರಾದಲ್ಲಿ ಅಚ್ಚುಕಟ್ಟಾದ ಕಾನೂನು ಮತ್ತು ಜೀವನ ಕ್ರಮಗಳು ಬಲವಾಗಿ ರೂಢಿಯಲ್ಲಿತ್ತೆಂದು ಈತನ ವರದಿಯಿಂದ ತಿಳಿದುಬರುತ್ತದೆ. ಇಲ್ಲಿಯ ಸಾಮಾನ್ಯ ಜನರು ಶಾಂತಿಪ್ರಿಯರಾಗಿದ್ದರು ಹಾಗೂ ಶಿಸ್ತುಬದ್ಧ ಜೀವನಕ್ಕೆ ಜನಪ್ರಿಯರಾಗಿದ್ದರೆಂದು ಈತನೇ ತಿಳಿಸಿರುವನು. ಕೆನರಾದಿಂದ ಈತನು ಮಲಬಾರಿಗೆ ಪಯಣಿಸಿದಾಗ ಉತ್ತಮ ರಸ್ತೆಗಳನ್ನು ಗುರುತಿಸಿರುವನು. ಈಗಾಗಲೇ ಚರ್ಚಿಸಿದಂತೆ ಪಿಯಾತ್ರೋ ಡೆಲ್ಲವೆಲ್ಲಿ ಸಹ ದಕ್ಷಿಣ ಕನ್ನಡ ಜಿಲ್ಲೆಯ ಅಗಲವಾದ ಹಾಗೂ ನೇರವಾದ ರಸ್ತೆಗಳ ಬಗ್ಗೆ ಇದೇ ರೀತಿ ಉತ್ತಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವನು.

## ಇತರೆ ಸಣ್ಣಪುಟ್ಟ ಪಾಳೆಯಪಟ್ಟುಗಳು

ಆಳುಪರು, ವಿಜಯನಗರದ ಅರಸರು, ಕೆಳದಿ, ಇಕ್ಕೇರಿ ಮತ್ತು ಬಿದನೂರಿನ ನಾಯಕರು ಮೊದಲಾದ ಪ್ರಮುಖ ರಾಜವಂಶಗಳಲ್ಲದೇ ತುಳು ದೇಶವನ್ನಾಳಿದ ಕೆಲವು ಸಣ್ಣಪುಟ್ಟ ಆಡಳಿತ ವಂಶಗಳ ಬಗ್ಗೆ ಈಗಾಗಲೇ ಚರ್ಚಿಸಲಾಗಿದೆ. ಆದರೇ, ದಕ್ಷಿಣ ಕನ್ನಡವು ಮುಖ್ಯವಾಗಿ ಕರಾವಳಿಯ ಜಿಲ್ಲೆಯಾಗಿದ್ದರೂ ಐತಿಹಾಸಿಕವಾಗಿ ವೀರಾವೇಶಕ್ಕೆ ಹಾಗೂ ಸ್ವತಂತ್ರ ಪ್ರವೃತ್ತಿಯ ಪಾಳೆಯಗಾರರು ಅಥವಾ ರಾಜವಂಶಗಳ ಚಟುವಟಿಕೆಯ ಕೇಂದ್ರವಾಗಿದ್ದುದು ಕುತೂಹಲಕಾರಿಯಾದ ಅಂಶವಾಗಿದೆ. ಇವರುಗಳ ಪೈಕಿ ಪರಾಕ್ರಮಶಾಲಿಗಳಾಗಿ ಹಾಗೂ ಉನ್ನತ ಸ್ಥಾನ ಪಡೆದವರಲ್ಲಿ ಕಾರ್ಕಳದ ಭೈರರಸರು ಪ್ರಮುಖರಾಗಿರುವರು. ಇವರಲ್ಲದೇ ಮೂಡಬಿದಿರೆ, ಮುಲ್ಕಿ, ಹೊಸ ಅಂಗಡಿ, ವೇಣೂರು, ಸೂರಾಲು ಮೊದಲಾದ ಕಡೆ ಬಲ್ಲಾಳ, ಚೌಟ, ಸಾಮಂತ, ಅಜಿಲ, ಮೂಲಾ, ತೋಳಹಾರ, ಹೊನ್ನಕಂಬಳಿ, ವಿಠಲಾ, ಕುಂಬಳ ಮೊದಲಾದ ಸಣ್ಣಪುಟ್ಟ ಆಡಳಿತ ವಂಶಗಳಿದ್ದವು.

## ಭೈರರಸರು

ಇವರು ಮೂಲತಃ ಶಿವಮೊಗ್ಗಾ ಜಿಲ್ಲೆಯ ಹುಮಚಾದಿಂದ ಬಂದವರಾಗಿದ್ದು, ಭೈರರಸರೆಂದು ಕರೆಯಲ್ಪಟ್ಟು ತುಳುನಾಡಿನ ಕಾರ್ಕಳದ ಪಾಳೆಯಗಾರರಾಗಿದ್ದರು. ಪ್ರಮುಖವಾಗಿ ಇವರು ಶಾಂತಾರ ಮೂಲದ ಉಪ್ರವಂಶದವರೆಂದೂ ಕರೆದುಕೊಂಡಿರುವರು. ಭೈರರಸರು ಕ್ರಿ.ಶ.೧೪ನೇ ಶತಮಾನದ ನಂತರ ತುಳುನಾಡನ್ನು ಆಳ್ವಿಕೆ ಮಾಡುತ್ತಿದ್ದರೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಇದಕ್ಕೆ ಮೊದಲು ಅವರು ಚಿಕ್ಕಮಗಳೂರು ಜಿಲ್ಲೆಯ ಕಳಸಾದಲ್ಲಿ ಆಳ್ವಿಕೆ ಮಾಡುತ್ತಿದ್ದರು. ಇವರು ತುಳುವ ನಾಡಿನಲ್ಲಿ ತಮ್ಮ ಆಳ್ವಿಕೆಯನ್ನು ಕಾರ್ಕಳ ತಾಲೂಕಿನ ಕೆರ್ವಾಸೆ ಎಂಬ ಸ್ಥಳದಲ್ಲಿ ಆರಂಭಿಸಿದರೆಂದು ಪ್ರತೀತಿಯಿದೆ. ಕ್ರಿ.ಶ.೧೪೦೮ರ ಒಂದು ಶಾಸನದಲ್ಲಿ ವೀರಪಾಂಡ್ಯದೇವನನ್ನು 'ವೀರಭೈರವ ಕ್ಷೇಮಪಾಲ'ನು ಉತ್ತರಾಧಿಕಾರಿಯೇ ಎಂದು ದಾಖಲಿಸಲಾಗಿದೆ. ವೀರಭೈರವರಸನ ಆಳ್ವಿಕೆಯ ಕಾಲದಲ್ಲಿ ಅಂದರೇ ಕ್ರಿ.ಶ.೧೪೩೨ರಲ್ಲಿ ಕಾರ್ಕಳದಲ್ಲಿ ಗೊಮ್ಮಟೇಶ್ವರನ ಏಕಶಿಲಾ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ಅನಂತರ ಕ್ರಿ.ಶ.೧೫೦೧ರಲ್ಲಿ ಇಮ್ಮಡಿ ಭೈರರಸ ಒಡೆಯನು ಕಳಸ ಮತ್ತು ಕಾರ್ಕಳ ರಾಜ್ಯಗಳನ್ನು ಆಳ್ವಿಕೆ ಮಾಡುತ್ತಿದ್ದನೆಂದು ಶಾಸನದಿಂದ ತಿಳಿದುಬರುತ್ತದೆ. ಕಾರ್ಕಳದ ಚತುರ್ಮುಖ ಬಸದಿಯ ಪಡುವಣ ಗೋಡೆಗೆ ನಿರ್ಮಿಸಲಾಗಿರುವ ಇಮ್ಮಡಿ ಭೈರರಸನ ಕ್ರಿ.ಶ.೧೫೮೬ರ ಶಾಸನವು ೬೬ ಮಾಂಡಲಿಕರ ಗಂಡ ಹೊನ್ನಾಂಬಿಕಳ ಮೊಮ್ಮಗನಾದ ಕಳಸ–ಕಾರ್ಕಳ ರಾಜ್ಯದ ಅರಸು ಇಮ್ಮಡಿ ಭೈರರಸನು ಕಾರ್ಕಳದ ಪಾಂಡ್ಯನಗರಿಯ ಶ್ರೀ ಗೊಮ್ಮಟೇಶ್ವರನ ಸನ್ನಿಧಾನದಲ್ಲಿ ಕೈಲಾಸಗಿರಿಯ ಚಿಕ್ಕಬೆಟ್ಟದಲ್ಲಿ ದೇಶಿಗಣ ಪನಸೋಗೆ ಬಳ್ಳಿಯ ಲಲಿತ ಕೀರ್ತಿಯವರ ಉಪದೇಶದಂತೆ ನೀಡಿದ ಹಲವಾರು ದಾನಗಳನ್ನು ಉಲ್ಲೇಖಿಸುತ್ತದೆ. ಈತನ ತರುವಾಯ ವೀರಭೈರರಸ ಒಡೆಯರ್ ಅಥವಾ ವೀರಪಾಂಡ್ಯ ಒಡೆಯ(ಕ್ರಿ.ಶ.೧೫೩೧–೧೫೬೫)ಅಧಿಕಾರಕ್ಕೆ ಬಂದನು. ವೀರಭೈರರಸನ ನಂತರ ಅಧಿಕಾರಕ್ಕೆ ಬಂದ ಭೈರವನು ಕ್ರಿ.ಶ.೧೫೮೬ರಲ್ಲಿ ಕಾರ್ಕಳದಲ್ಲಿ ಚತುರ್ಮುಖ ಬಸದಿಯನ್ನು ನಿರ್ಮಿಸಿದನು. ಈ ಬಸದಿಯು ಆಕರ್ಷಕ ವಿನ್ಯಾಸವನ್ನು ಹೊಂದಿದ್ದು ವಾರ್ಷಿಕವಾಗಿ ಸಹಸ್ರಾರು ಜನ ಯಾತ್ರಿಕರನ್ನು ಆಹ್ವಾನಿಸುತ್ತಿದೆ. ಅನಂತರ ಕೆಳದಿಯ ವೆಂಕಟಪ್ಪ ನಾಯಕನು ಕಾರ್ಕಳದ ಭೈರರಸ ವಂಶದ ಕೊನೆಯ ಆಡಳಿತಗಾರರನ್ನು ಪರಾಭವಗೊಳಿಸಿ ತನ್ನ ವಶಕ್ಕೆ ತೆಗೆದುಕೊಂಡನು. ಬಹುಶ: ಭೈರರಸ ವಂಶದ ಆಳ್ವಿಕೆಯು ಕೆಳದಿಯ ಶಿವಪ್ಪನಾಯಕನ ಆಳ್ವಿಕೆಯ ಅವಧಿಯಲ್ಲಿ ಸಂಪೂರ್ಣವಾಗಿ ಅಂತ್ಯಗೊಂಡಿತೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ.

## ಚೌಟರಸರು

ಚೌಟರು, ಆರಂಭದಲ್ಲಿ ಮೂಡಬಿದಿರೆಯ ಹತ್ತಿರದ ಪುತ್ತಿಗೆಯಲ್ಲಿ ಅರಮನೆಯನ್ನು ನಿರ್ಮಿಸಿ ಆಡಳಿತ ನಡೆಸುತ್ತಿದ್ದರು. ಮುಂದೆ ಆ ಅರಮನೆಯು ಅಗ್ನಿಯಿಂದಾಗಿ ನಾಶಹೊಂದಿದಾಗ, ಅವರು ಸಮೀಪದ ಮೂಡಬಿದಿರೆ ಪೇಟೆಯಲ್ಲಿ ಹೊಸದಾಗಿ ಅರಮನೆ ಕಟ್ಟಿ ಆಡಳಿತ ಮುಂದುವರಿಸಿ ೧೩೯೦ರ ವೇಳೆಗೆ ಪ್ರಬಲಗೊಂಡರು. ದಾಖಲೆಯ ಪ್ರಕಾರ ಕ್ರಿ.ಶ.೧೪೩೮ರಲ್ಲಿ ವಿಜಯನಗರದ ರಾಜ್ಯಪಾಲನೊಬ್ಬನು ಚೌಟ ವಂಶದ ಪಾಳೆಯಗಾರನೊಬ್ಬನನ್ನು ಪರಾಭವಗೊಳಿಸಿದನೆಂಬ ಅಂಶ ತಿಳಿದು ಬರುತ್ತದೆ. ಈ ವಂಶದ ಅರಸನಾಗಿದ್ದ ಚನ್ನರಾಯನು (ಕ್ರಿ.ಶ.೧೪೧೧) ಚೌಟ ಸಾಮ್ರಾಜ್ಯದ ಎಲ್ಲೆಗಳನ್ನು ಮಣೇಲ, ಪೇಜಾವರ ಮತ್ತು ಮುಂಡಕೂರನ್ನು ಬಂಗರಾಜನಿಂದ ವಶಪಡಿಸಿಕೊಂಡು ವಿಸ್ತರಿಸಿದನೆಂದು ಪ್ರತೀತಿಯಿದೆ. ಇವರು ಪುತ್ತಿಗೆಯ ಜೊತೆಗೆ ಮೂಡಬಿದಿರೆ ಪ್ರದೇಶವನ್ನೂ ಆಳುತ್ತಿದ್ದರೆಂದು ಪ್ರತೀತಿಯಿದೆ. ಆದರೇ, ಚೌಟರಸರು ದಕ್ಷಿಣ ಕನ್ನಡ ಜಿಲ್ಲೆಯ ಸಾಂಪ್ರದಾಯಿಕ ನಂಬಿಕೆಯ ಪ್ರಕಾರ ಆರಂಭದಲ್ಲಿ ಉಳ್ಳಾಲ ಮತ್ತು ಮಂಗಳೂರು ತಾಲೂಕುಗಳಲ್ಲಿ ಇವರು ಆಡಳಿತದ ಹತೋಟಿಯನ್ನು ಹೊಂದಿದ್ದರೆಂದು ತಿಳಿದುಬಂದರೂ ಇದಕ್ಕೆ ಯಾವುದೇ ಆಧಾರಗಳಿಲ್ಲ. ಇವರ ವಂಶಾವಳಿಯನ್ನು ರಚಿಸಿರುವ ಲೋಕನಾಥ ಶಾಸ್ತ್ರಿಯವರ ಪ್ರಕಾರ ತಿರುಮಲರಾಯ ಚೌಟ (ಕ್ರಿ.ಶ.೧೧೬೦–೧೧೭೯)ವಂಶದ ಮೂಲ ಅರಸನೆಂದು ತಿಳಿದುಬರುತ್ತದೆ. ಇದೇ ರೀತಿ ಗಣಪತಿರಾವ್ ಐಗಳ್ ಅವರೂ ಸಹ ತಮ್ಮ 'ಇತಿಹಾಸ' ಗ್ರಂಥದಲ್ಲಿ ಇದೇ ಅಭಿಪ್ರಾಯವನ್ನು ತಿಳಿಸಿದರೂ, ಚೌಟರಸರ ಬಗ್ಗೆ ಲಭ್ಯವಿರುವ ಶಾಸನಗಳು ನಂತರದ ಕಾಲದ್ದಾಗಿವೆ. ಜಿಲ್ಲೆಗೆ ಗಡಿಯಾಗಿರುವ ಕೊಡಗು ಜಿಲ್ಲೆಯ ಜಿಲ್ಲಾ ಕೇಂದ್ರ ಮಡಿಕೇರಿಯ ವೆಂಗುಲು ಗ್ರಾಮದ ಕ್ರಿ.ಶ.೧೨೬೪ರ ಶಾಸನವು ಮಹಾಮಂಡಲೇಶ್ವರ ವೀರ ಮುನಿವರಾದಿತ್ಯ ಗೋಕುಲರಸನು ಸತ್ಯರಾಯನನ್ನು ಬೆಂಬಲಿಸಿದ್ದಕ್ಕಾಗಿ 'ಚೌಟು' ಅರಸನನ್ನು ಸದೆಬಡಿದನೆಂದು ಉಲ್ಲೇಖಿಸುತ್ತದೆ. 'ಚೌಟು' ಎಂಬ ಪದದ ಉಲ್ಲೇಖ ಒಂದು ಬಿಟ್ಟರೇ ಈ ವಂಶದ ಇತಿಹಾಸದ ಬಗ್ಗೆ ಯಾವುದೇ ವಿಚಾರವೂ ಈ ಶಾಸನದಿಂದ ವ್ಯಕ್ತವಾಗುವುದಿಲ್ಲ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಕ್ರಿ.ಶ.೧೪೦೮ರ ಶಾಸನವು ಚೌಡರಸನ ಮಗ ನಾಗರ್ಣ ಮತ್ತು 'ಚೌಟರಸನ' ಮಗ ಕೇಶವರಸರುಗಳಿಗೆ ನೀಡಿದ ಹಲವು ದಾನ–ದತ್ತಿಗಳ ಬಗ್ಗೆ ದಾಖಲಿಸುತ್ತದೆ. ಇವರಿಬ್ಬರೂ ಭಾರದ್ವಾಜ ಗೋತ್ರದ ಬ್ರಾಹ್ಮಣರೆಂದೂ ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಇದೇ ರೀತಿ ಪುತ್ತೂರಿನ ಕ್ರಿ.ಶ.೧೪೩೧ ರ ಶಾಸನವು ಚೌಟರಸ ಸಾಂತೇಯನು ನೀಡಿದ ಸ್ವರ್ಣ ಕೊಡುಗೆಯನ್ನು ದಾಖಲಿಸುತ್ತದೆ. ಇದರಿಂದ ಸಾಂತೇಯನು

ಆಗ ಚೌಟ ವಂಶದ ಒಬ್ಬ ರಾಜನೆಂದು ಗುರುತಿಸಬಹುದಾಗಿದೆ. ಮಂಗಳೂರು ತಾಲೂಕಿನ ಅಡ್ಡೂರಿನ ಕ್ರಿ.ಶ.೧೪೩೪ರ ಶಾಸನವು ಚೌಟರಸ ಜೋಗಿ ಒಡೆಯನು 'ಜಗಾದಿ ಕುಂಡಲ'ನೆಂದು ಕರೆಯಲಾಗುತ್ತಿದ್ದ ಜೋಗಿ ಪುರುಷನಿಗೆ ನೀಡಿದ ಭೂಮಿಯ ದಾನದ ಬಗ್ಗೆ ದಾಖಲಿಸುತ್ತದೆ. ಕ್ರಿ.ಶ.೧೪೬೫ರಲ್ಲಿ ಅಲ್ಲಪ್ಪಶೇಖನೆಂಬ ಚೌಟ ಅರಸನು "ಪುತ್ತಿಗೆಯ ಜನನದೊಳು ಬಾಳುವ" ಎಂದು ಉಲ್ಲೇಖಿಸುತ್ತಾ ಪುತ್ತಿಗೆಯಿಂದ ಆಳುತ್ತಿದ್ದನೆಂದೂ ಹಾಗೂ ಪೊಳಲಿ ದೇವಾಲಯಕ್ಕೆ ಹಲವು ದಾನಗಳನ್ನು ನೀಡಿದ ಬಗ್ಗೆ ದಾಖಲಿಸುತ್ತದೆ. ಇದೇ ಶಾಸನದಲ್ಲಿ ದೇವರು ಶೇಖಾಬಿಮ್ಮಣ್ಣ ಶೇಖಾ ಮತ್ತು ಬೊಮ್ಮಣ್ಣ ಶೇಖಾ ಎಂಬ ಆತನ ಮೂವರ ತಮ್ಮಂದಿರುಗಳ ಬಗ್ಗೆ ಉಲ್ಲೇಖವಿದೆ. ಗಣಪತಿ ಐಗಳವರು ಮೂರನೇ ತಿರುಮಲರಾಯ ಚೌಟನು ಕ್ರಿ.ಶ.೧೫೦೭ರಲ್ಲೆ ಪೊಳಲಿ ದೇವಾಲಯಕ್ಕೆ ನೀಡಿದ ಹಲವು ದಾನಗಳನ್ನು ನೀಡಿದ ಬಗ್ಗೆ ಶಾಸನದಿಂದ ಸ್ಪಷ್ಟವಾಗುತ್ತದೆಂದು ಅಭಿಪ್ರಾಯಪಡುತ್ತಾರೆ. ಬಹುಶ: ಮೂರನೇ ತಿರುಮಲರಾಯ ಚೌಟನು ಕ್ರಿ.ಶ.೧೫೦೦ರಲ್ಲಿ ಅಧಿಕಾರಕ್ಕೆ ಬಂದನೆಂದು ಡಾ॥ ಪಿ.ಗುರುರಾಜಭಟ್ ಅವರು ಅಭಿಪ್ರಾಯಪಡುತ್ತಾರೆ. ವಿಜಯನಗರದಲ್ಲಿಯ ದಾಖಲೆಗಳ ಪ್ರಕಾರ ಈತನು ಕೃಷ್ಣದೇವರಾಯನ ಆಸ್ಥಾನಕ್ಕೆ ಭೇಟಿಕೊಟ್ಟಿದ್ದು ಮಾತ್ರವಲ್ಲದೇ ಆತನ ಗೌರವಕ್ಕೆ ಪಾತ್ರನಾದನೆಂದು ವ್ಯಕ್ತವಾಗುತ್ತದೆ. ಉಳ್ಳಾಲದ ರಾಣಿ ಎರಡನೇ ಅಬ್ಬಕ್ಕ ದೇವಿಯು (೧೫೪೪) ಚೌಟ ವಂಶದ ಮೂಲದವಳೆಂದು ಆಕೆಯ ಶಾಸನಗಳಿಂದ ವ್ಯಕ್ತವಾಗುತ್ತದೆ. ಇದೇ ವಂಶದ ಇನ್ನೊಬ್ಬ ಜನಪ್ರಿಯ ರಾಣಿ ಎಂದರೇ ಪುತ್ತಿಗೆಯನ್ನಾಳಿದ (೧೫೪೪) ಲೋಕಾದೇವಿ ಎಂದು ತಿಳಿದುಬರುತ್ತದೆ. ಬಹುಶ: ಈ ಇಬ್ಬರೂ ರಾಣಿಯರು ಸಮಕಾಲೀನವಾಗಿ ಆಳ್ವಿಕೆ ಮಾಡಿದರು. ಆದರೇ, ರಾಣಿ ಅಬ್ಬಕ್ಕ ದೇವಿಯು ಪೋರ್ಚುಗೀಸರೊಡನೆ ನಿರಂತರವಾಗಿ ಹೋರಾಟ ಮಾಡಿ ತನ್ನ ಹುಟ್ಟು ದೇಶಪ್ರೇಮದಿಂದಾಗಿ ಅಪ್ರತಿಮ ಪರಾಕ್ರಮಿಯೆಂದು ಇಟಲಿಯ ವಿದೇಶಿ ಯಾತ್ರಿಕ ಪಿಯತ್ರೋ ಡೆಲ್ಲಾವೆಲ್ಲಿಯಿಂದ ದಾಖಲಿಸಲ್ಪಟ್ಟಿರುವಳು. ಪ್ರಸಿದ್ಧ ಇತಿಹಾಸಕಾರ ಫಾರಿಯಾ ವೈ ಸೌಜಾ ಅವರು ದಾಖಲಿಸಿರುವಂತೆ ಡೋನ್ ಅಳ್‌ವರೋ–ಡೆ–ಸಿಲ್‌ವೇರಿಯಾ ಎಂಬ ಪೋರ್ಚುಗೀಸ್ ಸೇನಾಧಿಕಾರಿಯು ಕ್ರಿ.ಶ.೧೫೬೮ರಲ್ಲಿ ಮಂಗಳೂರನ್ನು ಲೂಟಿ ಮಾಡಿ (ಉಳ್ಳಾಲದ ರಾಣಿಯ ಹತೋಟಿಯಲ್ಲಿತ್ತು) ತಾನು ರಾಣಿಯಿಂದ ವಸೂಲು ಮಾಡಿದ ಕಪ್ಪಕಾಣಿಕೆಯ ಬಗ್ಗೆ ಉಲ್ಲೇಖಿಸುತ್ತಾ ಅವಳ ಹೆಸರನ್ನು 'ಬುಕಾ ದೇವಿ ಚವುಟಾ'ಎಂದು ಹೆಸರಿಸಿರುವುದು ರಾಣಿ ಅಬ್ಬಕ್ಕದೇವಿಯ ಚೌಟ ಮೂಲದವಳೆಂದು ವಾದಕ್ಕೆ ಖಚಿತವಾದ ಪುಷ್ಠಿ ದೊರೆಯುತ್ತದೆ. ಹೀಗಾಗಿ ಚೌಟರಸರ ಆಡಳಿತದ ಐತಿಹಾಸಿಕ ಘಟನೆಗಳಿಗೂ ಉಳ್ಳಾಲದ ರಾಣಿ ಅಬ್ಬಕ್ಕಳ ಸಾಧನೆಗಳಿಗೂ ನಿಕಟವಾದ ವಿಚಾರಗಳು ಸಂಶೋಧಕರಿಗೆ ವೇದ್ಯವಾಗುತ್ತದೆ.

## ಮುಲ್ಕಿಯ ಸಾವಂತರು

ತುಳುವ ನಾಡಿನ ಹಲವಾರು ಮಾಂಡಲಿಕರ ಬಗ್ಗೆ ಪರಾಮರ್ಶಿಸುವುದು ಅತ್ಯಂತ ಕುತೂಹಲಕಾರಿ ಅಧ್ಯಯನವಾಗಿರುತ್ತದೆ. ಮಂಗಳೂರು ತಾಲೂಕಿನ ಮುಲ್ಕಿಯ ಸಾವಂತರು, ದಕ್ಷಿಣ ಕನ್ನಡ ಜಿಲ್ಲೆಯ ಮತ್ತೊರ್ವ ಪಾಳೆಯಗಾರರಾಗಿದ್ದರು. ಆರಂಭದಲ್ಲಿ ಮುಲ್ಕಿಯ ಸಮೀಪದ ಸೀಮಂತೂರಿನಿಂದ ಆಳ್ವಿಕೆಯ ಮಾಡಿದ ಕಾರಣ ಇವರಿಗೆ 'ಸಾವಂತರು' ಎಂಬ ಅನ್ವರ್ಥನಾಮ ರೂಢಿಗೆ ಬಂದಿದೆ ಎಂಬ ವಾದವೂ ಇದೆ. ಗಣಪತಿರಾವ್ ಐಗಳವರ ಪ್ರಕಾರ ಸಾವಂತರು ಮೂಲತ: ಜೈನ ಧರ್ಮೀಯರಾಗಿದ್ದು ಪಟ್ಟಿ ಪೊಂಬುಚ್ಚದ ಜಿನದತ್ತನ ಅನುಯಾಯಿಗಳಾಗಿದ್ದರೆಂದು ತಿಳಿದುಬರುತ್ತದೆ. ಪ್ರಸಿದ್ಧ ಪುರಾತತ್ವಜ್ಞ ಆರ್.ನರಸಿಂಹಾಚಾರ್ ಅವರ ಪ್ರಕಾರ "ಸಾವಂತರು ಒಂದು ಅರಸು ಮನೆತನವಾಗಿತ್ತೆಂಬುದು ಅನುಮಾನ. ಏಕೆಂದರೇ, ಅವರ ವಂಶಾವಳಿಯಲ್ಲಿ ಬರುವ ಅರಸರಾದ ತಿರುಮಲ ಮತ್ತು ಚನ್ನಮ್ಮ ಪುತ್ತಿಗೆ ಹಾಗೂ ಮೂಡಬಿದಿರೆಯ ಚೌಟರಸರ ಮನೆತನದಲ್ಲಿ ಕಂಡುಬರುವ ಹೆಸರುಗಳಾಗಿದ್ದು ಇವರಿಗೂ ಮುಲ್ಕಿಯ ಅರಸು ಮನೆತನಕ್ಕೂ ಯಾವುದೇ ಹೋಲಿಕೆ ಇರುವುದಿಲ್ಲವೆಂದು ಸ್ಪಷ್ಟವಾಗುತ್ತದೆ". ಎಂಬ ಈ ಅಭಿಪ್ರಾಯಕ್ಕೆ ಯಾವುದೇ ಆಧಾರಗಳಿಲ್ಲ. ಏಕೆಂದರೇ, ಇತ್ತೀಚೆಗೆ ದೊರೆತಿರುವ ಕ್ರಿ.ಶ.೧೬ನೇ ಶತಮಾನದ ಸಾವಂತರಸರ ತಾಮ್ರಶಾಸನದಲ್ಲಿ ತಿರುಮಲರಸ ಮತ್ತು ಚನ್ನಮ್ಮನವರ ಬಗ್ಗೆ ಉಲ್ಲೇಖವಿರುವ ಅಂಶವನ್ನು ಪ್ರೊ॥ ಪಿ. ಗುರುರಾಜಭಟ್ಟ ಅವರು ದಾಖಲಿಸಿರುವರು. ಪ್ರಸಿದ್ಧ ಜೈನ ಲೇಖಕ ಪದ್ಮನಾಭನು ರಚಿಸಿರುವ 'ಜಿನದತ್ತರಾಯ ಚರಿತ್ರೆ' ಗ್ರಂಥದಲ್ಲಿ (ಸುಮಾರು ಕ್ರಿ.ಶ.೧೭೦೦) ಸಾವಂತ ವಂಶದ ದುಗ್ಗಣ್ಣ ಸಾವಂತ ಹಾಗೂ ಆತನ ಸಹೋದರಿ ದೇವಮ್ಮಾಜಿಯ ಬಗ್ಗೆ ಉಲ್ಲೇಖವಿದೆ. ದೇವಮ್ಮಾಜಿಯು ವೇಣುಪುರದ ಮಾಲಿಂಗ ನೃಪತಿಯನ್ನು ವಿವಾಹವಾಗಿದ್ದು, ಆಕೆ ಚೆನ್ನಿಗ ಸಾಮಂತ, ತಿರುಮಲೇಂದ್ರ, ಶಂಕರನೃಪತಿ, ಚೆನ್ನಾಂಬಿಕೆ, ತಿರುಮಲರಸ, ಅಂಬಕದೇವಿ ಮತ್ತು ಚಿಕ್ಕರಾಯರೆಂಬ ಏಳು ಜನ ಮಕ್ಕಳಿದ್ದರೆಂದು ಇದೇ ಗ್ರಂಥದಲ್ಲಿ ವಿವರಿಸಲಾಗಿದೆ. ಇವರ ಪೈಕಿ ತಿರುಮಲೇಂದ್ರನು ಕಾಶ್ಯಪ ಗೋತ್ರದವನಾಗಿದ್ದು 'ಕದಂಬ ಕುಲದೀಪ' ಮತ್ತು 'ಸೋಮವಂಶೋದ್ಭವ' ಎಂಬ ಬಿರುದುಗಳನ್ನು ಹಾಗೂ ಲಾಂಛನವಾಗಿ 'ಕಪಿಧ್ವಜ'ವನ್ನು ಹೊಂದಿದ್ದನೆಂದು ಇದೇ ಗ್ರಂಥದಲ್ಲಿ ದಾಖಲಿಸಲಾಗಿದೆ. ಚನ್ನಮ್ಮಾಜಿಯ ಆಳ್ವಿಕೆಯ ಕಾಲದಲ್ಲಿ ತಿರುಮಲರಸನ ಆಸ್ಥಾನದ ಕೋಶಾಧಿಕಾರಿಯಾಗಿದ್ದ ಪದ್ಮನಾಭನು 'ಜಿನದತ್ತಚರಿತ್ರೆ'ಯನ್ನು ರಚಿಸಿದನೆಂದು ಪ್ರತೀತಿಯಿದೆ.

ಈ ಗ್ರಂಥದಲ್ಲಿ ಉಲ್ಲೇಖಗೊಂಡಿರುವ ಸಾವಂತರು ಮುಲ್ಕಿಯ ಅರಸರಾಗಿದ್ದು ಪುತ್ತಿಗೆ ಮತ್ತು ಮೂಡಬಿದಿರೆಯ ಚೌಟರೊಡನೆ ಕೇವಲ ವೈವಾಹಿಕ ಸಂಬಂಧವನ್ನು ಹೊಂದಿದ್ದು, ತಮ್ಮ ಪ್ರತ್ಯೇಕತೆಯನ್ನು ರಕ್ಷಿಸಿಕೊಂಡಿದ್ದರೆಂದು ಕಂಡುಬರುತ್ತದೆ. ಮುಲ್ಕಿಯ ಒಂದು ಖಾಸಗಿ ಜಮೀನಿನಲ್ಲಿ ಸುಮಾರು ೨೦ ಸ್ಮಾರಕ ಸಮಾಧಿಗಳು ಕಂಡುಬಂದಿದ್ದು, ಇವುಗಳು ಸಾವಂತರಸ ವಂಶದವರ ಸಮಾಧಿಗಳೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಹೊಸಗುಂದದ ಅರಸ ಬೀರದೇವರಸನು ಇಡುಬೀಡು ಸಾವಂತನ ವಿರುದ್ಧ ಕ್ರಿ.ಶ.೧೨೫೪ರಲ್ಲಿ ಆಕ್ರಮಣ ಮಾಡಿದ್ದನೆಂದೂ ಹಾಗೂ ಆತನ ಸಂಪತ್ತನ್ನು ಲೂಟಿಮಾಡಿದನೆಂದೂ ಪ್ರತೀತಿಯಿದೆ. ಮೂಡಬಿದಿರೆಯ ಬಳಿ ಇರುವ ಇಡುಬೀಡು ಸಾವಂತನ ದ್ವಿತೀಯ ನೆಲೆಯಾಗಿರಬೇಕೆಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಶಿವಮೊಗ್ಗ ಜಿಲ್ಲೆಯ ಸೊರಬಾದ ಕ್ರಿ.ಶ.೧೨೮೪ರ ಇನ್ನೊಂದು ಶಾಸನವು ಸಾವಂತ ಜಗದಾಳನು ಹಿರಿಯ ನಾಕುನಾಡ ಬೆಳಗೌಡನ ಮಗ ಮತ್ತು ಏಕ್ಕವಳಿಯ ಗಾವುಂಡ ಜಗದಾಳ ಕುಪ್ಪೆಯ ದಾಯಾದಿಯೂ ಆಗಿದ್ದನೆಂದು ದಾಖಲಿಸುತ್ತದೆ. ಇದೇ ರೀತಿ ಕ್ರಿ.ಶ.೧೨೯೨ರ ಶಾಸನವು ಮಹಾಮಂಡಳೇಶ್ವರ ತಮ್ಮ ಸಾವಂತ ಮತ್ತು ಇರುವಂದೂರಿನ ಮಲೆಯ ಸಾವಂತರ ಆಳ್ವಿಕೆಯ ಬಗ್ಗೆ ಉಲ್ಲೇಖಿಸುತ್ತದೆ. ಹೀಗಾಗಿ ಮುಲ್ಕಿಯ ಸಾವಂತರೆಂದು ಸ್ಪಷ್ಟವಾಗಿ ಉಲ್ಲೇಖಿಸುವ ಯಾವುದೇ ಶಾಸನಗಳೂ ಇಲ್ಲಿಯವರೆಗೆ ಲಭ್ಯವಾಗದೇ ಇರುವುದು ಒಂದು ಪ್ರಮುಖ ನ್ಯೂನತೆಯಾಗಿದೆ. ಸೀಮಂತೂರಿನ ಜನಾರ್ದನ ದೇವಾಲಯವು ಸಾವಂತರಿಂದ ನಿರ್ಮಿತವಾಗಿದೆ ಎಂಬ ನಂಬಿಕೆ ಇದ್ದು ಸಾವಂತ ಸಾಮ್ರಾಜ್ಯದ ಉದಯದ ಕೇಂದ್ರವಾಗಿತ್ತೆಂಬುದು ನಿರ್ವಿವಾದವಾಗಿದೆ. ಜನಾರ್ದನನು ಈ ವಂಶದ ಆರಾಧಕ ದೇವನೆಂಬುದೂ ವ್ಯಕ್ತವಾಗುತ್ತದೆ. ಐಗಳವರು ತಮ್ಮ ಇತಿಹಾಸ ಗ್ರಂಥದಲ್ಲಿ ಐಕಳ, ಅತ್ತೂರು, ಕೊಡೆತ್ತೂರು, ಪಂಜ, ವಳಲಂಕೆ, ಕುಬೇರೂರು, ಬಪ್ಪನಾಡು ಮತ್ತು ತಾಳಿಪಾಡಿಗಳೆಂಬ ಒಂಬತ್ತು ಮಾಗಣೆಗಳನ್ನು ಪ್ರಥಮ ಬಾರಿಗೆ ಗುರುತಿಸಿರುವರು. ಸಾವಂತ ಪಾಳೆಯಪಟ್ಟು ಭೌಗೋಳಿಕವಾಗಿ ದಕ್ಷಿಣಕ್ಕೆ ಪಾಳುಂಜ (ಶಾಸನೋಕ್ತ) ಅಥವಾ ಪಾವಂಜೆ ನದಿ, ಉತ್ತರಕ್ಕೆ ಕೊಡೆತ್ತೂರು ಮುಲ್ಕಿನದಿ, ಪೂರ್ವಕ್ಕೆ ಚೌಟರಸರ ಸಾಮ್ರಾಜ್ಯ ಮತ್ತು ಪಶ್ಚಿಮಕ್ಕೆ ಅರೇಬ್ಬಿಯನ್ ಸಮುದ್ರಗಳಿಂದ ಸುತ್ತುವರೆದಿರುವುದು ವ್ಯಕ್ತವಾಗುತ್ತದೆ. ರಾಷ್ಟ್ರಕವಿ ಎಂ.ಗೋವಿಂದಪೈ ಅವರು ಮುಲ್ಕಿಯ ಬಗ್ಗೆ ತಮ್ಮ ಒಂದು ಲೇಖನದಲ್ಲಿ ಬರೆಯುತ್ತಾ ಕೋಟೆಕೇರಿಯ ಕ್ರಿ.ಶ.೧೩೭೮ರ ಶಾಸನದಲ್ಲಿ 'ದುಗ್ಗಣ್ಣ ಸಾಮಂತ' ನೆಂಬ ಅರಸನ ಹೆಸರು ಉಲ್ಲೇಖಗೊಂಡಿರುವ ವಿಚಾರವನ್ನು ದಾಖಲಿಸಿರುತ್ತಾರೆ. ಇದರ ಪ್ರಕಾರ ದುಗ್ಗಣ್ಣ ಸಾವಂತನು ಕ್ರಿ.ಶ.೧೪೦೦ರವರೆಗೂ ಆಳ್ವಿಕೆ ಮಾಡುತ್ತಿದ್ದನೆಂದು ಹೇಳಲಾಗುತ್ತದೆ. ಕಿಣ್ಣಿಕ ಸಾವಂತನು ತನ್ನ ದೊಡ್ಡಪ್ಪನಾದ ದುಗ್ಗಣ್ಣ ಸಾವಂತನ ನಂತರ ಅಧಿಕಾರಕ್ಕೆ ಬಂದನೆಂದು ಪ್ರತೀತಿಯಿದೆ. ಬಪ್ಪನಾಡಿನ ದುರ್ಗಾಪರಮೇಶ್ವರಿ ದೇವಾಲಯದಲ್ಲಿರುವ ಕ್ರಿ.ಶ.೧೪೧೧ರ ಭಗ್ನ ಶಾಸನದಲ್ಲಿ 'ಕಿಣ್ಣಿಕ ಸಾವಂತ'ನ ಹೆಸರಿನ ಉಲ್ಲೇಖ ಮಾತ್ರ ವ್ಯಕ್ತವಾಗುತ್ತದೆ. ಈತನ ಹೆಸರನ್ನು 'ಬಾಚ ಹೆಗ್ಗಡೆ' ಎಂದೂ ಇದೇ ಶಾಸನದಲ್ಲಿ ಉಲ್ಲೇಖಿಸಿರುವುದು ವ್ಯಕ್ತವಾಗುತ್ತದೆ. ಸೀಮಂತೂರಿನ ಕ್ರಿ.ಶ.೧೫ನೇ ಶತಮಾನದ ಇನ್ನೊಂದು ಶಾಸನದಲ್ಲಿ ಕೊಟ್ಟಿಯಣ್ಣ ಹೆಗ್ಗಡೆ ಅಥವಾ ಬಾಚಸೆಟ್ಟಿ ಹಾಗೂ ಹರಿಹರಸೆಟ್ಟಿಗಳು ಹೊಂದಿದ್ದ ಗಡಿಗಳ ಬಗ್ಗೆ ವಿವರಣೆಯಿದೆ. ಈ ಶಾಸನದ ಪ್ರಕಾರ ಮುಲ್ಕಿಯು ಆ ಕಾಲದಲ್ಲಿ ಪ್ರಗತಿ ಪಡೆದ ಕೇಂದ್ರವಾಗಿತ್ತೆಂದು ವ್ಯಕ್ತವಾಗುತ್ತದೆ. ಮಂಗಳೂರು ತಾಲೂಕಿನ ಪಡುಪಣಂಬೂರಿನ ಕ್ರಿ.ಶ.೧೫೪೨ರ ಶಾಸನವು ದುಗ್ಗಣ್ಣ ಅಥವಾ ಕಿಣ್ಣಿಕ ಸಾವಂತನು ತನ್ನ ಸಾಮ್ರಾಜ್ಯದ ಔನತ್ಯಕ್ಕಾಗಿ ಹಾಗೂ ಸಮೃದ್ಧತೆಗಾಗಿ ಅಭಿನವ ಚಾರುಕೀರ್ತಿಯ ಮಾರ್ಗದರ್ಶನದ ಮೇಲೆ ಈ ದಾನವನ್ನು ನೀಡಿದ ಬಗ್ಗೆ ಮತ್ತು ಆತನ ಸಹೋದರಿ ಚನ್ನಮ್ಮಾದೇವಿಯು ಅನಂತತೀರ್ಥೇಶ್ವರ ದೇವರಿಗೆ ದೈನಂದಿನ ಕೈಂಕರ್ಯಕ್ಕಾಗಿ ಭೂಮಿಯನ್ನು ದಾನ ನೀಡಿದ ಬಗ್ಗೆ ದಾಖಲಿಸುತ್ತದೆ.

### ವೇಣೂರಿನ ಅಜಿಲರಸರು

ಈಗ ಬೆಳ್ತಂಗಡಿ ತಾಲೂಕಿನಲ್ಲಿರುವ ವೇಣೂರು ಅಥವಾ ಶಾಸನೋಕ್ತ 'ಏಣೂರು' ಅಥವಾ 'ಏನೂರು', ಅಜಿಲ ಅರಸರ ರಾಜಧಾನಿಯಾಗಿತ್ತು. ಅಜಿಲರು ತಮ್ಮನ್ನು ವಿಜಯನಗರದ ಸಾಳುವ ವಂಶದವರೆಂದು ಕರೆದುಕೊಂಡು, ವೇಣೂರಿನ ಮಹಾಬಲೇಶ್ವರನನ್ನು ತಮ್ಮ ಮನೆತನದ ದೇವರೆಂದು ಆರಾಧಿಸುತ್ತಿದ್ದರು. ತುಳುನಾಡಿನ ಪ್ರಮುಖ ರಾಜವಂಶಗಳಲ್ಲಿ ಒಂದಾದ ಅಜಿಲರ ಪ್ರಸಿದ್ಧ ಅರಸನೆಂದರೇ ನಾಲ್ಕನೇ ತಿಮ್ಮಣ್ಣ ಅಜಿಲ. ಈತನಿಂದಲೇ ರಾಜವಂಶಕ್ಕೆ ಅಜಿಲರಸರು ಎಂಬ ಅನ್ವರ್ಥನಾಮವು ರೂಢಿಗೆ ಬಂದಿದೆ. ಒಂದು ಅಭಿಪ್ರಾಯದ ಪ್ರಕಾರ 'ಅಜಿಲ' ಎಂಬ ಪದವು ಜೈನ ಮೂಲದ 'ಅಜಿರ' (ಅಂದರೆ ತುಳುನಾಡಿನ ಮುಖ್ಯವಾದ ಜೈನ ಬಲಿ) ಪದದಿಂದ ಬಂದಿದೆ ಎಂದು ತಿಳಿದು ಬರುತ್ತದೆ. ನಾಲ್ಕನೇ ತಿಮ್ಮಣ ಅಜಿಲನು ಕ್ರಿ.ಶ.೧೧೫೪ ರಿಂದ ೧೧೮೦ರವರೆಗೆ ಆಳ್ವಿಕೆ ಮಾಡಿದನೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಈತನಿಗೆ ಚೆನ್ನಮ್ಮ ಮತ್ತು ಮಧುರಕ್ಕ ದೇವಿ ಎಂಬ ಇಬ್ಬರು ಸೋದರ ಸೊಸೆಯರಿದ್ದರು. ಇವರು ಘಟ್ಟದ ಮೇಲಿನವರಾದ ಗೋವಿಂದಪ್ಪರಾಯ ಮತ್ತು ಚಾಮುಂಡರಾಯರನ್ನು ವಿವಾಹವಾಗಿದ್ದರೆಂದು ತಿಳಿದುಬರುತ್ತದೆ. ತಿಮ್ಮಣ್ಣ ಅಜಿಲನು ನಿಧನನಾದಾಗ ಆತನ ಸೋದರ ಸೊಸೆಗೆ ಮಕ್ಕಳಿಲ್ಲದ ಕಾರಣ ತಾನೇ ಸಿಂಹಾಸನವನ್ನೇರಿದಳು. ಇದನ್ನು ಸಾಮಾನ್ಯ ಜನತೆ ತಿರಸ್ಕರಿಸಿ ಪ್ರತಿಭಟನೆ

ವ್ಯಕ್ತಪಡಿಸಿದಾಗ ಬನವಾಸಿಯ ಕಾಮದೇವನು ಮಧ್ಯ ಪ್ರವೇಶಿಸಬೇಕಾಯಿತು. ಕಾಮದೇವನು ಪುಂಜಳಿಕೆ (ವೇಣೂರು ರಾಜ್ಯಕ್ಕೆ ಇನ್ನೊಂದು ಹೆಸರು) ರಾಜ್ಯವನ್ನು ತನ್ನ ಸೇನೆಯೊಂದಿಗೆ ಆಕ್ರಮಣ ಮಾಡಿ ಶಾಂತಿ ನೆಲೆಸುವಂತೆ ಮಾಡಿದನು. ಇದರ ತರುವಾಯ ಕಾಮದೇವನು ತನ್ನ ರಾಜಧಾನಿಗೆ ಹಿಂದಿರುಗಿದನು. ವೇಣೂರು ಅಥವಾ ಪುಂಜಳಿಕೆ ರಾಜ್ಯದಲ್ಲಿ ೧೩ ಮಾಗಣೆಗಳಿದ್ದವು. ರಾಣಿ ಮಧುರಕ್ಕೆ ದೇವಿಯ ಮಗ ರಾಯಕುಮಾರನು ಕ್ರಿ.ಶ.೧೧೮೬ರಲ್ಲಿ ಸಿಂಹಾಸನವನ್ನೇರಿ ೧೨೦೪ರವರೆಗೆ ಆಳ್ವಿಕೆ ಮಾಡಿದನು.

ಈತನ ತರುವಾಯ ಅನೇಕ ಸಮರ್ಥಶಾಲಿ ರಾಜರುಗಳು ಆಳ್ವಿಕೆ ಮಾಡಿ ತಮ್ಮ ಪ್ರಭಾವಶಾಲಿ ಅಧಿಕಾರವನ್ನು ಕ್ರಿಯಾಶೀಲಗೊಳಿಸಿದರು. ಈ ರಾಜರೂ ಸಹ ಅಳಿಯ ಸಂತಾನ ಕಟ್ಟುಪಾಡುಗಳನ್ನು ಪಾಲಿಸುತ್ತಿದ್ದರೆಂದು ಪ್ರತೀತಿಯಿದೆ. ಎಂ.ಗೋವಿಂದ ಪೈ ಅವರು ಅಜಿಲರಸರ ಸಾಂಪ್ರದಾಯಿಕ ರಾಜ್ಯಾಡಳಿತದ ಬಗ್ಗೆ ವಿವರ ನೀಡುವಾಗ 'ವೇಣೂರಿನ ಶಿಲಾಶಾಸನಗಳನ್ನೂ' ತಮ್ಮ ಗ್ರಂಥದಲ್ಲಿ ದಾಖಲಿಸಿರುವರು. ವೇಣೂರಿನ ಪ್ರಾರಂಭದ ರಾಜರುಗಳ ಬಗ್ಗೆ ವ್ಯಾಪಕವಾದ ಶಾಸನಾಧಾರಗಳು ದೊರೆಯದ ಕಾರಣ ಅವರ ಆರಂಭಿಕ ರಾಜಕೀಯ ಇತಿಹಾಸದ ಸ್ಥೂಲ ಪರಿಚಯವನ್ನು ಮಾಡಿಕೊಳ್ಳುವುದು ಸಾಧ್ಯವಿಲ್ಲವಾಗಿದೆ. ಆದರೆ, ಖಚಿತ ಆಧಾರದ ಮೇಲೆ ಪುಂಜಳಿಕೆ ಅಥವಾ ಪೂಂಜಳ್ಕೆ ಮತ್ತು ಚೌಳ್ಕೆ (ಚೌಟರ ಸಾಲಿಕೆ ನಾಡು) ಮಹಾಮಂಡಳೇಶ್ವರ ಸೇವ್ಯಾಗೆಲ್ಲರಸನು ಪರಮಾಧಿಕಾರವನ್ನು ಹೊಂದಿದ್ದನು. ಈತನು ಮಹಾಮಂಡಳೇಶ್ವರನೆಂಬ ಬಿರುದು ಧರಿಸಿದ್ದು ಪ್ರಭಾವಶಾಲಿ ರಾಜನಾಗಿದ್ದನೆಂಬ ವಿಷಯದಲ್ಲಿ ಸಂದೇಹವಿಲ್ಲದಿದ್ದರೂ ಈತನು ಅಜಿಲ ವಂಶಕ್ಕೆ ಸೇರಿದವನೆಂಬ ಅಂಶವು ಇನ್ನೂ ತೀರ್ಮಾನವಾಗಬೇಕಾಗಿದೆ. ಮಂಗಳೂರಿನ ಸಮೀಪವಿರುವ ಕದ್ರಿಯ ಮಂಜುನಾಥ ದೇವಾಲಯದಲ್ಲಿರುವ ಕ್ರಿ.ಶ.೧೩೮೮ರ ಶಾಸನವು ಅಜಿಲ ಮನೆತನದವರು ನಿರ್ಮಿಸಿದ 'ಅಜಿಲಮಕೆರೆ' ಬಗ್ಗೆ ದಾಖಲಿಸುತ್ತದೆ. ಈ ಕೆರೆಯು ಮಂಗಳೂರಿನಿಂದ ದಕ್ಷಿಣಕ್ಕೆ ಐದು ಕಿ.ಮೀ. ದೂರದಲ್ಲಿರುವ ಕೂಳೂರು ಕೆರೆಯೆಂಬ ಅಭಿಪ್ರಾಯವಿದೆ. ಇದೇ ಶಾಸನದಲ್ಲಿ 'ಅಜಿಲ' ಎಂಬ ಪದವು ಪ್ರಥಮ ಬಾರಿಗೆ ಉಲ್ಲೇಖವಾಗಿರುವುದು ವ್ಯಕ್ತವಾಗುತ್ತದೆ. ಹಾಸನ ಜಿಲ್ಲೆಯ ಬೇಲೂರಿನ ಕ್ರಿ.ಶ.೧೪೧೫ರ ಶಾಸನವು ಮಾಂಡಲಿಕ ಸೋಮನಾಥ ಬಿರುಮಣ್ಣರಸ ಅಲಿಯಾಸ್ ಅಜಿಲನು ಸ್ಥಳದ ಚೆನ್ನಕೇಶವನಾಥನಿಗೆ ನೂರು ಮೂಡೆ ಬತ್ತವನ್ನು ದಾನವಾಗಿ ನಿಡಿದನೆಂದು ದಾಖಲಿಸುತ್ತದೆ. ಈ ಶಾಸನೋಕ್ತ ಅಜಿಲನು ಏಣೂರು ಮನೆತನದವನೆಂಧು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಮಂಗಳೂರಿನ ಕೋಡಿಬಯಲಿನಲ್ಲಿರುವ ಕ್ರಿ.ಶ.೧೪೮೯ ಶಾಸನವು ಬಾರಕೂರಿನ ರಾಜ್ಯಪಾಲ ಬೈಚಪ್ಪ ದಣ್ಣಾಯಕ ಒಡೆಯನು ಪಳ್ಳಿಯ ಹಂಜಮಾನ್ ಮಸೀದಿಗಳಿಗೆ ನೀಡಿದ್ದ ದತ್ತಿದಾನಗಳನ್ನು ಅಜಿಲರು, ಬಂಗರಾಜರು ಮತ್ತು ಚೌಟರಸರುಗಳಿಗೆ ಸಂರಕ್ಷಿಸಿಕೊಂಡು ಮುಂದುವರೆಸಬೇಕೆಂದು ದಾಖಲಿಸುತ್ತದೆ. ಈ ಶಾಸನದ ಪ್ರಕಾರ ಅಜಿಲರಸನು ಬಾರಕೂರು ರಾಜ್ಯಪಾಲನ ಆಡಳಿತದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದನೆಂಬ ವಿಷಯವು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಮೂಡಬಿದಿರೆಯ ಶಾಸನ ಒಂದರಲ್ಲಿ ಉಲ್ಲೇಖಗೊಂಡಿರುವ ಬಿಣ್ಣಾಣಿ ಅಜಿಲನು ಈ ವಂಶದ ಇನ್ನೊಬ್ಬ ಅರಸನೆಂದು ದಾಖಲಿಸಿದೆ. ಬಿಣ್ಣನ ಅಜಿಲನ ಮಗ ಕಾಮಿರಾಯನು ಸ್ಥಳೀಯ ಗುರುಗಳ ಬಸದಿಗೆ ದಾನ ನೀಡಿದ ವಿಚಾರವನ್ನೂ ಈ ಶಾಸನದಲ್ಲಿ ದಾಖಲಿಸಲಾಗಿದ್ದು ಇದು ಕ್ರಿ.ಶ.೧೫೧೫ಕ್ಕೆ ಸೇರುತ್ತದೆ. ವೇಣೂರಿನ ಕ್ರಿ.ಶ.೧೫೩೭ರ ಶಾಸನವು ಸಾಳ್ವ ಪಾಂಡ್ಯದೇವರಸ ಅಲಿಯಾಸ್ ಅಜಿಲನು ಸ್ಥಳೀಯ ಜೈನ ಬಸದಿಗೆ ನೀಡಿದ ಹಲವಾರು ದಾನಗಳನ್ನು ಉಲ್ಲೇಖಿಸುತ್ತದೆ. ಬಿಣ್ಣಾಣಿ ಬಲಿಗೆ ಸೇರಿದ ಆಧ್ಯ ದೇವರಸನೇ ಸಾಳ್ವಪಾಂಡ್ಯ ದೇವರಸ ಅಲಿಯಾಸ್ ಅಜಿಲನೇ ಈ ಭಾಗದ ಪ್ರಧಾನಿಯಾಗಿದ್ದನೆಂದು ಇದೇ ಶಾಸನದಿಂದ ವ್ಯಕ್ತವಾಗುತ್ತದೆ. ಇದರ ತರುವಾಯದ ಅಂದರೇ ಕ್ರಿ.ಶ.೧೬೦೪ರ ವೇಣೂರಿನ ಶಾಸನವು ವೇಣೂರಿನ ಗೊಮ್ಮಟೇಶ್ವರ ಪ್ರತಿಷ್ಠಾಪನೆಯನ್ನು ಪಾಂಡ್ಯಭೂಪನ ಕಿರಿಯ ಸಹೋದರ ತಿಮ್ಮರಾಜ ಅಜಿಲ ಅರಸನು ನೆರವೇರಿಸಿದನೆಂದು ದಾಖಲಿಸುತ್ತದೆ. ಬೆಳ್ಗೊಳ ಪುರದ ಪಟ್ಟಕ್ಕೆ ಸೇರಿದ ಚಾರುಕೀರ್ತಿ ಮುನಿಗಳ ಉಪದೇಶದನ್ವಯ ಈ ಪ್ರತಿಮೆಯನ್ನು ಪ್ರತಿಷ್ಠಾಪಿಸುದುದರ ಬಗ್ಗೆ ಪ್ರಸ್ತಾಪಿಸುತ್ತಾ ಅಜಿಲ ತಿಮ್ಮರಾಜನನ್ನು ಚಾಮುಂಡಾನ್ವಯ ಭೂಪಕನೆಂದೂ ಪಾಂಡ್ಯರಾಜನ ಮತ್ತು ಪಾಂಡ್ಯಕ ಮಹಾದೇವಿಯ ಪುತ್ರನೆಂದೂ ಇದೇ ಶಾಸನದಲ್ಲಿ ವರ್ಣಿಸಲಾಗಿದೆ. ಹೀಗೆ ಶಾಸನಗಳ ಆಧಾರದ ಮೇಲೆ ಪುಂಜಳಿಕೆ (ವೇಣೂರು) ರಾಜ್ಯವನ್ನು ಅಜಿಲರಸರು, ೧೬ ಸೆಟ್ಟಿಕಾರರುಗಳು ಮತ್ತು ೩೬೬ ಎಳಮೆಗಳಿಗೆ ಸೇರಿದ ಹಾಲರುಗಳ ಸಹಕಾರದಿಂದ ಆಡಳಿತ ನಡೆಸಿದರೆಂದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಅಜಿಲರು ಜೈನ ಸಂಪ್ರದಾಯವನ್ನು ಅನುಸರಿಸುತ್ತಿದ್ದರೂ ಹಿಂದೂ ಸಂಪ್ರದಾಯದ ಮಹಾಲಿಂಗೇಶ್ವರನನ್ನು ತಮ್ಮ ಲಾಂಛನದಲ್ಲಿ ಉಪಯೋಗಿಸುತ್ತಿದ್ದುದು ಇವರ ಧರ್ಮಸಹಿಷ್ಣತೆಗೆ ಉತ್ತಮ ನಿದರ್ಶನವಾಗಿದೆ. ಅಜಿಲರು ದಕ್ಷಿಣಕನ್ನಡ ಜಿಲ್ಲೆ (ಉಡುಪಿಯೂ ಸೇರಿದಂತೆ)ಯ ಕಲೆ ಮತ್ತು ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಸಾಕಷ್ಟು ಪ್ರಾಮುಖ್ಯತೆಯನ್ನು ನೀಡಿದುದು ಅವರ ಶಾಸನಗಳಿಂದ ವೇದ್ಯವಾಗುತ್ತದೆ. ತಮ್ಮ ಹಲವು ಆಡಳಿತ ಸಮಸ್ಯೆಗಳಿಗೆ ಅವರು ವಿಜಯನಗರ ಸಾಮ್ರಾಜ್ಯವು ಅನುಸರಿಸಿದ ಆಡಳೀತ ನೀತಿಯನ್ನೇ ಜಾರಿಗೆ ತಂದುದು ದಾಖಲೆಗಳಿಂದ ವ್ಯಕ್ತವಾಗುತ್ತದೆ.

ತುಳುನಾಡನ್ನಾಳಿದ ಇತರೆ ಸಣ್ಣಪುಟ್ಟ ರಾಜ್ಯಗಳ ಪೈಕಿ ಪ್ರಮುಖವಾದುವೆಂದರೇ ಕುಂಬಳೆಯ ಅರಸರು, ಮೂಲರು, ತೊಳ್ಹರರಸರು, ಹೊನ್ನಕಂಬಳಿ ಅರಸರು, ಬಲ್ಲಾಳರು, ಹೆಗ್ಗಡೆಯರು ಮೊದಲಾದವರು. ಮೂಲರು ಬೆಳ್ತಂಗಡಿ ತಾಲೂಕಿನ ಬೈಲಂಗಡಿಯಲ್ಲಿ ತಮ್ಮ ರಾಜ್ಯದ ರಾಜಧಾನಿಯನ್ನು ಹೊಂದಿದ್ದರು. ಈ ವಂಶದ ಮುಖ್ಯ ರಾಣಿ ಎಂದರೇ ಕ್ರಿ.ಶ.೧೬೩೦ರಲ್ಲಿ ಆಳ್ವಿಕೆ ಮಾಡುತ್ತಿದ್ದ ಸೋಮಲಾದೇವಿ. ಈಕೆಯು ಬಂಗರಾಜನನ್ನು ವಿವಾಹವಾಗಿದ್ದಳು. ಉಡುಪಿ ತಾಲೂಕಿನ ಸುರಾಳದ ತೊಲ್ಹಾರರಸರು ತುಳುವ ನಾಡಿನ ಸಣ್ಣಪುಟ್ಟ ಆಡಳಿತ ರಾಜ್ಯಗಳ ಪೈಕಿ ಒಬ್ಬರಾಗಿದ್ದರು. ಇವರು ಸುಮಾರು ಕ್ರಿ.ಶ.೧೨ನೇ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದರೆಂದು ಪ್ರತೀತಿಯಿದೆ. ತೊಲ್ಹಾರ ಅರಸನೊಬ್ಬನು ಹೊನ್ನಕಂಬಳೀಯ ಅರಸನೊಬ್ಬನ ಸಹಕಾರದಿಂದ ಪೋರ್ಚುಗೀಸರನ್ನು ಪರಾಭವಗೊಳಿಸಿ ಕ್ರಿ.ಶ. ೧೫೬೮ರಲ್ಲಿ ಬಸರೂರಿನ ಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಂಡನೆಂದು ತಿಳಿದುಬರುತ್ತದೆ. ಈತನು ಪೋರ್ಚುಗೀಸರಿಗೆ ಕೊಡಬೇಕಾದ ಕಪ್ಪ ಕಾಣಿಕೆಗಳನ್ನು ನಿರಾಕರಿಸಿದ್ದನೆಂದು ವ್ಯಕ್ತವಾಗುತ್ತದೆ. ಅನಂತರ ಈತನನ್ನು ತಮ್ಮ ಅಧೀನಕ್ಕೆ ಒಳಪಡಿಸಿದ ಪೋರ್ಚುಗೀಸರು ಒಪ್ಪಂದವನ್ನು ಮಾಡಿಕೊಂಡು ಹಲವು ನಿರ್ಬಂಧಗಳನ್ನು ವಿಧಿಸಿದರು. ಕೆಳದಿಯ ನಾಯಕರು ಈ ತೊಲ್ಹಾರ ಅರಸನನ್ನು ಅನಂತರ ಪೋರ್ಚುಗೀಸರ ಹತೋಟಿಯಿಂದ ಮುಕ್ತಗೊಳಿಸಿದರು. ತುಳುನಾಡನ್ನಾಳಿದ ಸಣ್ಣಪುಟ್ಟ ರಾಜ್ಯಗಳು ಮುಖ್ಯವಾಗಿ ಈ ಪ್ರದೇಶದ ಕೃಷಿ ಉತ್ತಮತೆಗೆ ಹಲವಾರು ಪರಿಣಾಮಕಾರಿ ಕಾರ್ಯಗಳನ್ನು ಜಾರಿಗೊಳಿಸಿದ್ದು ಒಂದು ಪ್ರಶಂಸನೀಯ ಸಾಧನೆಯಾಗಿದೆ ಎಂದು ಹಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಪಾಳೆಯಪಟ್ಟುಗಳ ಬಗ್ಗೆ ವಿದೇಶಿಯಾತ್ರಿಕರುಗಳು ನೀಡಿರುವ ವಿವರಗಳು ಸಾಕಷ್ಟು ಲಭ್ಯವಾಗಿವೆ. ಇವರು ನಿರ್ಮಿಸಿರುವ ದೇವಾಲಯ ಸಾರ್ವಜನಿಕ ಕಟ್ಟಡ ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಅವರ ಅನೇಕ ಶಾಸನಗಳಲ್ಲಿ ದಾಖಲಿಸಲಾಗಿದೆ.

### ಪೋರ್ಚುಗೀಸರ ಪತನ

ದಕ್ಷಿಣ ಭಾರತದ ಪಶ್ಚಿಮ ಕರಾವಳಿಯಲ್ಲಿ ತಮ್ಮ ಆಡಳಿತ ಪ್ರಾಬಲ್ಯವನ್ನು ಕ್ರಿ.ಶ.೧೬ನೇ ಶತಮಾನದ ಆರಂಭದಿಂದ ಹೊಂದಿದ್ದ ಪೋರ್ಚುಗೀಸರು ಕ್ರಿ.ಶ.೧೭ನೇ ಶತಮಾನದ ಮಧ್ಯಭಾಗದಲ್ಲಿ ದುರ್ಬಲಗೊಳ್ಳತೊಡಗಿದರು. ಭಾರತದಲ್ಲಿ ನೇಮಕಗೊಂಡಿದ್ದ ತಮ್ಮ ರಾಜ್ಯಪಾಲರುಗಳಿಗೆ ಕ್ರಿ.ಶ.೧೬೩೫ರ ವೇಳೆಗಾಗಲೇ ತಮ್ಮ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿದ್ದ ರಾಜ್ಯಗಳ ಆಂತರಿಕ ವಿಚಾರಗಳಲ್ಲಿ ಅನಾವಶ್ಯಕವಾಗಿ ಹಸ್ತಕ್ಷೇಪ ಮಾಡಬಾರದೆಂದು ಪೋರ್ಚುಗೀಸ್ ರಾಜನು ಪ್ರಬಲವಾದ ಸೂಚನೆಗಳನ್ನು ಆಗಿಂದಾಗ್ಗೆ ನೀಡುತ್ತಿದ್ದನು. ಈ ಸೂಚನೆಯನ್ನು ನೀಡಲು ಪ್ರಮುಖ ಕಾರಣವೆಂದರೇ ಪೋರ್ಚುಗೀಸರ ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರಗಳು ನಿರಂತರವಾಗಿ ಮುಂದುವರಿಯಬೇಕೆಂಬುದೇ ಆಗಿತ್ತು.

ಇದೇ ಸಂದರ್ಭದಲ್ಲಿ ಪೋರ್ಚುಗೀಸರು ಹೊಂದಿದ್ದ ಬಸರೂರು, ಹೊನ್ನಾವರ, ಕಣ್ಣಾನೂರು ಮತ್ತು ಮಂಗಳೂರಿನ ಕೋಟೆಗಳು ನಿರ್ಲಕ್ಷ್ಯೆಯಿಂದಾಗಿ ಸಾಕಷ್ಟು ಶಿಥಿಲವಾಗಿದ್ದುವು. ಪೋರ್ಚುಗೀಸರಿಗೂ ಮತ್ತು ಇಕ್ಕೇರಿಯ ಶಿವಪ್ಪನಾಯಕನಿಗೂ ಆಗಿಂದಾಗ್ಗೆ ಮರುಕಳಿಸುತ್ತಿದ್ದ ಹೋರಾಟಗಳ ಪರಿಣಾಮವಾಗಿ ತುಳುವ ನಾಡಿನ ಆಡಳಿತದ ಜವಾಬ್ದಾರಿಯನ್ನು ಹೊಂದಿದ ಶಿವಪ್ಪನಾಯಕನಿಂದಾಗಿ ಸೈಂಟ್ ಸೆಬಾಸ್ಟಿಯನ್ ಕೋಟೆಯನ್ನು ಪೋರ್ಚುಗೀಸರು ಕಳೆದುಕೊಳ್ಳಬೇಕಾಯಿತು. ಇದು ಪೋರ್ಚುಗೀಸರ ಶಕ್ತಿಗೆ ಅಪಾಯಕಾರಿ ಬೆಳವಣಿಗೆಯಾಗಿ ಪರಿಣಮಿಸಿತು. ಇದರ ತರುವಾಯ ಹೊನ್ನಾವರ ಮತ್ತು ಬಸರೂರು ಕೋಟೆಗಳ ಪತನವೂ ಸಂಭವಿಸಿತು. ಕ್ರಿ.ಶ. ೧೮ನೇ ಶತಮಾನದ ಪ್ರಥಮಾರ್ಧದಲ್ಲಿ ಪೋರ್ಚುಗೀಸರ ಬಲವು ಕ್ಷೀಣಿಸುತ್ತಾ ಬಂದಿತು. ಬಹುಶಃ ಕರಾವಳಿಯ ಸಣ್ಣಪುಟ್ಟ ರಾಜರುಗಳ ಆಂತರಿಕ ವಿಚಾರಗಳಲ್ಲಿ ಅವರು ಹಸ್ತಕ್ಷೇಪ ಮಾಡಿದುದೇ ಇದಕ್ಕೆ ಮೂಲ ಕಾರಣವಾಯಿತೆಂದು ಹಲವು ಇತಿಹಾಸಕಾರರ ಅಭಿಪ್ರಾಯವಾಗಿದೆ. ಬಿದನೂರಿನ ಎರಡನೇ ಸೋಮಶೇಖರನು ಪೋರ್ಚುಗೀಸರನ್ನು ದುರ್ಬಲಗೊಳಿಸಲು ಹಲವು ತಂತ್ರಗಳನ್ನು ಹೂಡಿದನು. ಇದರ ಪರಿಣಾಮವಾಗಿ ಅವರು ಕೇವಲ ಹಲವೇ ಆಯ್ದ ಸ್ಥಳಗಳಲ್ಲಿ ಮಾತ್ರ ತಮ್ಮ ವ್ಯಾಪಾರ ಕೇಂದ್ರಗಳನ್ನು ಹೊಂದುವಂತಾಯಿತು. ಇವರು ನಿರ್ಮಿಸಿದ್ದ ಹಲವು ಕಾರ್ಖಾನೆಗಳಿಗೆ ಸ್ಥಳೀಯ ಮುಖ್ಯಸ್ಥರುಗಳು ಆಗಿಂದಾಗ್ಗೆ ವಿಧಿಸುತ್ತಿದ್ದ ನಿರ್ಬಂಧಗಳು ಅವರ ಆತ್ಮವಿಶ್ವಾಸವನ್ನು ದುರ್ಬಲಗೊಳಿಸಿದ್ದವು. ಕೊನೆಗೆ ನಿರ್ವಾಹವಿಲ್ಲದೇ ಪೋರ್ಚುಗೀಸರು ತಮ್ಮ ರಾಜಕೀಯ ಆಕಾಂಕ್ಷೆಗಳನ್ನು ಕೈಬಿಟ್ಟು ಕೇವಲ ವ್ಯಾಪಾರ ಮತ್ತು ವಾಣಿಜ್ಯ ಸಂಬಂಧಗಳನ್ನು ಮಾತ್ರ ಮುಂದುವರೆಸಲು ನಿಶ್ಚಯಿಸಿದರು. ಆ ವೇಳೆಗಾಗಲೇ ಭಾರತದ ಸಾಗರಗಳಲ್ಲಿ ಡಚ್ ಮತ್ತು ಫ್ರೆಂಚರು ಪ್ರವೇಶವಾಗಿದ್ದು, ಅವರೂ ವ್ಯಾಪಾರ ವಾಣಿಜ್ಯ ಪೈಪೋಟಿಯ ಜೊತೆಗೆ ತಮ್ಮ ತಮ್ಮ ರಾಜಕೀಯ ಪ್ರಾಬಲ್ಯವನ್ನೂ ನಿರಂತರವಾಗಿ ಅಧಿಕಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಡಚ್ಚರು ಮತ್ತು ಫ್ರೆಂಚರು ಮಂಗಳೂರಿನಲ್ಲಿ ತಮ್ಮ ಕಾರ್ಖಾನೆಗಳನ್ನು ಸ್ಥಾಪಿಸಿಕೊಂಡರು.

ಕೊನೆಗೆ ಭಾರತದ ಸಾಗರವನ್ನು ಪ್ರವೇಶಿಸಿದ ಬ್ರಿಟಿಷರು ಯೂರೋಪಿನ ಶಕ್ತಿಗಳನ್ನು ದುರ್ಬಲಗೊಳಿಸಿ ಕಾಲಕ್ರಮೇಣ ರಾಜಕೀಯವಾಗಿ ಬಲಿಷ್ಠ ಶಕ್ತಿಯಾಗಿ ಪ್ರಬಲಗೊಂಡಿದ್ದು, ಒಂದು ರೋಮಾಂಚಕಾರಿ ಬೆಳವಣಿಗೆಯಾಗಿ ಪರಿಣಮಿಸಿತು.

## ದಕ್ಷಿಣ ಕನ್ನಡಕ್ಕೆ ಆಂಗ್ಲರ ಪ್ರವೇಶ

ದಕ್ಷಿಣ ಕನ್ನಡ ಇತಿಹಾಸದಲ್ಲಿ ಕ್ರಿ. ಶ. ೧೭೬೮ರ ವರೆಗೂ ಆಂಗ್ಲರು ಆಡಳಿತಗಾರರಾಗಿ ಪ್ರವೇಶಿಸಿರಲಿಲ್ಲ ಅದೇ ವರ್ಷದ ಮುಂಬೈಯಿಂದ ಮಂಗಳೂರಿಗೆ ಅವರು ಸಾಹಸಮಯ ನೌಕಾಯಾನವನ್ನು ಕೈಗೊಂಡರು. ಇದಕ್ಕೂ ಮೊದಲು ಆಂಗ್ಲರು ಮಂಗಳೂರಿಗೆ ಕ್ರಿ. ಶ. ೧೭೩೭ರಲ್ಲಿ ಬಿದನೂರಿನ ರಾಜ್ಯಪಾಲನೊಂದಿಗೆ ಒಪ್ಪಂದಕ್ಕೆ ಸಹಿ ಮಾಡುವ ಉದ್ದೇಶದಿಂದ ಮಾತ್ರ ಬಂದಿದ್ದರು. ಬಿದನೂರಿನ ಎರಡನೇ ಸೋಮಶೇಖರ ನಾಯಕನ ಸೇನಾ ದಂಡನಾಯಕನು ದಕ್ಷಿಣ ಕನ್ನಡದ ನೀಲೇಶ್ವರದವರೆಗೆ ತನ್ನ ಆಕ್ರಮಣವನ್ನು ಮುಂದುವರೆಸಿದ ಸಂದರ್ಭದಲ್ಲಿ ಕೇರಳದ ತೆಲ್ಲಿಚೆರಿಯಲ್ಲಿದ್ದ ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿಯವರು ಪ್ರಬಲ ವಿರೋಧವನ್ನು ಒಡ್ಡಬೇಕಾಯಿತು. ಕೇರಳದ ಮಳೆಯಾಳಿಯಗಳು ಆಂಗ್ಲರಿಗೆ ಬೆಂಬಲ ನೀಡಿದ ಪರಿಣಾಮವಾಗಿ ೧೭೩೬ರಲ್ಲಿ ಕವಾರ್ಯ ನದಿಯ ತೀರದಲ್ಲಿದ್ದ ಅಲಿಕುಣ್ಣು ಕೋಟೆಯನ್ನು ಆಂಗ್ಲ ಸೇನೆಯು ತನ್ನ ವಶಕ್ಕೆ ತೆಗೆದುಕೊಂಡಿತು. ಆಂಗ್ಲರ ಪ್ರಾಬಲ್ಯದಿಂದಾಗಿ ಮಂಗಳೂರಿನ ರಾಜ್ಯಪಾಲನಾಗಿದ್ದ ಬಿದನೂರಿನ ಸೂರಪ್ಪಯ್ಯನು ಫೆಬ್ರವರಿ ೧೭೩೭ರಲ್ಲಿ ಆಂಗ್ಲ ಅಧಿಕಾರಿ ಲಿಂಚ್‌ನೊಡನೆ ಒಪ್ಪಂದ ಮಾಡಿಕೊಂಡನು. ಈ ಒಪ್ಪಂದದ ಪ್ರಕಾರ ಆಂಗ್ಲರು ಆಕ್ರಮಿತ ಬಿದನೂರಿನ ಪ್ರಾಂತ್ಯವಾಗಿದ್ದ ಕೊಳ್ಳತಿರಿ ಪ್ರದೇಶದಲ್ಲಿ ಮೆಣಸು ಮತ್ತು ಏಲಕ್ಕಿಯ ಸಾಗರೋತ್ತರ ವ್ಯಾಪಾರದ ಏಕಸ್ವಾಮ್ಯವನ್ನು ಕ್ರಮೇಣ ಪಡೆದುಕೊಂಡರು. ಆಂಗ್ಲರು ಅನಂತರ ತಾವು ಆಕ್ರಮಿಸಿಕೊಂಡಿದ್ದ ಅಲಿಕುಣ್ಣು ಕೋಟೆಯನ್ನು ತೆರವುಗೊಳಿಸಿದ ತಕ್ಷಣ ಬಿದನೂರಿನ ಅಧಿಕಾರಿಗಳು ಆಕ್ರಮಿಸಿಕೊಂಡರು. ಹೀಗೆ ಮಾಡಿದ ಪರಿಣಾಮವಾಗಿ ಬಿದನೂರಿನ ನಾಯಕನು ಕೊಳ್ಳತಿರಿ ಎಲ್ಲೆಯಲ್ಲಿ ಬರುವ ನೀಲೇಶ್ವರದ ಭಾಗವನ್ನು ತನ್ನ ಅಧಿಕಾರಕ್ಕೆ ತೆಗೆದುಕೊಂಡನು. ಕೊಳ್ಳತಿರಿ ಮನೆತನದ ನೇರ ಸಂಬಂಧಿಯಾಗಿದ್ದ ನೀಲೇಶ್ವರದ ರಾಜನು ತನ್ನ ಹತೋಟಿಯಲ್ಲಿ ಅದನ್ನು ಸಂರಕ್ಷಿಸಿದನು.

## ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕಾಲ

ಹೈದರಾಲಿಯು ತುಳುನಾಡನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸಿದಾಗ ತುಳುವರು ತಮ್ಮ ವ್ಯಕ್ತಿಗತ ಮಹತ್ವವನ್ನು ಕಳೆದುಕೊಳ್ಳುವಂತಾಯಿತು. ಬಿದನೂರಿನಲ್ಲಿ ಈ ಸಂದರ್ಭದಲ್ಲಿ ಆಳುತ್ತಿದ್ದ ರಾಣಿ ವೀರಮ್ಮಾಜಿ (ಕ್ರಿ ಶ. ೧೭೫೭-೧೭೬೩)ಹಲವು ರೀತಿಯಲ್ಲಿ ಆಡಳಿತ ದೌರ್ಬಲ್ಯಕ್ಕೆ ಗುರಿಯಾಗಿದ್ದಳು. ಬಿದನೂರಿನ ರಾಜಕೀಯ ಪರಿಸ್ಥಿತಿಯು ಕ್ರಿ.ಶ. ೧೭೬೩ರ ವೇಳೆಗೆ ಮತ್ತಷ್ಟು ಹದಗೆಟ್ಟಾಗ ಹೈದರಾಲಿಯು ಬಿದರನೂರನ್ನು ತನ್ನ ವಶಕ್ಕೆ ತೆಗೆದುಕೊಂಡು ಆ ಸ್ಥಳವನ್ನು 'ಹೈದರ್‌ನಗರ'ವೆಂದು ನಾಮಕರಣ ಮಾಡಿದನು. ಬಿದನೂರನ್ನು ವಶಪಡಿಸಿಕೊಂಡ ತರುವಾಯ ಹೈದರಾಲಿ ಅದರ ಪರಿಸ್ಥಿತಿಯ ಬಗ್ಗೆ ಗಮನ ನೀಡಲು ಆರಂಭಿಸಿದನು. ಆತನು ಬಸವರಾಜದುರ್ಗ, ಹೊನ್ನಾವರ, ಮತ್ತು ಮಂಗಳೂರುಗಳನ್ನು ಆಕ್ರಮಿಸಿದನು. ಅನಂತರ ಬಲ್ಲಾಳರಾಯದುರ್ಗದಲ್ಲಿ ರಾಣಿ ವೀರಮ್ಮಾಜಿಯು ಅಡಿಗಿಕೊಂಡಿರುವ ವಿಚಾರ ತಿಳಿದು ಅದನ್ನೂ ತನ್ನ ಹತೋಟಿಗೆ ತೆಗೆದುಕೊಂಡನು. ಪಶ್ಚಿಮ ಕರಾವಳಿಯ ಪ್ರಮುಖ ವಾಣಿಜ್ಯ ಪಟ್ಟಣಗಳ ಪೈಕಿ ಮಂಗಳೂರು ಒಂದು ಮುಖ್ಯ ನೌಕಾ ನೆಲೆಯಾಗಬಹುದೆಂದು ಅರಿತಿದ್ದ ಹೈದರಾಲಿಯು ಈ ನಗರದಲ್ಲಿ ರೇವುಪಟ್ಟಣ ಹಾಗೂ ಜಠಿಲವಾದ ಬಂದರು ವಹಿವಾಟುಗಳನ್ನು ನಡೆಸುವ ಸಾಮರ್ಥ್ಯವುಳ್ಳ ಕೇಂದ್ರವನ್ನಾಗಿ ಪರಿವರ್ತಿಸಿದನು. ಇಷ್ಟೇ ಅಲ್ಲದೆ, ಮಂಗಳೂರನ್ನು ತನ್ನ ಆಳ್ವಿಕೆಯ ಪ್ರಮುಖ ರೇವುಪಟ್ಟಣವನ್ನಾಗಿ ಮಾಡಿದ ನಂತರ ಹೈದರಾಲಿಯು ತನ್ನ ಸೇನಾಧಿಪತಿಯಾಗಿದ್ದ ಲತೀಫ್ ಅಲಿ ಬೇಗ್ ಎಂಬುವ ವ್ಯಕ್ತಿಯನ್ನು ಇಲ್ಲಿಯ ನೌಕಾಬಲದ ಪರಿವೀಕ್ಷಣೆಗಾಗಿ ನೇಮಿಸಿದನು. ಹೈದರಾಲಿಯು ಕ್ರಿ. ಶ. ೧೭೬೫ರಲ್ಲಿ ತುಳುವನಾಡಿನ ದೇವಾಲಯ ಒಂದಕ್ಕೆ ದತ್ತಿಬಿಟ್ಟ ವಿಚಾರವು ದಾಖಲೆಗಳಿಂದ ವ್ಯಕ್ತವಾಗುತ್ತದೆ. ತುಳುವನಾಡಿನಲ್ಲಿ ಹೈದರ್ ನಡೆಸಿದ ಕ್ಷಿಪ್ರ ಕಾರ್ಯಾಚರಣೆಯ ಪರಿಣಾಮವಾಗಿ ಅಲ್ಲಿ ಅಸ್ತಿತ್ವದಲ್ಲಿದ್ದ ಹಲವು ಸಣ್ಣಪುಟ್ಟ ಮಾಂಡಲಿಕರುಗಳು ವಾಸ್ತವವಾಗಿ ಸ್ತಬ್ಧವಾಗಿದ್ದರು.

ಆದರೇ, ಹೈದರಾಲಿಯ ಮಂಗಳೂರಿನಲ್ಲಿ ಕ್ರಮೇಣ ತನ್ನ ನೌಕಾಬಲದ ಹಿತರಕ್ಷಣೆ ಮತ್ತು ವಿಸ್ತರಣೆಯನ್ನು ಕೈಗೊಂಡ ಪ್ರತಿಯೊಂದು ಹೆಜ್ಜೆಯನ್ನು ತದೇಕಚಿತ್ತದಿಂದ ಗಮನಿಸುತ್ತಿದ್ದ ಆಂಗ್ಲರು, ಮುಂದೆ ತಮ್ಮ ಕಡಲ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ಒದಗಬಹುದಾದ ಅಪಾಯವನ್ನು ಮನಗಂಡರು. ಬ್ರಿಟೀಷರ ಹಡಗುಗಳು ಮಂಗಳೂರಿನ ಸುತ್ತಮುತ್ತಲ ಅರೇಬಿಯನ್ ಸಾಗರದ ನೀರಿನಲ್ಲಿ ಪ್ರವೇಶಿಸುವುದಕ್ಕೆ ನಿರ್ಬಂಧ ವಿಧಿಸುವುದು ಹೈದರಾಲಿಯ ಆಂತರಿಕ ಉದ್ದೇಶವಾಗಿತ್ತು. ಆದುದರಿಂದ ಕ್ರಿ.ಶ. ೧೭೬೬ರಲ್ಲಿ ಆಂಗ್ಲರಿಗೂ ಹೈದರಾಲಿಗೂ

ಯುದ್ಧ ಆರಂಭವಾದಾಗ ಮುಂಬೈಯಲ್ಲಿದ್ದ ಬ್ರಿಟೀಷರ ನೌಕಾಪಡೆಯನ್ನು ಅಡ್ಮಿರಲ್ ವ್ಯಾಟ್ಸನ್‌ನ ನೇತೃತ್ವದಲ್ಲಿ ಫೆಬ್ರವರಿ ೧೭೬೮ರಲ್ಲಿ ಮಂಗಳೂರಿಗೆ ರವಾನಿಸಲಾಯಿತು. ಆಂಗ್ಲರ ನೌಕಾ ಸಾಮರ್ಥ್ಯವನ್ನು ಎದುರಿಸಲು ಹೈದರಾಲಿಯ ನೌಕಾ ಮುಖಂಡ ಲತೀಫ್ ಅಲಿ ಬೇಗ್ ವಿಫಲನಾದಾಗ ಬಹಳ ಸುಲಭವಾಗಿ ಆಂಗ್ಲರು ಮಂಗಳೂರು ರೇವುಪಟ್ಟಣವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಈ ಸಾಧನೆಯು ಆಂಗ್ಲರು ಬಹಳ ಪ್ರತಿಷ್ಠಿತ ವಿಜಯವೆಂದೂ ಹಾಗೂ ಭಾರತದಲ್ಲಿ ತಮ್ಮ ಸಾಮ್ರಾಜ್ಯದ ವಿಸ್ತರಣೆಗೆ ಇದೊಂದು ಮೈಲಿಗಲ್ಲೆಂದೂ ಪರಿಗಣಿಸಿದರು. ಮಂಗಳೂರನ್ನು ವಶಪಡಿಸಿಕೊಂಡ ವಾರ್ತೆಯನ್ನು ನೂರು ಜನರಿಗೆ ನೀಡುವ ಉದ್ದೇಶದಿಂದ ಇವರು ಮದ್ರಾಸಿನ ಫೋರ್ಟ್ ಸೈಂಟ್ ಜಾರ್ಜ್‌ನಲ್ಲಿ ತೋಪು ಹಾರಿಸುವ ಮೂಲಕ ಸಂಭ್ರಮಿಸಿದರೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಆದರೇ, ಹೈದರ್ ಅಲಿಯ ಮಗ ಟಿಪ್ಪುಸುಲ್ತಾನನು ಮಿಂಚಿನಂತೆ ಮಂಗಳೂರಿನ ಮೇಲೆ ಮರು ಆಕ್ರಮಣ ಮಾಡಿ ಆಂಗ್ಲರನ್ನು ಅಲ್ಲಿಂದ ತೆರವುಗೊಳಿಸಿದಾಗ ಬ್ರಿಟಿಷರ ಈ ಸಂಭ್ರಮವು ಕ್ಷಣಿಕವಾದುದಾಗಿತ್ತೆಂದು ಸ್ವಯಂ ವೇದ್ಯವಾಗುತ್ತದೆ. ಟಿಪ್ಪುವಿನ ಈ ಪ್ರಬಲ ಆಕ್ರಮಣವನ್ನು ಹೈದರ್ ಅಲಿಯು ಮುಂದಾಗಿ ನಿಂತು ಮಾರ್ಗದರ್ಶಿಸಿದ್ದನು. ಟಿಪ್ಪುವಿನ ಅನಿರೀಕ್ಷಿತ ದಾಳಿಗೆ ತತ್ತರಿಸಿದ ಆಂಗ್ಲರು ತಮ್ಮೊಡನಿಂದ ೮೦ ಯೂರೋಪಿಯನ್ ಹಡಗುಗಳನ್ನು ಹಾಗೂ ೧೮೦ ಸೈನಿಕರನ್ನು ಹಾಗೂ ಹೇರಳವಾದ ಮದ್ದು, ಗಂಡು ಹಾಗೂ ಬಂದೂಕಗಳನ್ನು ಮಂಗಳೂರಿನಲ್ಲೆ ಬಿಟ್ಟು ಮುಂಬೈಗೆ ಪಲಾಯನ ಮಾಡಿದ್ದರು. ಸುಮಾರು ಒಂದು ವಾರದಲ್ಲಿ ಟಿಪ್ಪು ಸುಲ್ತಾನನು ಮಂಗಳೂರನ್ನು ಆಂಗ್ಲರಿಂದ ವಿಮುಕ್ತಗೊಳಿಸುವಲ್ಲಿ ಯಶಸ್ವಿಯಾಗಿದ್ದನು. ಆಂಗ್ಲರು ವಿಧಿಯಿಲ್ಲದೇ ಹೈದರ್ ಅಲಿಯೊಂದಿಗೆ ಶಾಂತಿಸಂಧಾನ ಮಾಡಿಕೊಳ್ಳಲು ಮುಂದಾದರು. ಈ ವೇಳೆಗಾಗಲೇ ಮಂಗಳೂರಿನ ಕರಾವಳಿಯ ಪ್ರಶ್ನಾತೀತ ನಾಯಕರಾಗುವ ಕನಸನ್ನು ಕಂಡು ಆಂಗ್ಲರಿಗೆ ಸಹಾಯ ಹಸ್ತ ನೀಡಿದ್ದ ಪೋರ್ಚುಗೀಸರಿಗೆ ಆಂಗ್ಲ ಸಾಮರ್ಥ್ಯದ ಬಗ್ಗೆ ಭ್ರಮನಿರಸನವಾಗಿತ್ತು.

**ಮಂಗಳೂರು ಒಪ್ಪಂದ**

ಮಂಗಳೂರನ್ನು ಬ್ರಿಟಿಷ್ ಸೇನೆಯು ಆಕ್ರಮಿಸಿದ ಘಟನೆಯು ಭಾರತದ ಇತಿಹಾಸದಲ್ಲೇ ಆಂಗ್ಲರ ಅಧಿಕಾರ ವಿಸ್ತರಣೆಯ ಪ್ರಯತ್ನದಲ್ಲಿ ಪ್ರಮುಖ ಹಂತವೆಂದು ಪರಿಗಣಿಸಿ ಫೋರ್ಟ್ ಸೈಂಟ್‌ಜಾರ್ಜ್‌ಕೋಟೆಯಲ್ಲಿ ತುಪಾಕಿಗಳನ್ನು ಹಾರಿಸುವ ಮೂಲಕ ಆಚರಿಸಲಾಯಿತೆಂದು ತಿಳಿದು ಬರುತ್ತದೆ. ಆದರೇ, ಈ ವಿಜಯೋತ್ಸವವು ತಾತ್ಕಾಲಿಕವಾಗಿದ್ದು ಟಿಪ್ಪೂ ಸುಲ್ತಾನನು ತನ್ನ ಪ್ರಬಲ ಸೇನೆಯೊಂದಿಗೆ ಮಂಗಳೂರಿನ ಮೇಲೆ ದಾಳಿ ಮಾಡಿದನು. ಈ ದಾಳಿಯು ಹಿಂದೆ ೧೭೬೬ರಲ್ಲಿ ಹೈದರಾಲಿಯು ಆಂಗ್ಲರ ವಿರುದ್ಧ ನಡೆಸಿದ ಯುದ್ಧಗಳಲ್ಲಿ ಅನುಭವಿಸಿದ್ದ ಸೋಲಿಗೆ ನೀಡಿದ್ದ ಉತ್ತರವಾಗಿತ್ತು. ಆಂಗ್ಲರಿಂದ ಮಂಗಳೂರನ್ನು ತನ್ನ ವಶಕ್ಕೆ ತೆಗೆದುಕೊಂಡ ಮೇಲೆ ಸೆಪ್ಟೆಂಬರ್ ೧೭೭೦ರಲ್ಲಿ ಒಪ್ಪಂದವನ್ನು ಮಾಡಿಕೊಂಡನು. ಈ ಒಪ್ಪಂದವನ್ನು "ಮಂಗಳೂರು ಒಪ್ಪಂದ" ವೆಂದು ಕರೆಯಲಾಗುತ್ತದೆ. ಬೊಂಬಾಯಿಗೆ ಮಂಗಳೂರಿನಿಂದ ಉತ್ತಮ ಗುಣಮಟ್ಟದ ಅಕ್ಕಿಯನ್ನು ಸರಬರಾಜು ಮಾಡಬೇಕಾದುದು ಈ ಒಪ್ಪಂದದ ಮೂಲ ನಿಯಮವಾಗಿತ್ತು. ಮಂಗಳೂರಿನ ಬಗ್ಗೆ ಪೋರ್ಚುಗೀಸರು ಹೊಂದಿದ್ದ ಆಸಕ್ತಿಯ ಸಂಕೇತವಾಗಿ ಈ ಸ್ನೇಹಪರ(೧೭೭೧)ಒಪ್ಪಂದಕ್ಕೆ ನಾಂದಿಯಾಯಿತು. ಕ್ರೈಸ್ತಧರ್ಮೀಯರಿಗೆ ತಮ್ಮ ಚರ್ಚ್‌ಗಳಲ್ಲಿ ಪಾದ್ರಿಗೆ ನ್ಯಾಯ ವಿತರಣೆಯ ವೈಯಕ್ತಿಕ ಸ್ವಾತಂತ್ರ್ಯವನ್ನು ನೀಡುವುದು ಈ ಒಪ್ಪಂದದ ಪ್ರಮುಖ ಅಂಶವಾಗಿತ್ತು. ಈ ಒಪ್ಪಂದದ ಪರಿಣಾಮವಾಗಿ ೧೭೭೬ರಲ್ಲಿ ಧಾರ್ಮಿಕ ಹಕ್ಕು ಬಾಧ್ಯತೆಗಳನ್ನು ನವೀಕರಿಸುವ ಮೂಲಕ ಪೋರ್ಚುಗೀಸರನ್ನು ಅವರು ಹೊಂದಿದ್ದ ಕಾರ್ಖಾನೆಗಳಿಂದ ತೆರವುಗೋಳಿಸಿ, ಆ ಪ್ರದೇಶಗಳಲ್ಲಿ ಬಲವಾದ ನೌಕಾನೆಲೆಯನ್ನು ಅಭಿವೃದ್ಧಿಗೊಳಿಸುವುದು ಮುಖ್ಯ ಅಂಶವಾಗಿತ್ತು.

ಪೋರ್ಚುಗೀಸರು ಆಂಗ್ಲರಿಗೆ ನೀಡಿದ್ದ ಗೋಪ್ಯ ಸಹಾಯದ ಬಗ್ಗೆ ತಿಳಿದ ಹೈದರಾಲಿಯು ತಕ್ಷಣ ಪೋರ್ಚುಗೀಸ್ ವರ್ತಕರನ್ನು ಮತ್ತು ಚರ್ಚಿನಲ್ಲಿದ್ದ ಪಾದ್ರಿಗಳನ್ನು ತನ್ನ ಆಸ್ಥಾನಕ್ಕೆ ಕರೆಸಿ, ನಿಮ್ಮ ದೇಶದಲ್ಲಿ ಈ ರೀತಿಯ ದೇಶದ್ರೋಹಿ(ರಾಜದ್ರೋಹಿ)ಗಳಿಗೆ ಯಾವ ಕಠಿಣ ಶಿಕ್ಷೆಗಳನ್ನು ನೀಡಲಾಗುತ್ತಿದ್ದುದರ ಬಗ್ಗೆ ಪ್ರಶ್ನಿಸಿದಾಗ, ಅವರುಗಳು 'ಮರಣದಂಡನೆ' ಎಂದು ತಿಳಿಸುತ್ತಾರೆ. ಅದಕ್ಕೆ ಹೈದರಾಲಿಯು ಮರಣದಂಡನೆ ವಿಧಿಸುವಷ್ಟು ತಾನು ಅಮಾನುಷನಲ್ಲವೆಂದು ಹೇಳಿ ಅವರುಗಳಿಗೆ ಸೆರೆಮನೆ ವಾಸದ ಶಿಕ್ಷೆಯನ್ನು ವಿಧಿಸುತ್ತಾನೆ ಹಾಗೂ ಅವರುಗಳ ಆಸ್ತಿಪಾಸ್ತಿಗಳನ್ನು ವಶಕ್ಕೆ ತೆಗೆದುಕೊಳ್ಳಲು ಆದೇಶಿಸುತ್ತಾನೆ. ಈ ಶಿಕ್ಷೆಯೂ ಸಹ ಆಂಗ್ಲರು ತನ್ನ ಸಾಮ್ರಾಜ್ಯದೊಡನೆ ಶಾಂತಿ ಒಪ್ಪಂದ ಮಾಡಿಕೊಳ್ಳುವವರೆಗೆ ಮಾತ್ರ ಎಂಬ ನಿಯಮವನ್ನೂ ಪ್ರಕಟಿಸಿ ತನ್ನ ಔದಾರ್ಯ ಸಹಿತವಾದ ಆಡಳಿತ ನೀತಿಯನ್ನು ಪ್ರದರ್ಶಿಸುತ್ತಾನೆ. ನಂತರ ಕ್ರಿ. ಶ. ೧೭೭೦ರಲ್ಲಿ ಆಂಗ್ಲರೊಂದಿಗೆ ಈ ಶಾಂತಿ ಒಪ್ಪಂದವು ಕೈಗೂಡುತ್ತದೆ. ಇದರ ಪ್ರಕಾರ ಮಂಗಳೂರಿನ ಬಂದರಿನಿಂದ ಮುಂಬೈಗೆ ಅಕ್ಕಿಯನ್ನು ರಫ್ತು ಮಾಡಬೇಕೆಂದು ತೀರ್ಮಾನಿಸಲಾಗಿರುತ್ತದೆ. ಈ ಒಪ್ಪಂದವಾದ ಒಂದು ವರ್ಷದ ನಂತರ ಹೈದರಾಲಿಯು

ಪೋರ್ಚುಗೀಸರೊಂದಿಗೂ ಶಾಂತಿ ಒಪ್ಪಂದವನ್ನು ಮೊದಲೇ ತಿಳಿಸಿದಂತೆ ಮಾಡಿಕೊಂಡು ಮಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಇವರ ವಾಣಿಜ್ಯ ಚಟುವಟಿಕೆಗಳು ಮಾತ್ರ ಮುಂದುವರೆಯಲು ನೆರವಾಗುತ್ತಾನೆ. ಪೋರ್ಚುಗೀಸ ಚರ್ಚ್‌ಗಳ ಮೇಲೆ ವಿಧಿಸಿದ್ದ ನಿರ್ಬಂಧವನ್ನು ಸರಳಗೊಳಿಸಿ ಪ್ಯಾರಿಷ್ ಪಾದ್ರಿಗಳಿಗೆ ಕ್ರೈಸ್ತರಿಗೆ ನ್ಯಾಯ ವಿತರಣೆಯನ್ನು ಮಾಡುವ ಹಾಗೂ ಕ್ರೈಸ್ತ ಧರ್ಮಕ್ಕೆ ವೈಯಕ್ತಿಕ ಇಚ್ಛೆಯ ಮೇಲೆ ಪರಿವರ್ತನೆ ಮಾಡುವ ಸ್ವಾತಂತ್ರ್ಯವನ್ನೂ ಸಹ ನೀಡುತ್ತಾನೆಂದು ವ್ಯಕ್ತವಾಗುತ್ತದೆ. ಹೈದರಾಲಿಯು ಕ್ರಿ. ಶ. ೧೭೭೯ರಲ್ಲಿ ಹೀಗೆ ನೀಡಿದ ಹಲವು ಸೌಲಭ್ಯಗಳನ್ನು ರದ್ದುಗೊಳಿಸಿ ಮಂಗಳೂರಿನಲ್ಲಿರುವ ಪೋರ್ಚುಗೀಸರ ಕಾರ್ಖಾನೆಯಿಂದ ಅವರನ್ನು ತೆರವುಗೊಳಿಸಿ, ಅವರು ಸ್ಥಾಪಿಸಿಕೊಂಡಿದ್ದ ನದಿಯ ತೀರದ ಪ್ರದೇಶದಲ್ಲಿ ಪ್ರಬಲ ನೌಕಾಪಡೆಯನ್ನು ಸ್ಥಾಪಿಸಲು ಆದೇಶಿಸಿದನು. ಮಂಗಳೂರನ್ನು ಕ್ರಿ. ಶ. ೧೭೬೮ರಲ್ಲಿ ಆಂಗ್ಲರಿಂದ ತನ್ನ ವಶಕ್ಕೆ ತೆಗೆದುಕೊಂಡ ನಂತರ ಈತನು ತನ್ನ ಸೇನೆಯೊಂದಿಗೆ ಸುಬ್ರಹ್ಮಣ್ಯ ಘಟ್ಟದ ಮಾರ್ಗದ ಮೂಲತಃ ಬಯಲು ಸೀಮೆಯನ್ನು ತಲುಪಿದನು. ಕ್ರಿ.ಶ. ೧೭೬೮ರಲ್ಲಿ ಇಂಗ್ಲೀಷರಿಂದ ಮಂಗಳೂರನ್ನು ವಶಪಡಿಸಿಕೊಂಡ ಹೈದರನು ಘಟ್ಟವನ್ನು ಹತ್ತಿ ಸುಬ್ರಹ್ಮಣ್ಯ ಕಣಿವೆಯ ಮೂಲಕ ಹಿಂತಿರುಗಿದನು. ಯುದ್ಧದಲ್ಲಿ ನೀಡಿದ ಸಹಾಯಕ್ಕೆ ಪ್ರತಿಯಾಗಿ, ಆ ಸಮಯದಲ್ಲಿ ಅವನು ಕೊಡಗಿನ ರಾಜನಿಗೆ ಪುತ್ತೂರು ತಾಲೂಕಿನ ಪಂಜ ಮತ್ತು ಬೆಳ್ಳಾರೆಗಳನ್ನು ಬಿಟ್ಟುಕೊಟ್ಟನು. ಆದರೆ ಮುಂದೆ ೧೭೭೪ರಲ್ಲಿ ಈ ಎರಡೂ ಮಾಗಣೆಗಳ ಜೊತೆಗೆ ಕೆಳದಿಯ ಎರಡನೇ ಸೋಮಶೇಖರ ನಾಯಕನು ಸುಮಾರು ೪೦ ವರ್ಷಗಳ ಹಿಂದೆ, ಕೊಡಗಿನ ರಾಜನಿಗೆ ಬಿಟ್ಟುಕೊಟ್ಟಿದ್ದ ಅಮರ ಮತ್ತು ಸುಳ್ಯ ಎಂಬ ಮಾಗಣೆಗಳನ್ನೂ ತನ್ನ ರಾಜ್ಯಕ್ಕೆ ಸೇರಿಸಿಕೊಂಡನು.

ಎರಡನೇ ಮೈಸೂರು ಯುದ್ಧವು ಕ್ರಿ. ಶ. ೧೭೮೧ರಲ್ಲಿ ಆರಂಭವಾಗಿ ಯುದ್ಧವು ಪ್ರಗತಿಯಲ್ಲಿದ್ದಾಗ, ಡಿಸೆಂಬರ್ ೧೭೮೨ರಲ್ಲಿ ಹೈದರಾಲಿಯು ಚಿತ್ತೂರು (ಆಂಧ್ರಪ್ರದೇಶ) ಸೇನಾ ಮೊಕ್ಕಾಂನಲ್ಲಿ ನಿಧನನಾದಾಗ ಅವನ ಮಗ ಟಿಪ್ಪು ಸುಲ್ತಾನನು ಉತ್ತರಾಧಿಕಾರಿಯಾದನು. ಹೈದರಾಲಿಯ ನಿಧನವನ್ನು ಹಾಗೂ ನಂತರದ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಮುಂಬೈಯಿಂದ ಆಂಗ್ಲ ಸೇನಾ ಮುಖಂಡ ಜನರಲ್ ಮ್ಯಾಥ್ಯು ಕುಂದಾಪುರಕ್ಕೆ ಪ್ರಬಲ ಸೇನೆಯೊಂದಿಗೆ ಧಾವಿಸಿ ಬಂದನು. ಈ ಅನಿರೀಕ್ಷಿತ ಸೇನಾ ಕ್ರಮದಿಂದಾಗಿ ಯಶಸ್ಸು ದೊರೆಯಿತು. ಈತನ ಪ್ರಥಮ ಯಶಸ್ಸೆಂದರೇ ಹೊಸಅಂಗಡಿ ಘಟ್ಟ ರಸ್ತೆಯ ಸಂರಕ್ಷಣಾ ಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಂಡದ್ದೇ ಆಗಿತ್ತು. ಜನರಲ್ ಮ್ಯಾಥ್ಯು ಕೇವಲ ಮೂರೇ ದಿನಗಳಲ್ಲಿ ಕ್ಷಿಪ್ರ ಕಾರ್ಯಾಚರಣೆಗೆ ಮಾಡಿ ದಟ್ಟವಾದ ಅರಣ್ಯಗಳಿಂದ ಸುತ್ತುವರೆದ ಹೊಸಅಂಗಡಿಯನ್ನು ಅನೇಕ ಕಷ್ಟಗಳ ನಡುವೆ (ಅಂದರೇ ತನ್ನ ಸೇನೆಗೆ ಆಹಾರದ ಕೊರತೆ ಇದ್ದು) ರಸ್ತೆಯ ಸಾಲು ಮರಗಳನ್ನು ಕಡಿದು ಅಡ್ಡಗಟ್ಟಿ ಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಂಡನೆಂದು ಆಂಗ್ಲ ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಸೇನಾಧಿಕಾರಿ ಕರ್ನಲ್ ಮ್ಯಾಕಲ್‌ಯೋಡ್‌ನ ನೇತೃತ್ವದಲ್ಲಿ ಆಂಗ್ಲ ಸೈನಿಕರು ಈ ಕೋಟೆಯನ್ನು ರಾತ್ರಿಯೋ ತಮ್ಮ ವಶಕ್ಕೆ ತೆಗೆದುಕೊಂಡು ಮುಂಜಾನೆ ನೋಡಲು ಅಲ್ಲಿ ೧೫ ಬಂದೂಕಗಳು ಬಿದ್ದಿದ್ದು ಕಂಡುಬಂದಿತು. ಇಲ್ಲಿಂದ ತಮ್ಮ ಸೇನೆಯ ಆಕ್ರಮಣವನ್ನು ಮುಂದುವರೆಸಿದ ಆಂಗ್ಲರು ನಿರಂತರವಾದ ಹೋರಾಟವನ್ನು ಮುಂದುವರೆಸಿ ಹೈದರ್‌ಗಡ್ (೧೭೦೦೦ ಸೈನಿಕರ ರಕ್ಷಣೆಯಿದ್ದ) ಕೋಟೆಯನ್ನು ಬಹಳ ಪ್ರಯಾಸದಿಂದ ತಮ್ಮ ವಶಕ್ಕೆ ತೆಗೆದುಕೊಂಡರು. ಈ ಸೆಣಸಾಟದ ಆತನ ೫೦ ಸೈನಿಕರಿಗೆ ತೀವ್ರತರವಾದ ಗಾಯಗಳುಂಟಾದವು. ಇಲ್ಲಿಂದ ಮುಂದುವರೆದ ಜನರಲ್ ಮ್ಯಾಥ್ಯು ಬಿದನೂರಿನ ಕಡೆಗೆ ಸಂಚರಿಸಿದನು. ಈ ಸಂದರ್ಭದಲ್ಲಿ ಬಿದನೂರಿನಲ್ಲಿದ್ದ ಇಯಾಜ್ ಖಾನ್ ಎಂಬ ದೇಶದ್ರೋಹಿಯ ಸಹಾಯದಿಂದ ಅತ್ಯಂತ ಸುಲಭವಾಗಿ, ಈ ಹೈದರ್ ನಗರವನ್ನು ತನ್ನ ವಶಕ್ಕೆ ತೆಗೆದುಕೊಂಡನು. ಟಿಪ್ಪುಸುಲ್ತಾನನು ತನ್ನನ್ನು ಬಿದನೂರಿನ ಪದವಿಯಿಂದ ತೆಗೆದು ಹಾಕುವನೆಂಬ ಸುಳಿವಿನ ಮೇಲೆ ಇಯಾಝ್ ಖಾನನು ಕೋಟೆಯ ಬಾಗಿಲನ್ನು ತೆಗೆದು ಆಂಗ್ಲ ಸೇನಾಧಿಕಾರಿಯನ್ನು ಮುಕ್ತವಾಗಿ ಬರಮಾಡಿಕೊಂಡು ತನ್ನ ದೇಶದ್ರೋಹಿತನವನ್ನು ಮೆರೆದನು. ಜನರಲ್ ಮ್ಯಾಥ್ಯು ಸಾಧಿಸಿದ ಈ ವಿಜಯವು ಕೇವಲ ಕ್ಷಣಿಕವಾಗಿತ್ತು. ಏಕೆಂದರೇ ಮಾರ್ಚ್ ೧೭೮೩ರ ಕೊನೆಯಲ್ಲಿ ಈ ಪ್ರದೇಶವನ್ನು ತನ್ನ ಪ್ರಬಲ ಸೇನಾಬಲದೊಂದಿಗೆ ಪ್ರವೇಶಿಸಿದ ಟಿಪ್ಪು ಸುಲ್ತಾನನು ಪುನಃ ಬಿದನೂರಿನ ಅಥವಾ ಹೈದರ್‌ನಗರದ ಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಂಡನು.

ಬಿದನೂರಿನ ತನ್ನ ಬಲಿಷ್ಠ ಸೇನಾ ಕ್ರಮವನ್ನು ಜರುಗಿಸುತ್ತಿರುವಾಗಲೇ ಟಿಪ್ಪು ಸುಲ್ತಾನನು ತನ್ನ ಇನ್ನೊಂದು ಸೇನಾ ತುಕಡಿಯನ್ನು ಮಂಗಳೂರಿನ ಮೇಲೆ ಆಕ್ರಮಣಕ್ಕಾಗಿ ಕಳುಹಿಸಿದ್ದನು. ಆದರೆ, ಇದನ್ನು ಪೂರ್ವಭಾವಿಯಾಗಿ ಅರಿತುಕೊಂಡಿದ್ದ ಆಂಗ್ಲರು ಮಂಗಳೂರಿನಿಂದ ೧೨ ಮೈಲಿಗೆ ಮೊದಲೇ ಈ ಸೇನಾತುಕಡಿಯ ಮೇಲೆ ದಾಳಿ ನಡೆಸಿ ಈ ಸೇನೆಯನ್ನು ಸಂಪೂರ್ಣವಾಗಿ ಪರಾಭವಗೊಳಿಸಿದರು. ತನ್ನ ಸೇನಾ ಕಾರ್ಯತಂತ್ರದ ವಿಫಲತೆಯ ವಾರ್ತೆಯನ್ನು ಕೇಳಿದ ಟಿಪ್ಪು ಸುಲ್ತಾನನು ತಾನೇ ಪ್ರಬಲ ಸೇನೆಯೊಂದಿಗೆ ಮಂಗಳೂರಿನ ಮೇಲೆ ಎರಗಲು ನಿರ್ಧರಿಸಿದನು. ಆಗ ಮಂಗಳೂರಿನಲ್ಲಿ ಬೀಡುಬಿಟ್ಟಿದ್ದ ಸುಮಾರು ೭೦೦ ಯೂರೋಪಿಯನ್ನರು ಮತ್ತು ೨,೦೦೦ ಸಿಪಾಯಿಗಳಿದ್ದ

ಕರ್ನಲ್ ಕ್ಯಾಂಪ್‌ಬೆಲ್‌ನ ಮುಖಂಡತ್ವದಲ್ಲಿ ಪ್ರಬಲ ವಿರೋಧವನ್ನು ಟಿಪ್ಪುವಿನ ಸೇನೆಗೆ ವ್ಯಕ್ತಪಡಿಸಿದನು. ಈ ವೇಳೆಗಾಗಲೇ ಮುಂಗಾರು ಮಳೆ ಆರಂಭಗೊಂಡ ಹಿನ್ನೆಲೆಯಲ್ಲಿ ಟಿಪ್ಪು ಸುಲ್ತಾನನು ತನ್ನ ಅಶ್ವಪಡೆಯ ಬಹುತೇಕ ಭಾಗವನ್ನು ಹಿಂದಕ್ಕೆ ಕಳುಹಿಸಿ ಉಳಿದ ಅಲ್ಪ ಸಂಖ್ಯೆಯ ಸೇನೆಯೊಂದಿಗೆ ಹೋರಾಡಬೇಕಾದ ಪ್ರಸಂಗ ಬಂದಾಗ, ಈ ಹೋರಾಟದಲ್ಲಿ ಆತನು ಸೋಲು ಅನುಭವಿಸಬೇಕಾಯಿತು. ದಿನಾಂಕ: ೨ನೇ ಆಗಸ್ಟ್ ೧೭೮೩ರಲ್ಲಿ ತಾನು ಹೊಂದಿದ್ದ ಕೋಟೆಯನ್ನು ತನ್ನ ಸೇನೆಯೊಂದಿಗೆ ಸಂರಕ್ಷಿಸಲು ಪ್ರಯತ್ನಿಸಿದಾಗ ಮುಂಗಾರು ಮಳೆ ಜಾಸ್ತಿಯಾದಾಗ ಆತನ ಸೈನಿಕರು ಹೇಳಿಕೊಳ್ಳಲಾಗದ ಸಾವುನೋವುಗಳಿಗೆ ಗುರಿಯಾದರು. ಹೀಗಾದರೂ ಟಿಪ್ಪು ಮಂಗಳೂರಿನ ಕೋಟೆಯ ಮೇಲಿನ ತನ್ನ ಆಕ್ರಮಣವನ್ನು ಮುಂದುವರೆಸುತ್ತಾ ಇದ್ದನು. ಇಂಥಹ ದುರ್ಬಲ ಸಮಯವನ್ನು ಉಪಯೋಗಿಸಿಕೊಂಡ ಜನರಲ್ ಮ್ಯಾಕ್‌ಲೆಯೊಡ್ ತನ್ನ ಪ್ರಬಲ ಸೇನಾತುಕಡಿಯೊಂದಿಗೆ ಬಂದು ಮಂಗಳೂರನ್ನು ಆಕ್ರಮಿಸಿಕೊಂಡು ಅಲ್ಲೆ ಭದ್ರವಾಗಿ ನೆಲೆಸಿದನೆಂದು ವ್ಯಕ್ತವಾಗುತ್ತದೆ. ಆದರೇ, ಸುಮಾರು ಎರಡು ತಿಂಗಳುಗಳ ಕಾಲ ಸತತ ಹೋರಾಟದ ತರುವಾಯ ಆತನು ತನ್ನ ಸೇನೆಯೊಡನೆ ಎರಡನೇ ಡಿಸೆಂಬರ್ ೧೭೮೩ರಂದು ಮುಂಬೈಗೆ ನೌಕಾಯಾನ ಮಾಡಲು ನಿಶ್ಚಯಿಸಿದನು. ಹೀಗಿದ್ದರೂ, ಕೋಟೆಯ ಒಳಗಿನ ಪರಿಸ್ಥಿತಿಯು ಆಂಗ್ಲರಿಗೆ ಬೆಂಬಲಿತವಾಗಿರಲಿಲ್ಲ. ದಿನೇ ದಿನೇ ಆತನ ಸೇನಾತುಕಡಿಯಲ್ಲಿ ಅಸಹಾಯಕತೆ ಹಾಗೂ ದೌರ್ಬಲ್ಯತೆಯು ಅಧಿಕಗೊಂಡವು. ಇಂಥಹ ಆಂತರಿಕ ಪರಿಸ್ಥಿತಿಯನ್ನು ಅರಿತ ಕರ್ನಲ್ ಕ್ಯಾಂಪ್‌ಬೆಲ್ ೩೦ನೇ ಜನವರಿ ೧೮೮೪ರಂದು ತನ್ನ ಸೇನಾ ತುಕಡಿಯನ್ನು ತೆಲ್ಲಿಚೇರಿಗೆ ಕಳುಹಿಸಲು ತೀರ್ಮಾನಿಸಿದನು. ಟಿಪ್ಪುವಿನ ಈ ಹೋರಾಟದಲ್ಲಿ ಆತನಿಗೆ ಫ್ರೆಂಚರು ಗೋಪ್ಯವಾಗಿ ಬೆಂಬಲ ನೀಡಿದ್ದರೆಂದು ವ್ಯಕ್ತವಾಗುತ್ತದೆ. ಆದರೇ, ಯುರೋಪ್‌ನಲ್ಲಿ ಫ್ರೆಂಚರಿಗೂ ಮತ್ತು ಆಂಗ್ಲರ ನಡುವೆ ಅನೇಕ ವರ್ಷಗಳಿಂದ ಇದ್ದ ವೈಷಮ್ಯದ ಕಲಹಗಳು ಶಾಂತಿ ಒಪ್ಪಂದದ ಮೂಲಕ ಬಗೆಹರಿದಿತ್ತು. ಈ ಒಪ್ಪಂದದ ಪರಿಣಾಮವಾಗಿ ಫ್ರೆಂಚ್‌ರು ಟಿಪ್ಪುವಿಗೆ ನೀಡುತ್ತಿದ್ದ ಬೆಂಬಲವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾಯಿತು. ಹೀಗಾಗಿ ಆಂಗ್ಲರ ಕೈ ಪ್ರಬಲಗೊಂಡಿತು. ಮದರಾಸಿನ ರಾಜ್ಯಪಾಲನಾಗಿದ್ದ ಲಾರ್ಡ್ ಮೆಕಾರ್ಟನಿ ಟಿಪ್ಪು ವಿನ ವಿರುದ್ಧ ಯುದ್ಧವನ್ನು ಮುಂದುವರೆಸಲು ಆರ್ಥಿಕ ಕಾರಣಗಳಿಂದಾಗಿ ನಿರಾಸಕ್ತನಾಗಿದ್ದನು. ಇದೇ ಸಂದರ್ಭದಲ್ಲಿ ಯುರೋಪಿನಲ್ಲಿ ಫ್ರೆಂಚರಿಗೂ ಬ್ರಿಟಿಷರಿಗೂ ಏರ್ಪಟ್ಟ ಶಾಂತಿ ಸಂಬಂಧಗಳು ಭಾರತದಲ್ಲಿನ ಬ್ರಿಟಿಷರ ಆಡಳಿತದ ಮೇಲೂ ಪ್ರಭಾವ ಬೀರಿದುವು. ಲಾರ್ಡ್ ಮೆಕಾರ್ಟನಿ ಟಿಪ್ಪುಗೆ ಪತ್ರ ಬರೆದು ಯುರೋಪಿನ ಶಾಂತಿ ಒಪ್ಪಂದದ ಆಧಾರದ ಮೇಲೆ ಯುದ್ಧವನ್ನು ಸಮಾಪ್ತಿಗೊಳಿಸಲು ಶಾಂತಿ ಒಪ್ಪಂದ ಮಾಡಿಕೊಳ್ಳುವಂತೆ ಆಹ್ವಾನಿಸಿದನು. ನಂತರ ಇಬ್ಬರು ಕಮೀಷನರುಗಳನ್ನು ಟಿಪ್ಪುವಿನ ಜೊತೆಯಲ್ಲಿ ಶಾಂತಿ ಒಪ್ಪಂದಕ್ಕಾಗಿ ೧೭೮೩ ನವೆಂಬರ್‌ನಲ್ಲಿ ಮದರಾಸ್ ರಾಜ್ಯಪಾಲನು ನೇಮಿಸಿದನು. ಇವರ ಪ್ರಯತ್ನದಿಂದಾಗಿ ೧೧ನೇ ಮಾರ್ಚ್೧೭೮೪ರಂದು ಮಂಗಳೂರಿನಲ್ಲಿ ಬ್ರಿಟಿಷರೊಂದಿಗೆ ಒಪ್ಪಂದವನ್ನು ಸಹಿ ಮಾಡುವುದರೊಂದಿಗೆ ಎರಡನೇ ಆಂಗ್ಲೋ ಮೈಸೂರು ಯುದ್ಧವು ಪರಿಸಮಾಪ್ತಿಗೊಂಡಿತು. ಈ ಒಪ್ಪಂದದ ಪರಿಣಾಮವಾಗಿ ಹೈದರ್ ಆರಂಭಿಸಿದ ಬ್ರಿಟಿಷರ ವಿರುದ್ಧದ ನಾಲ್ಕು ವರ್ಷಗಳ ವೈರತ್ವವು ತಾತ್ಕಾಲಿಕವಾಗಿ ಅಂತ್ಯಗೊಂಡಿದ್ದೇ ಅಲ್ಲದೇ ಎರಡೂ ಸೇನೆಗಳಲ್ಲಿ ಸೆರೆಹಿಡಿಯಲಾಗಿದ್ದ ಯುದ್ಧ ಖೈದಿಗಳನ್ನು ಬಿಡುಗಡೆ ಹಾಗೂ ವಶಪಡಿಸಿಕೊಂಡ ಪ್ರದೇಶಗಳನ್ನು ಹಿಂದಿರುಗಿಸುವುದೇ ಆಗಿತ್ತು. ಮಂಗಳೂರಿನ ಈ ಒಪ್ಪಂದವು ಮೈಸೂರು ಇತಿಹಾಸದಲ್ಲಿ ಒಂದು ಪ್ರಮುಖ ಘಟನೆಯಾಯಿತು.

ಟಿಪ್ಪು ಸುಲ್ತಾನನು ಆಂಗ್ಲರ ವಿರುದ್ಧದ ತನ್ನ ಹೋರಾಟದಲ್ಲಿ ವಿಫಲನಾಗಿದ್ದರೂ ಅನೇಕ ಸ್ಥಳೀಯ ಮಾಂಡಲಿಕರನ್ನು ಸದೆಬಡಿಯುವಲ್ಲಿ ಯಶಸ್ವಿಯಾಗಿದ್ದನು. ಸ್ಥಳೀಯ ನಾಯಕರಲ್ಲಿ ಪ್ರಮುಖರಾದವರೆಂದರೇ ಕುಂಬಳೆ, ವಿಟ್ಲಾ ಮತ್ತು ನೀಲೇಶ್ವರದವರಾಗಿದ್ದರು. ಕುಂಬಳೆಯ ರಾಜ್ಯವನ್ನು ಆಕ್ರಮಿಸಿದ ಟಿಪ್ಪು ಸಂಪೂರ್ಣವಾಗಿ ಸಾಮ್ರಾಜ್ಯದ ನಾಶಕ್ಕೆ ಕಾರಣನಾದುದೇ ಅಲ್ಲದೇ ಅಲ್ಲಿಯ ರಾಜನನ್ನು ಸೆರೆಹಿಡಿದು ಗಲ್ಲಿಗೇರಿಸಿ ಕೊಂದನೆಂದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈತನ ಕಿರಿಯ ಸಹೋದರನು ಆಂಗ್ಲರಿಗೆ ಬೆಂಬಲ ನೀಡಿದ ಕಾರಣ ಟಿಪ್ಪು ಸೇನೆಯಿಂದ ಕೊಲ್ಲಲ್ಪಟ್ಟನು. ಈತನ ಸೋದರ ಅಳಿಯನನ್ನು ಸಹ ಕ್ರಿ. ಶ. ೧೭೯೪ರಲ್ಲಿ ಇದೇ ರೀತಿ ಕೊಲ್ಲಲಾಯಿತು. ನೀಲೇಶ್ವರದ ಇಬ್ಬರು ರಾಜಕುಮಾರರನ್ನು ಟಿಪ್ಪು ಸೆರೆಹಿಡಿದು ೧೭೮೭ರಲ್ಲೇ ಗಲ್ಲು ಶಿಕ್ಷೆಯನ್ನು ವಿಧಿಸಿದನು. ಆದರೇ, ಈ ವಂಶದ ಬೇಕಲ್‌ನಲ್ಲಿದ್ದ ನಾಯಕನೊಬ್ಬನು ಟಿಪ್ಪುವಿಂದ ರಕ್ಷಿಸಲ್ಪಟ್ಟು, ಕೊನೆಗೆ ಆಂಗ್ಲರು ತುಳುನಾಡನ್ನು ಸಂಪೂರ್ಣವಾಗಿ ತಮ್ಮ ವಶಕ್ಕೆ ತೆಗೆದುಕೊಂಡಾಗ ಈತನೇ ಬೇಕಲ್ ಪ್ರದೇಶವನ್ನು ಆಳುತ್ತಿದ್ದನೆಂದು ತಿಳಿದುಬರುತ್ತದೆ. ಕೊನೆಯ ಹಾಗೂ ನಾಲ್ಕನೇ ಮೈಸೂರು ಯುದ್ಧದಲ್ಲಿ ಟಿಪ್ಪು ಸೋತು ೧೭೯೯ರಲ್ಲಿ ಯುದ್ಧ ಭೂಮಿಯಲ್ಲೇ ಕೊಲ್ಲಲ್ಪಟ್ಟಾಗ ಆತನ ಸಾಮ್ರಾಜ್ಯವು ಪೂರ್ಣವಾಗಿ ಬ್ರಿಟೀಷರ ವಶವಾಯಿತು.

### ೧೭೯೯ರ ನಂತರ

ಬ್ರಿಟೀಷರ ವಿರುದ್ಧ ನಾಲ್ಕನೇ ಹಾಗೂ ಕೊನೆಯ ಮೈಸೂರು ಯುದ್ಧವು ಆರಂಭವಾದ ತಕ್ಷಣವೇ ವಿಟ್ಲದ ಹೆಗ್ಗಡೆ ಮತ್ತು ಕುಂಬಳೆ ರಾಜವಂಶದ ರಾಜಕುಮಾರನೊಬ್ಬನೂ ಸೇರಿದಂತೆ ಇಬ್ಬರೂ ಕೆನರಾ ಜಿಲ್ಲೆಗೆ ಹಿಂದಿರುಗಿ ತಾವು ಕಳೆದುಕೊಂಡಿದ್ದ ತಮ್ಮ ಎಲ್ಲೆಗಳೊಳಗಿನ

ಪ್ರದೇಶಗಳನ್ನು ಪುನ: ವಶಪಡಿಸಿಕೊಳ್ಳುವ ಚಟುವಟಿಕೆಗಳಿಗೆ ಚಾಲನೆ ನೀಡಿದರು. ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು ಕೊಡಗಿನ ರಾಜನೂ ಸಹ ಜಮಲಾಬಾದ್ ಮತ್ತು ಬಂಟ್ವಾಳಗಳ ಮೇಲೆ ಆಕ್ರಮಣ ಮಾಡಿ ನಂತರ ಕುಂಬಳೆಯ ರಾಜನ ಎಲ್ಲೆಯೊಳಗೆ ಪ್ರವೇಶಿಸಿದನು. ಟಿಪ್ಪು ಸುಲ್ತಾನನ ಪತನವಾದ ಮೇಲೆ ಆಂಗ್ಲರು, ಮೈಸೂರು ಯುದ್ಧದಲ್ಲಿ ಕೊಡಗಿನ ರಾಜನು ನೀಡಿದ ಸಹಕಾರವನ್ನು ಸ್ಮರಿಸುವ ದೃಷ್ಟಿಯಿಂದ ಈಗಾಗಲೇ ಹೈದರಾಲಿಯು ವಶಪಡಿಸಿಕೊಂಡಿದ್ದ ಅಮರಸುಳ್ಯ, ಪಂಜ ಮತ್ತು ಬೆಳ್ಳಾರೆ ಮಾಗಣೆಗಳನ್ನು ಕೊಡಗು ರಾಜನಿಗೆ ಬಳುವಳಿಯಾಗಿ ನೀಡಿದರು.

ಟಿಪ್ಪುವಿನ ನಿಧನದ ತರುವಾಯ ಬ್ರಿಟಿಷರು ಕೆನರಾ ಜಿಲ್ಲೆಯ ಆಡಳಿತವನ್ನು ವಹಿಸಿಕೊಂಡ ತಕ್ಷಣ ಆತನು ನಿರ್ಮಿಸಿದ್ದ ದರಿಯಾ ಬಹದೂರ್‌ಗಡ್ ಮತ್ತು ಜಮಲಾಬಾದ್ ಕೋಟೆಗಳನ್ನು ಸಂಪೂರ್ಣವಾಗಿ ವಶಪಡಿಸಿಕೊಂಡು ಕೆನರಾ ಜಿಲ್ಲೆಯ ಕಲೆಕ್ಟರ್ ಆಗಿ ಕ್ಯಾಪ್ಟನ್ (ಅನಂತರ ಸರ್ ಥಾಮಸ್) ಮುನ್ರೋನನ್ನು ಜೂನ್ ೧೭೯೯ರಲ್ಲಿ ನೇಮಕ ಮಾಡಿದರು. ಮದರಾಸ್ ಸರ್ಕಾರದ ಕಂದಾಯ ಮಂಡಳಿಯ ಮಾರ್ಗದರ್ಶನದಲ್ಲಿ ಕೆನರಾ ಜಿಲ್ಲೆಯ ಆಡಳಿತವನ್ನು ನಿಯಂತ್ರಿಸಲು ೧ನೇ ಫೆಬ್ರವರಿ ೧೮೦೦ರಂದು ಮುನ್ರೋ ಅಧಿಕಾರವನ್ನು ವಹಿಸಿಕೊಂಡು ಜಿಲ್ಲೆಯ ಭೂ ವಿತರಣೆ ಹಾಗೂ ಕಂದಾಯ ವಸೂಲಿಯ ಬಗ್ಗೆ ಹಲವು ಕ್ರಾಂತಿಕಾರಿ ಪರಿವರ್ತನೆಗಳನ್ನು ಕೈಗೊಂಡನು. ಕೆಲವು ಕಂದಾಯ ಆಡಳಿತದ ತೀರ್ಮಾನಗಳನ್ನು ಕೈಗೊಳ್ಳುವಾಗ ಮೈಸೂರಿನಲ್ಲಿದ್ದ ರೆಸಿಡೆಂಟ್ ಬ್ಯಾರಿ ಕ್ಲೋಸ್‌ನೊಡನೆ ನಿರಂತರ ಸಂಪರ್ಕ ಮತ್ತು ಮಾರ್ಗದರ್ಶನವನ್ನು ಹೊಂದುವಂತೆ ಆಂಗ್ಲ ಸರ್ಕಾರ ಥಾಮಸ್ ಮುನ್ರೋಗೆ ಸೂಚನೆ ನೀಡಿತ್ತು. ಧೋಂಡಿಯಾ ವಾಗ್‌ನ ಹಿಂಬಾಲಕರು ಕುಂದಾಪುರ ತಾಲೂಕಿನ ಬೈಂದೂರನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸಿದಾಗ ಕ್ಯಾಪ್ಟನ್ ಮುನ್ರೋ ತಕ್ಷಣ ಕ್ರಮ ಕೈಗೊಂಡನು. ಅನಂತರ, ದಕ್ಷಿಣ ಕನ್ನಡದ ಉತ್ತರ ಭಾಗಗಳಲ್ಲಿ ಸ್ವಲ್ಪಮಟ್ಟಿಗೆ ಶಾಂತಿ ನೆಲೆಸಿದಂತೆ ಕಂಡುಬಂದಿತು. ಆದರೆ, ಜಿಲ್ಲೆಯ ದಕ್ಷಿಣ ಭಾಗವಾದ ಕುಂಬಳೆಯ ಮತ್ತು ನೀಲೇಶ್ವರದ ರಾಜರುಗಳು ಆಂಗ್ಲ ಸರ್ಕಾರದ ವಿರುದ್ಧ ದುರ್ಬಲವಾದ ವಿರೋಧವನ್ನು ಆಗಿಂದಾಗ್ಗೆ ಹಲವಾರು ರಾಜಕೀಯ ಕುತಂತ್ರಗಳ ಮೂಲಕ ವ್ಯಕ್ತಪಡಿಸುತ್ತಿದ್ದರು. ಕುದರೆಮುಖ ಪರ್ವತದ ಮೂಲಕ ಕಿರಿದಾದ ಮಾರ್ಗದಲ್ಲಿ ಸಂಚರಿಸಿ ತಲುಪಬೇಕಾಗಿದ್ದ ಬೆಳ್ತಂಗಡಿಯ ಸಮೀಪವಿದ್ದ ಜಮಲಾಬಾದ್ ಕೋಟೆಯು ಆಂಗ್ಲರ ಪ್ರಾಬಲ್ಯಕ್ಕೆ ನೆರವಾಗಬಲ್ಲ ಸೇನಾನೆಲೆಯಾಗಿತ್ತು. ಭೌಗೋಳಿಕವಾಗಿ ನೈಸರ್ಗಿಕ ರಕ್ಷಣೆಯನ್ನು ಪಡೆದಿರುವ ಈ ಕೋಟೆಯು ವಾಸ್ತವಿಕವಾದ ಸೈನಿಕ ನೆಲೆಯಾಗಿ ಪರಿವರ್ತನೆ ಹೊಂದಲು ಎಲ್ಲಾ ಸೌಲಭ್ಯಗಳನ್ನು ಸಹಜವಾಗಿಯೇ ಹೊಂದಿತ್ತು. ಆದುದರಿಂದಲೇ ಟಿಪ್ಪು ಸುಲ್ತಾನನು ಇಂಥಹ ಎತ್ತರವಾದ ಪ್ರದೇಶದಲ್ಲಿ ಕೋಟೆಯ ನಿರ್ಮಾಣವನ್ನು ಮಾಡಿದ್ದನೆಂದು ವ್ಯಕ್ತವಾಗುತ್ತದೆ. ಕೋಟೆಯ ನಿರ್ಮಾಣವಾದ ಮೇಲೆ ಆತನು ೪೦೦ ಸೈನಿಕರುಳ್ಳ ಪ್ರಬಲ ಪಡೆಯನ್ನು ಅಲ್ಲಿ ನೆಲೆಗೊಳಿಸಿದ್ದನು. ಕೊನೆಯ ಮೈಸೂರು ಯುದ್ಧದ ಸಮಯದಲ್ಲಿ ಕೊಡಗಿನ ರಾಜನ ಪಡೆಯು ಈ ಬೆಟ್ಟದ ಕೆಳಗಿದ್ದ ನಗರದ ನೆಲೆಯನ್ನು ಆಕ್ರಮಣ ಮಾಡಿ ನಾಶಪಡಿಸಿದ್ದರು. ಅನಂತರ ಆಂಗ್ಲ ಸೇನಾಪಡೆಯು ಅಕ್ಟೋಬರ್ ೧೭೯೯ರಲ್ಲಿ ಜಮಲಾಬಾದ್ ಕೋಟೆಯನ್ನು ಸಂಪೂರ್ಣವಾಗಿ ವಶಪಡಿಸಿಕೊಂಡಿತು. ಆದರೆ, ಪುನ: ಟಿಪ್ಪುಸುಲ್ತಾನನ ವಂಶಸ್ಥರಿಗೆ ಜಮಲಾಬಾದ್ ಕೋಟೆಯನ್ನು ಬ್ರಿಟೀಷರು ವಹಿಸಿಕೊಡಬೇಕಾಗಿ ಬಂದಿತು. ಶ್ರೀರಂಗಪಟ್ಟಣದಲ್ಲಿ ನಾಲ್ಕನೇ ಮೈಸೂರು ಯುದ್ಧದಲ್ಲಿ ಮೈಸೂರಿಗೆ ಸೋಲುಂಟಾಗಿ ಟಿಪ್ಪೂ ವೀರಮರಣ ಹೊಂದಿದ ತರುವಾಯ ಕ್ರಿ.ಶ. ೧೮೦೦ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ರಚಿತವಾಯಿತು. ಮುಂಬೈಯಿಂದ ಕನ್ಯಾಕುಮಾರಿಯವರೆಗಿನ ಕರಾವಳಿ ಹಾಗೂ ಕನ್ಯಾಕುಮಾರಿಯಿಂದ ಮದ್ರಾಸ್–ಕಲ್ಕತ್ತಾದವರೆಗಿನ ಪೂರ್ವ ಕರಾವಳಿಯು ಸಂಪೂರ್ಣವಾಗಿ ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿಯ ಪ್ರಭುತ್ವಕ್ಕೆ ಒಳಪಟ್ಟವು. ಪಶ್ಚಿಮ ಕರಾವಳಿಯಲ್ಲಿ ಕೆನರಾ (ಉತ್ತರ ಕನ್ನಡ, ದಕ್ಷಿಣ ಕನ್ನಡ) ಮತ್ತು ಮಲಬಾರ್ ಜಿಲ್ಲೆಗಳನ್ನು ರಚಿಸಿ ಪ್ರಾರಂಭದಲ್ಲಿ ಮದ್ರಾಸ್ ಪ್ರಾಂತ್ಯಕ್ಕೆ ನೀಡಲಾಗಿತ್ತು. ಅನಂತರ ೧೬ನೇ ಏಪ್ರಿಲ್ ೧೮೬೨ರಲ್ಲಿ ಉತ್ತರ ಕನ್ನಡವನ್ನು ದಕ್ಷಿಣ ದಕ್ಷಿಣ ಕನ್ನಡದಿಂದ ಬೇರ್ಪಡಿಸಿ ಮುಂಬಾಯಿ ಪ್ರಾಂತ್ಯಕ್ಕೆ ವರ್ಗಾಯಿಸಲಾಯಿತು.

## ವಿಟ್ಲದ ಹೆಗ್ಗಡೆಯ ಬಂಡಾಯ

ಈ ಹಿಂದೆ ದಕ್ಷಿಣಕನ್ನಡದ ಮೇಲೆ ಟಿಪ್ಪು ಕೈಗೊಂಡ ಆಕ್ರಮಣದ ಫಲವಾಗಿ ವಿಟ್ಲದ ಹೆಗ್ಗಡೆ ಮತ್ತು ಆತನ ಪರಿವಾರದವರು ತೆಲ್ಲಿಚೇರಿಗೆ ಪಲಾಯನ ಮಾಡಿದ ವಿಚಾರವನ್ನು ಈಗಾಗಲೇ ಗಮನಿಸಲಾಗಿದೆ. ಆದರೆ, ಕೊನೆಯ ಮೈಸೂರು ಯುದ್ಧವು ಆರಂಭಗೊಂಡು ಟಿಪ್ಪುವಿನ ಪತನವು ಖಚಿತವಾದ ಹಿನ್ನೆಲೆಯಲ್ಲಿ ವಿಟ್ಲದ ಹೆಗ್ಗಡೆ ತೆಲ್ಲಿಚೇರಿಯಿಂದ ಪುನ: ಹಿಂದಿರುಗಿ ಕ್ರಮೇಣ ಪ್ರಬಲನಾಗತೊಡಗಿದನು. ಡಿಸೆಂಬರ್ ೧೭೯೯ರ ವೇಳೆಗಾಗಲೇ ಈತನು ಪ್ರಬಲ ಆಕ್ರಮಣವನ್ನು ಕೈಗೊಂಡು ವಿಟ್ಲದ ಸುತ್ತಮುತ್ತ ಕಳೆದುಕೊಂಡಿದ್ದ ಪ್ರದೇಶಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ಈ ದಾಳಿಗಳಲ್ಲಿ ಅವನ ಸೋದರಳಿಯನು ಹೆಗ್ಗಡೆಗೆ ಸಹಾಯ ಹಸ್ತ ನೀಡಿದ್ದನು. ಹೆಗ್ಗಡೆಯ ರಾಜಕೀಯ

ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಥಾಮಸ್ ಮುನ್ರೋ ತಕ್ಷಣವೇ ವಿಟ್ಲದ ಹೆಗ್ಗಡೆಯ ಪ್ರಾಬಲ್ಯವನ್ನು ಅಡಗಿಸಲು ತನ್ನ ಸೇನಾ ಮುಖಂಡತ್ವ ಹಾಗೂ ಕೆನರಾ ಪ್ರದೇಶದ ಜವಾಬ್ದಾರಿಯನ್ನು ಹೊಂದಿದ್ದ ಕರ್ನಲ್ ಹಾರ್ಟ್‌ನ ನೇತೃತ್ವದಲ್ಲಿ ಸೇನಾಕ್ರಮ ಕೈಗೊಳ್ಳಲು ಆದೇಶಿಸಿದನು.  ವಿಟ್ಲದ ಹೆಗ್ಗಡೆ ಮತ್ತು ಆತನಿಗೆ ಬೆಂಬಲ ನೀಡಿದ್ದ ಹಾಗೂ ಒಂದು ಕಾಲದಲ್ಲಿ ಕೊಯಮತ್ತೂರಿನ ಶಿರಸ್ತೇದಾರನಾಗಿದ್ದ ಸುಬ್ಬರಾವ್ ೭ನೇ ಮೇ ೧೮೦೦ ರಂದು ಪುತ್ತೂರು ಬಳಿಯಿರುವ ಕಡಬಾದ ತಹಸೀಲ್ದಾರರ ಕಛೇರಿಯ ಮೇಲೆ ದಾಳಿ ಮಾಡಿದನು. ದಾಳಿಯ ಪರಿಣಾಮವಾಗಿ ತಹಸೀಲ್ದಾರನು ಸಂಜೆಯಾದ ನಂತರ ಕತ್ತಲೆಯ ಅನುಕೂಲ ಪಡೆದು ನದಿಯನ್ನು ದಾಟಿ ನಾಡದೋಣಿಯಲ್ಲಿ ತಪ್ಪಿಸಿಕೊಂಡನು.  ಅದೇ ರೀತಿ ಹಲವು ಅಧಿಕಾರಿಗಳೂ ಆತ್ಮ ರಕ್ಷಣೆಗಾಗಿ ಪಲಾಯನ ಮಾಡಿದರು. ಇಲ್ಲಿಂದ ಮುಂದುವರೆದ ದಾಳಿಯಲ್ಲಿ ಸುಬ್ಬರಾವ್ ಬಂಟ್ವಾಳದ ಮೇಲೆ ಆಕ್ರಮಣ ಮಾಡಿ ಆ ಊರನ್ನು ನಾಶಮಾಡಿದನೆಂದು ಪ್ರತೀತಿಯಿದೆ. ನಂತರ ಈತನು ಪುತ್ತೂರಿನಲ್ಲಿದ್ದ ಬಂಗಲೆಯಲ್ಲಿ ತನ್ನ ಕಚೇರಿಯನ್ನು ಸ್ಥಾಪಿಸಿಕೊಂಡು ಕಂದಾಯ ವಸೂಲಿ ಮಾಡತೊಡಗಿದನು. ಈ ಕ್ರಮದಿಂದ ವಿಚಲಿತನಾದ ಮುನ್ರೋ ಹಿಂದೆ ಜಮಲಾಬಾದ್ ಕೋಟೆಯನ್ನು ಆಕ್ರಮಿಸಿಕೊಳ್ಳಲು ಸಹಾಯ ಹಸ್ತ ನೀಡಿದ್ದ ಧರ್ಮಸ್ಥಳದ ಕುಮಾರ ಹೆಗ್ಗಡೆಯ ನೇತೃತ್ವದಲ್ಲಿ ಸುಮಾರು ೨೦೦ ಸೈನಿಕರಿದ್ದ ಪಡೆಯ ಸಹಾಯದಿಂದ ಸುಬ್ಬರಾವ್‌ನನ್ನು ಸದೆಬಡಿಯುವಂತೆ ಆದೇಶಿಸಿದನು.  ಇದರಂತೆ ಧರ್ಮಸ್ಥಳದ ಕುಮಾರ ಹೆಗ್ಗಡೆಯು ೧೧ನೇ ಮೇ ೧೮೦೦ರಂದು ಸುಬ್ಬರಾವ್ ಮೇಲೆ ಎರಗಿ ಆತನನ್ನು ಪರಾಭವಗೊಳಿಸಿದನು. ಆದರೆ ಈ ಹೋರಾಟದಲ್ಲಿ ಕುಮಾರ ಹೆಗ್ಗಡೆಯ ತೋಳಿಗೆ ಗುಂಡಿನ ಏಟು ತಗುಲಿ ಆತನು ಅಪಾರ ನೋವನ್ನನುಭವಿಸಿದನು.  ಹೋರಾಟವು ಅಂತ್ಯಗೊಂಡ ಮೇಲೆ ಕಡಬಾದ ತಹಸೀಲ್‌ದಾರ್ ಪುತ್ತೂರು ಮತ್ತು ಬಂಟ್ವಾಳಗಳನ್ನು ತನ್ನ ಹತೋಟಿಗೆ ತೆಗೆದುಕೊಂಡು ಬಂಡಾಯಗಾರರನ್ನು ಶಿಶಿಲಾ ಘಟ್ಟದೆಡೆಗೆ ಅಟ್ಟಿಸಿಕೊಂಡು ಹೋದಾಗ ಅವರುಗಳು ದುರ್ಬಲಗೊಂಡು ಚದುರಿಹೋಗುವಂತೆ ಮಾಡಿದನು.  ನಂತರ ಜುಲೈ ೧೮೦೦ರಲ್ಲಿ ಇದೇ ತಹಸೀಲ್‌ದಾರನು ವಿಟ್ಲದ ಹೆಗ್ಗಡೆ ಸೇರಿದಂತೆ ಅವನ ಕುಟುಂಬದ ಒಂಬತ್ತು ಸದಸ್ಯರನ್ನೊಳಗೊಂಡಂತೆ ಅನೇಕರನ್ನು ಸೆರೆಹಿಡಿದನು. ಸುಮಾರು ಮೂರು ತಿಂಗಳುಗಳವರೆಗೆ ಸೆರೆಹಿಡಿದುಕೊಳ್ಳಲಾಗಿದ್ದ ಜಮಲಾಬಾದ್ ಕೋಟೆಯನ್ನು ಬ್ರಿಟಿಷರು ಪುನಃ ವಶಪಡಿಸಿಕೊಂಡರು. ಕುಂಬಳೆ ಮತ್ತು ನೀಲೇಶ್ವರದ ರಾಜರುಗಳು ಆಂಗ್ಲರ ಆಡಳಿತವನ್ನು ಒಪ್ಪಿಕೊಂಡು ಬ್ರಿಟಿಷ್ ಸರ್ಕಾರ ಮಂಜೂರು ಮಾಡಿದ ವಿಶ್ರಾಂತಿವೇತನಗಳನ್ನು ಸ್ವೀಕರಿಸಿದರು. ಇಷ್ಟಾಗಿದ್ದರೂ, ಅವರುಗಳು ತಮ್ಮ ಸುಸಜ್ಜಿತ ಹಿಂಬಾಲಕರನ್ನು ಸಂಘಟಿಸಿ ಭೂಮಾಲೀಕರು ಕ್ಯಾಪ್ಟನ್ ಮುನ್ರೋ ತೀರ್ಮಾನಿಸಿದ್ದ ಕಂದಾಯದ ನಿರ್ಣಯವನ್ನು ತಿರಸ್ಕರಿಸುವಂತೆ ಪ್ರಚೋದಿಸುತ್ತಿದ್ದರು. ಈ ರೀತಿಯ ನಡೆವಳಿಕೆಯ ಮೂಲಕ ತಾವು ಕಳೆದುಕೊಂಡಿರುವ ತಮ್ಮ ಪಾಳೆಯಪಟ್ಟನ್ನು ಪುನಃ ತಮಗೆ ದಕ್ಕುವುದೆಂಬ ಉದ್ದೇಶವೇ ಪ್ರಮುಖವಾಗಿತ್ತೆಂದು ವ್ಯಕ್ತವಾಗುತ್ತದೆ. ಆದರೆ, ಇವರು ನೀಡಿದ ಪ್ರಚೋದನೆಗೆ ಭೂಮಾಲೀಕರು ನಿಷ್ಕ್ರಿಯರಾಗಿದ್ದರು. ಕೆನರಾ ಜಿಲ್ಲೆಯ ಆರ್ಥಿಕ ಪರಿಸ್ಥಿತಿಯು ಅಷ್ಟೇನೂ ತೃಪ್ತಿಕರವಾಗಿರಲಿಲ್ಲ. ವಿಜಯನಗರ ಸಾಮ್ರಾಜ್ಯದ ಆಡಳಿತವು ನಿಯೋಜಿತವಾಗಿದ್ದ ಕಾಲದಲ್ಲಿ ಸಂಪೂರ್ಣವಾಗಿ ಪ್ರಗತಿಶೀಲವಾಗಿದ್ದ ಈ ಜಿಲ್ಲೆಯು ಟಿಪ್ಪುಸುಲ್ತಾನನ ಕಾಲದವರೆಗೂ ಸಂಭವಿಸಿದ ನಿರಂತರ ರಾಜಕೀಯ ದಾಳಿಗಳಿಂದಾಗಿ ಈ ಪ್ರದೇಶದ ವ್ಯಾಪಾರ ಮತ್ತು ವಾಣಿಜ್ಯ ವಹಿವಾಟುಗಳು ಹಿನ್ನಡೆ ಅನುಭವಿಸಿದ್ದೇ ಆರ್ಥಿಕ ದುರ್ಬಲತೆಗೆ ಮೂಲಕಾರಣವಾಗಿತ್ತೆಂಬುದು  ವೇದ್ಯವಾಗುತ್ತದೆ. ಈ ರೀತಿಯ ಆರ್ಥಿಕ ಅವನತಿಯು ನೇರವಾಗಿ ಕೃಷಿಕ ವರ್ಗದ ಜನತೆಯ ಮೇಲೆ ಪರಿಣಾಮ ಬೀರಿತು.

## ಫ್ರಾನ್ಸಿಸ್ ಬುಕಾನನ್ ವರದಿಯ ವಿವರಗಳು

ಭಾರತದ ಗವರ್ನರ್ ಜನರಲ್ ಆಗಿದ್ದ ಸರ್ ಮಾರ್ಕಸ್ ವೆಲ್ಲೆಸ್ಲಿಯು ಕ್ರಿ.ಶ.೧೮೦೧ರಲ್ಲಿ ಡಾ॥ ಫ್ರಾನ್ಸಿಸ್ ಬುಕಾನನ್‌ನನ್ನು ನೇಮಕ ಮಾಡಿ ಟಿಪ್ಪು ಆಳ್ವಿಕೆ ಮಾಡಿದ ಸಾಮ್ರಾಜ್ಯದಲ್ಲಿನ "ಕೃಷಿ, ಕಲೆಗಳು ಮತ್ತು ವಾಣಿಜ್ಯ, ಧರ್ಮ, ಧಾರ್ಮಿಕ ಪದ್ಧತಿಗಳು ಹಾಗೂ ಸಂಪ್ರದಾಯಗಳು; ಸ್ಥಳೀಯ ಇತಿಹಾಸ, ನೈಸರ್ಗಿಕವಾದ ಹಾಗೂ ಮೈಸೂರಿನ ಮತ್ತು ಇತರೆ ಪ್ರದೇಶಗಳಲ್ಲಿರುವ ಖಾಸಗಿ ಕಟ್ಟಡಗಳ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸುವಂತೆ ಆದೇಶಿಸಿದನು.  ಫ್ರಾನ್ಸಿಸ್ ಬುಕಾನನ್ ೧೩೦ ಪುಟಗಳಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಬಗ್ಗೆ ಸಲ್ಲಿಸಿರುವ ವರದಿಯಲ್ಲಿ ಪ್ರಯಾಣದ ಸಂದರ್ಭದಲ್ಲಿ ಆತ ಗಮನಿಸಿದ್ದ ಹಲವಾರು ಸೂಕ್ಷ್ಮ ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳನ್ನು ಗಂಭೀರವಾದ ಪ್ರಯತ್ನದೊಂದಿಗೆ ತಯಾರಿಸಲಾಗಿರುವುದು ವಿದ್ವಾಂಸರ ಪ್ರಶಂಸೆಗೆ ಪಾತ್ರವಾಗಿದೆ.  ಬುಕಾನನ್ ಈ ಜಿಲ್ಲೆಯನ್ನು ಮಲಬಾರ್ ಮೂಲಕ ಪ್ರವೇಶಿಸಿದನು.  ಮಲಬಾರ್ ಗಡಿಗಳಿಂದ ಹೊಸದುರ್ಗವನ್ನು ಪ್ರವೇಶಿಸಿದಾಗ ಈ ಪ್ರದೇಶದ ಅಲಕ್ಷದ ಬಗ್ಗೆ ಮತ್ತು ಚದುರಿದಂತೆ ಕಂಡುಬರುವ ಜನಸಾಂದ್ರತೆ ಬಗ್ಗೆ ಪ್ರಸ್ತಾಪಿಸುತ್ತಾ ಬಹುಶಃ ಯುದ್ಧಗಳಿಂದ ಮತ್ತು ತೀವ್ರವಾದ ಬರಪರಿಸ್ಥಿತಿಯಿಂದ ಉಂಟಾಗಿರಬೇಕೆಂದು ಅಭಿಪ್ರಾಯಪಡುತ್ತಾನೆ. ಇಲ್ಲಿಂದ ಮುಂದೆ ಉತ್ತರಕ್ಕೆ ಸಂಚರಿಸಿ ಚಂದ್ರಗಿರಿ ನದಿಯ ತೀರದಲ್ಲಿ ಕೃಷಿ ಚಟುವಟಿಕೆಗಳ ಬಗ್ಗೆ ಅಸಡ್ಡೆಯನ್ನು ಹಾಗೂ ನಿರ್ಲಕ್ಷತೆಯನ್ನು ಆತ ಗಮನಿಸಿರುತ್ತಾನೆ. ಇದರ ಸಮೀಪದಲ್ಲೇ ಇರುವ ಕುಂಬಳೆಯ ಸುತ್ತಮುತ್ತ ವ್ಯವಸ್ಥಿತವಾಗಿ ಸಮೃದ್ಧವಾಗಿ

ಬೆಳೆದಿರುವ ಬತ್ತದ ಗದ್ದೆಗಳನ್ನು ಹಾಗೂ ಹಸಿರು ತೋಟಗಳನ್ನೂ ತಾನು ಕಂಡ ಬಗ್ಗೆ ಫ್ರಾನ್ಸಿಸ್ ಬುಕಾನನ್ ದಾಖಲಿಸಿರುವನು. ಆತನ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಭಾಗವು ಬರಪೀಡಿತವಾಗಿದ್ದರೂ ಜಿಲ್ಲೆಯ ಉತ್ತರಭಾಗವು ಆತನು ಭೇಟಿಕೊಟ್ಟ ಸಂದರ್ಭದಲ್ಲಿ ಸಮೃದ್ಧಮಯವಾಗಿತ್ತೆಂದು ವ್ಯಕ್ತವಾಗುತ್ತದೆ. ಇದೇ ರೀತಿ ಮಂಜೇಶ್ವರದಲ್ಲಿ ನೆಲೆಸಿದ್ದ ಕೊಂಕಣಿಗಳು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದರೆಂದು ಬುಕಾನನ್ ದಾಖಲಿಸಿರುವನು. ಕೃಷಿಕಾರ್ಮಿಕರಿಗೆ ಉತ್ತಮ ವೇತನಗಳನ್ನು ನೀಡುತ್ತಿದ್ದುದರ ಬಗ್ಗೆ ವಿವರಿಸಿರುತ್ತಾನೆ.

ಫ್ರಾನ್ಸಿಸ್ ಬುಕಾನನ್ ಮಂಗಳೂರಿನಿಂದ ಫರಂಗಿಪೇಟೆಗೆ ತೆರಳುತ್ತಿದ್ದಾಗ ರಸ್ತೆಯ ಎರಡೂ ಬದಿಗಳಲ್ಲಿ ಅಲ್ಪಸಂಖ್ಯೆಯಲ್ಲಿ ಕೈಗಾರಿಕಾ ಕೇಂದ್ರಗಳಿರುವುದನ್ನು ಗಮನಿಸಿರುತ್ತಾನೆ. ಮಲಬಾರ್‌ನ ರೈತವರ್ಗದವರ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿದಾಗ ದಕ್ಷಿಣ ಕನ್ನಡ ಜಿಲ್ಲೆಯ ರೈತರು ಭೂಹಿಡುವಳಿಗಳ ಪ್ರಮಾಣದಲ್ಲಿ ಅಧಿಕವಾಗಿದ್ದು ಇವರು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದರೆಂದು ಬುಕಾನನ್ ತನ್ನ ವರದಿಯಲ್ಲಿ ತಿಳಿಸಿರುತ್ತಾನೆ. ಈತನೇ ದಾಖಲಿಸಿರುವಂತೆ "ಸ್ಥಳೀಯರ ಹೇಳಿಕೆಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿಕೊಡುವ ಯುರೋಪಿಯನ್ ಪ್ರವಾಸಿಗಳಿಗೆ ರಸ್ತೆಯಲ್ಲಿ ಸಂಚರಿಸುವಾಗ ದೇಶವು ಸುಂದರವಾಗಿ ಕಾಣಬೇಕೆಂದು ರಸ್ತೆ ಎರಡೂ ಕಡೆ ಇದ್ದ ಜಮೀನುಗಳಲ್ಲಿ ಬೆಳೆಯುತ್ತಿದ್ದ ಹಸಿಮೆಣಸಿನ ಗಿಡಗಳನ್ನು ಟಿಪ್ಪು ನಾಶ ಮಾಡುವಂತೆ ಆದೇಶಿಸಿದ್ದು, ಬಂಟ್ವಾಳದಲ್ಲಿ ವಾಸಿಸುತ್ತಿದ್ದ ಕೃಷಿಕರು ಹಾಗೂ ಸಾಮಾನ್ಯ ಜನತೆ ವ್ಯಾಪಾರ ಮತ್ತು ವಾಣಿಜ್ಯದಲ್ಲಿ ಸಕ್ರಿಯವಾಗಿ ತೊಡಗಿದ್ದರೆಂದೂ ಆತನು ತಿಳಿಸುತ್ತಾನೆ". ಬೆಳ್ತಂಗಡಿಗೆ ಮುನ್ನ ಇದ್ದ ರಸ್ತೆಯಲ್ಲಿ ಸಂಚರಿಸುವಾಗ ಕೊಡಗು ರಾಜನು ಈ ಪ್ರದೇಶದಲ್ಲಿ ನಡೆಸಿದ ಹಾವಳಿಗಳನ್ನು ಉಲ್ಲೇಖಿಸುತ್ತಾನೆ. ಇಲ್ಲಿಂದ ಮುಂದಕ್ಕೆ ಫ್ರಾನ್ಸಿಸ್ ಬುಕಾನನ್ ಮೂಡಬಿದಿರೆಗೆ ಪ್ರಯಾಣ ಮಾಡಿ ಅಲ್ಲಿಯ ಸುತ್ತಮುತ್ತಲ ಪ್ರದೇಶವು ಆರ್ಥಿಕವಾಗಿ ಹಿಂದುಳಿದಿತ್ತೆಂದು ದಾಖಲಿಸಿರುವನು. ಇಲ್ಲಿಂದ ಕಾರ್ಕಳಕ್ಕೆ ಭೇಟಿಕೊಟ್ಟಾಗ ಅಲ್ಲಿಯ ಗ್ರಾಮಗಳಲ್ಲಿ ಖಾಲಿ ಇರುವ ವಸತಿಗೃಹಗಳಿದ್ದು, ಅಲ್ಲಿ ವಾಸಿಸುತ್ತಿದ್ದ ಕುಟುಂಬಗಳು ಹೈದರ್ ಅಲಿಯ ಸೇನೆಯ ಆಕ್ರಮಣದ ಫಲವಾಗಿ ಗ್ರಾಮವನ್ನು ಬಿಟ್ಟು ಬೇರೆ ಬೇರೆ ಊರುಗಳಿಗೆ ವಲಸೆ ಹೋದರೆಂದು ಫ್ರಾನ್ಸಿಸ್ ಬುಕಾನನ್ ಸ್ಪಷ್ಟವಾಗಿ ತನ್ನ ಪ್ರವಾಸ ಕಥನದಲ್ಲಿ ದಾಖಲಿಸಿರುವನು. ಕಾರ್ಕಳದಿಂದ ಉಡುಪಿಯ ಮುಖೇನ ಆತನು ಹಿರಿಯಡ್ಕಕ್ಕೆ ಪ್ರಯಾಣ ಮಾಡಿದಾಗ ಹಿಂದೆ ಫಲವತ್ತಾದ ಭೂಮಿಯ ನಾಲ್ಕನೇ ಒಂದು ಭಾಗವು ಕೃಷಿಕರು ಹಾಗೂ ಜಾನುವಾರುಗಳೇ ಇಲ್ಲದೇ ಬೀಳುಬಿದ್ದಿರುವುದು ಕಂಡುಬರುತ್ತದೆ. ಬಹುಶ: ಈ ಪರಿಸ್ಥಿತಿಗೆ ಕೃಷಿಕರು ಪರಕೀಯರ ದಾಳಿಗಳನ್ನು ತಾಳಲಾರದೇ ಬೇರೆ ಬೇರೆ ಸ್ಥಳಗಳಿಗೆ ವಲಸೆ ಹೋಗಿರುವುದೇ ಮುಖ್ಯ ಕಾರಣವಾಗಿದೆ ಎಂದು ಆತನು ತರ್ಕಿಸುತ್ತಾನೆ. ಉಡುಪಿಗೆ ಹಿರಿಯಡ್ಕದಿಂದ ಹಿಂದಿರುಗಿದ ಬುಕಾನನ್ ಬ್ರಹ್ಮಾವರ ಮತ್ತು ಕುಂದಾಪುರಗಳ ಮೂಲಕ ಉತ್ತರ ಕನ್ನಡ (ಕೆನರಾ) ಜಿಲ್ಲೆಯ ಕಡೆಗೆ ಪ್ರಯಾಣ ಮಾಡಿದನು; ಆತನ ಪ್ರಕಾರ ಕುಂದಾಪುರದಿಂದ ಕಿರಿಮಂಜೇಶ್ವರದವರೆಗಿನ ಪ್ರದೇಶದಲ್ಲಿ ಪ್ರತಿಪರ ಪರಿಸ್ಥಿತಿ ಕಂಡುಬಂದಿತೆಂದು ವ್ಯಕ್ತವಾಗುತ್ತದೆ. ಈ ಪ್ರದೇಶದ ಸುತ್ತಮುತ್ತಲೂ ಅಲ್ಲಲ್ಲಿ ಮಾತ್ರ ತೆಂಗಿನ ಹಾಗೂ ಅಡಕೆ ತೋಟಗಳು ಕಂಡುಬಂದಿದ್ದು, ಬಹುಶ: ಇಲ್ಲಿಯೇ ವಸತಿ ಹೊಂದಿದ್ದ ಕೃಷಿಕರು ಹಾಗೂ ಇತರೆ ಜನಗಳು ನಿರಂತರವಾದ ಬಂಡಾಯಗಾರರ ದಾಳಿಗಳು ಮತ್ತು ಸಾಂಕ್ರಮಿಕ ಜ್ವರ ಹಾಗೂ ಇತರೆ ತೀವ್ರತರವಾದ ಕಾಯಿಲೆಗಳಿಂದ ಇಲ್ಲಿಯ ವಸತಿಯ ಕುಸಿತಕ್ಕೆ ಕಾರಣವಾಗಿರಬೇಕೆಂದು ಡಾ॥ ಫ್ರಾನ್ಸಿಸ್ ಬುಕಾನನ್ ತನ್ನ ದೀರ್ಘವರದಿಯಲ್ಲಿ ದಾಖಲಿಸಿರುವನು.

ದಕ್ಷಿಣ ಕನ್ನಡಕ್ಕೆ ಭೇಟಿ ಕೊಟ್ಟ ಇತರ ವಿದೇಶಿ ಯಾತ್ರಿಕರ ಆಸಕ್ತಿಯುತವಾದ ಹಾಗೂ ಕುತೂಹಲಕಾರಿಯಾದ ವಿವರಗಳೂ ಲಭ್ಯವಿದೆ. ಫ್ರೆಂಚ್ ಯಾತ್ರಿಕ ಫ್ರಾನ್‌ಕೋಯಿಸ್ ಪೈರಾಡ್ ಎಂಬ ಯಾತ್ರಿಕನು ಕ್ರಿ.ಶ.೧೬೦೦ ಸುಮಾರಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿಕೊಟ್ಟು ಹಲವು ಆಸಕ್ತಿಯುತ ವಿವರಗಳನ್ನು ದಾಖಲಿಸಿರುವನು. ಆತನ ಪ್ರಕಾರ, ದಕ್ಷಿಣ ಕನ್ನಡ ಜಿಲ್ಲೆಯ ರೇವುಗಳಾದ ಬಾರಕೂರು, ಬಸರೂರು ಮತ್ತು ಮಂಗಳೂರಿನ ವರ್ತಕರು ಮಾಲ್ಡೀವ್ಸ್ ಜನರೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿದ್ದರೆಂದು ದಾಖಲಿಸಿರುವನು. ಈತನು ದಾಖಲಿಸಿರುವ ಮತ್ತೊಂದು ವಿಚಾರವೆಂದರೆ ಕಾಸರಗೋಡು ಬಂದರನ್ನು ಪೋರ್ಚುಗೀಸರು ವಶಪಡಿಸಿಕೊಳ್ಳಲು ಪ್ರಯತ್ನಿಸಿದಾಗ ಅಲ್ಲಿಯ ಸ್ಥಳೀಯರು ಹೇಗೆ ವಿಫಲಗೊಳಿಸಿದರೆಂಬ ತಿಳಿದುಬರುತ್ತದೆ. ತರುವಾಯ ಭೇಟಿಕೊಟ್ಟ ಪಿಯಾತ್ರೋಡೆಲ್ಲವೆಲ್ಲೆ (೧೬೨೩) ಪೀಟರ್‌ಮಂಡಿರವರು (೧೬೩೬–೦೭) ಫ್ರೈಯರ್ (೧೬೭೪–೭೬) ತೇವ್ನೋಟ್ (೧೬೬೪) ಮೊದಲಾದವರ ವರದಿಗಳು ತುಳುನಾಡಿನ ಕರಾವಳಿಯ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ವಿಚಾರಗಳನ್ನು ತಿಳಿಯಲು ಸಹಾಯವಾಗುವ ಪ್ರಮುಖ ಆಕರಗಳಾಗಿವೆ. ಫ್ರೈಯರ್ ಮತ್ತು ಕ್ರೈಸ್ತ ಮಿಶನರಿ ಜೋಸ್ ವಾಸ್ (೧೬೮೧) ವರದಿಗಳು ದಕ್ಷಿಣ ಕನ್ನಡ ಜಿಲ್ಲೆಯ ಕ್ರೈಸ್ತಧರ್ಮದ ಚಟುವಟಿಕೆಗಳ ಬಗ್ಗೆ ಅಮೂಲ್ಯ ವಿವರಗಳನ್ನು ನೀಡುತ್ತವೆ. ಹೀಗೆಯೇ ಹ್ಯಾಮಿಲ್ಟನ್ ಅಲೆಗ್ಸಾಂಡರ್, ಫೋರ್ಬಸ್ ಹಾಗೂ ಪಾರಸನ್ ಇವರುಗಳ ವರದಿಗಳು ದಕ್ಷಿಣಕನ್ನಡ ಜಿಲ್ಲೆಯ ಕೆಳದಿ ನಾಯಕರು, ಹೈದರ್ ಮತ್ತು ಟಿಪ್ಪು ಸುಲ್ತಾನರ ಆಡಳಿತದಲ್ಲಿ ನಡೆದ ಅನೇಕ ಆರ್ಥಿಕ ವ್ಯವಹಾರಗಳ ಬಗ್ಗೆ ದಾಖಲಿಸಿರುತ್ತವೆ.

## ೧೮೨೯ರಲ್ಲಿ ಮಂಗಳೂರು

ವಿದೇಶಿ ಯಾತ್ರಿಕನೊಬ್ಬನು ಕ್ರಿ.ಶ.೧೮೨೯ರಲ್ಲಿ ಮುಂಬೈ ಕಡಲ ತೀರದಿಂದ ಕಲ್ಕತ್ತ ಕಡಲವರೆಗೆ ದೀರ್ಘವಾದ ಕಡಲಯಾನವನ್ನು ಕೈಗೊಂಡಾಗ ಆತನಿಗೆ ಕಂಡುಬಂದ ಮಂಗಳೂರಿನ ನೈಜಸ್ಥಿತಿಯ ಚಿತ್ರಣವನ್ನು ಓರಿಯಂಟಲ್ ಹೆರಾಲ್ಡ್ ಎಂಬ ಪತ್ರಿಕೆಯಲ್ಲಿ ಆತನು ಪ್ರಕಟಿಸಿರುವನು. ಈ ಪ್ರತ್ಯಕ್ಷ ವರದಿಯು ಮಂಗಳೂರಿನ ಬಗ್ಗೆ ಹಲವಾರು ಕುತೂಹಲಕಾರಿ ವಿಷಯಗಳನ್ನು ಪರಿಚಯಿಸುತ್ತದೆ. ಈ ಯಾತ್ರಿಕನನ್ನು ಹಾಗೂ ಆತನ ಸಹೋದ್ಯೋಗಿಗಳನ್ನು ಕಸ್ಟಮ್ಸ್ ಇಲಾಖೆಯ ಉಪ-ನಿರ್ದೇಶಕರ ಬಳಿ ಪಲ್ಲಕ್ಕಿಯಲ್ಲಿ ಕೂಡಿಸಿಕೊಂಡು ಕರೆದೊಯ್ಯುತ್ತಾರೆ. ಆತನ ಪ್ರಕಾರ ಮಂಗಳೂರು ನಗರ ಹಾಗೂ ಸುತ್ತಮುತ್ತಲ ಪ್ರದೇಶಗಳು ಅತ್ಯಂತ ಸಮರ್ಪಕವಾಗಿ ಹಾಗೂ ಯೋಜಿತವಾಗಿ ರೂಪುಗೊಂಡಿರುವುದು ತಿಳಿದುಬರುತ್ತದೆ. ಊರಿನ ಹೊರಭಾಗದಲ್ಲಿರುವ ಕೋಟೆಯು ಶಿಥಿಲವಾಗಿದೆ. ಆದರೂ ದೂರದಿಂದ ಉತ್ತಮವಾಗಿರುವಂತೆ ಗೋಚರಿಸುತ್ತದೆ. ಈ ಊರಿನಲ್ಲಿ ಕಂಡುಬರುವ ಆಂಗ್ಲ ಅಧಿಕಾರಿಗಳ ವಸತಿಗೃಹಗಳು ಎತ್ತರವಾದ ಗುಡ್ಡಗಳ ಮೇಲಿರುವ ಸಮತಟ್ಟಾದ ಪ್ರದೇಶದಲ್ಲಿ ಕಂಡುಬರುತ್ತವೆ. ಇಡೀ ನಗರ ಹಾಗೂ ನೆರೆಹೊರೆಯ ಪ್ರದೇಶಗಳೂ ಸೇರಿದಂತೆ ಈ ಊರಿನ ಜನಸಂಖ್ಯೆಯು ೨೦,೦೦೦ ಆಗಿತ್ತು. ಅಧಿಕ ಸಂಖ್ಯೆಯಲ್ಲಿರುವ ಹಿಂದೂಗಳು ಸಾಮಾನ್ಯವಾಗಿ ಶಿವಾರಾಧಕರಾಗಿರುವುದು ವ್ಯಕ್ತವಾಗುತ್ತದೆ. ಇವರುಗಳು ಅತ್ಯಂತ ಶಿಸ್ತುಬದ್ಧ ಜೀವನಕ್ರಮವನ್ನು ಸಾಗಿಸುತ್ತಿರುವರು. ಈತನೇ ತಿಳಿಸುವಂತೆ ಕ್ರೈಸ್ತರು ಬೌದ್ಧಿಕ ಪೌಢಿಮೆ ಉಳ್ಳವರಾಗಿದ್ದು ಹಿಂದೂಗಳ ನಂತರ ಎರಡನೇ ಸ್ಥಾನದಲ್ಲಿದ್ದರು. ಆದರೇ ಮುಸಲ್ಮಾನರು ಅತ್ಯಂತ ಅಲ್ಪಸಂಖ್ಯಾತರಾಗಿದ್ದುದು ಆತನ ವರದಿಯಿಂದ ವ್ಯಕ್ತವಾಗುತ್ತದೆ. ಈತನ ಪ್ರಕಾರ ಕ್ರೈಸ್ತರು ಕಡಿಮೆ ಸಂಖ್ಯೆಯಲ್ಲಿದ್ದರೂ ಅತ್ಯಂತ ಪ್ರಭಾವಶಾಲಿಗಳಾಗಿದ್ದುದು ಕಂಡುಬರುತ್ತದೆ. ಇವರು ತಮ್ಮ ಸಂಸ್ಕೃತಿಗೆ ಹೊಂದುವಂಥಹ ಉಡುಪುಗಳನ್ನು ಧರಿಸುತ್ತಿದ್ದು, ಹಿಂದೂಗಳಿಗಿಂತ ಪ್ರತ್ಯೇಕವಾಗಿ ಕಾಣುತ್ತಿದ್ದರು. ಸಾಮಾನ್ಯವಾಗಿ ಭಾರತೀಯರನ್ನೇ ಪಾದ್ರಿಗಳಾಗಿ ನೇಮಕ ಮಾಡಿ ಧಾರ್ಮಿಕ ತರಬೇತಿ ಮತ್ತು ಅಧ್ಯಯನಕ್ಕಾಗಿ ಗೋವಾಗೆ ಕಳುಹಿಸಲಾಗುತ್ತಿತ್ತು.

ಈತನ ಪ್ರಕಾರ ಹೈದರಾಲಿ ಹಾಗೂ ಟಿಪ್ಪು ಸುಲ್ತಾನ್ ಇವರುಗಳ ಕಾಲದಿಂದ ಮಂಗಳೂರಿನ ವಾಣಿಜ್ಯ ಪ್ರಗತಿಯು ಕ್ರಮೇಣ ಅವನತಿಗೊಂಡುದುದು ವ್ಯಕ್ತವಾಗುತ್ತದೆ. ಅನಂತರ ಪರ್ಷಿಯನ್ ಕಾಲುವೆಯಲ್ಲಿ 'ಜೋಅಸ್ಸಾಮೀ ಪೈರೇಟ್ಸ್'ಗಳು ಆಗಿಂದಾಗ್ಗೆ ಅಡೆತಡೆ ಉಂಟುಮಾಡುತ್ತಿದ್ದ ಕಾರಣ, ಮಂಗಳೂರು ಸೇರಿದಂತೆ ಪಶ್ಚಿಮದ ಬಂದರು ಪಟ್ಟಣಗಳೆಂದು ನಿರಂತರವಾಗಿ ರಫ್ತಾಗುತ್ತಿದ್ದ ವಸ್ತುಗಳ ವಾಣಿಜ್ಯ ಚಟುವಟಿಕೆಗಳು ಸ್ವಲ್ಪಮಟ್ಟಿಗೆ ಕುಂಠಿತಗೊಳ್ಳಲು ಮುಖ್ಯಕಾರಣವಾಗಿತ್ತು. ವ್ಯಾಪಾರಿ ಹಡಗುಗಳ ಸುಲಭ ಸಂಚಾರವೂ ಪರ್ಷಿಯನ್ ಕಾಲುವೆಯ ನಿರ್ಬಂಧಗಳಿಂದಾಗಿ ಕ್ಷೀಣಿಸತೊಡಗಿತ್ತು. ಆ ಕಾಲದಲ್ಲಿ ಭಾರತದ ಕಡಲಿನಿಂದ ರಫ್ತಾಗುತ್ತಿದ್ದ ಕೆಂಪುಗಡ್ಡೆಗಳು (Madder Root) ಮಸ್ಕಟ್‌ನಲ್ಲಿ ಬಟ್ಟೆಗಳಿಗೆ ಬಣ್ಣ ಹಚ್ಚಲು ಉಪಯೋಗವಾಗುತ್ತಿತ್ತು. ಜೊತೆಗೆ ಹತ್ತಿ ಬಟ್ಟೆಗಳು, ಸೂರತ್ ಹಾಗೂ ಕಚ್‌ನಿಂದ ತುಪ್ಪ ಗೋವಾ ಹಾಗೂ ಮುಂಬೈಯಿಂದ ಉಪ್ಪು, ಹೊಸೈರಿ ಬಟ್ಟೆಗಳನ್ನು ಮದರಾಸಿನಿಂದ, ಬಂಗಾಳದಿಂದ ಸಕ್ಕರೆ ಮತ್ತು ಚೀಣಾದಿಂದ ರೇಷ್ಮೆಬಟ್ಟೆಗಳೂ ಸೇರಿದ್ದವು. ಮಂಗಳೂರು ಬಂದರಿನಿಂದ ಹೆಚ್ಚಾಗಿ ಅಕ್ಕಿ, ಮೆಣಸು, ಶ್ರೀಗಂಧ, ಅಡಿಕೆ, ಅರಿಶಿನಬೇರುಗಳು ಮತ್ತು ಕ್ಯಾಸಿಯಾ ಬೆಳೆಗಳು ಹೆಚ್ಚಾಗಿದ್ದುವೆಂದು ಈತನು ದಾಖಲಿಸಿರುವನು. ಭಾರತದ ಈ ದೀರ್ಘವಾದ (ಮುಂಬೈಯಿಂದ ಕಲ್ಕತ್ತಾವರೆಗಿನ) ಕಡಲತೀರದ ಹವಾಗುಣವು ಸಾಗರೋತ್ತರ ವ್ಯಾಪಾರ ಮತ್ತು ವಾಣಿಜ್ಯಗಳಿಗೆ ಅತ್ಯಂತ ಉತ್ತೇಜನಕಾರಿಯಾಗಿದ್ದವು. ಹೀಗಾಗಿ, ಈ ವಿದೇಶಿ ಯಾತ್ರಿಕನು ೧೮೨೯ರ ಮಂಗಳೂರು ಮತ್ತು ಕೆನರಾದ ಕಡಲ ಚಟುವಟಿಕೆಗಳ ಪರಿಸ್ಥಿತಿಯ ಬಗ್ಗೆ ವರದಿಗಳು ಅತ್ಯಂತ ವಿಶಿಷ್ಟವಾಗಿದ್ದು ಹಲವು ಕುತೂಹಲಕಾರಿಯಾದ ವಿವರಗಳನ್ನು ದಾಖಲಿಸಿರುವನು.

## ರೈತರ ಹಾಗೂ ಆದಿವಾಸಿಗಳ ಬಂಡಾಯಗಳು

ಸರ್ ಥಾಮಸ್ ಮುನ್ರೋ ಆಡಳಿತದ ನಂತರ ಮಂಗಳೂರಿನಲ್ಲಿ ನೇಮಕಗೊಂಡ ಜಿಲ್ಲಾ ಕಲೆಕ್ಟರ್‌ಗಳು ನೂತನ ಕಂದಾಯ ವಸೂಲಾತಿಯ ನಿಯಮಗಳನ್ನು ಕ್ರಮೇಣ ಜಾರಿಗೊಳಿಸಿದರು. ಸುಮಾರು ಕ್ರಿ.ಶ.೧೮೨೦ ರಿಂದ ಒಂದು ದಶಕದ ಅವಧಿಯಲ್ಲಿ ದಕ್ಷಿಣಕನ್ನಡ ಜಿಲ್ಲೆಯ ವ್ಯಾಪಾರ ಮತ್ತು ವಾಣಿಜ್ಯ ವಹಿವಾಟುಗಳಲ್ಲಿ ಕ್ಷಿಪ್ರ ಅವನತಿಯು ಉಂಟಾಗಿ ತೀವ್ರವಾದ ಆರ್ಥಿಕ ಹಿನ್ನಡೆಯನ್ನನುಭವಿಸುವಂತಾಯಿತು. ಇಂಥಹ ಕಠಿಣ ಹಣದುಬ್ಬರ ಪರಿಸ್ಥಿತಿಯಲ್ಲಿ ಹಾಗೂ ಸಾಮಾನ್ಯ ವಸ್ತುಗಳ ಬೆಲೆ ಕುಸಿದಾಗ ಕಂಪನಿ ಸರ್ಕಾರವು ಪರಿವರ್ತಿತ ಕಂದಾಯ ವಸೂಲಾತಿಯನ್ನು ಜಾರಿಗೊಳಿಸಿದಾಗ, ಆಗಲೇ ಆರ್ಥಿಕವಾಗಿ ದುರ್ಬಲರಾಗಿದ್ದ ಈ ಜಿಲ್ಲೆಯ ಬಡರೈತರು ಮತ್ತು ವರ್ತಕರು ಸರ್ಕಾರಕ್ಕೆ ಅಧಿಕವಾಗಿ ಪಾವತಿಸಬೇಕಾದ ಕಂದಾಯದ ಮೊತ್ತವನ್ನು ನೀಡಲಾರದೇ ಹೋದರು. ಈ ಕ್ರಮವು ರೈತರ ಹಾಗೂ ವರ್ತಕರ ದೃಷ್ಟಿಯಿಂದ ಅತ್ಯಂತ ವಿನಾಶಕಾರಿ ಪದ್ಧತಿಯಾಗಿತ್ತು. ನಂತರದ ವರ್ಷಗಳಲ್ಲಿ ಆರ್ಥಿಕ ಪರಿಸ್ಥಿತಿಯು

ಕ್ರಮೇಣ ಕ್ಷೀಣಿಸುತ್ತಾ ಹೋಯಿತು. ಕೊನೆಗೆ ಕ್ರಿ.ಶ.೧೮೩೧ರ ವೇಳೆಗೆ ಆರ್ಥಿಕ ಪರಿಸ್ಥಿತಿಯು ಮತ್ತಷ್ಟು ಹದಗೆಟ್ಟಾಗ ಬಡಜನತೆಗೆ ಅನ್ಯಮಾರ್ಗವಿಲ್ಲದೇ ಆಂಗ್ಲ ಸರ್ಕಾರದ ಕಂದಾಯ ನೀತಿಯ ವಿರುದ್ಧ "ಕರನಿರಾಕರಣಾ ಚಳವಳಿ"ಯನ್ನು ಆರಂಭಿಸಿದರು. ನಂತರದ ವರ್ಷದಲ್ಲಿ ಹಲವಾರು ಕಂದಾಯ ವಿರೋಧಿ ಚಳವಳಿಗಳು "ಕೂಟಗಳು" (ಜಾಥಾ?) ಎಂಬ ರೈತರ ಬೃಹತ್ ಸಭೆಗಳನ್ನು ಆಯೋಜಿಸುವ ಮೂಲಕ ವ್ಯಕ್ತಪಡಿಸಲಾಯಿತು. ತುಳುನಾಡಿನಾದ್ಯಂತ ರೈತರು ಕರಗಳನ್ನು ನೀಡುವುದನ್ನು ನಿರಾಕರಣೆ ಮಾಡಿದರು. ಬ್ರಿಟಿಷರು ಅವರ ಆಡಳಿತಾಧಿಕಾರಿಗಳ ಮೂಲಕ ತುಳುನಾಡಿನಲ್ಲಿ ಅತ್ಯಂತ ಹಿಂದಿನಿಂದಲೂ ವಾಸವಾಗಿದ್ದ ಆದಿವಾಸಿಗಳ ಮೇಲೆ ದಬ್ಬಾಳಿಕೆ ಮಾಡಲು ಯತ್ನಿಸಿದರು. ಇದಕ್ಕೆ ಮೂಲಕಾರಣ ಅರಣ್ಯದ ಉತ್ಪನ್ನಗಳನ್ನು ಪೇಟೆಗಳಿಗೆ ರವಾನಿಸುತ್ತಿದ್ದ ಆದಿವಾಸಿಗಳ ಮೇಲೆ ಕಂದಾಯದ ನಿರ್ಬಂಧ ಹೇರಿದ್ದೇ ಆಗಿತ್ತು. ಬ್ರಿಟಿಷರ ಹಲವು ಕ್ರಮಗಳಿಂದ ಆದಿವಾಸಿಗಳು ಸಹಜವಾಗಿಯೇ ತಮ್ಮ ಸಾಂಪ್ರದಾಯಿಕ ಜೀವನಕ್ರಮಕ್ಕೆ ಎಲ್ಲಿ ಧಕ್ಕೆಯುಂಟಾಗುವುದೋ ಎಂದು ಹೆದರಿದ್ದರು. ಆಂಗ್ಲರು ಕಾಡಿನ ಪೊದೆಗಳನ್ನು ನಾಶಮಾಡಿ ಭತ್ತ, ರಾಗಿ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದ ಅಲೆಮಾರಿಗಳ 'ಕುಮೇರಿ' ಕೃಷಿ ಪದ್ಧತಿಯನ್ನು ನಿಷೇಧಿಸಿದಾಗ ಅವರು ಅದನ್ನು ಪ್ರಬಲವಾಗಿ ವಿರೋಧಿಸಿದರು. ಭೂಮಿಯನ್ನು ಗದ್ದೆಗಳನ್ನಾಗಿಯೂ, ತೋಟಗಳನ್ನಾಗಿಯೂ ಪರಿವರ್ತನೆ ಮಾಡಿ ಅನೇಕ ತಲೆಮಾರುಗಳಿಂದ ಅನುಭವಿಸಿಕೊಂಡು ಬರುತ್ತಿದ್ದ ಕೃಷಿಕರನ್ನು ಕಡೆಗಾಣಿಸಿ, ಗುತ್ತಿಗೆಯಿಂದಲೋ ಅಥವಾ ಇತರೆ ಕ್ರಮಗಳಿಂದಲೋ ಅನ್ಯ ಪ್ರಭಾವಿ ಭೂಒಡೆಯರೆಂದು ದಾಖಲಿಸಿದಾಗ ಸಹಜವಾಗಿಯೇ ಬಂಡಾಯಗಳು ನಡೆದವು. ಪರಿಸ್ಥಿತಿಯನ್ನು ಹತೋಟಿಗೆ ತರಲು ಬ್ರಿಟಿಷ್ ಆಡಳಿತವು ನಿರ್ಧರಿಸಿ ರೈತರ ಚಳವಳಿಗಳು ನ್ಯಾಯಯುತವಾದ ಹೋರಾಟವೆಂದು ಪರಿಗಣಿಸಿ ಭೂಕಂದಾಯದ ಪದ್ಧತಿಯಲ್ಲಿ ಸುಧಾರಣೆ ತಂದು, ತೆರಿಗೆಗಳ ಮೊತ್ತವನ್ನು ಕಡಿಮೆ ಮಾಡಿತು. ಹೀಗೆ ಬ್ರಿಟಿಷರು ತೀರ್ಮಾನಿಸದಿದ್ದರೇ ಹೋರಾಟವು ತೀವ್ರಗೊಂಡು ಪರಿಸ್ಥಿತಿಯು ಹತೋಟಿ ಮೀರುತ್ತಿತ್ತೆಂದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಬ್ರಿಟಿಷ್ ಸರ್ಕಾರವು ನಂತರ ನಡೆಸಿದ ವಿಚಾರಣೆಯ ಪ್ರಕಾರ "ರೈತರ ಅಸಮಾಧಾನಕ್ಕೆ ಕಾರಣವಾದ ಮುಖ್ಯ ಶಿರಸ್ತೇದಾರನೊಬ್ಬ ಮತ್ತು ಅವನ ಸಹೋದ್ಯೋಗಿಗಳು ಜಿಲ್ಲಾ ಕಲೆಕ್ಟರ್‌ನ ಆಡಳಿತಕ್ಕೆ ಧಕ್ಕೆ ತರಬೇಕೆಂಬ ವಿಷಯವನ್ನು ಮನದಲ್ಲಿಟ್ಟುಕೊಂಡು ಭೂಮಿಯ ತೆರಿಗೆ ಹಾಗೂ ಕಂದಾಯಗಳನ್ನು ಹೆಚ್ಚಿಸಿದ್ದೇ ಆಗಿದೆ" ಎಂದು ವ್ಯಕ್ತವಾಗುತ್ತದೆ. ಈ ಕಾರ್ಯಾಚರಣೆಯ ಮತ್ತೊಂದು ಉದ್ದೇಶವೆಂದರೇ, ಸಂಬಂಧಿಸಿದ ಶಿರಸ್ತೇದಾರನು ಕಲೆಕ್ಟರ್ ಕಚೇರಿಯಲ್ಲಿ ಸೇವೆಸಲ್ಲಿಸುತ್ತಿದ್ದ ಹಲವು ಕ್ರೈಸ್ತ ನೌಕರರನ್ನು ವಜಾ ಮಾಡುವುದೇ ಆಗಿತ್ತೆಂದೂ ತಿಳಿದುಬರುತ್ತದೆ.

**ಕಾರ್ಮಿಕರ ಚಳವಳಿ**

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ೧೯೨೦ರಲ್ಲಿ ಸ್ಥಾಪನೆಗೊಂಡ ಪರಿಣಾಮವಾಗಿ ದೇಶದಲ್ಲಿ ಕಾರ್ಮಿಕರ ಚಳವಳಿಗಳು ಕ್ರಮೇಣ ಪ್ರಬಲಗೊಂಡವೆಂಬ ಅಭಿಪ್ರಾಯವಿದೆ. ಗಣಿಗಾರಿಕೆ ಮೊದಲಾದ ಉದ್ಯಮಗಳ ಕಾರ್ಮಿಕ ಸಂಘಟನೆಗಳು ಕ್ರಿ.ಶ.೨೦ನೇ ಶತಮಾನದ ಆರಂಭದಿಂದಲೇ ಪ್ರಬಲಗೊಳ್ಳತೊಡಗಿದ್ದವು. ಮೊದಲ ದಶಕದಲ್ಲಿ ಪತ್ರಿಕಾ ಸ್ವಾತಂತ್ರ್ಯದ ನಿಷೇಧವನ್ನು ಪ್ರತಿಭಟಿಸಿದ ಲೋಕಮಾನ್ಯ ತಿಲಕರನ್ನು ಬಂಧಿಸಿ ಕಾರಾಗೃಹಕ್ಕೆ ಕೊಂಡೊಯ್ದಾಗ ಮುಂಬಯಿ ಕಾರ್ಮಿಕರ ಆರುದಿನಗಳ ಪ್ರತಿಭಟನಾ ಮುಷ್ಕರವನ್ನು ನಡೆಸಿದ್ದರು. ಈ ಹೋರಾಟವು "ಭಾರತೀಯ ಕಾರ್ಮಿಕವರ್ಗ ರಾಜಕೀಯ ರಂಗ ಪ್ರವೇಶಿಸುವುದರ ಸೂಚನೆ ಹಾಗೂ ಅದು ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಧಿಪತ್ಯದ ಅಂತ್ಯ ಸನ್ನಿಹಿತವಾದುದನ್ನು ತೋರಿಸುತ್ತದೆ." ಎಂದು ಲಂಡನ್ನಿನಲ್ಲಿದ್ದ ಲೆನಿನ್ ಹೇಳಿದ್ದರು. ಈ ಸಮಯದಲ್ಲಿ ಮಂಗಳೂರಿನಲ್ಲಿ ಭಾರತ ಕಮ್ಯುನಿಷ್ಟ್ ಪಕ್ಷದ ಶಾಖೆಯೊಂದು ಪ್ರಾರಂಭವಾಗಿ ಸಚ್ಚಿದಾನಂದ ವಿಷ್ಣು ಘಾಟೆಯವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಲಾಗಿತ್ತು. ರಾಷ್ಟ್ರಮಟ್ಟದಲ್ಲಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಲಾಲಾ ಲಜಪತ್‌ರಾಯ್, ಜವಹಾರ್‌ಲಾಲ್ ನೆಹರು, ಸುಭಾಷ್ ಚಂದ್ರ ಬೋಸ್, ಸರೋಜಿನಿ ನಾಯ್ಡು ಮೊದಲಾದವರಿದ್ದರು. ಈ ಹಿನ್ನೆಲೆಯಲ್ಲಿ ಮಂಗಳೂರಿನಲ್ಲಿ ೧೯೩೪–೩೫ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ನಾಯಕತ್ವದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ ಸಂಘಟನೆಯು ಜಿಲ್ಲೆಯಲ್ಲಿ ಆರಂಭವಾದ ತರುವಾಯ ಸ್ಥಳೀಯ ಕಾರ್ಮಿಕ ನಾಯಕರಾದ ಸಿಪ್ಸನ್‌ಸೋನ್ಸ್, ಕೇಶವ ಕಾಮತ್ ಮೊದಲಾದವರು ಎಸ್. ಎ. ಘಾಟೆಯವರ ಸಂಪರ್ಕ ಹೊಂದಿ ನೇಯ್ಗೆ ಕೆಲಸಗಾರರನ್ನು ಹಾಗೂ ಬೀಡಿ ಕಾರ್ಮಿಕರ ಸಂಘಗಳನ್ನು ಸಕ್ರಿಯಗೊಳಿಸಿದರೆಂದು ಬಿ.ವಿ. ಕಕ್ಕಿಲ್ಲಾಯ ಅವರು ಅಭಿಪ್ರಾಯಪಡುತ್ತಾರೆ. ಹಿಂದೆ, ಕಾಂಗ್ರೆಸ್ಸಿಗೆ ಸೇರಿದ್ದ ಅಹಮದ್ ಭಾವ, ಎಸ್.ಎನ್.ಹೊಳ್ಳ ಕೃಷ್ಣಶೆಟ್ಟಿ ಮೊದಲಾದವರು ನೇಯ್ಗೆ ಮತ್ತು ಬೀಡಿ ಕಾರ್ಮಿಕರ ಸಂಘಗಳಲ್ಲಿ ಸಕ್ರಿಯ ಪಾತ್ರವಹಿಸಿದ್ದರು. ಹೀಗೆ ಆರಂಭವಾದ ಕಾರ್ಮಿಕರ ಮತ್ತು ವಿದ್ಯಾರ್ಥಿ ಸಂಘಟನಾ ಕಾರ್ಯಕರ್ತರ ನಂಟು ಬೆಳೆಯಿತು. ಬಿ.ವಿ. ಕಕ್ಕಿಲ್ಲಾಯ, ಶಿವಶಂಕರರಾವ್, ಹರಿದಾಸ್ ಆಚಾರ್, ಶಾಂತಾರಾಂ ಪೈ ಮೊದಲಾದವರು ಜಿಲ್ಲೆಯಲ್ಲಿ ಕಾರ್ಮಿಕ ಸಂಘಗಳ ಕೆಲಸ ಹಾಗೂ ಸಂಘಟನಾ ಕಾರ್ಯಗಳಲ್ಲಿ ಪ್ರಮುಖ ಪಾತ್ರವಹಿಸಿದರು.

## ಕಂಪನಿ ಆಡಳಿತ ವಿರುದ್ಧದ ಅತೃಪ್ತಿಗಳು

ಈಸ್ಟ್ ಇಂಡಿಯಾ ಕಂಪನಿ ಸರ್ಕಾರವು ತನ್ನ ಸಾಮ್ರಾಜ್ಯದ ಆಂತರಿಕ ವಿಚಾರಗಳಲ್ಲಿ ಅನಾವಶ್ಯಕವಾಗಿ ಹಸ್ತಕ್ಷೇಪ ಮಾಡುತ್ತಿರುವ ಬಗ್ಗೆ ಕೊಡಗಿನ ರಾಜ ಚಿಕ್ಕ ವೀರರಾಜೇಂದ್ರ ಒಡೆಯನು (೧೮೨೦–೧೮೩೪) ಕ್ರಿ.ಶ.೧೮೩೪ರಲ್ಲಿ ತನ್ನ ಅತೃಪ್ತಿಯನ್ನು ಪ್ರಥಮ ಬಾರಿಗೆ ವ್ಯಕ್ತಪಡಿಸಿದನು. ಈ ಬೆಳವಣಿಗೆಯನ್ನು ಗಂಭೀರವಾಗಿ ತೆಗೆದುಕೊಂಡ ಬ್ರಿಟಿಷ್ ಸರ್ಕಾರವು ೨೯ನೇ ಮಾರ್ಚ್ ೧೮೩೪ರಂದು ಕರ್ನಲ್ ಜಾಕ್‌ಸನ್‌ನ ನೇತೃತ್ವದಲ್ಲಿ ಆಂಗ್ಲ ಸೇನೆಯು ಕುಂಬಳೆಯ ಕಡೆಗೆ ಚಲಿಸುವಂತೆ ಆದೇಶ ನೀಡಿತು. ಕರ್ನಲ್ ಜಾಕ್‌ಸನ್ ತನ್ನ ಪಡೆಯೊಂದಿಗೆ ಈಶ್ವರಮಂಗಲವನ್ನು ತಲುಪಿದಾಗ ಮದ್ದೂರು ಮತ್ತು ಬೆಳ್ಳಾರೆಗಳಲ್ಲಿ ಅವನ ಪಡೆಗೆ ಪ್ರಬಲವಾದ ಅಡೆತಡೆಯನ್ನು ಒಡ್ಡಲಾದಾಗ, ಆತನು ಆಶ್ಚರ್ಯಚಕಿತನಾದನು. ದಿನಾಂಕ ೩ನೇ ಏಪ್ರಿಲ್ ೧೮೩೪ರಂದು ಸಂಭವಿಸಿದ ಈ ಸೈನಿಕ ಸೆಣಸಾಟದಲ್ಲಿ ಆತನ ಪಡೆಯ ೬೦ ಸೈನಿಕರು ಹಾಗೂ ಇಬ್ಬರು ಅಧಿಕಾರಿಗಳು ಮರಣ ಹೊಂದಿದರು. ಈ ಅನಿರೀಕ್ಷಿತ ಸೆಣಸಾಟದಲ್ಲಿ ಸಂಭವಿಸಿದ ಸಾವುನೋವುಗಳಿಂದ ಹೋರಾಟವನ್ನು ಮುಂದುವರೆಸಿದರೆ ಸೋಲು ಖಂಡಿತ ಎಂದು ಮನಗಂಡ ಜಾಕ್‌ಸನ್ ತ್ವರಿತವಾಗಿ ಕೊಡಗಿಗೆ ಹಿಂದಿರುಗಲು ನಿಶ್ಚಯಿಸಿದನು. ಈ ಆರಂಭದ ಪರಾಭವದ ಛಾಯೆಯನ್ನು ಕಂಡುಕೊಂಡ ಬ್ರಿಟಿಷರು ನಂತರ ಸುಸಜ್ಜಿತರಾಗಿ ಕೆಲವು ಸ್ಥಳೀಯ ಆಳ್ವಿಕೆಗಾರರ ಬೆಂಬಲದೊಂದಿಗೆ ಕೊಡಗಿನ ರಾಜನ ಮೇಲೆ ಆಕ್ರಮಣ ಮಾಡಿ ಸಂಪೂರ್ಣವಾಗಿ ತಮ್ಮ ಹತೋಟಿಗೆ ತೆಗೆದುಕೊಂಡು, ಒಬ್ಬ 'ಸೂಪರಿಟೆಂಡೆಂಟ್' ಎಂಬ ಕಂಪನಿ ಸರ್ಕಾರದ ಅಧಿಕಾರಿಯನ್ನು ನೇಮಕ ಮಾಡಿದರು. ಆ ಸಂದರ್ಭದಲ್ಲಿ ಕೊಡಗು ರಾಜನು ಹೊಂದಿದ್ದ ಘಟ್ಟದ ಕೆಳಗಿನ ಕೆಲವು ಪ್ರದೇಶಗಳಾದ ಅಮರಸುಳ್ಯ, ಪಂಜ, ಬೆಳ್ಳಾರೆ, ಮಾಗಣೆ ಬೇರ್ಪಡಿಸಿ ಆಂಗ್ಲ ಸರ್ಕಾರವು ಕೆನರಾ ಜಿಲ್ಲೆಗೆ ಸೇರಿಸಿತು. ಬಹುಶ: ಬ್ರಿಟಿಷರ ಈ ಕ್ರಮದಿಂದಾಗಿ ಆ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಜನರಲ್ಲಿ ಅಸಮಾಧಾನ ಮೂಡಿಸಿದ್ದೇ ಅಲ್ಲದೇ, ಈ ವರ್ಗಾವಣೆಯಿಂದ ಅವರು ಅನೇಕ ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತು. ಮುಖ್ಯವಾಗಿ ಈ ಜನಗಳು ಮೊದಲು ಕೊಡಗು ರಾಜನಿಗೆ ಸಲ್ಲಿಸಬೇಕಾದ ಕಂದಾಯವನ್ನು ವಸ್ತುರೂಪದಲ್ಲಿ ಸಲ್ಲಿಸುತ್ತಿದ್ದರು. ಆದರೇ, ಕೆನರಾ ಜಿಲ್ಲೆಗೆ ವರ್ಗವಾದ ಮೇಲೆ ಬ್ರಿಟಿಷ್ ಸರ್ಕಾರಕ್ಕೆ ಕಂದಾಯವನ್ನು ನಗದು ರೂಪದಲ್ಲಿ ಸಲ್ಲಿಸಬೇಕಾಗಿ ಬಂದುದು ಅವರ ಅತೃಪ್ತಿಗೆ ಕಾರಣವಾಗಿತ್ತು. ನಗದು ರೂಪದಲ್ಲಿ ಸಲ್ಲಿಸಬೇಕಾಗಿ ಬಂದ ಕಂದಾಯದ ಪಾವತಿಗಾಗಿ ಕೃಷಿಕರು ಲೇವಾದೇವಿ ಮಾಡುವವರ ಮುಷ್ಟಿಗೆ ಸಿಲುಕಬೇಕಾಗಿ ಬಂದು ಅವರ ಆರ್ಥಿಕ ಮಟ್ಟದ ಕುಸಿತ ಉಂಟಾಯಿತು. ಹೀಗೆ ಹಣ ನೀಡಬಲ್ಲ ಶ್ರೀಮಂತರುಗಳು ಕೃಷಿಕರು ಬೆಳೆದ ವಸ್ತುಗಳಿಗೆ ಅಪಾರನಷ್ಟವಾಗಿ ಕಡಿಮೆ ಬೆಲೆಯಲ್ಲಿ ಖರೀದಿಸುತ್ತಿದ್ದುದು ಕೃಷಿಕರ ಈ ಪರಿಸ್ಥಿತಿಗೆ ಮೂಲ ಕಾರಣವಾಗಿತ್ತು. ಕೆನರಾಗೆ ವರ್ಗಾಯಿಸಲ್ಪಟ್ಟ ಪ್ರದೇಶಗಳ ನಿವಾಸಿಗಳಿಗೆ ದಿನೇದಿನೇ ಕಂಪನಿ ಸರ್ಕಾರದ ವಿರುದ್ಧದ ಅತೃಪ್ತಿಯು ಉಲ್ಬಣವಾಗತೊಡಗಿತು.

## ಕಲ್ಯಾಣ ಸ್ವಾಮಿಯ ಬಂಡಾಯ

"ಭಾರತದ ಪ್ರಥಮ ಸ್ವಾತಂತ್ರ್ಯ ಸಮರ" ಎಂದೇ ಜನಪ್ರಿಯವಾಗಿರುವ, ಕ್ರಿ.ಶ.೧೮೫೭ರಲ್ಲಿ ಸಂಭವಿಸಿದ "ಸಿಪಾಯಿ ದಂಗೆ"ಗೂ ಅನೇಕ ವರ್ಷಗಳಷ್ಟು ಪೂರ್ವದಲ್ಲಿಯೇ ಕರ್ನಾಟಕದ ವಿವಿಧ ಭಾಗಗಳಲ್ಲಿ ಅನೇಕ ಬ್ರಿಟಿಷ್ ವಿರೋಧಿ ಬಂಡಾಯಗಳು ನಡೆದಿದ್ದವು. ಕೊಡಗು ಪ್ರಾಂತ್ಯ ಮತ್ತು ಹೆಚ್ಚು ಪ್ರಮುಖವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಬಂಡಾಯ ಬ್ರಿಟಿಷರಿಗೆ ವಿಪರೀತ ಆತಂಕವನ್ನುಂಟು ಮಾಡಿ ಅವರ ಸ್ಥೈರ್ಯವನ್ನು ಉಡಗಿಸಲು ಅಲ್ಪ ಕಾಲವಾದರೂ ಯಶಸ್ವಿಯಾದುದು ಗಮನಿಸಬೇಕಾದ ಘಟನೆಯಾಗಿದೆ. ಕ್ರಿ.ಶ.೧೮೩೪ನೇ ಇಸವಿಯ ಏಪ್ರಿಲ್ ತಿಂಗಳಲ್ಲಿ ಗವರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕ್‌ನ ಆಜ್ಞಾನುಸಾರ ಬ್ರಿಟಿಷ್ ಸೈನ್ಯವು ಕೊಡಗು ರಾಜ್ಯವನ್ನು ಮುತ್ತಿ ವಶಪಡಿಸಿಕೊಂಡಿತು. ತನ್ನ ಆಕ್ಷೇಪಣೀಯ ಮತ್ತು ಪ್ರಶ್ನಾರ್ಹ ನಡತೆಯಿಂದ ಜನರ, ಮುಖ್ಯವಾಗಿ ಕೊಡವರ, ವಿಶ್ವಾಸವನ್ನು ಕಳೆದುಕೊಂಡಿದ್ದ ರಾಜ ಚಿಕ್ಕ ವೀರರಾಜೇಂದ್ರ (೧೮೨೦–೧೮೩೪)ನನ್ನು ಪದಚ್ಯುತಗೊಳಿಸಿದ ಬ್ರಿಟಿಷರು ಕೊಡಗನ್ನು ತಮ್ಮ ನೇರ ಆಳ್ವಿಕೆಗೊಳಪಡಿಸಿಕೊಂಡರು. ಆದರೆ, ಬ್ರಿಟಿಷರ ಸಾಮ್ರಾಜ್ಯಶಾಹಿ ಮತ್ತು ರಾಜ್ಯ ವಿಸ್ತರಣಾ ನೀತಿಯನ್ನು ವಿರೋಧಿಸುವವರು ಕೊಡಗು ಮತ್ತು ನೆರೆಯ ದಕ್ಷಿಣಕನ್ನಡದ ಭಾಗಗಳಲ್ಲಿದ್ದರು. ಕೊಡಗು ರಾಜ್ಯದಿಂದ ಪುತ್ತೂರು ಮತ್ತು ಅಮರಸುಳ್ಯ ತಾಲೂಕುಗಳನ್ನು ಬೇರ್ಪಡಿಸಿ ದಕ್ಷಿಣಕನ್ನಡ ಜಿಲ್ಲೆಗೆ ಸೇರಿಸಿದ ಕ್ರಮ ಅನೇಕರ ಅಸಮಾಧಾನಕ್ಕೆ ಕಾರಣವಾಗಿತ್ತು. ಹಿಂದಿನ ರಾಜವಂಶಕ್ಕೆ ನಿಷ್ಠರಾಗಿದ್ದ ಅವರ ಆಶ್ರಿತ ಜನಗಳು ಸಹ ಬ್ರಿಟಿಷ್ ವಿರೋಧಿ ಭಾವನೆಗಳಿಗೆ ವಶವಾಗಿದ್ದುದು ಸಹಜವೇ ಆಗಿತ್ತು. ತೆರಿಗೆ ಪದ್ಧತಿಯಲ್ಲಿ ಬ್ರಿಟಿಷರು ಜಾರಿಗೊಳಿಸಿದ ಹೊಸ ಕ್ರಮಗಳು ಸ್ವಲ್ಪ ಅಶಾಂತಿ ಉಂಟುಮಾಡಿದ್ದಿರಬಹುದು. ಕಾರಣಗಳು ಏನೇ ಇರಲಿ. ಬ್ರಿಟಿಷರ ಆಳ್ವಿಕೆ ಪ್ರಾರಂಭವಾದ ಹೊಸತರಲ್ಲಿಯೇ ಸ್ವಾಮಿ ಅಪರಂಪಾರ ಎಂಬ ಓರ್ವ ಜಂಗಮನ ನೇತೃತ್ವದಲ್ಲಿ ಪಿತೂರಿಗಾರರು ಕೊಡಗಿನಲ್ಲಿ ಬ್ರಿಟಿಷ್ ಪ್ರಭುತ್ವವನ್ನು ಅಂತ್ಯಗೊಳಿಸುವ

ಸಲುವಾಗಿ ಸಂಘಟಿತರಾಗತೊಡಗಿದ್ದರು. ಇದರ ಸುಳಿವರಿತ ಬ್ರಿಟಿಷ್ ಅಧಿಕಾರಿಗಳು ಸ್ವಾಮಿ ಅಪರಂಪರಾನನ್ನು ಮಂಜರಾಬಾದಿನಲ್ಲಿ ಬಂಧಿಸಿ ಕಣ್ಣಾನೂರಿನಲ್ಲಿ ಸೆರೆ ಇಟ್ಟರು. ಇದಾದ ನಂತರ, ಕಲ್ಯಾಣಸ್ವಾಮಿ ಎಂಬುವನು ನೇತೃತ್ವ ವಹಿಸಿ ಪಿತೂರಿಗಾರರ ಸಂಘಟನೆಯಲ್ಲಿ ತೊಡಗಿಕೊಂಡನು. ಅವನನ್ನೂ ಬೈತೂರಿನಲ್ಲಿ ಸೆರೆ ಹಿಡಿದ ಬ್ರಿಟಿಷರು ದಂಗೆಯಲ್ಲಿ ಆಸಕ್ತಿಯುಳ್ಳಂಥ ವ್ಯಕ್ತಿಗಳಿಗೆ ಎಚ್ಚರಿಕೆ ನೀಡುವ ಉದ್ದೇಶದಿಂದ ಕಲ್ಯಾಣಸ್ವಾಮಿಯನ್ನು ನೇಣಿಗೇರಿಸಿದರು (೧೮೩೫). ಇಷ್ಟಾದರೂ, ದಕ್ಷಿಣಕನ್ನಡದಲ್ಲಿ ಬ್ರಿಟಿಷ್ ವಿರೋಧಿ ಭಾವನೆ ಬೆಳೆಯುತ್ತಲೇ ಹೋಯಿತು. ಪುಟ್ಟಬಸಪ್ಪ ಎಂಬಾತನು ಸ್ವಾಮಿ ಅಪರಂಪರ ಎಂದು ಸೋಗು ಹಾಕಿಕೊಂಡು ಬಂಡಾಯವನ್ನು ಎಬ್ಬಿಸಲು ತೀವ್ರ ಪ್ರಯತ್ನ ಮಾಡಿದನು. ಇವನಿಗೆ ಬೆಂಬಲವಾಗಿ ಹುಲಿ ಕಡಿದ ನಂಜಯ್ಯ, ಸುಬೇದಾರ ಗುಡ್ಡೆಮನೆ ಅಪ್ಪಯ್ಯ, ಕೆದಂಬಾಡಿ ರಾಮಯ್ಯಗೌಡ, ಕೂಜುಗೋಡು ಅಪ್ಪಯ್ಯಗೌಡ, ಕೂಜುಗೋಡು ಮಲ್ಲಪ್ಪಗೌಡ, ಲಕ್ಷ್ಮಪ್ಪ ಬಂಗರಸ, ಕರಣಿಕ ಸುಬ್ಬಯ್ಯ, ಪಟೇಲ ಶಂಕರ ನಾರಾಯಣ, ಕುಡೆಕಲ್ಲುಪುಟ್ಟ, ಷೇಕ್, ಸಿರಕಜೆ ಮಲ್ಲಯ್ಯ, ಕರ್ತುಕುಡಿಯ, ಚೆಟ್ಟಿಕುಡಿಯ, ಕುಂಚಡ್ಕ ತಿಮ್ಮ ಇನ್ನೂ ಅನೇಕರು ಇದ್ದರು.

ಕ್ರಿ.ಶ.೧೮೩೭ರ ಮಾರ್ಚ್ ಮಾಹೆಯ ಕೊನೇ ವಾರದಲ್ಲಿ ಪ್ರಾರಂಭವಾದ ಬಂಡಾಯವು ದಿನೇದಿನೇ ಬಲಗೊಳ್ಳುತ್ತಾ ಹರಡತೊಡಗಿತು. ಬೆಳ್ಳಾರೆ, ಪುತ್ತೂರು, ಅಮರಸುಳ್ಯ, ಕಾಸರಗೋಡು, ಬಂಟ್ವಾಳ, ಕುಂಬ್ಳೆ ಮತ್ತು ಮಂಗಳೂರುಗಳು ಬಂಡಾಯಗಾರರ ಪ್ರಬಲ ನೆಲೆಗಳಾದವು. ಸ್ವಾಮಿ ಅಪರಂಪಾರನ ಹೆಸರಿನಲ್ಲಿ ಏಪ್ರಿಲ್ ೫, ೧೮೩೭ರಂದು ಮಂಗಳೂರಿನ ಮುನ್‌ಷಿ ಸರದಾರ್ ಸುಬ್ಬರಾಯನು ನಿವಾಸಿಗಳಿಗೂ, ಸಾಹುಕಾರರಿಗೂ ಬಂಡಾಯಕೋರರಿಗೂ ಕಳುಹಿಸಿದ ನಿರೂಪವೊಂದು ಹೀಗಿದೆ:

"ಆಂಗ್ಲರ ವಿರುದ್ಧ ಯುದ್ಧ ಮಾಡಲು ಸ್ವಾಮಿಗಳ ಸೈನಿಕರು ಬಂದಿಳಿದಿದ್ದಾರೆ. ನೀವೆಲ್ಲ ನಮ್ಮೊಂದಿಗೆ ಸೇರಬೇಕೆಂದು ನಿಮಗೆ ಅಪ್ಪಣೆ ಮಾಡಲು ನಾನು ಆಜ್ಞಪ್ತನಾಗಿದ್ದೇನೆ. ನೀವೆಲ್ಲಾ ನಿಮ್ಮಲ್ಲಿರುವ ಆಯುಧಗಳನ್ನು ಹಿಡಿದು ಬರತಕ್ಕದ್ದು. ನೀವು ಈ ಆಜ್ಞೆಗೆ ತಪ್ಪಿ ನಡೆದರೆ ನಿಮ್ಮ ಮನೆತನದವರೆಲ್ಲರ ತಲೆಗಳನ್ನು ಕತ್ತರಿಸಿ ಹಾಕಲಾದೀತು. ಹನ್ನೆರಡು ಲಕ್ಷ ಸೈನಿಕರ ದಂಡು ಸೇರಲಿದೆ. ಆದಕಾರಣ ನೀವು ತಕ್ಷಣ ಸ್ವಾಮಿಗಳ ಸಹಾಯಕ್ಕೆ ಬಂದು ಸೈನ್ಯ ಸೇರುವಿರೆಂದು ಸುದ್ದಿಯನ್ನು ಕಳುಹಿಸತಕ್ಕದ್ದು. ಇಲ್ಲವಾದರೆ ಇದರ ದುಷ್ಪರಿಣಾಮಕ್ಕೆ ನೀವು ಗುರಿಯಾಗುವಿರಿ. ನೀವೆಲ್ಲ ಸ್ವಾಮಿಗಳ ಸೈನ್ಯ ಸೇರಿದಿರಾದರೆ ನಿಮ್ಮನ್ನೂ ಕಾಪಾಡಲಾಗುತ್ತದೆ. ಈ ನಿರೂಪ ಮುಟ್ಟಿದ ಕೂಡಲೇ ಉತ್ತರ ಬರೆಯತಕ್ಕದ್ದು".

ಏಪ್ರಿಲ್ ೧೨, ೧೮೩೭ರಂದು ತಿಮ್ಮಯ್ಯ, ದೇವಪ್ಪರಾಯಿ ಎಂಬ ಬಂಡುಕೋರರು ಕೊಡಿಯಾಲ ಬೈಲಮಾಗಣೆ ಬಾಮಾಶೆಟ್ಟಿ, ನಾರಾಯಣ ಸೆಟ್ಟಿ ಮುಂತಾದ ಮುಖ್ಯ ವ್ಯಕ್ತಿಗಳಿಗೆ ಕಳುಹಿಸಿದ ನಿರೂಪ ಹೇಳುವುದೇನೆಂದರೆ "ಇಲ್ಲಿಗೆ ಖಾಸ್ ಸವಾರಿ ಸೈನ್ಯ ಸಮೇತ ಬಂದು ಹದಿನೈದು ದಿನಗಳಾದವು. ನಮ್ಮ ಭೇಟಿ ತೆಗೆದುಕೊಳ್ಳಲು ಬರಲು ನೀವು ಭಯಪಟ್ಟು ನಿಂತಂತಿದೆ. ಈ ಪತ್ರ ಬಂದ ಕೂಡಲೇ ನೀವು ಜನರಿಗೆಲ್ಲ ಬುದ್ಧಿ ಹೇಳಿ, ಅವರನ್ನು ಸಮಾಧಾನ ಪಡಿಸಿ, ತಕ್ಷಣ ನೀವು ಫರಂಗಿಪೇಟೆಗೆ ಬರತಕ್ಕದ್ದು. ಅಲ್ಲೇ ನಾವು ತಂಗಿರುವೆವು. ಕಂಪನಿಯವರು ಬಂದು ಗಲಾಟೆಗಳನ್ನೆಬ್ಬಿಸಿರುವರಷ್ಟೆ. ಕೋಲಾಹಲವನ್ನೆಲ್ಲ ಕೊನೆಗಾಣಿಸಿ, ಶಾಂತಿ ಸಮಾಧಾನಗಳನ್ನು ನೆಲೆಗೊಳಿಸಿ ಜನರಿಗೆ ತೃಪ್ತಿಯನ್ನುಂಟು ಮಾಡುವುದೇ ನಮ್ಮ ಆಗಮನದ ಉದ್ದಿಶ್ಯ......."

ಬೆಳ್ಳಾರೆಯಲ್ಲಿ ಭುಗಿಲೆದ್ದ ಬಂಡಾಯವು ಕ್ರಮಕ್ರಮವಾಗಿ ಹರಡುತ್ತಾ ಏಪ್ರಿಲ್ ೫ರ ವೇಳೆಗೆ ಮಂಗಳೂರಿಗೂ ವ್ಯಾಪಿಸಿತು. ಬಾವುಟಗುಡ್ಡದಲ್ಲಿ ಹಾರಾಡುತ್ತಿದ್ದ ಬ್ರಿಟಿಷ್ ಧ್ವಜವನ್ನು ಇಳಿಸಿದ ಬಂಡುಕೋರರು ತಮ್ಮದೇ ಧ್ವಜವನ್ನು ಏರಿಸುವಲ್ಲಿ ಯಶಸ್ವಿಯಾದರು ಕೋಟೆಯೊಳಗಿನ ಚಿಕ್ಕ ಬ್ರಿಟಿಷ್ ಕಾವಲು ದಳ ದಿಟ್ಟತನದಿಂದ ಶರಣಾಗದೇ ಉಳಿಯುತ್ತದೆ; ಸಮುದ್ರಮಾರ್ಗವಾಗಿ ಸಹಾಯ ಪಡೆದು ಬ್ರಿಟಿಷ್ ನಾಗರೀಕರನ್ನು ಬಹಳ ಕಷ್ಟದಿಂದ ಪಾರು ಮಾಡುವಲ್ಲಿಯೂ ಯಶಸ್ವಿಯಾಗುತ್ತಾರೆ. ಮಂಗಳೂರಿನಲ್ಲಿದ್ದ ಕಲೆಕ್ಟರ್ ಲೂವ್ಸೆ ತುರ್ತು ಸಹಾಯಕ್ಕಾಗಿ ನೆರೆಯ ಬ್ರಿಟಿಷ್ ಜಿಲ್ಲೆಗಳಿಗೆ ಸಂದೇಶ ಕಳುಹಿಸಬೇಕಾಗುತ್ತದೆ. ಧಾರವಾಡ, ಬೆಳಗಾಂ, ಹರಿಹರ ಮುಂತಾದ ಸ್ಥಳಗಳಿಂದ ಬ್ರಿಟಿಷರ ಸೈನಿಕರು ಮಂಗಳೂರಿನ ಕಡೆ ಹೊರಟರು; ಮುಂಬಯಿ ಕಡೆಯಿಂದಲೂ ಸ್ವಲ್ಪ ಸೈನ್ಯ ಬಂದಿತು; ಜೊತೆಗೆ, ಆ ವೇಳೆಗೆ ಕೊಡಗಿನ ಭಾಗದಲ್ಲಿ ವಿದ್ರೋಹಿಗಳ ಚಟುವಟಿಕೆಗಳನ್ನು ಸಂಪೂರ್ಣವಾಗಿ ಹತ್ತಿಕ್ಕಿದ್ದ ದಿವಾನ್ ಬೋಪು, ಸುಳ್ಯವನ್ನು ವಶಪಡಿಸಿಕೊಳ್ಳುವಲ್ಲಿಯೂ ಯಶ ಸಾಧಿಸಿದ. ಸೋಲು ನಿಶ್ಚಯವೆಂದು ತಿಳಿದ ಬಂಡುಕೋರರು ಎಲ್ಲೆಡೆ ಚದುರಿಹೋದರು; ಆದರೆ, ಬಹಳಷ್ಟು ಬಂಡುಕೋರ ನಾಯಕರನ್ನು ಬ್ರಿಟಿಷರು ಸೆರೆಹಿಡಿದರು.

ಸದರ್ ಅದಾಲತ್ತಿನಲ್ಲಿ ವಿಚಾರಣೆ ನಡೆಸಿ ಕೆಲವು ಬಂಡುಕೋರ ಮುಖಂಡರನ್ನು ಗಲ್ಲಿಗೇರಿಸಲಾಯಿತು. ಮಡಿಕೇರಿಯಲ್ಲಿ ಸುಬೇದಾರ ಗುಡ್ಡೆಮನೆ ಅಪ್ಪಯ್ಯ; ಮಂಗಳೂರಿನಲ್ಲಿ ಪುಟ್ಟ ಬಸಪ್ಪ, ವೀರಣ್ಣ ರೈ ಮತ್ತು ಉಪ್ಪಿನಂಗಡಿಯ ಮಂಜ ಮುಂತಾದ ಅನೇಕರು ಗಲಭೆ ಸಮಯದಲ್ಲಿ ಮಡಿದಿದ್ದರು. ಕೆಲವರಿಗೆ ಅಜೀವ ಶಿಕ್ಷೆ ವಿಧಿಸಲಾಯಿತು. ಇಂಥವರಲ್ಲಿ ಪ್ರಮುಖರೆಂದರೆ ಕುಕ್ಕನೂರು ಚೆನ್ನಯ್ಯ ಮತ್ತು ಪೆರಾಜೆ ಕೃಷ್ಣಯ್ಯ. ಇಷ್ಟೇ ಅಲ್ಲದೆ ದಂಗೆಯಲ್ಲಿ ಭಾಗವಹಿಸಿದ್ದ ಅನೇಕರನ್ನು ಗಡೀಪಾರು ಮಾಡಿದರೇ ಇನ್ನಿತರರನ್ನು ನಿರ್ದಿಷ್ಟ ಅವಧಿಯ ಕಾರಾಗೃಹ ಶಿಕ್ಷೆಗೆ ಒಳಪಡಿಸಲಾಯಿತು. ಈ ದಂಗೆಯ ಬಗ್ಗೆ ವಿಚಾರಣೆ ನಡೆಸಿದ ರಾಬರ್ಟ್ ಕಾಟನ್ ಎಂಬುವನ ವರದಿಯ ಮೇಲೆ ಟಿಪ್ಪಣಿ ಬರೆಯುತ್ತಾ ಮೈಸೂರು ಸಂಸ್ಥಾನದಲ್ಲಿ ಮುಖ್ಯ ಕಮೀಷನರ್ ಹುದ್ದೆ ನಿರ್ವಹಿಸುತ್ತಿದ್ದ ಕರ್ನಲ್ ಸರ್ ಮಾರ್ಕ್ ಕಬ್ಬನ್ ಈ ರೀತಿ ಹೇಳಿದ್ದಾರೆ:

"ಕೆನರಾ ಜಿಲ್ಲೆಯಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪ್ರಮುಖ ಜನ ಸಮುದಾಯ ಬ್ರಿಟಿಷ್ ಸರಕಾರದ ವಿರುದ್ಧ ಭಾಗವಹಿಸಲು ತಯಾರಾದರಲ್ಲಾ! ಇದು ಹೇಗೆ ಅಥವಾ ಯಾರಿಂದ ಈ ಪಿತೂರಿ ರೂಪಿಸಲ್ಪಟ್ಟಿತು ಎನ್ನುವುದನ್ನು ಖಚಿತ ಮಾಡಿಕೊಳ್ಳುವುದು ಪ್ರಾಯಶಃ ಅಗತ್ಯ. "ಇಂಡಿಯಾದಲ್ಲಿ ಸಂದರ್ಭ ಸಿಕ್ಕಿದಾಗ ದಂಗೆ ಎಬ್ಬಿಸಲು ತಯಾರಾಗಿರುವ ಸರಕಾರದ ಮೇಲೆ ಕಹಿ ಮನಸ್ಸಿನ ಜನರು ಎಲ್ಲಾ ಕಡೆ ಇದ್ದಾರೆ ಎಂಬುದು ಆಗಾಗ್ಗೆ ಸಾಬೀತಾಗಿರುತ್ತದೆ. ಆದರೆ ಶಾಂತಿಯುತ ವಾತಾವರಣದಲ್ಲಿ ಗೌರವಾನ್ವಿತ ಕಂಪನಿಯ ನೇರವಾದ ಆಡಳಿತಕ್ಕೆ ಸೇರಿದ ಇಂತಹ ಪ್ರದೇಶದ ಜನರ ಪೈಕಿ ಇಲ್ಲಿಯ ರೈತಾಪಿ ನಿವಾಸಿಗಳಲ್ಲಿ ಸಾವಿರಾರು ಜನರನ್ನು ಸರಕಾರದ ವಿರುದ್ಧ ಶಸ್ತ್ರ ಹಿಡಿದು ನಿಲ್ಲುವಂತೆ ಒಂದುಗೂಡಿಸುವುದು ಹೇಗೆ ಸಾಧ್ಯವಾಯಿತು.............."

## ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

ಭಾರತೀಯ ಇತಿಹಾಸದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಪ್ರಸಿದ್ಧವಾಗಿರುವ ಸಿಪಾಯಿದಂಗೆಯು ಬಂಗಾಳ ಮತ್ತು ಮಹಾರಾಷ್ಟ್ರಗಳ ನಡೆದಿದ್ದು, ಕೆನರಾ ಜಿಲ್ಲೆ (ಉತ್ತರ ಕನ್ನಡವೂ ಸೇರಿದಂತೆ)ಯಲ್ಲಿಯೂ ಪ್ರತಿಧ್ವನಿಸಿದ್ದು ಅತ್ಯಂತ ಗಮನೀಯವಾಗಿದೆ. ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಸಾವಂತವಾಡಿಯ ಫಂಡೋ ಸಾವಂತ್‌ನ ಮಕ್ಕಳಾದ ನಾನಾ, ಬಾಬಾ ಮತ್ತು ಹನುಮಂತ ಇವರುಗಳು ನಂಬಿಕೆ–ವಾಗ್ದಾನದ ಮೇಲೆ (ಪೆರೋಲ್) ಬಿಡುಗಡೆಗೊಂಡು ಗೋವಾದಲ್ಲಿದ್ದರು. ಇವರು ೧೮೪೪ರಲ್ಲಿ ರತ್ನಗಿರಿ ಜಿಲ್ಲೆಯಲ್ಲಿ ಸಂಭವಿಸಿದ ಬ್ರಿಟಿಷರ ವಿರುದ್ಧದ ಬಂಡಾಯಗಳಲ್ಲಿ ಭಾಗವಹಿಸಿದ್ದರು. ಗೋವಾದಿಂದ ಪಲಾಯನ ಮಾಡಿದ ಇವರು ಉತ್ತರ ಕನ್ನಡ ಜಿಲ್ಲೆಯ ಸೂಪಾ ತಾಲೂಕಿನಲ್ಲಿದ್ದ ದರ್ಶನಿಗುಡ್ಡವನ್ನು ತಮ್ಮ ಕಾರ್ಯತಂತ್ರಕ್ಕೆ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡರು. ಅಕ್ಟೋಬರ್ ೧೮೫೮ರಲ್ಲಿ ಇವರು, ಸ್ಥಳೀಯ ಫಡ್ನೀಸ್ ಸಹೋದರರು ಹಾಗೂ ಹಲವು ಸಿದ್ಧಿ ಜನಗಳ ನೆರವನ್ನು ಪಡೆದು ಬ್ರಿಟಿಷರ ವಿರುದ್ಧ ತಮ್ಮ ಹೋರಾಟಗಳನ್ನು 'ಸಿಪಾಯಿದಂಗೆ' (೧೮೫೭) ಯಿಂದ ಸ್ಫೂರ್ತಿ ಪಡೆದು ಆರಂಭಿಸಿದರು. ಏತನ್ಮಧ್ಯೆ ಮಹಾರಾಷ್ಟ್ರದ ಪೇಶ್ವೆ ನಾನಾಸಾಹೇಬನು ಗೋವಾದ ಪೋರ್ಚುಗೀಸರೊಡನೆ ಪೂರ್ವಸಂಧಾನವನ್ನು ಮಾಡಿಕೊಂಡು ಆಂಗ್ಲರ ವಿರುದ್ಧದ ತನ್ನ ಹೋರಾಟಕ್ಕಾಗಿ ದಕ್ಷಿಣಕ್ಕೆ ಬಂದನೆಂದು ವ್ಯಕ್ತವಾಗುತ್ತದೆ. ೧೮೫೮ರಿಂದ ೧೮೫೯ರ ಡಿಸೆಂಬರ್‌ವರೆಗೂ ನಡೆದ ಆಂಗ್ಲರ ವಿರುದ್ಧದ ಸೆಣಸಾಟವು ದಕ್ಷಿಣ ಕನ್ನಡ ಜಿಲ್ಲೆಯ ಮೇಲೂ ಪ್ರಭಾವ ಬೀರಿತು. ಕೆನರಾ ಜಿಲ್ಲೆಯ ಆಡಳಿತವು (ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಸೇರಿದಂತೆ) ಮುಂಬೈ ಪ್ರೆಸಿಡೆನ್ಸಿಯ ಹತೋಟಿಯಲ್ಲಿ ೧೮೬೦ರವರೆಗೂ ಮುಂದುವರೆದಿತ್ತು. ಆಡಳಿತದ ಹತೋಟಿಯ ದೃಷ್ಟಿಯಿಂದ ಈ ಎರಡೂ ಜಿಲ್ಲೆಗಳನ್ನು ೧೬ನೇ ಏಪ್ರಿಲ್ ೧೮೬೨ರಲ್ಲಿ ಬೇರ್ಪಡಿಸಿ ಉತ್ತರ ಕನ್ನಡ ಜಿಲ್ಲೆಯನ್ನು ಮುಂಬೈ ಪ್ರೆಸಿಡೆನ್ಸಿಗೂ ಮತ್ತು ದಕ್ಷಿಣ ಕನ್ನಡ ಜಿಲ್ಲೆಯನ್ನು ಮದರಸ್ ಪ್ರೆಸಿಡೆನ್ಸಿಗೂ ವರ್ಗಾಯಿಸಲಾಯಿತು. ಎರಡೂ ಜಿಲ್ಲೆಗಳ ರಾಜಕೀಯ ಐಕ್ಯತೆಗೆ ಭಂಗ ತರುವುದರ ಜೊತೆಗೆ ಸಾಂಸ್ಕೃತಿಕ ವಿಭಜನೆಗೂ ಬ್ರಿಟಿಷ್ ಸರ್ಕಾರದ ಈ ಆಡಳಿತಾತ್ಮಕ ನಿರ್ಣಯವು ಎಡೆಮಾಡಿಕೊಟ್ಟಿತು. ಆದರೆ, ನಂತರ ಉತ್ತರ ಕನ್ನಡವನ್ನು ಮುಂಬೈ ಪ್ರೆಸಿಡೆನ್ಸಿಗೆ ವರ್ಗಾಯಿಸುವ ಸಮಯದಲ್ಲಿ ಕುಂದಾಪುರ ತಾಲೂಕನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಪುನಃ ಸೇರಿಸಲ್ಪಟ್ಟಿತು. ಕೆನರಾ ಜಿಲ್ಲೆಯನ್ನು ಈ ರೀತಿ ವಿಭಜಿಸಿದುದಕ್ಕೆ ಬ್ರಿಟಿಷರು ನೀಡಿದ ಮುಖ್ಯ ಕಾರಣವೆಂದರೇ, 'ಹತ್ತಿಯ ಅಂತರರಾಷ್ಟ್ರೀಯ ವ್ಯಾಪಾರವು ಮುಂಬೈ ಮೂಲಕ ನಡೆಯುವುದು ಅವಶ್ಯಕವೆಂದು ಪರಿಗಣಿಸಿ ಉತ್ತರ ಕನ್ನಡ ಜಿಲ್ಲೆಯನ್ನು (ಆಗ ಕರ್ನಾಟಕದ ಹತ್ತಿಗೆ 'ಕುಮಟಾ ಹತ್ತಿ' ಎಂದೇ ಕರೆಯಲಾಗುತ್ತಿತ್ತು) ಮುಂಬೈ ಪ್ರೆಸಿಡೆನ್ಸಿಗೆ ವರ್ಗಾಯಿಸಲ್ಪಟ್ಟಿದೆ. ಆದರೇ, ಇತಿಹಾಸಕಾರರ ಪ್ರಕಾರ ೧೮೫೭ರ ಸಿಪಾಯಿ ದಂಗೆಯ ಸರಣಿಯಲ್ಲಿ ಕೆನರಾ (ಉತ್ತರ ಕನ್ನಡ) ಜಿಲ್ಲೆಯಲ್ಲಿ ಮುಂದುವರೆದ ಬ್ರಿಟಿಷರ ವಿರುದ್ಧದ ಹೋರಾಟವೇ ಕೆನರಾ ಜಿಲ್ಲೆಯ ವಿಭಜನೆಗೆ ಮೂಲ ಪ್ರಚೋದನೆಯಾಗಿತ್ತೆಂದು ವ್ಯಕ್ತವಾಗುತ್ತದೆ.

## ಬ್ರಿಟಿಷರ ಆಡಳಿತದ ಪ್ರಭಾವಗಳು

೧೯ನೇ ಶತಮಾನದ ಕೊನೆಯ ಹಾಗೂ ೨೦ನೇ ಶತಮಾನದ ಆರಂಭದ ದಶಕಗಳಲ್ಲಿ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಾಶಾಹಿ ಧೋರಣೆಯಲ್ಲಿ ಹಾಗೂ ರಾಷ್ಟ್ರೀಯತೆಯ ಬೆಳವಣಿಗೆಯಲ್ಲಿ ಸಾಂದರ್ಭಿಕವಾಗಿ ಅನೇಕ ಬದಲಾವಣೆಗಳಾದವು. ಇದೇ ಸಂದರ್ಭದಲ್ಲಿ ಬ್ರಿಟಿಷರು ಭಾರತಾದ್ಯಂತ ಏಕಾಧಿಪತ್ಯವನ್ನು ಸ್ಥಾಪಿಸಿದ ಪರಿಣಾಮವಾಗಿ ದೇಶದ ಎಲ್ಲಾ ರಾಜ್ಯಗಳಲ್ಲೂ ಪ್ರಥಮ ಬಾರಿಗೆ ಏಕ ರೀತಿಯ ಆಡಳಿತವು ಜಿಲ್ಲಾ ಕಲೆಕ್ಟರ್‌ಗಳ ಅಧೀನದಲ್ಲಿ ಜಾರಿಗೆ ಬಂದದ್ದು ಸಾಮಾನ್ಯ ಜನತೆಯ ದೃಷ್ಟಿಯಿಂದ ಪ್ರಾತಿಪರವಾದ ಆಡಳಿತ ಪದ್ಧತಿಯಾಗಿತ್ತು. ಬ್ರಿಟಿಷರ ಆಡಳಿತವು ಜಾರಿಗೆ ಬಂದ ರಾಜ್ಯಗಳಲ್ಲಿ ಸ್ವಾಭಾವಿಕವಾಗಿಯೇ ಭಾರತೀಯರ ದೃಷ್ಟಿಯಿಂದ ಆಧುನಿಕವೆನಿಸಿದ ಆಂಗ್ಲ ಭಾಷೆಯ ಶಿಕ್ಷಣ ಪದ್ಧತಿಯು ಜಾರಿಗೆ ಬಂದು ಸ್ಥಳೀಯ ಜನತೆಯ ಬೌದ್ಧಿಕ ಜಾಗೃತಿಗೆ ಉತ್ತೇಜನ ನೀಡಿತು. ಮಂಗಳೂರು ನಗರದಲ್ಲಿ ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟೆಂಟ್ ಮಿಶನರಿಗಳು ದೂರದ ಯೂರೋಪ್ ಮತ್ತಿತರ ದೇಶಗಳಿಂದ ವಲಸೆ ಬಂದು ನೆಲಸಿ ಶೈಕ್ಷಣಿಕ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿ ಪ್ರಥಮವೆನಿಸಿದ ಹಲವಾರು ಪ್ರಾತಿಪರ ಅಭಿವೃದ್ಧಿಗಳನ್ನು ಕ್ರಮೇಣ ಜಾರಿಗೆ ತಂದರು. ಬ್ರಿಟಿಷರು ದೇಶದಲ್ಲಿ ಜಾರಿಗೊಳಿಸಿದ್ದ ೧೮೬೫ರ ನಗರಾಭಿವೃದ್ಧಿ ಕಾಯಿದೆಯನ್ವಯ ನಗರ ಹಾಗೂ ಪಟ್ಟಣಗಳ ಆಂತರಿಕ ಆಡಳಿತ, ನಿರ್ವಹಣೆಗೆ, ಮುನಿಸಿಪಾಲಿಟಿಗಳನ್ನು ಸ್ಥಾಪಿಸಲಾಯಿತು. ಇದೇ ಕಾಯಿದೆಯನ್ವಯ ಮಂಗಳೂರು ಮುನಿಸಿಪಾಲಿಟಿಯನ್ನು ೧೮೬೬ರಲ್ಲಿ ಅಸ್ತಿತ್ವಕ್ಕೆ ತರಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ೧೮೮೪ರಲ್ಲಿ ಜಿಲ್ಲಾ ಮಂಡಳಿಗಳನ್ನು ಬ್ರಿಟಿಷರು ಜಾರಿಗೆ ತಂದು ಕುಂದಾಪುರ, ಉಪ್ಪಿನಂಗಡಿ ಮತ್ತು ಮಂಗಳೂರು ತಾಲೂಕುಗಳ ಆಡಳಿತವನ್ನು ತಾಲೂಕು ಮಂಡಳಿಗಳಿಗೆ ವಹಿಸಿಕೊಡಲಾಯಿತು. ಬ್ರಿಟಿಷರು ಜಾರಿಗೆ ತಂದ ಪಟ್ಟಣ ಹಾಗೂ ನಗರಪಾಲಿಕೆಗಳ ಕಾಯ್ದೆಯನ್ವಯ ನಗರಾಡಳಿತದಲ್ಲಿ ಸಂಭವಿಸಿದ ಆಧುನೀಕೃತ ಪರಿವರ್ತನೆಗಳು ಜನಾದರಣೆಯನ್ನು ಗಳಿಸಿತ್ತು. ಹಾಗೆಯೇ, ತಾಲೂಕು ಮಂಡಳಿಗಳ ಕಾಯ್ದೆಯು ಕ್ರಮೇಣ ಜಾರಿಗೆ ಬಂದದ್ದು ಆಡಳಿತದ ಕ್ಷಿಪ್ರ ಸುಧಾರಣೆಗೆ ಎಡೆಮಾಡಿಕೊಟ್ಟಿತು. ಮಂಗಳೂರಿನಲ್ಲಿ ೧೮೭೦ರಲ್ಲಿ ಸ್ಥಾಪನೆಗೊಂಡ 'ಉಪಾಸನಾ ಸಮಾಜವನ್ನು' ಕ್ರಿ.ಶ. ೧೯೦೩ರಲ್ಲಿ ಬ್ರಹ್ಮಸಮಾಜವೆಂದು ಪರಿವರ್ತಿಸಲಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗೊಂಡ ಹಲವಾರು ಪ್ರಾತಿಪರ ಕಾರ್ಯಕ್ರಮಗಳು ದೇಶದಲ್ಲೇ ಪ್ರಥಮವೆನಿಸಿದವು. ಆಡಳಿತ ಪದ್ಧತಿಯ ಆಧುನೀಕರಣ ಹಾಗೂ ಹಲವಾರು ಪ್ರಗತಿಪರ ನಿರ್ಣಯಗಳು ಭಾರತೀಯರಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿಸಲು ಪ್ರಮುಖ ಕಾರಣಗಳಾಗಿದ್ದವು. ಭಾರತೀಯರು ಆಂಗ್ಲಭಾಷೆಯ ವಿದ್ಯಾಭ್ಯಾಸದ ಸೌಲಭ್ಯವನ್ನು ಪಡೆದು ಪ್ರಥಮ ಬಾರಿಗೆ ಪಾಶ್ಚಿಮಾತ್ಯ ಸಾಹಿತ್ಯ, ತತ್ವಜ್ಞಾನ ಹಾಗೂ ಪ್ರಾತಿಪರ ವಿಚಾರಗಳನ್ನು ಪರಿಚಯ ಮಾಡಿಕೊಂಡ ಕಾರಣ ದೇಶಾದ್ಯಂತ ಅಭೂತಪೂರ್ವವಾದ ಬೌದ್ಧಿಕ ಜಾಗೃತಿ ಉಂಟಾಯಿತು. ದೇಶಾದ್ಯಂತ ಆರಂಭವಾದ ಸುಧಾರಣಾ ಗಾಳಿಯು ದಕ್ಷಿಣ ಕನ್ನಡಕ್ಕೂ ಹರಡಿತು. ಮಂಗಳೂರಿನಲ್ಲಿ ಬ್ರಹ್ಮಸಮಾಜ ಹಾಗೂ ಆರ್ಯಸಮಾಜಗಳ ಶಾಖೆಗಳು ಆರಂಭವಾಗಿದ್ದೇ ಅಲ್ಲದೇ ತಮ್ಮ ಚಟುವಟಿಕೆಗಳನ್ನು ವ್ಯಾಪಕವಾಗಿ ಕೈಗೊಂಡದ್ದು ವ್ಯಕ್ತವಾಗುತ್ತದೆ. ಅನಿಬೆಸೆಂಟ್ ಸ್ಥಾಪಿಸಿದ ಥಿಯೋಸೊಫಿಕಲ್ (ಬ್ರಹ್ಮವಿದ್ಯಾ ಸಮಾಜ) ಸೊಸೈಟಿಯೂ ತನ್ನ ಕಾರ್ಯವನ್ನು ಮಂಗಳೂರಿನಲ್ಲಿ ಆರಂಭಿಸಿತು. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇದೇ ಸಮಯಕ್ಕೆ ಹಿಂದುಳಿದ ವರ್ಗಗಳ ಸಂಸ್ಥೆ (Depressed Classes Mission) ಯು ಆರಂಭವಾಗಿದ್ದು, ಸಮಾಜ ಸುಧಾರಣಾ ಕಾರ್ಯದಲ್ಲಿ ರಾಜ್ಯದಲ್ಲೇ ಹಲವು ಪ್ರಥಮ ಕಾರ್ಯಚಟುವಟಿಕೆಗಳನ್ನು ಕೈಗೊಂಡ ಕುದ್ಮಲ್ ರಂಗರಾವ್ ಮತ್ತು ರಘುನಾಥಯ್ಯ ಮೊದಲಾದ ಪ್ರಗತಿಪರ ಸುಧಾರಕರು ದಲಿತ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣಕಾರ್ಯಗಳಿಂದಾಗಿ ನವೋದಯವನ್ನಾರಂಭಿಸಿದರು. ಶೈಕ್ಷಣಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿಯೂ ಗಮನೀಯವಾದ ಸುಧಾರಣೆಗಳು ಕ್ರಮೇಣ ಜಾರಿಗೆ ಬಂದವು. ಅಮ್ಮೆಂಬಳ ಸುಬ್ರಾಯ ಪೈ ಅವರು ಕೆನರಾ ಪ್ರೌಢ ಶಾಲೆ ಮತ್ತು ಕೆನರಾ ಬ್ಯಾಂಕ್‌ಗಳನ್ನು ಇದೇ ಸಂದರ್ಭದಲ್ಲಿ ಸ್ಥಾಪಿಸಿದ್ದು, ಸ್ಥಳೀಯರ ಪ್ರಗತಿಪರ ಧೋರಣೆಯ ದೃಷ್ಟಿಯಿಂದ ಪ್ರಶಂಸನೀಯ ಹೆಜ್ಜೆಗಳಾಗಿದ್ದವು.

ನಂತರದ ಕಾಲದಲ್ಲಿ ಸಾಹಿತ್ಯ ಹಾಗೂ ಇತರೆ ಗ್ರಂಥಗಳ ರಚನೆ ಮತ್ತು ಪ್ರಕಟಣಾ ಕ್ಷೇತ್ರಗಳಲ್ಲೂ ದಕ್ಷಿಣ ಕನ್ನಡವು ಪ್ರಮುಖ ಕೇಂದ್ರವಾಗಿತ್ತು. ಕ್ರೈಸ್ತ ಮಿಶನರಿಗಳು ಕೇವಲ ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗದೇ ಸ್ಥಳೀಯ ಜನತೆಯ ಭಾಷೆಯ ಜೊತೆಗೆ ರಾಜ್ಯದ ಭಾಷೆಯಾದ ಕನ್ನಡವನ್ನು ಕಲಿತು ಗ್ರಂಥಗಳ ರಚನೆ ಮತ್ತು ಪ್ರಕಟಣೆಯಲ್ಲಿ ವಿಶೇಷ ಆಸ್ಥೆ ವಹಿಸಿ ಗ್ರಂಥಗಳನ್ನು ಪ್ರಕಟಿಸಲು ಪ್ರಯತ್ನಿಸಿದ್ದು ಪ್ರಶಂಸಾರ್ಹವಾಗಿತ್ತು. ಈ ದಿಸೆಯಲ್ಲಿ ಮಂಗಳೂರಿನ ಬ್ಯಾಸೆಲ್‌ಮಿಶನ್ ಸಂಸ್ಥೆಯು ತನ್ನದೇ ಆದ ಮುದ್ರಣಾಲಯವನ್ನು ಆರಂಭಿಸಿ ರಾಜ್ಯದಲ್ಲೇ ಪ್ರಥಮವೆನಿಸಿದ ಕನ್ನಡ–ಇಂಗ್ಲೀಷ್ ನಿಘಂಟು, ಬೈಬಲ್‌ನ ಕನ್ನಡ ಅನುವಾದ ಹಾಗೂ ತುಳು ಭಾಷೆಯಲ್ಲಿನ ಪಾಡ್ದನಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದು ಸ್ಥಳೀಯ ಜನರ ಪ್ರಶಂಸೆಗೆ ಕಾರಣವಾದುವು. ಬ್ಯಾಸೆಲ್ ಮಿಶನ್ ಸಂಸ್ಥೆಯವರು ದಕ್ಷಿಣಕನ್ನಡ ಜಿಲ್ಲೆಯಾದ್ಯಂತ ಶಾಲಾಕಾಲೇಜುಗಳನ್ನು ಆರಂಭಿಸಿ ಆಂಗ್ಲ ಭಾಷಾ ಶಿಕ್ಷಣದ ಪ್ರಚಾರವನ್ನು ಕೈಗೊಂಡು ಪ್ರಥಮ ಬಾರಿಗೆ ಜನರಲ್ಲಿ ಕಲಿಕೆಯ ಆದ್ಯತೆ

ಹಾಗೂ ಹಲವು ಜನಪ್ರಿಯ ಗ್ರಂಥಗಳ ರಚನೆಯ ಚಟುವಟಿಕೆಗಳಿಗೆ ಪ್ರೋತ್ಸಾಹವನ್ನು ಒದಗಿಸಿದರು. ಬ್ಯಾಸೆಲ್ ಮಿಶನ್ ಸಂಸ್ಥೆಯ ಚಟುವಟಿಕೆಗಳ ಜೊತೆ ಜೊತೆಗೆ ಕ್ಯಾಥೋಲಿಕ್ ಮಿಶನರಿ ಸಂಸ್ಥೆಗಳೂ ಸಹ ದಕ್ಷಿಣ ಕನ್ನಡದಾದ್ಯಂತ ಅನೇಕ ಆಸ್ಪತ್ರೆ, ಶಾಲಾಕಾಲೇಜುಗಳ ಸ್ಥಾಪನೆಗೆ ಕಾರಣವಾದುವು. ಹೀಗೆ ಆರಂಭವಾದ ಫಾದರ್ ಮುಲ್ಲರ್ಸ್ ಆಸ್ಪತ್ರೆ ಮತ್ತು ಪ್ರಥಮ ದರ್ಜೆ ಪುರುಷರ ಮತ್ತು ಮಹಿಳೆಯರ ಶಾಲಾ–ಕಾಲೇಜುಗಳನ್ನು ಕ್ರೈಸ್ತಧರ್ಮೀಯ ಸಂಸ್ಥೆಗಳು ಜಿಲ್ಲೆಯಾದ್ಯಂತ ಆರಂಭಿಸಿದ್ದು, ಜನತೆಯ ಆರೋಗ್ಯ ರಕ್ಷಣೆ ಮತ್ತು ಬೌದ್ಧಿಕ ಜಾಗೃತಿಗಳಿಗೆ ನಾಂದಿಯಾಯಿತು. ಆಂಗ್ಲರು ಕೈಗೊಂಡ ಹಲವಾರು ಪ್ರಗತಿಪರ ಕಾರ್ಯಕ್ರಮಗಳ ಜೊತೆಗೆ ನಗರ ಹಾಗೂ ಪಟ್ಟಣಗಳಲ್ಲಿ ಉತ್ತಮ ಸಾರಿಗೆ ಹಾಗೂ ಸಂಪರ್ಕ ಕ್ಷೇತ್ರಗಳಲ್ಲಿ ಉತ್ತಮ ಸಾಧನೆಗಳನ್ನು ಮಾಡಿದುವು. ಜೊತೆಗೆ ಜಿಲ್ಲೆಯ ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿಗಳಿಗೆ ಬ್ರಿಟಿಷರ ಆಡಳಿತ ನೀತಿಯೇ ಮುಖ್ಯ ಕಾರಣವಾಗಿತ್ತು. ಜಿಲ್ಲೆಯ ಪ್ರಮುಖ ಕೈಗಾರಿಕೆಗಳಾಗಿದ್ದ ಬೀಡಿ ಉದ್ಯಮ, ಕೈಮಗ್ಗದ ಉದ್ಯಮ ಮತ್ತು ಇತರೆ ಘಟಕಗಳನ್ನು ಅಭಿವೃದ್ಧಿಪಡಿಸಲು ಆಂಗ್ಲ ಸರ್ಕಾರ ಕೆಲವು ಕ್ರಮಗಳನ್ನು ಕೈಗೊಂಡಿತೆಂಬ ಅಭಿಪ್ರಾಯವಿದೆ. ಹತ್ತೊಂಬತ್ತನೇ ಶತಮಾನದ ಕೊನೆಯ ಭಾಗದಲ್ಲಿ ರಾಷ್ಟ್ರದಲ್ಲಿ ರಾಷ್ಟ್ರೀಯತೆಯ ಜಾಗೃತಿಯು ಪ್ರಬಲಗೊಂಡ ಕಾರಣ ೧೮೮೫ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಯಾಯಿತು. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಜನ ಜಾಗೃತಿ ಮೂಡಿಸಲು ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಯು ಗುರುತರವಾದ ಪಾತ್ರವಹಿಸಿತು. ಜಿಲ್ಲೆಯಲ್ಲಿ ಈ ವೇಳೆಗಾಗಲೇ ಸ್ವಾತಂತ್ರ್ಯ ಸಂಗ್ರಾಮದ ಸಣ್ಣಪುಟ್ಟ ಚಟುವಟಿಕೆಗಳು ಹಂತಹಂತವಾಗಿ ತಲೆಎತ್ತಿದ್ದವು. ಬ್ರಿಟಿಷ್ ಆಡಳಿತದ ಪರಿಣಾಮವಾಗಿ ಈ ಜಿಲ್ಲೆಯಲ್ಲಿ ಶೈಕ್ಷಣಿಕ ಪ್ರಗತಿಯು ವ್ಯಾಪಕವಾಗಿ ಆಯಿತು. ಪಾರಂಪರಿಕ ಅಥವಾ ಸಾರ್ವತ್ರಿಕ ಶಿಕ್ಷಣವು ಬಹಳಷ್ಟು ಮಟ್ಟಿಗೆ ಕೆಲವೇ ವರ್ಗಗಳಲ್ಲಿ ಮಾತ್ರ ಸೀಮಿತವಾಗಿದ್ದುದು ವಾಸ್ತವವಾಗಿತ್ತು. ಬ್ರಿಟಿಷರ ಪ್ರಭಾವದಿಂದ ಸಾರ್ವತ್ರಿಕ ಶಿಕ್ಷಣವು ಜನಪ್ರಿಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ವ್ಯಾಪಕವಾಗುವಂತೆ ಆಯಿತು. ಪಾಶ್ಚಾತ್ಯರು ದಕ್ಷಿಣಕನ್ನಡಕ್ಕೆ ಬಂದಾಗ, ಅವರ ಹಿಂದೆಯೇ ಬಂದ ಚಿಮಿಣಿ ಎಣ್ಣೆಯಿಂದ ಗಾಣಿಗರ ಸ್ವಯಂ ಉದ್ಯೋಗಕ್ಕೆ ಸ್ವಲ್ಪಮಟ್ಟಿಗೆ ಹಿನ್ನಡೆಯುಂಟಾಯಿತು. ನಂತರ ಬ್ಯಾಸೆಲ್ ಮಿಶನ್‌ನ (೧೮೩೪) ಚಟುವಟಿಕೆಗಳಿಂದಾಗಿ ಹಲವಾರು ಪರಿವರ್ತನೆಗಳುಂಟಾದವು. ಅವರು ಈ ಜಿಲ್ಲೆಗೆ ಪರಿಚಯಿಸಿದ ಹೆಂಚಿನ ಕಾರ್ಖಾನೆಗಳಿಂದಾಗಿ ಕುಂಬಾರರು (ಮುಖ್ಯವಾಗಿ ನಾಡ ಓಡು ತಯಾರಿಸುವವರು) ಬಹಳಷ್ಟು ಪ್ರಮಾಣದಲ್ಲಿ ನಿರುದ್ಯೋಗಿಗಳಾದರು. ಆದರೇ ಕಾಲಕ್ರಮೇಣ ಬ್ಯಾಸೆಲ್ ಮಿಶನ್ ಜಿಲ್ಲೆಯಲ್ಲಿ ವ್ಯಾಪಕವಾಗಿ ಆರಂಭಿಸಿದ ಹೆಂಚಿನ ಕೈಗಾರಿಕೆ ದೊಡ್ಡ ಪ್ರಮಾಣದಲ್ಲಿ ಸಾಮಾನ್ಯ ಜನರಿಗೆ ಉದ್ಯೋಗ ಒದಗುವಂತಾಯಿತು. ೧೮೯೧ರ ವೇಳೆಗಾಗಲೇ ಜಿಲ್ಲೆಯಲ್ಲಿ ೧೫ ಹೆಂಚಿನ ಕಾರ್ಖಾನೆಗಳು ಆರಂಭಗೊಂಡಿದ್ದವು. ಮುದ್ರಣ ಕಲೆಯನ್ನು ಪ್ರಥಮ ಬಾರಿಗೆ ಈ ಜಿಲ್ಲೆಯಲ್ಲಿ ಪರಿಚಯಿಸಿದ ಕೀರ್ತಿಯು ಬ್ಯಾಸೆಲ್ ಮಿಶನ್‌ಗೆ ಸಲ್ಲುತ್ತದೆ. ಇದೇ ರೀತಿ ನೂತನವಾಗಿ ಆರಂಭಗೊಂಡ ಮಂಗಳೂರಿನ ಕಾಫಿ ಸಂಸ್ಕರಣ ಕೇಂದ್ರವು ಸಾವಿರಾರು ಜನರಿಗೆ ಉದ್ಯೋಗ ಒದಗಿಸಿತ್ತು. ಪಾಶ್ಚಾತ್ಯರ ಸಂಪರ್ಕ, ಬ್ಯಾಸೆಲ್ ಮಿಶನ್ ಚಟುವಟಿಕೆಗಳಿಂದಾಗಿ ಉದ್ಯೋಗಾವಕಾಶಗಳು ಹೆಚ್ಚಿದ ಕಾರಣ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಗಳು ವ್ಯಾಪಕವಾಗಿ ಬೆಳೆಯಲಿಲ್ಲವೆಂಬುದೂ ನಿಜ. ಆದರೇ, ರಾಷ್ಟ್ರೀಯ ಜಾಗೃತಿ ಉಂಟಾಗಲು ಮೂಲ ಕಾರಣವೆಂದರೇ ಆಂಗ್ಲ ಭಾಷೆಯ ಶಿಕ್ಷಣವೆಂಬ ಅಂಶವನ್ನು ಆಗಲೇ ಚರ್ಚಿಸಲಾಗಿದೆ.

## ರಾಷ್ಟ್ರೀಯತಾ ಬೆಳವಣಿಗೆಗಳು

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೊಂಡ ತರುವಾಯ ದೇಶಾದ್ಯಂತ ಅದರ ಸಮಗ್ರ ಚಟುವಟಿಕೆಗಳು ಹಿಂದೆಂದೂ ವ್ಯಕ್ತವಾಗದ ಜನ ಜಾಗೃತಿಯನ್ನು ಕ್ರಮೇಣ ಮೂಡಿಸುವಲ್ಲಿ ಬಹುಮುಖ್ಯ ಪಾತ್ರವಹಿಸಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬಗ್ಗೆ ಸಾಕಷ್ಟು ಒಲವು ಮತ್ತು ವ್ಯಾಪಕವಾದ ಬೆಂಬಲ ವ್ಯಕ್ತವಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯನ್ನು 'ಕನ್ನಡ ಪತ್ರಿಕೋದ್ಯಮದ ತೊಟ್ಟಿಲು' ಎಂದು ಕರೆದಿರುವುದು ಅತ್ಯಂತ ವಾಸ್ತವವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಮುಖವಾಗಿ ಜನಪ್ರಿಯವಾಗಿದ್ದ ವೃತ್ತಪತ್ರಿಕೆಗಳೆಂದರೇ 'ತಿಲಕ ಸಂದೇಶ' (೧೯೧೯), 'ಸತ್ಯಾಗ್ರಹಿ' (೧೯೨೧) ಮತ್ತು 'ಸ್ವದೇಶಿ ಪ್ರಚಾರಕ' (೧೯೪೦)ಮಂಗಳೂರಿನಿಂದ ೧೮೪೨ರಲ್ಲಿ ಪ್ರಕಟಗೊಂಡ ಪ್ರಥಮ ಕನ್ನಡ ವೃತ್ತಪತ್ರಿಕೆ ಎಂದರೇ "ಕನ್ನಡ ಸಮಾಚಾರ" (ನಂತರ ಮಂಗಳೂರು ಸಮಾಚಾರ ಎಂದು ಪರಿವರ್ತನೆಗೊಂಡಿತು). ಬ್ರಹ್ಮಸಮಾಜವು ೧೮೭೦ರಲ್ಲಿ ಈ ಜಿಲ್ಲೆಯಲ್ಲಿ ಸ್ಥಾಪಿತವಾಯಿತು. ನಂತರ ಕುದ್ಮಲ್ ರಂಗರಾವ್ ಹಾಗೂ ಕಾರ್ನಾಡ್ ಸದಾಶಿವರಾಯರು ಬ್ರಹ್ಮ ಸಮಾಜದ ಅನುಯಾಯಿಗಳಾದರು. ಇದೇ ರೀತಿ ಕ್ರಿ.ಶ.೧೯೦೦ರ ವೇಳಗೆ ಥಿಯೋಸಾಫಿಕಲ್ (ಬ್ರಹ್ಮವಿದ್ಯಾ ಸಮಾಜ) ಸೊಸೈಟಿ ಮಂಗಳೂರಿನಲ್ಲಿ ಸ್ಥಾಪಿತವಾದ ತರುವಾಯ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಈ ಸಂಸ್ಥೆಯ ಅನುಯಾಯಿಯಾದರು. ಸ್ವಾತಂತ್ರ್ಯಯೋಧ ಎಂ.ಉಮೇಶ್‌ರಾಯರು ಪ್ರಕಾರ ೧೯೧೫ರ ವೇಳೆಗೆ ಜಿಲ್ಲೆಯ ಜನತೆಗೆ ಸ್ವರಾಜ್ಯದ ಕಲ್ಪನೆಯೇ ಇರಲಿಲ್ಲವೆಂದು ಅಭಿಪ್ರಾಯಪಡುತ್ತಾರೆ. ದ.ಕೃ.ಭಾರದ್ವಾಜರೆಂಬ ಖ್ಯಾತ ವಿದ್ವಾಂಸರು ಮಂಗಳೂರಿನಲ್ಲಿ ನೆಲೆ ನಿಂತರು "ತಿಲಕ ಸಂದೇಶ" ಎಂಬ ರಾಷ್ಟ್ರೀಯ

ಜಾಗೃತಿಗೆ ಮೀಸಲಾದ ಪತ್ರಿಕೆಯನ್ನಾರಂಭಿಸಿದ್ದು ಉಲ್ಲೇಖನೀಯ. ಇದೇ ರೀತಿ ಎ.ಬಿ.ಶೆಟ್ಟಿ ಅವರು ೧೯೨೧ರಲ್ಲಿ 'ನವಯುಗ' ಪತ್ರಿಕೆಯನ್ನು ಮಂಗಳೂರಿನಲ್ಲಿ ರಾಷ್ಟ್ರ ಜಾಗೃತಿಗೆ ಮೀಸಲಾಗಿಟ್ಟರು. 'ಸತ್ಯಾಗ್ರಹಿ' ಪತ್ರಿಕೆಯನ್ನು ಹಿರಿಯಡ್ಕ ನಾರಾಯಣರಾವ್ ಅವರು ೧೯೨೧ರಲ್ಲಿ ಆರಂಭಿಸಿದರು. ಇದೇ ರೀತಿ ಕಡಕಾರು ಗೋಪಾಲಕೃಷ್ಣ ರಾಯರು ಪ್ರಕಟಿಸುತ್ತಿದ್ದ "ಕೃಷ್ಣಸೂಕ್ತಿ" ಹಾಗೂ ಬಂಟ್ವಾಳದಿಂದ ಎಂ.ಎನ್.ಕಾಮತ್‌ರು ೧೯೧೬ರಲ್ಲಿ ಪ್ರಕಟಿಸಿದ "ಆನಂದ" ಕೂಡ ರಾಷ್ಟ್ರೀಯ ಜಾಗೃತಿಗೆ ಕಾರಣವಾಯಿತು. ರೆವೆರೆಂಡ್ ರೀವ್ಸ್ 'ಇಂಗ್ಲೀಷ್–ಕನ್ನಡ' ನಿಘಂಟನ್ನು ೧೮೨೪ರಲ್ಲೂ ಹಾಗೂ ಕನ್ನಡ–ಇಂಗ್ಲೀಷ್ ನಿಘಂಟನ್ನು ೧೮೩೨ರಲ್ಲಿ ಕ್ರೈಸ್ತ ಮಿಶನರಿಗಳು ದಕ್ಷಿಣಕನ್ನಡದಲ್ಲಿ ಪ್ರಕಟಿಸಿದ್ದು ಮುಖ್ಯವಾದ ಬೌದ್ಧಿಕ ಚಟುವಟಿಕೆಗಳಾಗಿದ್ದವು. 'ಮಂಗಳೂರು ಸಮಾಚಾರ್' ಪತ್ರಿಕೆಯನ್ನು ರೆವರೆಂಡ್ ಹೆರ್ಮನ್ ಮೋಗಲಿಂಗ್ ಅವರು ಸಂಪಾದಿಸಿ ಬ್ಯಾಸೆಲ್ ಮಿಶನ್ ಸಂಸ್ಥೆಯಿಂದ ಪ್ರಕಟಗೊಂಡಿದ್ದು ಪ್ರಥಮ ಬಾರಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನಡ ಜನತೆಯಲ್ಲಿ ಜಾಗೃತಿ ಮತ್ತು ಜನಾಭಿಪ್ರಾಯ ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿತು. ಈ ಪತ್ರಿಕೆಯು ರಾಜ್ಯದ ಪ್ರಥಮ ಕನ್ನಡ ವೃತ್ತ ಪತ್ರಿಕೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಂತರ ೧೮೫೭ರಲ್ಲಿ ಮಂಗಳೂರಿನಿಂದ ಪ್ರಕಟಗೊಂಡ 'ಕನ್ನಡ ವಾರ್ತಿಕ' ಎಂಬ ಪ್ರಥಮ ಕನ್ನಡ ಜರ್ನಲ್ ಸ್ವರೂಪದ ಪತ್ರಿಕೆಯು ಕೇವಲ ಧಾರ್ಮಿಕ ಪ್ರಚಾರಕ್ಕೆ ಮತ್ತು ಶೈಕ್ಷಣಿಕ ಪ್ರಚಾರಕ್ಕೆ ಮಾತ್ರ ಮೀಸಲಾಗಿತ್ತು. (ವಿವರಗಳಿಗೆ ಅಧ್ಯಾಯ–೧೪ ಸಂಸ್ಕೃತಿ ನೋಡಿ). ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಅಲೆ ಎಬ್ಬಿಸುವಲ್ಲಿ ವೃತ್ತಪತ್ರಿಕೆಗಳೂ ಪ್ರಮುಖ ಪಾತ್ರವಹಿಸಿದುವು. ಸ್ವಾತಂತ್ರ್ಯ ಸಂಗ್ರಾಮವು ಕರ್ನಾಟಕದ ಬ್ರಿಟಿಷರ ನೇರ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳಿಗೆ ಮಾತ್ರ ಆರಂಭದಲ್ಲಿ ಸೀಮಿತವಾಗಿತ್ತು. ಅಂತ ಪ್ರದೇಶಗಳೆಂದರೇ ಮದ್ರಾಸ್ ಪ್ರಾಂತ್ಯದಲ್ಲಿದ್ದ ಬಳ್ಳಾರಿ, ದಕ್ಷಿಣ ಕನ್ನಡ ಜಿಲ್ಲೆಗಳು, ಬ್ರಿಟಿಷರೇ ಕಮಿಷನರ್ ಮೂಲಕ ಆಳುತ್ತಿದ್ದ ಕೊಡಗು ಹಾಗೂ ಮುಂಬೈ ಪ್ರಾಂತ್ಯದಲ್ಲಿದ್ದ ಧಾರವಾಡ, ಬಿಜಾಪುರ, ಉತ್ತರ ಕನ್ನಡ ಹಾಗೂ ಬೆಳಗಾವಿ ಜಿಲ್ಲೆಗಳೂ ಉಳಿದ ಇಂದಿನ ಕರ್ನಾಟಕದ ಎಲ್ಲಾ ಪ್ರದೇಶಗಳು ಸಂಸ್ಥಾನೀ ಅರಸರ ಆಡಳಿತಕ್ಕೆ ಒಳಪಟ್ಟಿದ್ದು ಅಲ್ಲಿ ಚಳವಳಿ ನಡೆಸಲು, ಕಾನೂನು ಭಂಗ ಕಾರ್ಯಕ್ರಮಗಳನ್ನು ನಡೆಸಲು ಕಾಂಗ್ರೆಸ್ ಅನುಮತಿ ನೀಡಲಿಲ್ಲ. ಆ ಪ್ರದೇಶಗಳಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ೧೯೩೮–೩೯ರಲ್ಲಿ ಚಳವಳಿಗಳು ನಡೆದವು. ಆದರೆ ೧೯೪೨–೪೩ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಮಾತ್ರ ಇಡೀ ಕರ್ನಾಟಕದ ಎಲ್ಲಾ ಜಿಲ್ಲೆಗಳೂ ಒಂದೇ ರೀತಿಯಲ್ಲಿ ಪಾಲ್ಗೊಂಡವು.

## ಗಾಂಧೀಯುಗ ಮತ್ತು ಅಸಹಕಾರ ಚಳವಳಿ

ಮಹಾತ್ಮ ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗಿದ ತಕ್ಷಣ ರಾಷ್ಟ್ರೀಯ ಚಳವಳಿಗಳಲ್ಲಿ ಭಾಗವಹಿಸಲು ನಿಶ್ಚಯಿಸಿದ್ದು, ಸ್ವಾತಂತ್ರ್ಯ ಸಂಗ್ರಾಮದ ನಿರಂತರ ಹೋರಾಟಕ್ಕೆ ಅವಶ್ಯಕವಾಗಿದ್ದ ನಾಯಕತ್ವವನ್ನು ಒದಗಿಸಿತು. ಭಾರತೀಯರ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಮಹಾತ್ಮಗಾಂಧೀಜಿಯವರ ಪ್ರವೇಶವು ಹೋರಾಟಕ್ಕೆ ಅವಶ್ಯಕವಾದ ಸ್ಫೂರ್ತಿ ಮತ್ತು ಪ್ರಭಾವಿತ ಸಂಚಲನವನ್ನುಂಟು ಮಾಡಿದ್ದು ಪ್ರಶಂಸನೀಯವಾದ ಮೈಲಿಗಲ್ಲಾಗಿ ಪರಿಣಮಿಸಿತು. ಈ ವೇಳೆಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಕಾರ್ನಾಡ ಸದಾಶಿವರಾಯರು, ಯು.ಎಸ್.ಮಲ್ಯ, ಕಮಲಾದೇವಿ ಚಟ್ಟೋಪಾಧ್ಯಾಯ, ಎಚ್.ವಿ.ಕಾಮತ್ ಮೊದಲಾದವರು ಮುಂಚೂಣಿಯಲ್ಲಿದ್ದರು. ದೇಶದ ಹೋರಾಟದಲ್ಲಿ ಏಕಪ್ರಕಾರವಾದ ಹೋರಾಟ ಮುಂದುವರೆಸಲು ಪ್ರಮುಖ ನಾಯಕರೊಬ್ಬರ ಅವಶ್ಯಕತೆ ಇದೆ ಎಂದು ಮನಗಂಡು, ಕಾರ್ನಾಡ ಸದಾಶಿವರಾಯರು ೧೯೧೮ರ ಆಗಸ್ಟ್ ತಿಂಗಳಲ್ಲಿ ಗಾಂಧೀಜಿಯವರಿಗೆ ಪತ್ರ ಬರೆದು 'ಅವರೇ ದೇಶದ ಸ್ವಾತಂತ್ರ್ಯ ಹೋರಾಟದ ನಾಯಕರಾಗಬೇಕೆಂದು ತಿಳಿಸಿದ್ದು ಕಾಲಜ್ಞಾನಿಯ ಮಾತಾಗಿ ಪರಿಣಮಿಸಿತು (ಈಗಲೂ ಈ ಪತ್ರದ ಪ್ರತಿಯು ದೆಹಲಿಯ ಗಾಂಧೀ ಮ್ಯೂಸಿಯಂನಲ್ಲಿದೆ). ನಂತರ, ೧೯೧೯ರಲ್ಲಿ **ರೌಲತ್** ಕಾಯಿದೆಯು ಜಾರಿಗೆ ಬಂದಾಗ ಸತ್ಯಾಗ್ರಹದಲ್ಲಿ ಭಾಗವಹಿಸಲು ಪ್ರತಿಜ್ಞೆ ತೊಟ್ಟವರ ಪೈಕಿ ಕರ್ನಾಟಕದಲ್ಲಿ ಮೊದಲಿಗರೆಂದರೆ ಕಾರ್ನಾಡ ಸದಾಶಿವರಾಯರು. ಅವರು ರಾಜಕೀಯ ಜಾಗೃತಿಯನ್ನು ಹೊಂದಿದ್ದು ಮಾತ್ರವಲ್ಲದೇ ರಾಷ್ಟ್ರೀಯ ನಾಯಕರುಗಳೊಡನೆ ಸಂಪರ್ಕವಿಟ್ಟುಕೊಂಡಿದ್ದ ದಕ್ಷಿಣಕನ್ನಡ ಜಿಲ್ಲೆಯ ಪ್ರಥಮ ಹಾಗೂ ಪ್ರಮುಖ ನಾಯಕರಾಗಿದ್ದರು. ಇವರು ಗಾಂಧೀಜಿಯವರು ಸತ್ಯಾಗ್ರಹಿಗಳಿಗೆ ಹಾಕಿಕೊಟ್ಟ ಉನ್ನತ ಆದರ್ಶಗಳಾದ ಸತ್ಯ, ತ್ಯಾಗ, ಶ್ರದ್ಧೆ ಹಾಗೂ ಅಹಿಂಸೆಗಳನ್ನು ತಮ್ಮ ಜೀವನದಲ್ಲಿ ಗಂಭೀರವಾಗಿ ಅಳವಡಿಸಿಕೊಂಡಿದ್ದರು. ಸ್ವದೇಶಿ ಚಳವಳಿಯನ್ನು ಗಾಂಧೀಜಿ ಅವರು ಸ್ಥಳೀಯ ಆಸಕ್ತಿಯುತ ಯುವಕರನ್ನು ಹಾಗೂ ಸಹ ಕಾರ್ಯಕರ್ತರೊಡನೆ ದೇಶಭಕ್ತಿ ಪ್ರಚೋದಿತ ಗೀತೆಗಳನ್ನು ಹಾಡುತ್ತಾ ಮಂಗಳೂರು ನಗರದಲ್ಲಿ ಸಂಕೀರ್ತನೆ ನಡೆಸಿ ವಿದೇಶಿ ವಸ್ತುಗಳನ್ನು ಸುಟ್ಟು ಹಾಕುವ ಹೋಲಿಯನ್ನು ನಡೆಸಿದ್ದಿದೆ. ಇಂಥ ಸಂದರ್ಭದಲ್ಲಿ ತಮ್ಮ ಮನೆಯಲ್ಲಿದ್ದ ಬೆಲೆ ಬಾಳುವ ವಿದೇಶಿ ಬಟ್ಟೆಗಳನ್ನು ಹಾಗೂ ತಮ್ಮ ಪತ್ನಿ ಸೀರೆಗಳನ್ನೂ ಸುಟ್ಟರೆಂದು ತಿಳಿದುಬರುತ್ತದೆ. ಆ ಸಂದರ್ಭದಲ್ಲಿ ಅವರು ಖಾದಿ ವಸ್ತ್ರಗಳನ್ನು ಮಾತ್ರ ಉಪಯೋಗಿಸಲು ಆರಂಭಿಸಿದರು. ನಂತರ ಸದಾಶಿವರಾಯರು ೧೯೨೦ರಲ್ಲಿ ನಾಗಪುರ ಕಾಂಗ್ರೆಸ್ ಅಧಿವೇಶನದಿಂದ ಹಿಂದಿರುಗಿದ ತಕ್ಷಣ ತಮ್ಮ ಮನೆಯಲ್ಲಿ ಕೆಲವು ಹಿತೈಷಿಗಳೊಂದಿಗೆ ಸಮಾಲೋಚನೆ ಮಾಡಿ

"ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿ"ಯನ್ನು ಸ್ಥಾಪಿಸಿದರು. ಮಂಗಳೂರಿನಲ್ಲಿ ವಕೀಲರಾಗಿದ್ದ ಸದಾಶಿವರಾಯರು ಸ್ವಾತಂತ್ರ್ಯ ಹೋರಾಟದ ಜೊತೆಗೆ ಹಲವಾರು ಸಾಮಾಜಿಕ ಸುಧಾರಣೆಗಳನ್ನೂ ದಲಿತ ಹಾಗೂ ಹಿಂದುಳಿದ ವರ್ಗಗಳ ಪರಿಸ್ಥಿತಿಯ ಅಭಿವೃದ್ಧಿಗೆ ಕೆಲವು ಕಾರ್ಯಗಳನ್ನು ಹಮ್ಮಿಕೊಂಡು ಜೀವನವಿಡೀ ಶ್ರಮಿಸಿದರು. ಮಹಾತ್ಮ ಗಾಂಧೀಜಿಯವರು ೧೯೨೦ರಲ್ಲಿ ಶೌಕತ್ ಅಲಿ ಜೊತೆಗೆ ಮಂಗಳೂರಿಗೆ ಬಂದಿದ್ದಾಗ ಅವರುಗಳಿಗೆ ಅಭೂತಪೂರ್ವ ಸ್ವಾಗತ ಕಾರ್ಯಕ್ರಮವನ್ನು ಸದಾಶಿವರಾಯರು ಆಯೋಜಿಸಿ ಎಲ್ಲಾ ದೇಶಾಭಿಮಾನಿಗಳ ಮೆಚ್ಚುಗೆಗೆ ಪಾತ್ರರಾದರು. ಮಂಗಳೂರಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾರ್ನಾಡ ಸದಾಶಿವರಾಯರ ಮನೆಯವರೂ ಸೇರಿದಂತೆ ಹಲವಾರು ಹೆಂಗಸರು ತಮ್ಮ ಚಿನ್ನದ ಆಭರಣಗಳನ್ನು ತಿಲಕ್ ಸ್ವರಾಜ್ ನಿಧಿಗೆ ಮಹಾತ್ಮ ಗಾಂಧೀಜಿಯವರಿಗೆ ಧಾನವಾಗಿ ನೀಡಿದರು. ನಂತರ ಗಾಂಧೀಜಿಯವರು ಭಾರತದಲ್ಲಿ ಆಯೋಜಿಸಿದ 'ಕಿಲಾಫತ್ ಚಳವಳಿ'ಯ ಪರಿಣಾಮವಾಗಿ ಭಾರತೀಯ ಮುಸಲ್ಮಾನರು ಸಹಸ್ರಾರು ಸಂಖ್ಯೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುವಂತೆ ಪ್ರೋತ್ಸಾಹ ನೀಡಿತು.

೧೯೨೨ರ ಫೆಬ್ರವರಿಯಲ್ಲಿ ಸರೋಜಿನಿ ನಾಯ್ಡು ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ರಾಜಕೀಯ ಪರಿಷತ್ತು ನಡೆಯಿತು. ಇದಕ್ಕೂ ಮೊದಲು ೧೯೨೧ರ ಅಸಹಕಾರ ಚಳವಳಿಯ ಸಂದರ್ಭದಲಿ ಸಭೆ, ಮೆರವಣಿಗೆ, ಪ್ರಭಾತಫೇರಿಗಳು ಎಲ್ಲಾ ಮುಖ್ಯ ಊರುಗಳಲ್ಲಿ ನಡೆದುವು. ಇದೇ ಸಮಯದಲ್ಲಿ 'ತಿಲಕ್ ಸಂದೇಶ'ದಲ್ಲಿ ಬರೆದ ಲೇಖನಕ್ಕಾಗಿ ಡಿ.ಕೆ.ಭಾರದ್ವಾಜ ಅವರಿಗೆ ಜೈಲು ಶಿಕ್ಷೆ ಆಯಿತು. 'ಸತ್ಯಾಗ್ರಹ' ಪತ್ರಿಕೆ ನಡೆಸುತ್ತಿದ್ದ ಕಾರಣ ರಾಮರಾಯಮಲ್ಯ ಮತ್ತು ನಾರಾಯಣರಾಯರಿಗೂ ಶಿಕ್ಷೆ ಆಯಿತು. ಅನಂತರ ೧೯೨೩ ಫೆಬ್ರವರಿ ೫ಕ್ಕೆ ಕಾರ್ನಾಡ ಸದಾಶಿವರಾಯರ ಪತ್ನಿ ತೀರಿಕೊಂಡಾಗ ಮನಃಶಾಂತಿಗಾಗಿ ಹಲವು ದಿನ ಸಬರಮತಿ ಆಶ್ರಮಕ್ಕೆ ಹೋಗಿದ್ದಾಗ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೆಂದೂ ಕೇಳರಿಯದ ಭಯಂಕರವಾದ ನೆರೆಹಾವಳಿವುಂಟಾದ ವಾರ್ತೆಯನ್ನು ತಿಳಿದ ತಕ್ಷಣ ಜನತೆಯ ಸಂರಕ್ಷಣೆಗಾಗಿ ಮಂಗಳೂರಿಗೆ ಅವರು ಧಾವಿಸಿ ಬಂದರು. ನಾಡದೋಣಿಯಲ್ಲಿ ತಾವೇ ಸ್ವಯಂಸೇವಕರೊಂದಿಗೆ ಬಂಟ್ವಾಳಕ್ಕೆ ಸಂಚರಿಸಿ ನೀರಿನಿಂದ ಆವೃತವಾಗಿದ್ದ ಗ್ರಾಮಗಳಲ್ಲಿ ಹಲವಾರು ದಿನಗಳಿಂದ ತೊಂದರೆಗೆ ಸಿಲುಕಿದ ಹಲವಾರು ಕುಟುಂಬಗಳನ್ನು ಭದ್ರತೆಯುಳ್ಳ ಜಾಗಕ್ಕೆ ಸಾಗಿಸಿದರು. ಆ ಸಂದರ್ಭದಲ್ಲಿ ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ನಿರ್ಗತಿಕರಾಗಿದ್ದ ಕೆಲವು ಕುಟುಂಬಗಳನ್ನು ತಮ್ಮ ಮನೆಯಲ್ಲೇ ಇಟ್ಟುಕೊಂಡು ಸಂರಕ್ಷಣೆ ನೀಡಿದರೆಂದು ವ್ಯಕ್ತವಾಗುತ್ತದೆ. ಸದಾಶಿವರಾಯರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದು ೧೯೨೪ರ ಕಾಂಗ್ರೆಸ್ ಅಧಿವೇಶನವನ್ನು ಕರ್ನಾಟಕದಲ್ಲಿ ಆಯೋಜಿಸಬೇಕೆಂದು ಗಂಗಾಧರರಾವ್ ದೇಶಪಾಂಡೆಯವರೊಡನೆ ಸೇರಿಕೊಂಡು ಗಾಂಧೀಜಿಯವರನ್ನು ಒಪ್ಪಿಸಿದ್ದು ಇವರ ವೈಯಕ್ತಿಕ ಸಾಧನೆಯಾಗಿತ್ತು. ಈ ಅಧಿವೇಶನವನ್ನು ಮಂಗಳೂರಿನಲ್ಲಿ ಸಮಾವೇಶಗೊಳಿಸಬೇಕೆಂದು ಸದಾಶಿವರಾಯರು ಒತ್ತಾಯ ಮಾಡಿದ್ದರೂ, ಗಂಗಾಧರರಾವ್ ದೇಶಪಾಂಡೆಯವರು ಇದು ಬೆಳಗಾವಿಯಲ್ಲಿ ನಡೆಯುವಂತೆ ಕೆ.ಪಿ.ಸಿ.ಸಿ ಸಭೆಯಲ್ಲಿ ನಿರ್ಣಯಿಸಲು ಕಾರಣರಾದರು.

ಸಾಮರಸ್ಯದ ದೃಷ್ಟಿಯಿಂದ ಇವರು ಕರ್ನಾಟಕ ಕಾಂಗ್ರೆಸ್ ಸಮಿತಿಯ ನಿರ್ಧಾರವನ್ನು ಒಪ್ಪಿಕೊಂಡು ಗಂಗಾಧರರಾವ್ ದೇಶಪಾಂಡೆಯವರೇ ಮಹಾನ್ ಕಾಂಗ್ರೆಸ್ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಚುನಾಯಿಸಿದರು. ಗಂಗಾಧರರಾಯರಿಗೆ ಅಧ್ಯಕ್ಷತೆಯನ್ನು ಬಿಟ್ಟುಕೊಟ್ಟ ದಿಟ್ಟ ನಿರ್ಧಾರವನ್ನು ಸ್ಥಳೀಯ ಪತ್ರಿಕೆಯಲ್ಲಿ "ಭೀಷ್ಮಾಚಾರ್ಯರು ಪಟ್ಟಾಧಿಕಾರವನ್ನು ತ್ಯಜಿಸಿದಂತೆ" ಎಂದು ಆಗ ವರ್ಣಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಕರ್ನಾಟಕದಲ್ಲಿ ಸಮಾವೇಶಗೊಂಡ ಅಖಿಲಭಾರತ ಪ್ರಥಮ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮ ಗಾಂಧೀಜಿಯವರ ಜೊತೆಗೆ ರಾಷ್ಟ್ರೀಯ ನಾಯಕರುಗಳಾದ ಸರ್ದಾರ್ ಪಟೇಲ್, ಮೌಲಾನ ಅಬ್ದುಲ್ ಕಲಾಮ್ ಆಝಾದ್, ಚಕ್ರವರ್ತಿ ರಾಜಗೋಪಾಲಾಚಾರ್ಯ, ಮದನ್ ಮೋಹನ ಮಾಳವೀಯ, ಮೋತಿಲಾಲ್‌ನೆಹರು ಮತ್ತು ಜವಹರಲಾಲ್ ನೆಹರು, ಬಾಬು ರಾಜೇಂದ್ರಪ್ರಸಾದ್, ಸರೋಜಿನಿ ನಾಯಿಡು, ಡಾ|| ಅನಿಬೆಸೆಂಟ್ ಮೊದಲಾದವರು ದೇಶದ ನಾನಾ ಮೂಲೆಗಳಿಂದ ಬಂದು ಭಾಗವಹಿಸಿದ್ದು ಈ ಕಾಂಗ್ರೆಸ್ ಅಧಿವೇಶದನ ವೈಶಿಷ್ಟ್ಯವಾಗಿತ್ತು. ಹೀಗೆ ಅವರ ಅಂದಿನ ಅನುಪಮ ತ್ಯಾಗದ ಕಾರ್ಯಕಲಾಪಗಳಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಕಾರ್ನಾಡ ಸದಾಶಿವರಾಯರ ಹೆಸರು ಸುವರ್ಣಾಕ್ಷರಗಳಲ್ಲಿ ಉಲ್ಲೇಖನೀಯವಾಗಿದೆ.

ಗಾಂಧೀಜಿಯವರ ನೇತೃತ್ವದಲ್ಲಿ ಆರಂಭವಾದ ಅಸಹಕಾರ ಚಳವಳಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಹೋರಾಟಗಾರರಾದ ಅರಬೈಲು ಭೋಜರಾವ್, ಯಂ. ಮಾಧವರಾವ್, ಕೆ.ರಾಮಕೃಷ್ಣ ಕಾರಂತ, ಯು.ಶಾಂತಾರಾಮರಾವ್, ಹಿರಿಯಡ್ಕ ರಾಮರಾಯಮಲ್ಯ, ಎಚ್.ಕೆ.ತಿಂಗಳಾಯ, ಎಚ್.ನಾರಾಯಣರಾವ್, ಉಡುಪಿ ಗೋವಿಂದರಾವ್, ಶೇಷಭಟ್ಟಬಿಡೆ, ಕಡೆಂಗೋಡ್ಲು ಶಂಕರಭಟ್ಟ, ಮೂಡಬಿದಿರೆ

ಉಮೇಶ್‌ರಾವ್, ಬೋಳಾರ ಭೋಜರಾವ್, ಕೆ.ಆರ್.ಆಚಾರ್, ಡಿ.ಕೆ.ಭಾರದ್ವಾಜ, ಖಂಡಿಗೆ ಕೃಷ್ಣಭಟ್ಟ, ಎ.ಎಸ್.ಕುಡ್ವ, ವಕೀಲ ಪಾಂಡುರಂಗರಾವ್, ಟಿ.ಉಪೇಂದ್ರಪೈ, ಪುರೋಷತ್ತಮ ಪೈ ಸಾಂತ್ಸಾರ್, ಅನಂತಪದ್ಮನಾಭ ಭಟ್ಟ, ಬಾಳಕಟ್ಟಬೀಡು, ಕೃಷ್ಣಯ್ಯ ಹೆಗ್ಗಡೆ, ಎ.ವಿ.ಬಾಳಿಗ, ಎನ್. ಎಸ್. ಕಿಲ್ಲೆ, ಕೊಚ್ಚಿಕಾರ್ ಸಹೋದರರಾದ ಪದ್ಮನಾಭ ಪೈ, ಪಾಂಡುರಂಗ ಪೈ, ಕೆ.ಕೆ.ಶೆಟ್ಟಿ, ಸದಾಶಿವ ಹೆಗ್ಗಡೆ, ಸೀತಾರಾಮ ಭಟ್ಟ, ಡಿ.ಎಂ.ಜಮಾಲುದ್ದೀನ್, ಎಚ್.ಪುತ್ತೂರು ಸಾಹೇಬರು, ಪಾಂಗಳ ಮಂಜುನಾಥ ನಾಯಕ್, ಚೌಕಿ ಸುಬ್ಬಯ್ಯ, ಜಿ.ಆರ್.ಶೆಣೈ ಮೋಹನಪ್ಪ ತಿಂಗಳಾಯ, ನಯಂಪಳ್ಳಿ ಆನಂದರಾವ್, ರಾಜಗೋಪಾಲ ನಾಯಕ್ ಮೊದಲಾದವರು ಭಾಗವಹಿಸಿದ್ದರು. ಮಂಗಳೂರು ಮತ್ತು ಉಡುಪಿ ಎರಡೂ ಉಭಯಕೇಂದ್ರಗಳು ರಾಷ್ಟ್ರೀಯ ಚಟುವಟಿಕೆಗಳ ಕ್ಷೇತ್ರವಾಗಿದ್ದವು. ಮಂಗಳೂರಿನಲ್ಲಿ ಕಾರ್ನಾಡ ಸದಾಶಿವರಾಯರ ನಿವಾಸವೇ ಟಿಳಕ್ ವಿದ್ಯಾಲಯವೆಂದು ಕರೆಯಲಾದ ಪ್ರಥಮ ರಾಷ್ಟ್ರೀಯ ಶಾಲೆಯಾಗಿತ್ತು. ಸ್ವದೇಶಿ ಚಳವಳಿಯ ಸ್ಫೂರ್ತಿಯಿಂದ ದೇಶಾದ್ಯಂತ ರಾಷ್ಟ್ರೀಯ ಶಾಲೆಗಳು ಆರಂಭಮಾಡುವುದು ಒಂದು ಪ್ರಮುಖ ಚಟುವಟಿಕೆಯಾಗಿತ್ತು. ಈ ಚಳವಳಿಯ ಅಂಗವಾಗಿ ಖಾದಿ ಪ್ರಚಾರ, ಮದ್ಯಪಾನ ನಿಷೇಧ ಮುಂತಾದ ರಚನಾತ್ಮಕ ಕಾರ್ಯಗಳನ್ನು ಜಿಲ್ಲೆಯಾದ್ಯಂತ ಹಮ್ಮಿಕೊಳ್ಳಲಾಯಿತು. ಇದೇ ಸಂದರ್ಭದಲ್ಲಿ ಗಾಂಧೀಜಿಯವರು ಇನ್ನೂ ಹರಿಜನೋದ್ಧಾರ ದೀಕ್ಷೆ ತೊಡುವುದಕ್ಕೆ ಬಹಳ ಮೊದಲೇ ಕುದ್ಮಲ್ ರಂಗರಾಯರು ದಲಿತ ಜನಾಂಗದ ಏಳಿಗೆಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಮರಣೀಯವಾದ ಸತ್ಕಾರ್ಯವನ್ನು ಮಾಡಿದರು. ಇವರು ಮುಂದೆ ಸಂನ್ಯಾಸ ದೀಕ್ಷೆ ತೊಟ್ಟು ಈಶ್ವರಾನಂದ ಸ್ವಾಮಿಗಳೆಂದು ಖ್ಯಾತರಾದರು. ಕುದ್ಮಲ್ ರಂಗರಾಯರು ಸಕ್ರಿಯವಾಗಿ ರಾಜಕೀಯ ಚಟುವಟಿಕೆಗಳಲ್ಲಿ ತೊಡಗದಿದ್ದರೂ ದಲಿತ ಜನರ ಸರ್ವತೋಮುಖ ಏಳಿಗೆಗಾಗಿ ತಮ್ಮ ಜೀವನ ಪರ್ಯಂತ ಅವಿರತವಾಗಿ ದುಡಿದು ಭಾರತೀಯ ಇತಿಹಾಸದಲ್ಲೇ ಪ್ರಥಮ ಸಮಾಜ ಸುಧಾರಣೆ ಹಾಗೂ ಹರಿಜನೋದ್ಧಾರಕರೆಂದು ಜನಪ್ರಿಯರಾಗಿದ್ದರು. ಅಸಹಕಾರ ಚಳವಳಿಯು ಗಾಂಧೀಜಿಯವರನ್ನು ಸೆರೆಹಿಡಿಯುವ ಮೂಲಕ ಭಾರತದೆಲ್ಲೆಡೆ ಅಂತ್ಯಗೊಂಡಿತು. ಗಾಂಧೀಜಿಯವರ ಬಂಧನವನ್ನು ಪ್ರತಿಭಟಿಸಿ ಶ್ರೀ ಮೋನಪ್ಪ ತಿಂಗಳಾಯರು ತಮ್ಮ ಗೌರವ ಮ್ಯಾಜಿಸ್ಟ್ರೇಟ್ ಹುದ್ದೆಗೆ ರಾಜೀನಾಮೆ ನೀಡಿದರು. ಮುಂದೆ ಇವರು ಗಾಂಧೀಜಿಯವರ ಮದ್ಯಪಾನ ನಿಷೇಧ ಮೊದಲಾದ ರಚನಾತ್ಮಕ ಕಾರ್ಯಗಳಲ್ಲಿ ಆಸಕ್ತಿವಹಿಸಿದ್ದೇ ಅಲ್ಲದೆ ಮೊಗವೀರ ಸಮಾಜದ ಗಣ್ಯ ಮುಂದಾಳುಗಳಾಗಿದ್ದು ಆ ಸಮುದಾಯದ ಅನೇಕ ತರುಣರು ಹಾಗೂ ಎಚ್.ಕೆ.ತಿಂಗಳಾಯರೇ ಮುಂತಾದವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿಶೇಷ ಪಾತ್ರವಹಿಸುವಂತೆ ಪ್ರೇರಕಶಕ್ತಿಯಾಗಿದ್ದರು. ಇದೇ ಸಂದರ್ಭದಲ್ಲಿ ದಕ್ಷಿಣಕನ್ನಡದಲ್ಲಿ ಸಾಹಿತ್ಯ ಹಾಗೂ ಪತ್ರಿಕೋದ್ಯಮದಲ್ಲೂ ಸಕ್ರಿಯವಾದ ಪ್ರಗತಿ ಕಂಡುಬಂದು, ಹಿರಿಯಡ್ಕ ರಾಮರಾಯ ಮಲ್ಯ, ಎಚ್.ನಾರಾಯಣರಾವ್ ಇವರ ಸಂಪಾದಕತ್ವದಲ್ಲಿ 'ಸತ್ಯಾಗ್ರಹಿ' ಎಂಬ ಪತ್ರಿಕೆಯನ್ನು ಆರಂಭಿಸಿದರು. ವಿ.ಎಸ್.ಕಾಮತ್ ಅವರ ಸಂಪಾದಕತ್ವದಲ್ಲಿ 'ಸ್ವದೇಶಾಭಿಮಾನಿ', ಎ.ಬಿ.ಶೆಟ್ಟರ ಸಂಪಾದಕತ್ವದಲ್ಲಿ 'ನವಯುಗ' ಪತ್ರಿಕೆಗಳೂ ಜಿಲ್ಲೆಯಾದ್ಯಂತ ಜನಜಾಗೃತಿಯನ್ನುಂಟು ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದುವು. ಸಾಹಿತ್ಯಕ್ಷೇತ್ರದಲ್ಲಿ ಲಕ್ಷ್ಮೀನಾರಾಯಣ ಪುಣಿಂಚತ್ತಾಯ, ಕಡೆಗೊಂಡ್ಲು ಶಂಕರಭಟ್ಟ, ಪಂಜೆಮಂಗೇಶರಾಯರು, ಎಂ.ಎನ್.ಕಾಮತರು, ಎಂ.ಗೋವಿಂದ ಪೈ ಮತ್ತು ಕೆ.ಕೆ.ಶೆಟ್ಟರು ಗಣನೀಯವಾಗಿದ್ದರು.

ಅಸಹಕಾರ ಮತ್ತು ಖಿಲಾಫತ್ ಚಳವಳಿಗಳ ಸಂದರ್ಭದಲ್ಲಿ ೧೯೨೦ರ ಆಗಸ್ಟ್ ೧೯ ರಂದು ಗಾಂಧೀಜಿಯವರು ಮಂಗಳೂರಿಗೆ ಭೇಟಿಕೊಟ್ಟು ಬೃಹತ್ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡರು. ಗಾಂಧೀಜಿಯವರು ೧೯೩೪ರಲ್ಲಿ ಪುನಃ ಏಳು ವರ್ಷಗಳ ಬಳಿಕ ಕರ್ನಾಟಕಕ್ಕೆ ಅಸ್ಪೃಶ್ಯತೆಯ ವಿರುದ್ಧ ಹೋರಾಟ ಮಾಡುವ ಉದ್ದೇಶದಿಂದ ಭೇಟಿಕೊಟ್ಟರು. ಈ ಪ್ರವಾಸಕ್ಕೆ 'ಹರಿಜನ ಪ್ರವಾಸ' ಎಂದೂ ಸಹ ಇದೇ ಸಂದರ್ಭದಲ್ಲಿ ಅವರು ಮಂಗಳೂರಿಗೂ ಭೇಟಿಕೊಟ್ಟಿದ್ದರು ಮಂಗಳೂರಿನ ೧೮೯೭ರಲ್ಲಿ ಸ್ಥಾಪಿಸಲಾಗುತ್ತದೆ. ನಿಮ್ನ ವರ್ಗಗಳ ಮಿಶನ್ (Depressed Class Mission)ನಲ್ಲಿ ಆಯೋಜಿಸಿದ ಅದರ ಸ್ಥಾಪಕರಾಗಿದ್ದ ಕುದ್ಮಲ್ ರಂಗರಾವ್ ಅವರ ಪ್ರತಿಮೆಯನ್ನು ಅನಾವರಣಗೊಳಿಸಿದ್ದರು. ಈ ಭೇಟಿಯಲ್ಲೆ ಅವರು ಕಾರ್ನಾಡ ಸದಾಶಿವರಾಯರನ್ನು ಸಂಧಿಸಿ ಅವರು ದೇಶಕ್ಕಾಗಿ ತಮ್ಮ ಎಲ್ಲಾ ಆಸ್ತಿಪಾಸ್ತಿಗಳನ್ನು ಕಳೆದುಕೊಂಡ ಬಗ್ಗೆ ತಮ್ಮ ಅಂತಃಕರಣದ ನೋವನ್ನು ಸದಾಶಿವರಾಯರ ತಾಯಿಯ ಬಳಿ ವ್ಯಕ್ತಪಡಿಸಿದರೆಂದು ದಾಖಲಿಸಲಾಗಿದೆ. ಸದಾಶಿವರಾಯರು ಆಗ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಗಾಂಧೀಜಿಯವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಟೋಬರ್ ೨೭ ರಿಂದ ೩೧ರವರೆಗೆ ಖಾದಿ ಪ್ರಚಾರ ಕಾರ್ಯಕ್ಕಾಗಿ ಪ್ರವಾಸ ಕೈಗೊಂಡರು. ಈ ಸಂದರ್ಭದಲ್ಲಿ ಅವರು ನೀಲೇಶ್ವರ, ಕಾಸರಗೋಡು, ಮಂಗಳೂರು, ಪುತ್ತೂರು, ಬಂಟ್ವಾಳ, ಕಾರ್ಕಳ, ಮೂಲ್ಕಿ, ಕುಂದಾಪುರಗಳಲ್ಲಿ ಪ್ರವಾಸ ಕೈಗೊಂಡು ಖಾದಿ ಕಾರ್ಯಕ್ಕಾಗಿ ಸಾಕಷ್ಟು ಹಣ ಸಂಗ್ರಹಿಸಿದರು. ಪಡುಬಿದಿರಿ ಮತ್ತು ಕಾಟಪಾಡಿಯ ಮೂಲಕ ಉಡುಪಿ ತಲುಪಿದ ಗಾಂಧೀಜಿಯವರ ಅಲ್ಲಿಯ ಮಾಜಿ ಎಂ.ಎಲ್.ಎ. ಖಾನ್ ಬಹದ್ದೂರ್ ಅಬ್ದುಲ್ ಸಾಹೇಬ್ ಅವರ ಉಪಸ್ಥಿತಿಯಲ್ಲಿ ಉಡುಪಿಯ 'ಖಾದೀ ಭಂಡಾರ'ವನ್ನು ಉದ್ಘಾಟನೆ ಮಾಡಿದರು. ನಂತರ ಬ್ರಹ್ಮಾವರ ಹಾಗೂ ಕುಂದಾಪುರಗಳಲ್ಲಿ ಸಾರ್ವಜನಿಕ ಸಭೆಗಲ್ಲಿ ಭಾಗವಹಿಸಿದರು. ಈ ಎಲ್ಲಾ ಚಟುವಟಿಕೆಗಳು ತೀವ್ರಗೊಂಡಾಗ

ಮಂಗಳೂರಿನಲ್ಲಿ ೧೯೨೭ರಲ್ಲಿ ಅಖಿಲ ಕರ್ನಾಟಕ ರಾಜಕೀಯ ಪರಿಷತ್ತು ಸಂಘಟನೆಯಾಗಿ ಸರೋಜಿನಿ ನಾಯಿಡು ಅವರು ಈ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

## ಉಪ್ಪಿನ ಸತ್ಯಾಗ್ರಹ

ಗಾಂಧೀಜಿಯವರ ನೇತೃತ್ವದಲ್ಲಿ ೧೯೨೦–೨೧ರಲ್ಲಿ ಉಪ್ಪಿನ ಸತ್ಯಾಗ್ರಹವು ಆರಂಭವಾದಾಗ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯ ಉದ್ದಗಲಕ್ಕೂ ಚಳವಳಿಗಳು ನಡೆದು ಸಾಮಾನ್ಯ ಜನರು ಭಾಗವಹಿಸಿದರು. ಗ್ರಾಮಪ್ರದೇಶಗಳಿಂದ ಜನರು ಬಂದು ಕಾಯ್ದೆಯನ್ನು ಉಲ್ಲಂಘಿಸಿ ಉಪ್ಪು ತಯಾರಿಸಿ ಬಂಧನಕ್ಕೆ ಒಳಗಾದರು. ಕಾರ್ನಾಡು ಸದಾಶಿವರಾಯರು ತಮ್ಮ ವಕೀಲ ವೃತ್ತಿಯನ್ನು ತೊರೆದು ಪೂರ್ಣಪ್ರಮಾಣದ ಸತ್ಯಾಗ್ರಹಿಗಳಾದರು. ಈ ಸತ್ಯಾಗ್ರಹದಲ್ಲಿ ಕುಂಬಳೆ ದೇವಪ್ಪ ಆಳ್ವರು, ಬೈಂದೂರು ಸುಬ್ಬಣ್ಣ ಶೆಟ್ಟರು ಹಾಗೂ ಬಂಟ್ವಾಳ ತಾಲೂಕಿನ ಆನಂದ ರೈ ಮತ್ತಿತರರು ಸಕ್ರಿಯವಾಗಿ ಭಾಗವಹಿಸಿದರು. ಗಾಂಧೀ–ಇರ್ವಿನ್ ಒಪ್ಪಂದದಿಂದಾಗಿ ಉಪ್ಪಿನ ಸತ್ಯಾಗ್ರಹವು ಅಂತ್ಯಗೊಂಡು ಗಾಂಧೀಜಿಯವರ ಆದೇಶದಂತೆ ಸತ್ಯಾಗ್ರಹವು ಹಿಂದಕ್ಕೆ ಪಡೆಯಲ್ಪಟ್ಟಿತು. ನಂತರ ೧೯೩೦ರಲ್ಲಿ ಕಾನೂನು ಭಂಗ ಚಳವಳಿ ಆರಂಭವಾದಾಗ ಮಂಗಳೂರಿನಲ್ಲಿ ಸೇವಾದಳದ ಮಹಾಶಬ್ಬೆಯವರು ಬಂದು ಅಬ್ದುಲ್ ಅಸಾದಿ ಸಾಹೇಬರ ರೆಹಮಾನ್ ಮಂಜ಼ಿಲ್‌ನಲ್ಲಿ ಸತ್ಯಾಗ್ರಹಿಗಳಿಗೆ ಶಿಬಿರ ತೆರೆದು ತರಬೇತಿ ಆರಂಭಿಸಿದರು. ಕರಾವಳಿಯ ಎಲ್ಲಾ ಮುಖ್ಯ ಊರುಗಳಲ್ಲಿ ಕಾಸರಗೋಡು, ಮಂಜೇಶ್ವರ, ಮಂಗಳೂರು, ಸುರತ್ಕಲ್, ಪಡುಬಿದ್ರಿ, ಕಾಪು, ಕಟಪಾಡಿ, ಮಲ್ಪೆ, ಕುಂದಾಪುರ ಮೊದಲಾದ ಸ್ಥಳಗಳಿಂದ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಹಲವು ಮಹಿಳೆಯರು ಸೇರಿದಂತೆ ೧೫೯ ಜನರು ಜಿಲ್ಲೆಯಲ್ಲಿ ಶಿಕ್ಷೆಗೆ ಒಳಗಾದರು. ಉಪ್ಪಿನ ಸತ್ಯಾಗ್ರಹ ನಡೆದ ವರ್ಷ ಗಾಂಧೀ–ಇರ್ವಿನ್ ಒಪ್ಪಂದ ಏರ್ಪಡುವ ತನಕ (೧೯೩೦–೩೧) ದಕ್ಷಿಣ ಕನ್ನಡದಿಂದ ೧೫೯ ಜನ ಜೈಲಿಗೆ ಹೋಗಿರುವ ದಾಖಲೆಗಳಿವೆ. ಉಪ್ಪಿನ ಸತ್ಯಾಗ್ರಹವು ಅಂತ್ಯಗೊಂಡರೂ ದೇಶಾದ್ಯಂತ ಸ್ವಾತಂತ್ರ್ಯ ಸಂಗ್ರಾಮದ ಹುರುಪು ಹಾಗೂ ಸಂಘಟನಾ ಕಾರ್ಯವು ದಿನೇದಿನೇ ಪ್ರಬಲಗೊಂಡಿದ್ದು ಗಮನೀಯ ಬೆಳವಣಿಗೆಯಾಗಿತ್ತು. ಗಾಂಧೀಜಿಯವರು ೧೯೩೪ರ ಫೆಬ್ರವರಿಯಲ್ಲಿ ಅಸ್ಪೃಶ್ಯತಾ ನಿವಾರಣಾ ಪ್ರಚಾರಕ್ಕಾಗಿ ಸಂಪಾಜೆ, ವಿಟ್ಲ, ಸುಳ್ಯ, ಪುತ್ತೂರು, ಕುಕ್ಕೆ,ಕಲ್ಲಡ್ಕ, ಪಾಣೆಮಂಗಳೂರು, ಬಂಟ್ವಾಳ, ಅರ್ಕುಳ, ಅಡ್ಯಾರುಗಳನ್ನು ಸಂದರ್ಶಿಸಿದರು. ಫೆಬ್ರವರಿ ೨೪ಕ್ಕೆ ಮಂಗಳೂರು, ಗುರುಪುರ, ಬಜ್ಪೆ, ಯೆಕ್ಕಾರು, ಕಟೀಲು, ಕಿನ್ನಿಗೋಳಿ ಮಾರ್ಗವಾಗಿ ಮುಲ್ಕಿ, ಕಟಪಾಡಿ, ಉಡುಪಿಗಳಿಗೆ ಭೇಟಿ ಕೊಟ್ಟು ದಿನಾಂಕ ೨೬ಕ್ಕೆ ಕಾರವಾರಕ್ಕೆ ಕುಂದಾಪುರದಿಂದ ಹಡಗಿನಲ್ಲಿ ಪ್ರಯಾಣ ಬೆಳೆಸಿದರು. ಕಾರ್ನಾಡರ ಬಾಡಿಗೆ ಮನೆಗೆ ಹೋಗಿ ಅವರ ತಾಯಿಯನ್ನು ಭೇಟಿ ಮಾಡಿ ಸಾಂತ್ವನ ಹೇಳಿದರು. ಇದಾದ ಮುಂದಿನ ವರ್ಷದಲ್ಲಿ (೧೯೩೫ರಲ್ಲಿ) ಅಖಿಲ ಕರ್ನಾಟಕ ರಾಜಕೀಯ ಅಧಿವೇಶನವು ಬಾಬು ಡಾ॥ರಾಜೇಂದ್ರಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಮಂಗಳೂರಿನಲ್ಲಿ ಸಮಾವೇಶಗೊಂಡಿತು. ದೇಶಾದ್ಯಂತ ೧೯೩೭ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಅತ್ಯದ್ಭುತ ವಿಜಯವನ್ನು ಸಾಧಿಸಿದ ಕಾಂಗ್ರೆಸ್ ಪಕ್ಷ ಪ್ರಾಂತ್ಯ ಪ್ರಾಂತ್ಯಗಳಲ್ಲಿ ಅಧಿಕಾರಕ್ಕೆ ಬಂದಿದ್ದು ಒಂದು ಗಣನೀಯ ಬೆಳವಣಿಗೆಯಾಯಿತು. ರಾಜಗೋಪಾಲಾಚಾರ್ಯರಂಥಹ ನಿಪುಣ ರಾಜಕೀಯ ಶಾಸ್ತ್ರಜ್ಞರು ಮದ್ರಾಸಿನ ಮುಖ್ಯಮಂತ್ರಿಗಳಾದರು.

ಮದ್ರಾಸ್ ವಿಧಾನಸಭೆಗೆ ಚುನಾವಣೆ ನಡೆದಾಗ ಜವಾಹರಲಾಲ್ ನೆಹರೂ ಅವರು ಮಂಗಳೂರು, ಉಡುಪಿ, ಮುಂತಾದೆಡೆ ಸಂಚರಿಸಿ ಹಲವಾರು ಜನಪ್ರಿಯ ಭಾಷಣಗಳನ್ನು ಬೃಹದ್ ಸಭೆಗಳಲ್ಲಿ ಮಾಡಿದ ಕಾರಣ ಜಿಲ್ಲೆಯಲ್ಲಿ ರಾಷ್ಟ್ರೀಯ ಜಾಗೃತಿಯುಂಟಾಯಿತು. ಇದೇ ಸಮಯದಲ್ಲಿ ಅಂದರೇ, ೧೯೩೭ರಲ್ಲಿ ಕಾರ್ನಾಡ ಸದಾಶಿವರಾಯರು ನಿಧನರಾದರು. ಶಿವರಾಮಕಾರಂತರೂ ಚಳವಳಿಯಿಂದ ಹಿಂದಕ್ಕೆ ಸರಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಉಲ್ಲಾಳ ಶ್ರೀನಿವಾಸ ಮಲ್ಯರು ಭೂಗತರಾಗಿ ಬೆಂಗಳೂರಿನಲ್ಲೇ ಉಳಿದರು. ಕಮಲಾದೇವಿ ಚಟ್ಟೋಪಾಧ್ಯಾಯರು ಭೂಗತರಾಗಿದ್ದಾಗಲೇ ಬೆಂಗಳೂರಿನಲ್ಲಿ ಬಂಧಿತರಾದರು. ಆಗ ದಕ್ಷಿಣ ಕನ್ನಡ ಜಿಲ್ಲೆಯು ಮದರಾಸಿನ ಪ್ರಾಂತ್ಯದ ಆಡಳಿತದಲ್ಲಿತ್ತು. ಆ ವರ್ಷದ ಚುನಾವಣೆಯಲ್ಲಿ ಈ ಜಿಲ್ಲೆಯಿಂದ ಎ.ಬಿ.ಶೆಟ್ಟಿ ಮತ್ತು ಕೆ.ಆರ್.ಕಾರಂತ ಅವರುಗಳು ಸಂಸದ್ ಕಾರ್ಯದರ್ಶಿಗಳಾದರು. ಅವರುಗಳು ಮುಂದೆ ಮಂತ್ರಿಗಳೂ ಆದರು. ವೆಂಕಟರಾಯ ಬಾಳಿಗ ಶಾಸನ ಸಭಾಧ್ಯಕ್ಷರಷ್ಟೇ ಅಲ್ಲದೇ ಮಂಗಳೂರು ನಗರ ಸಭೆಯ ಅಧ್ಯಕ್ಷರಾದರು. ಜವಹರಲಾಲ್ ನೆಹರೂ ೧೯೩೭ರಲ್ಲಿ ತಮ್ಮ ದೇಶಾದ್ಯಂತದ ಸರಣಿ ಪ್ರವಾಸದಲ್ಲಿ ಮಂಗಳೂರಿಗೂ ಭೇಟಿಕೊಟ್ಟು ಮಾಡಿದ ಸಾರ್ವಜನಿಕ ಭಾಷಣದಲ್ಲಿ ಜನತೆಗೆ ರಾಷ್ಟ್ರೀಯ ಜಾಗೃತಿ ಮತ್ತು ಸ್ವಾತಂತ್ರ್ಯ ಸಮರದ ರೂಪರೇಷೆಗಳ ಬಗ್ಗೆ ಸಾಕಷ್ಟು ಉತ್ತೇಜನ ನೀಡಿದರು.

**೧೯೪೨ರ ಕ್ವಿಟ್ ಇಂಡಿಯಾ ಚಳವಳಿ**

ಭಾರತಾದ್ಯಂತ ಮಹಾ ಚಳವಳಿಯ ಸ್ವರೂಪ ತಳೆದ 'ಕ್ವಿಟ್ ಇಂಡಿಯಾ' ಚಳವಳಿಯು ೮ನೇ ಆಗಸ್ಟ್ ೧೯೪೨ರಲ್ಲಿ ಆರಂಭಗೊಂಡಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಭುಗಿಲೆದ್ದಿತು. ಮಹಾತ್ಮ ಗಾಂಧೀಜಿಯವರ ಸೂಚನೆಯ ಮೇರೆಗೆ ಮುಂಬೈ ಕಾಂಗ್ರೆಸ್ ಅಧಿವೇಶನದಲ್ಲಿ 'ಕ್ವಿಟ್ ಇಂಡಿಯಾ' ನಿರ್ಣಯವನ್ನು ಮಂಡಿಸಿ, ಈ ಚಳವಳಿಯು ಭಾರತೀಯರ ಪ್ರಬಲ ಹೋರಾಟವೆಂದು ಪರಿಗಣಿಸಿ ಸರ್ಕಾರದ ಎಲ್ಲಾ ಆಡಳಿತ ಯಂತ್ರಗಳನ್ನು ನಿಷ್ಕ್ರಿಯಗೊಳಿಸುವುದು ಭಾರತೀಯರ ಮುಖ್ಯ ಉದ್ದೇಶವೆಂದು ಕರೆ ನೀಡಿದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಕ್ವಿಟ್ ಇಂಡಿಯಾ ಕ್ರಿಯಾ ಸಮಿತಿಯನ್ನು ರಚಿಸಿ ಬಿಜಾಪುರದ ಸಿ.ಜೆ.ಅಂಬಲಿಯವರನ್ನು ಅಧ್ಯಕ್ಷರನ್ನಾಗಿ ಹಾಗೂ ರಂಗನಾಥ ದಿವಾಕರ್ ಅವರನ್ನು ಕಾರ್ಯದರ್ಶಿಗಳನ್ನಾಗಿ ನೇಮಿಸಿತು. ಈ ಸಮಿತಿಯ ಸದಸ್ಯರನ್ನಾಗಿ ಯು.ಶ್ರೀನಿವಾಸ ಮಲ್ಯ, ಡಿ.ಪಿ.ಕರ್ಮರ್ಕರ್ ಮತ್ತು ಆರ್.ಎಸ್.ಹುಕ್ಕೇರಿ ಅವರುಗಳನ್ನು ನೇಮಿಸಿತು. ಮಂಗಳೂರಿನಲ್ಲಿ ೧೯೪೨ರ ಸೆಪ್ಟೆಂಬರ್ ಒಂಬತ್ತರಂದು ಸ್ವಯಂಸೇವಕ ದಳವು ಜಿಲ್ಲಾ ನ್ಯಾಯಾಲಯದ ಬಳಿ ಪಿಕೆಟಿಂಗ್ ಆರಂಭಿಸಿತು. ಅಂದು ಮಂಗಳೂರಿನ ಶಾಲಾಕಾಲೇಜುಗಳ ವಿದ್ಯಾರ್ಥಿಗಳು ಸಂಘಟಿತರಾಗಿ ಪ್ರಚಂಡ ಮೆರವಣಿಗೆಯನ್ನು ನಡೆಸಿ ನಗರದ ಬೀದಿ ಬೀದಿಗಳಲ್ಲಿ ಸಂಚರಿಸಿ ಸಂಜೆ ವೇಳೆಗೆ ಸಾರ್ವಜನಿಕ ಸಭೆ ಸೇರಿದರು. ಮಹಿಳೆಯರು 'ವಂದೇಮಾತರಂ' ಹಾಡಿದರು. ಚಳವಳಿಯು ದಿನೇದಿನೇ ಮುಂದುವರೆದಂತೆ ಪೋಲೀಸರ ಕಾರ್ಯಾಚರಣೆಯು ಬಿಗಿಗೊಂಡಿತು. ಪೋಲಿಸರು ರಸ್ತೆಗಳಲ್ಲಿ ಪಥಸಂಚಲನ ನಡೆಸಿದಾಗ ಅವರ ಮೇಲೆ ಸತ್ಯಾಗ್ರಹಿಗಳು ದಾಳಿ ನಡೆಸಿದಾಗ ಹೋರಾಟ ರುದ್ರ ರೂಪ ತಾಳಿತು. ನಂತರ ಸೆಪ್ಟೆಂಬರ್ ೯, ೧೯೪೨ರಂದು ಗಾಂಧೀಜಿಯವರು ಬಂಧಿತರಾದ ಒಂದು ತಿಂಗಳ ನಂತರ "ಗಾಂಧೀದಿನ" ಆಚರಣೆ ಮಾಡಿದಾಗ ಮಂಗಳೂರಿನ ಕೋರ್ಟ್ ಮುಂದೆ ಪಿಕೆಟಿಂಗ್ ಮಾಡಿ ಅನೇಕ ವಿದ್ಯಾರ್ಥಿಗಳು ಬಂಧಿತರಾದರು. ಹೀಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಕ್ವಿಟ್ ಇಂಡಿಯಾ' ಚಳವಳಿಯ ಘಟನೆಗಳು ನಿರಂತರವಾಗಿ ಸಂಭವಿಸಿದವು. ವಿದ್ಯಾರ್ಥಿಗಳು ತಮ್ಮ ಶಾಲಾ–ಕಾಲೇಜುಗಳನ್ನು ಬಹಿಷ್ಕರಿಸಿ ಈ ಚಳವಳಿಯಲ್ಲಿ ಭಾಗವಹಿಸಿದ್ದು ಇದು ಉಗ್ರರೂಪ ತಾಳಲು ಕಾರಣವಾಯಿತು. ಜಿಲ್ಲೆಯಲ್ಲಿ ಈ ಹೋರಾಟದಲ್ಲಿ ಕೆ.ಕೃಷ್ಣಶೆಟ್ಟರು, ಪಾಂಗಳ ನಾಯ್ಕರು, ಎನ್. ಎಸ್. ಕಿಲ್ಲೆ, ಕೈರ್ಡೇಲ್ ತಿಮ್ಮಪ್ಪ ಶೆಟ್ಟಿ, ಡಾ॥ ಯು.ಪಿ.ಮಲ್ಯ ಎ.ಬಿ.ಶೆಟ್ಟಿ, ಕೆ.ಆರ್. ಕಾರಂತ, ಬಿ.ವಿ.ಬಾಳಿಕ, ವಿಠಲದಾಸಶೆಟ್ಟಿ ಶ್ರೀನಿವಾಸ ಮಲ್ಯ, ಕೆ.ಕೆ.ಶೆಟ್ಟಿ ಶಂಕರ ಆಳ್ವ, ಜೋಚಿಮ್ ಆಳ್ವ, ನಾಗಪ್ಪ ಆಳ್ವ, ಎಂ.ಡಿ.ಅಧಿಕಾರಿ ಮೊದಲಾದ ಪ್ರಬಲ ವ್ಯಕ್ತಿಗಳು ಮುಂದಾಳತ್ವವನ್ನು ವಹಿಸಿದ್ದರು. ದೇಶಾದ್ಯಂತ 'ಕ್ವಿಟ್ ಇಂಡಿಯಾ' ಚಳವಳಿಯು ಉಗ್ರರೂಪ ತಾಳಿದಾಗ ಬ್ರಿಟಿಷರು ಭಾರತೀಯರ ಬಗ್ಗೆ ತಮ್ಮ ಪ್ರತಿರೋಧ ನಿಲುವನ್ನು ಸ್ವಲ್ಪಮಟ್ಟಿಗೆ ತಿಳಿಗೊಳಿಸಿದ್ದು ವಾಸ್ತವದ ಸಂಗತಿಯಾಗಿತ್ತು. ಈ ಹೋರಾಟದಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸಿದ್ದು ಗಮನೀಯವಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ, ಉಮಾಬಾಯಿ ಕುಂದಾಪುರ, ಕೃಷ್ಣಬಾಯಿ ಪಂಜೇಕರ್ ಮೊದಲಾದ ಮಹಿಳೆಯರು ಈ ಚಳವಳಿಯಲ್ಲಿ ಭಾಗವಹಿಸಿದ್ದರು. ಸ್ವಾತಂತ್ರ್ಯ ಹೋರಾಟವು ೧೫ನೇ ಆಗಸ್ಟ್ ೧೯೪೭ರಂದು ಭಾರತಕ್ಕೆ ಸ್ವಾತಂತ್ರ್ಯ ಘೋಷಣೆ ಮಾಡಿದ ನಂತರ ಸಂಪೂರ್ಣವಾಗಿ ಶಾಂತಗೊಂಡಿತು. ಸ್ವಾತಂತ್ರ್ಯ ಲಭಿಸಿದ ತಕ್ಷಣ ದೇಶವು ಎದುರಿಸಬೇಕಾದ ಪ್ರಮುಖ ಸಮಸ್ಯೆಯೆಂದರೇ ರಾಜ್ಯಗಳ ಪುನರ್‌ವಿಂಗಡಣೆ ಮತ್ತು ರಾಷ್ಟ್ರದ ಸಂವಿಧಾನದ ರಚನೆಗಳಾಗಿದ್ದವು.

**ಏಕೀಕರಣ ಚಳವಳಿ**

ಕನ್ನಡ ನಾಡಿನಿಂದ ರಾಷ್ಟ್ರದ (೧೯೦೫–೧೯೨೦) ರಾಜಕೀಯ ಹೋರಾಟದಲ್ಲಿ ಭಾಗವಹಿಸಿದ್ದ ಸ್ವಾತಂತ್ರ್ಯ ಹೋರಾಟಗಾರರು ಎರಡು ಭವ್ಯ ಕನಸುಗಳನ್ನು ಹೊಂದಿದ್ದರು. ಒಂದು ವಿದೇಶೀಯರ ಆಡಳಿತದಿಂದ ಭಾರತವನ್ನು ಮುಕ್ತಗೊಳಿಸುವುದು ಹಾಗೂ ಎರಡು ಸ್ವತಂತ್ರ ಭಾರತದಲ್ಲಿ ರಾಜ್ಯಗಳ ಪುನರ್ ರಚನೆಯ ಕಾರ್ಯವನ್ನು ಸಾಧಿಸುವುದೇ ಆಗಿದ್ದವು. ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದ ರಂಗನಾಥ ದಿವಾಕರರು ಬಹುಶಃ ಸಮಗ್ರ ಕರ್ನಾಟಕದ ರೂವಾರಿಯಗಿದ್ದರು. ಕನ್ನಡ ಮಾತನಾಡುತ್ತಿದ್ದ ಪ್ರದೇಶಗಳು ಒಟ್ಟು ೨೦ ವಿವಿಧ ಆಡಳಿತ ಶಕ್ತಿಗಳ ನಿಯಂತ್ರಣಕ್ಕೊಳಪಟ್ಟಿದ್ದವು. ದಕ್ಷಿಣ ಕನ್ನಡ ಜಿಲ್ಲೆಯು (ಉಡುಪಿ ಸೇರಿದಂತೆ) ಮದರಾಸ್ ಪ್ರಾಂತ್ಯದಲ್ಲಿತ್ತು. ಏಕೀಕರಣ ಚಳವಳಿಯ ಪ್ರಥಮ ಕುಲಪುರೋಹಿತರೆಂದು ಗೌರವಿಸಲ್ಪಡುವ ಆಲೂರು ವೆಂಕಟರಾಯರು 'ಕರ್ನಾಟಕ ಅಂತರ್ಗತ ಭಾರತ ಮಾತೆ'ಯ ಕನಸನ್ನು ಸಾಕಾರಗೊಳಿಸಲು ಯುವ ಜನತೆಗೆ ತಮ್ಮ 'ಕರ್ನಾಟಕ ಗತ ವೈಭವ' ಗ್ರಂಥದ ಮೂಲಕ ಕರೆ ನೀಡಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ನಾಯಕತ್ವವನ್ನು ವಹಿಸಿದ್ದ ಕಾರ್ನಾಡ ಸದಾಶಿವರಾಯರು ೧೯೨೪ರಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಹೇಗೆ ಕಾರಣರಾಗಿದ್ದರೆಂದು ಈಗಾಗಲೇ ಗಮನಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ತುಳುವ ಪರಿಸರದಲ್ಲಿದ್ದ ಜನರು ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ರೀತಿಯಲ್ಲೇ ರಾಜ್ಯದ ಏಕೀಕರಣ ಚಳವಳಿಯಲ್ಲಿಯೂ ಭಾಗವಹಿಸಿದ್ದರು. ಬ್ರಿಟಿಷರಿಗಿಂತ

ಮುಂಚೆ ಬಂದ ಪೋರ್ಚುಗೀಸರು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೇರಳದಲ್ಲಿ ತಮ್ಮ ಆಡಳಿತ ದಬ್ಬಾಳಿಕೆಯನ್ನುಂಟು ಮಾಡಿದ್ದರೆಂಬ ಅಂಶವು ವ್ಯಕ್ತವಾಗುತ್ತದೆ. ಈ ದಬ್ಬಾಳಿಕೆಯ ವಿರುದ್ಧವೇ ಉಳ್ಳಾಲದ ರಾಣಿ ಅಬ್ಬಕ್ಕ ತಿರುಗಿ ಬಿದ್ದು ಅವರೊಡನೆ ಹಲವಾರು ಯುದ್ಧಗಳನ್ನು ಮಾಡಬೇಕಾಗಿ ಬಂದಿದ್ದು ಐತಿಹಾಸಿಕ ಘಟನೆಯಾಗಿದೆ. ಅಬ್ಬಕ್ಕರಾಣಿಯು ಪರಕೀಯರ ವಿರುದ್ಧ ನಡೆಸಿದ ಸೆಣೆಸಾಟಗಳನ್ನು ಪ್ರಥಮ ಸ್ವಾತಂತ್ರ್ಯ ಹೋರಾಟದ ಘಟನೆಗಳೆಂದು ಪರಿಗಣಿಸಲಾಗಿದೆ. ನಂತರ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದಾಗ ದೇಶದ ನಾನಾ ಭಾಗಗಳಲ್ಲಿ ಸ್ವಾತಂತ್ರ್ಯದ ಕಹಳೆಯು ಮೊಳಗುವಂತಾಯಿತು. ೧೫ನೇ ಆಗಸ್ಟ್ ೧೯೪೭ರಲ್ಲಿ ಸ್ವಾತಂತ್ರ್ಯ ಪ್ರಾಪ್ತಿಯಾದಾಗ ರಾಷ್ಟ್ರದ ರಾಜ್ಯಗಳಲ್ಲಿ ಪ್ರಾಂತೀಯ ಜಾಗೃತಿ ಮೂಡಿದ ಪರಿಣಾಮ ರಾಜ್ಯಗಳ ಪುನರ್ ವಿಂಗಡಣೆಯ ಕ್ರಮವು ಜಾರಿಗೆ ಬಂದು ಹಲವಾರು ಪ್ರತಿಭಟನೆಗಳು ಆರಂಭಗೊಂಡವು. ಕರ್ನಾಟಕದಲ್ಲೂ ಏಕೀಕರಣ ಚಳವಳಿಯು ಇಂಥಹದ್ದೇ ಸ್ವರೂಪವನ್ನು ತಾಳಿತು. ಆರಂಭದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಜೊತೆಯಲ್ಲೇ ರಾಜ್ಯದ ಏಕೀಕರಣದ ಕಲ್ಪನೆಯನ್ನು ಆಗಿನ ಕಾಲದ ನಾಯಕರುಗಳು ಸೃಷ್ಟಿಸಿಕೊಂಡಿದ್ದು ಹಲವಾರು ರಾಜಕೀಯ ಬೆಳವಣಿಗೆಗಳಿಂದ ವ್ಯಕ್ತವಾಗುತ್ತದೆ. ಮಂಗಳೂರಿನಲ್ಲಿ ಕಾರ್ನಾಡ ಸದಾಶಿವರಾಯರು, ಕೃಷ್ಣಪ್ಪ ತಿಂಗಳಾಯ, ಯು.ಪಿ.ಮಲ್ಯ, ಕಮಲಾದೇವಿ ಚಟ್ಟೋಪಾಧ್ಯಾಯ, ಎನ್. ಎಸ್. ಕಿಲ್ಲೆ, ಕೆ.ಆರ್.ಆಚಾರ್ಯ, ಕೋಟಾ ರಾಮಕೃಷ್ಣ ಕಾರಂತ, ಬಿ. ಕಕ್ಕಿಲಾಯ, ಕೆ.ಕೆ.ಶೆಟ್ಟರು, ಹಿರಿಯಡ್ಕ ನಾರಾಯಣರಾವ್ ವ್ಯಾಸರಾಯ ಬಲ್ಲಾಳ ಮೊದಲಾದವರು ಸ್ವಾತಂತ್ರ್ಯ ಚಳವಳಿಯ ಜೊತೆಗೆ ಕರ್ನಾಟಕ ಏಕೀಕರಣದ ಕಲ್ಪನೆಯನ್ನೂ ಹೊಂದಿದ್ದರು. ಈ ಸಂದರ್ಭದಲ್ಲಿ ಸ್ವಾತಂತ್ರ್ಯಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಇತರೆ ಸತ್ಯಾಗ್ರಹಿಗಳೆಂದರೇ ಬಿ.ವಿಠಲದಾಶ ಶೆಟ್ಟಿ, ಎ.ಜಿ.ತಿರುಮಲೇಶಭಟ್ಟರು ಕುಳಾಲು ಅಣ್ಣಪ್ಪ ಭಂಡಾರಿ, ಪೆರುವಾಯಿ ಕೋಚಣ್ಣರೈ, ತಲಪಾಡಿ ಮಾರಪ್ಪ ಪಕಳ, ಪಾವೂರು ಅನಂತರೈ, ಯೋಗೀಶ್ವರ ಹೊಳ್ಳ, ಉಡುಪಿಯ ಮಹಮ್ಮದ್ ನಸರುಲ್ಲಾ, ಚೆರ್ಕಾಡಿ ರಾಜಗೋಪಾಲ ಶೆಟ್ಟಿ, ಉಡುಪಿಯ ಬಿ.ಶಂಭುಶೆಟ್ಟಿ, ಅನಂತಪದ್ಮನಾಭ ಭಟ್ಟ, ಅಮ್ಮೆಂಬಾಳ ಬಾಳಪ್ಪ ಕೋಡಿಕಲ್ ದುಗ್ಗಪ್ಪ ಸುವರ್ಣ ಮೊದಲಾದವರನ್ನು ಹೆಸರಿಸಬಹುದಾಗಿದೆ. ಇವರೆಲ್ಲರೂ ರಾಜ್ಯದ ಏಕೀಕರಣ ಚಳವಳಿಯಲ್ಲಿಯೂ ಪಾಲ್ಗೊಂಡಿದ್ದಾರೆಂದು ಪ್ರಸಿದ್ಧ ಮತ್ತು ಸ್ವಾತಂತ್ರ್ಯ ಹೋರಾಟಗಾರರಾದ ಹಾಗೂ ಸಾಹಿತಿ ಬಿ.ಎಂ.ಇದಿನಬ್ಬ ಅವರು ಅಭಿಪ್ರಾಯಪಡುತ್ತಾರೆ. ಬೆಳಗಾವಿ ಕಾಂಗ್ರೆಸ್ ಅಧಿವೇಶನವು ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ೧೯೨೪ರಲ್ಲಿ ಸಮಾವೇಶಗೊಂಡಾಗ ರಾಜ್ಯದ ವಿವಿಧ ಭಾಗಗಳಿಂದಲೂ ಸ್ವಾತಂತ್ರ್ಯ ಹಾಗೂ ರಾಜ್ಯದ ಏಕೀಕರಣದ ಕನಸುಗಳನ್ನು ಹೊತ್ತ ಸ್ವಯಂ ಸೇವಕರು ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದರು. ದಕ್ಷಿಣಕನ್ನಡ ಜಿಲ್ಲೆಯಿಂದಲೂ ಸಾಕಷ್ಟು ನಾಯಕರುಗಳು ಈ ಮಹಾನ್ ಅಧಿವೇಶನದಲ್ಲಿ ಪಾಲ್ಗೊಂಡಿದ್ದರು. ಈ ಅಧಿವೇಶನದಲ್ಲಿ ಹುಯಿಲಗೋಳ ನಾರಾಯಣ ರಾಯರು ತಾವು ರಚಿಸಿದ **'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು'** ಕವಿತೆಯನ್ನು ಬೃಹತ್ ಸಭೆಯಲ್ಲಿ ಪಠಣ ಮಾಡಿದಾಗ ಭಾಗವಹಿಸಿದ್ದ ಕನ್ನಡಿಗರ ಹೃದಯಗಳಲ್ಲಿ ವಿದ್ಯುತ್ ಸಂಚಾರವಾಯಿತು. ಬ್ರಿಟಿಷರು ಭಾಷಾವಾರು ಪ್ರಾಂತ್ಯಗಳನ್ನು ಆಗಲೇ ಮನಗಂಡಿದ್ದರು. ಆದುದರಿಂದ ಸ್ವಾತಂತ್ರ್ಯಾನಂತರ ರಾಜ್ಯಗಳ ಪುನರ್ ವಿಂಗಡಣೆಯ ಕ್ರಿಯೆಯಲ್ಲಿ ಭಾಷಾವಾರು ವಿಭಜನೆಯೇ ಸಮಂಜಸವಾದುದೆಂದು ಅಭಿಪ್ರಾಯಪಡಲಾಯಿತು. ಹೈದರಾಬಾದ್‌ನಲ್ಲಿ ಜನವರಿ ೧೯೫೩ರಲ್ಲಿ ಆಂಧ್ರಪ್ರದೇಶವನ್ನು ಸ್ಥಾಪನೆ ಮಾಡಬೇಕೆಂಬ ನಿರ್ಣಯವನ್ನು ಕಾಂಗ್ರೆಸ್ ಅಧಿವೇಶನದಲ್ಲಿ ಕೈಗೊಂಡಾಗ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರು ಇದಕ್ಕೆ ಪ್ರಬಲ ವಿರೋಧ ವ್ಯಕ್ತಪಡಿಸಿದರು. ನಂತರ ದಕ್ಷಿಣ ಕನ್ನಡದ ಕೆ.ಆರ್.ಕಾರಂತ್ ಅವರು ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಸ್ಥಾಪನೆಗೆ ಮೂಲಕಾರಣರಾಗಿದ್ದರು ಹಾಗೂ ಅದರ ಪ್ರಥಮ ಅಧ್ಯಕ್ಷರಾದರು. ರಾಜ್ಯಾದ್ಯಂತದ ಚಳವಳಿಗೆ ಈ ಪರಿಷತ್ತು ಕರೆ ನೀಡಿದಾಗ, ಕೆ.ಬಿ.ಶಾಂತಾವರ ಬಾರಾಡಿ ಬೀಡು, ಜಿನರಾಜ ಹೆಗಡೆ, ಅಂದಾನಪ್ಪ ದೊಡ್ಡಮೇಟಿ, ಚೆನ್ನಪ್ಪವಾಲಿ, ಚಿನ್ಮಯಸ್ವಾಮಿ ಓಂಕಾರನಾಥ್, ವೀರಭದ್ರಪ್ಪ ಶಿರೂರು ಇವರುಗಳು ಈ ಪರಿಷತ್ತಿನ ಪ್ರಮುಖ ಸದಸ್ಯರಾಗಿದ್ದರು. ಹೋರಾಟವು ತೀವ್ರಗೊಂಡಾಗ ಕೇಂದ್ರ ಸರ್ಕಾರವು ೧೯೫೩ರಲ್ಲಿ ರಾಜ್ಯಗಳ ನಿರ್ಮಾಣಕ್ಕಾಗಿ ಫಸಲ್ ಅಲಿ ಆಯೋಗವನ್ನು ನೇಮಿಸಿತು. ಈ ಸಮಿತಿಯು ನೀಡಿದ ಭಾಷಾವಾರು ರಾಜ್ಯಗಳ ಪುನರ್ ವಿಂಗಡಣೆಯ ಶಿಫಾರಸ್ಸಿನಂತೆ ೧ನೇ ನವೆಂಬರ್ ೧೯೫೬ರಂದು ಹೊಸ ವಿಶಾಲ ಮೈಸೂರು ರಾಜ್ಯವು ಅಸ್ತಿತ್ವಕ್ಕೆ ಬಂದಾಗ ಮದ್ರಾಸ್ ಪ್ರಾಂತ್ಯದಲ್ಲಿದ್ದ ದಕ್ಷಿಣ ಕನ್ನಡ ಜಿಲ್ಲೆಯನ್ನು ಈ ಹೊಸ ರಾಜ್ಯಕ್ಕೆ ಸೇರಿಸಲಾಯಿತು. ಹಿಂದಿನಿಂದಲೂ ದಕ್ಷಿಣ ಕನ್ನಡದ ಭಾಗವಾಗಿ ಹೋಗಿದ್ದ ಕಾಸರಗೋಡನ್ನು ಕೇರಳ ರಾಜ್ಯಕ್ಕೆ ಸೇರಿಸಲಾಯಿತು. ಈ ಬೆಳವಣಿಗೆಯು ದಕ್ಷಿಣ ಕನ್ನಡ ಜನತೆಗೆ ಆಘಾತಕಾರಿಯಾಗಿ ಪರಿಣಮಿಸಿತು. ನಂತರ ೧೯೭೩ರಲ್ಲಿ ಅಂದಿನ ರಾಜ್ಯ ಸರ್ಕಾರವು ಈ ರಾಜ್ಯಕ್ಕೆ 'ಕರ್ನಾಟಕ'ವೆಂದು ಪುನರ್ ನಾಮಕರಣ ಮಾಡಿತು. ಇತ್ತೀಚೆಗೆ ಅಂದರೆ ೧೯೯೭ರಲ್ಲಿ ಆಡಳಿತದ ಅನುಕೂಲಕ್ಕಾಗಿ ಉಡುಪಿ, ಕುಂದಾಪುರ ಹಾಗೂ ಕಾರ್ಕಳ ತಾಲೂಕುಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ಪ್ರತ್ಯೇಕಿಸಿ ಉಡುಪಿ ಜಿಲ್ಲೆಯನ್ನು ಹೊಸದಾಗಿ ರೂಪಿಸಲಾಗಿದೆ.

## ಚುನಾವಣೆಗಳು

ಟಿಪ್ಪುಸುಲ್ತಾನನ ಪತನಾನಂತರ (೧೭೯೯) ಬ್ರಿಟಿಷರ ನಿಯಂತ್ರಣದಲ್ಲಿದ್ದ ಮದ್ರಾಸ್ ಪ್ರೆಸಿಡೆನ್ಸಿಯ ವ್ಯಾಪ್ತಿಗೊಳಪಟ್ಟಿದ್ದ ದಕ್ಷಿಣ ಕನ್ನಡ ಜಿಲ್ಲೆಯಿಂದ, ಸ್ವಾತಂತ್ರ್ಯನಂತರ ೧೯೫೨ರಲ್ಲಿ ಜರುಗಿದ ಮೊದಲ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ, ಮದ್ರಾಸ್ ರಾಜ್ಯದ ವಿಧಾನಸಭೆಗೆ ಜಿಲ್ಲೆಯ ಕುಂದಾಪುರ, ಕಾರ್ಕಳ, (ದ್ವಿಸದಸ್ಯ), ಬ್ರಹ್ಮಾವರ, ಉಡುಪಿ, ಪುತ್ತೂರು–ಎ, ಪುತ್ತೂರು–ಬಿ, ಪಾಣೆಮಂಗಳೂರು, ಮಂಗಳೂರು, ಕಾಸರಗೋಡು ಹಾಗೂ ಹೊಸದುರ್ಗಗಳನ್ನೊಳಗೊಂಡ ಒಟ್ಟು ಹತ್ತು ಕ್ಷೇತ್ರಗಳಿಂದ ೧೧ ಸದಸ್ಯರನ್ನು ಆಯ್ಕೆ ಮಾಡಿ ಕಳುಹಿಸಲಾಗಿತ್ತು. ಅವರಲ್ಲಿ ಎ.ಬಿ. ಶೆಟ್ಟಿ, ಟಿ.ಎ.ಪೈ ಮುಂತಾದವರಿದ್ದರು. ಆಗ ಜಿಲ್ಲೆಯಲ್ಲಿದ್ದ ಲೋಕಸಭೆಯ ಎರಡು (ಮಂಗಳೂರು ದಕ್ಷಿಣ ಹಾಗೂ ಮಂಗಳೂರು ಉತ್ತರ ಉಡುಪಿ) ಕ್ಷೇತ್ರಗಳಿಗೆ ಕ್ರಮವಾಗಿ ಬಿ. ಶಿವರಾವ್ ಹಾಗೂ ಶ್ರೀನಿವಾಸ ಯು. ಮಲ್ಯರನ್ನು ಆಯ್ಕೆ ಮಾಡಿ ಕಳುಹಿಸಲಾಗಿತ್ತು.

ಮುಂದೆ ಏಕೀಕೃತ ಕರ್ನಾಟಕವು (೧೯೫೬) ಅಸ್ತಿತ್ವಕ್ಕೆ ಬಂದ ನಂತರ, ಕಾಸರಗೋಡು ಹಾಗೂ ಹೊಸದುರ್ಗ ವಿಧಾನಸಭಾ ಕ್ಷೇತ್ರಗಳು ಕೇರಳಕ್ಕೆ ಹಸ್ತಾಂತರಿಸಲ್ಪಟ್ಟು ಉಳಿದ ಒಂಭತ್ತು ವಿಧಾನಸಭಾ ಕ್ಷೇತ್ರಗಳನ್ನೊಳಗೊಂಡ ದಕ್ಷಿಣ ಕನ್ನಡ ಜಿಲ್ಲೆಯು ಕರ್ನಾಟಕದಲ್ಲಿ ವಿಲೀನವಾಯಿತು. ಅನಂತರ ೧೯೫೭ರಲ್ಲಿ ಲೋಕಸಭೆ ಹಾಗೂ ವಿಧಾನಸಭೆಗಳಿಗೆ ನಡೆದ ಎರಡನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಜಿಲ್ಲೆಯು ಎರಡು ಲೋಕಸಭಾ (ಮಂಗಳೂರು 'ಕೊಡಗು ಜಿಲ್ಲೆಯೂ ಸೇರಿತ್ತು' ಹಾಗೂ ಉಡುಪಿ) ಕ್ಷೇತ್ರ ಹಾಗೂ ೧೪ ವಿಧಾನಸಭಾ ಸ್ಥಾನಗಳನ್ನು (ಪುತ್ತೂರು (ದ್ವಿಸದಸ್ಯ), ಬೆಳ್ತಂಗಡಿ, ಮಂಗಳೂರು–I, ಮಂಗಳೂರು–II, ಪಾಣೆಮಂಗಳೂರು, ಸುರತ್ಕಲ್, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರು ಹಾಗೂ ಕಾರ್ಕಳ (ದ್ವಿಸದಸ್ಯ)) ಹೊಂದಿತ್ತು. ಆದರೆ ಮುಂದೆ, ೧೯೬೧ರ ದ್ವಿಸದಸ್ಯ ಕ್ಷೇತ್ರಗಳ ರದ್ಧತಿ ಕಾಯ್ದೆಯನ್ವಯ ಜಿಲ್ಲೆಯ ದ್ವಿಸದಸ್ಯ ಕ್ಷೇತ್ರಗಳಾದ ಪುತ್ತೂರು ಹಾಗೂ ಕಾರ್ಕಳಗಳನ್ನು ವಿಭಜಿಸಿ, ಪುತ್ತೂರು–ಸುಳ್ಯ–ಕಾರ್ಕಳ ಹಾಗೂ ಮೂಡಬಿದ್ರಿ ಏಕಸದಸ್ಯ ಕ್ಷೇತ್ರಗಳನ್ನು ರಚಿಸಿ ಸುಳ್ಯ, ಮೂಡಬಿದ್ರಿ ಕ್ಷೇತ್ರಗಳನ್ನು ಮೀಸಲು ಕ್ಷೇತ್ರಗಳೆಂದು ಘೋಷಿಸಲಾಯಿತು. ಅನಂತರದಲ್ಲಿ ೧೯೬೭ರ ಚುನಾವಣಾ ತಿದ್ದುಪಡಿ ಕಾಯ್ದೆಯನ್ವಯ ಪಾಣೆಮಂಗಳೂರು ಕ್ಷೇತ್ರವನ್ನು ಬಂಟ್ವಾಳ ಕ್ಷೇತ್ರವೆಂದು ಹೆಸರಿಸಲಾಯಿತು. ಮಿಗಿಲಾಗಿ ಮೂಡಬಿದ್ರಿ ಕ್ಷೇತ್ರವನ್ನೂ ಸಾಮಾನ್ಯ ಕ್ಷೇತ್ರವೆಂದು ಘೋಷಿಸಲಾಯಿತು. ಇದೇ ಪರಿಸ್ಥಿತಿ ೧೯೭೨ರಲ್ಲೂ ಜಿಲ್ಲೆಯಲ್ಲಿತ್ತು. ೧೯೭೭ರಲ್ಲಿ ಮಂಗಳೂರು–II ಕ್ಷೇತ್ರದ ಹೆಸರನ್ನು ಉಳ್ಳಾಲ ಕ್ಷೇತ್ರವೆಂದು ಬದಲಿಸಲಾಯಿತು. ೧೯೭೮ರಲ್ಲಿ ವಿಟ್ಲ ಕ್ಷೇತ್ರವನ್ನು ನೂತನವಾಗಿ ರೂಪಿಸಲಾಯಿತು. ತತ್ಪರಿಣಾಮವಾಗಿ ಜಿಲ್ಲೆಯ ವಿಧಾನಸಭಾ ಸ್ಥಾನಗಳ ಸಂಖ್ಯೆ ೧೫ ಕ್ಕೇರಿತು.

ಇಂದಿನ ಉಡುಪಿ ಜಿಲ್ಲೆಯನ್ನೂ ಒಳಗೊಂಡಿದ್ದ ಅಂದಿನ ದಕ್ಷಿಣ ಕನ್ನಡ ಜಿಲ್ಲೆಯಿಂದ ಆಯ್ಕೆಯಾದ ಲೋಕಸಭಾ ಸದಸ್ಯರಲ್ಲಿ ಜಾರ್ಜ್ ಫರ್ನಾಂಡಿಸ್, ಜನಾರ್ಧನ ಪೂಜಾರಿ, ಆಸ್ಕರ್ ಫರ್ನಾಂಡಿಸ್, ವಿ.ಧನಂಜಯ ಕುಮಾರ್ ಮುಂತಾದವರು, ಹಾಗೂ ರಾಜ್ಯಸಭಾ ಸದಸ್ಯರಾದವರಲ್ಲಿ ಟಿ.ಎ.ಪೈ. ಮುಂತಾದವರು ವಿವಿಧ ಕೇಂದ್ರ ಸಚಿವ ಸಂಪುಟಗಳಲ್ಲಿ, ಸಂಪುಟ ಸಚಿವ ಹಾಗೂ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಲೋಕಸಭೆಯ ಸಭಾಪತಿಗಳಾಗಿ ಸೇವೆ ಸಲ್ಲಿಸಿದ ಕೆ. ಎಸ್. (ಕೌಡಗೇರಿ ಸದಾನಂದ) ಹೆಗ್ಡೆ ಕಾರ್ಕಳ ತಾಲೂಕಿನವರು. ಮುರಾರ್ಜಿ ದೇಸಾಯಿ ಸಚಿವಸಂಪುಟದಲ್ಲಿ ಸಚಿವರಾಗಿದ್ದ ಜಾರ್ಜ್ ಫರ್ನಾಂಡಿಸ್ ಇದೇ ಜಿಲ್ಲೆಯವರು. ದಕ್ಷಿಣ ಕನ್ನಡ ಜಿಲ್ಲೆಯಿಂದ ೨೦೦೬ರ ನವೆಂಬರ್ ಅಂತ್ಯದವರೆಗೆ ಆಯ್ಕೆಯಾಗಿದ್ದ ವಿಧಾನಸಭಾ ಹಾಗೂ ವಿಧಾನ ಪರಿಷತ್ ಸದಸ್ಯರುಗಳಲ್ಲಿ ಇಂದಿನ ಉಡುಪಿ ಜಿಲ್ಲೆಯನ್ನೂ ಒಳಗೊಂಡ ಅಂದಿನ ದಕ್ಷಿಣ ಕನ್ನಡ ಜಿಲ್ಲೆಯ ಎ.ಬಿ.ಶೆಟ್ಟಿ, ಬಿ. ವೈಕುಂಠಬಾಳಿಗಾ, ಕೆ.ಕೆ.ಹೆಗ್ಡೆ, ಡಾ.ಕೆ. ನಾಗಪ್ಪ ಆಳ್ವ, ಬಿ. ವಿಠಲದಾಸಶೆಟ್ಟಿ, ಎ. ಶಂಕರ ಆಳ್ವ ಎಂ. ವೀರಪ್ಪ ಮೊಯ್ಲಿ, ಶ್ರೀಮತಿ. ಮನೋರಮಾ ಮಧ್ವರಾಜ್, ಬಿ. ಸುಬ್ಬಯ್ಯಶೆಟ್ಟಿ, ಎ. ಅಮರನಾಥಶೆಟ್ಟಿ ವಸಂತ ವಿ. ಸಾಲಿಮಾನ, ಕೆ. ಜಯಪ್ರಕಾಶ್ ಹೆಗ್ಡೆ, ಬಿ. ರಮಾನಾಥ ರೈ ಮುಂತಾದವರು ರಾಜ್ಯದ ವಿವಿಧ ಮಂತ್ರಿಮಂಡಲಗಳಲ್ಲಿ ಸಂಪುಟ ಸಚಿವರಾಗಿ, ರಾಜ್ಯಸಚಿವರಾಗಿ, ಸೇವೆ ಸಲ್ಲಿಸಿದ್ದಾರೆ. ಇದಕ್ಕೆ ಕಿರೀಟಪ್ರಾಯವಾಗಿ ೧೯೯೨ರ ನವೆಂಬರ್ ೨೨ರಂದು ಅಂದಿನ ದಕ್ಷಿಣ ಕನ್ನಡ (ಇಂದಿನ ಉಡುಪಿ) ಜಿಲ್ಲೆಯ ಎಂ.ವೀರಪ್ಪ ಮೊಯ್ಲಿ ಕಾಂಗ್ರೆಸ್ ಪಕ್ಷದ ನಾಯಕರಾಗಿ ಆಯ್ಕೆಗೊಳ್ಳುವ ಮೂಲಕ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಿ, ೧೦–೧೨–೧೯೯೪ರಲ್ಲಿ ರಾಜೀನಾಮೆ ನೀಡುವವರೆಗೂ ಅಧಿಕಾರದಲ್ಲಿದ್ದರು. ಮುಂದೆ ಆಡಳಿತದ ಅನುಕೂಲಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಯು ೧೯೯೭ರ ಆಗಸ್ಟ್ ಮಾಹೆಯಲ್ಲಿ ವಿಭಜಿಸಲ್ಪಟ್ಟು ಮಂಗಳೂರು, ಪುತ್ತೂರು, ಸುಳ್ಯ, ಬೆಳ್ತಂಗಡಿ ಹಾಗೂ ಬಂಟ್ವಾಳ ತಾಲೂಕುಗಳಿಗಷ್ಟೇ ಸೀಮಿತವಾದ ದಕ್ಷಿಣ ಕನ್ನಡ; ಕಾರ್ಕಳ, ಕುಂದಾಪುರ ಹಾಗೂ ಉಡುಪಿ ತಾಲೂಕುಗಳನ್ನೊಳಗೊಂಡ ಉಡುಪಿ ಜಿಲ್ಲೆಗಳು ಅಸ್ತಿತ್ವಕ್ಕೆ ಬಂದವು. ಆ ನಂತರ ೧೯೯೮ರ ಆಗಸ್ಟ್‌ನಲ್ಲಿ ಕಾರ್ಕಳ ತಾಲೂಕಿನಲ್ಲಿದ್ದ ಮೂಡಬಿದ್ರಿ ಹೋಬಳಿಯನ್ನು ಮಂಗಳೂರು ತಾಲೂಕಿಗೆ ವರ್ಗಾಯಿಸಲ್ಪಟ್ಟಿದೆ. ತತ್ಪರಿಣಾಮವಾಗಿ ಇಂದು ದಕ್ಷಿಣ ಕನ್ನಡ ಜಿಲ್ಲೆಯು

ಒಂದು ಲೋಕಸಭಾ ಸ್ಥಾನ (ಮಂಗಳೂರು) ಹಾಗೂ ಒಂಭತ್ತು ವಿಧಾನಸಭಾ (ಮಂಗಳೂರು, ಮೂಡಬಿದ್ರೆ, ಉಳ್ಳಾಲ, ಬಂಟ್ವಾಳ, ಸುಳ್ಯ, ಪುತ್ತೂರು, ಬೆಳ್ತಂಗಡಿ, ವಿಟ್ಲ ಹಾಗೂ ಸುರತ್ಕಲ್)ಕ್ಷೇತ್ರಗಳನ್ನು ಹೊಂದಿದೆ. ಉಡುಪಿ ಜಿಲ್ಲೆಯಲ್ಲಿ ಒಂದು ಲೋಕಸಭಾ(ಉಡುಪಿ) ಹಾಗೂ ಆರು ವಿಧಾನಸಭಾ (ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ ಬೈಂದೂರು ಹಾಗೂ ಕಾರ್ಕಳ) ಸ್ಥಾನಗಳಿವೆ. ೧೯೫೨ ರಿಂದ ಈವರೆಗೆ, ಜಿಲ್ಲೆಯಿಂದ ಆಯ್ಕೆಯಾಗಿರುವ ಲೋಕಸಭಾ ಹಾಗೂ ವಿಧಾನಸಭಾ ಸದಸ್ಯರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಅದರ ಶೇಕಡಾವಾರು ಪ್ರಮಾಣವನ್ನು ಇಲ್ಲಿ ನೀಡಲಾಗಿದೆ. ಈ ಜಿಲ್ಲೆಯೂ ಸೇರಿದಂತೆ ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ಚುನಾವಣಾ ವಿವರಗಳು, ಬೆಂಗಳೂರಿನಲ್ಲಿರುವ ರಾಜ್ಯ ಚುನಾವಣಾ ಆಯುಕ್ತರ ಕಚೇರಿಯಲ್ಲಿ ಲಭಿಸುತ್ತವೆ.

**ಲೋಕಸಭಾ ಚುನಾವಣಾ ಫಲಿತಾಂಶಗಳ ಜಿಲ್ಲಾ ಪಕ್ಷಿನೋಟ(೧೯೫೨–೨೦೦೬)**

| ಚುನಾವಣಾ ವರ್ಷ | ಮಂಗಳೂರು ಲೋಕಸಭಾ ಕ್ಷೇತ್ರ (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ) | ಉಡುಪಿ ಲೋಕಸಭಾ ಕ್ಷೇತ್ರ (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ) |
|---|---|---|
| ೧೯೫೨ | ಬಿ.ಶಿವರಾವ್ (ಭಾ.ರಾ.ಕಾಂ.) ೯೬,೬೧೯ (೪೬.೮೮) | ಯು. ಶ್ರೀನಿವಾಸಮಲ್ಯ(ಭಾ.ರಾ.ಕಾಂ)೯೮,೮೧೨ (೪೪.೪೫) |
| ೧೯೫೭ | ಕೆ.ಆರ್.ಆಚಾರ್(ಭಾ.ರಾ.ಕಾಂ.) ೧,೪೩,೫೯ (೫೭.೩೭) | ಯು. ಶ್ರೀನಿವಾಸಮಲ್ಯ(ಭಾ.ರಾ.ಕಾಂ.) ೧,೨೨,೭೫೪ (೫೬.೭೫) |
| ೧೯೬೨ | ಎ.ಶಂಕರ್‌ಆಳ್ವ (ಭಾ.ರಾ.ಕಾಂ.)೧,೧೮,೧೦೨ (೪೨.೧೭) | ಯು.ಶ್ರೀನಿವಾಸಮಲ್ಯ (ಭಾ.ರಾ.ಕಾಂ.) ೧,೧೭,೦೨೭ (೫೦.೦೧) |
| ೧೯೬೭ | ಸಿ.ಎಂ.ಪೂಣಚ್ಚ (ಭಾ.ರಾ.ಕಾಂ.) ೧,೨೫,೧೬೨ (೪೧.೦೭) | ಜೆ.ಎಂ.ಎಲ್ ಪ್ರಭು (ಸ್ವತಂತ್ರ ಪಕ್ಷ) ೧,೨೨,೮೩೬ (೪೧.೭೬) |
| ೧೯೭೧ | ಕೆ.ಕೆ.ಶೆಟ್ಟಿ (ರಾ.ಕಾಂ(ಜೆ)) ೨,೦೫,೫೧೬ (೬೪.೫೯) | ಪಿ.ರಂಗನಾಥಶೆಟ್ಟಿ ೧,೮೨,೪೦೯ (೬೫.೮೦) |
| ೧೯೭೭ | ಜನಾರ್ದನ ಪೂಜಾರಿ (ಭಾ.ರಾ.ಕಾಂ.) ೨,೩೩,೪೫೮ (೬೦.೮) | ಟಿ.ಎ.ಪೈ. (ಭಾ.ರಾ.ಕಾಂ.) ೨,೨೪,೭೮೮ (೬೧.೫೩) |
| ೧೯೮೦ | ಜನಾರ್ದನ ಪೂಜಾರಿ (ಕಾಂಗ್ರೆ) ೨,೪೯,೨೮೩ (೫೫.೯೪) | ಆಸ್ಕರ್ ಫರ್ನಾಂಡಿಸ್ (ಕಾಂಗ್ರೆ) ೨,೬೧,೭೩೮ (೬೧.೮೧) |
| ೧೯೮೪ | ಜನಾರ್ದನ ಪೂಜಾರಿ (ಭಾ.ರಾ.ಕಾಂ.) ೨,೯೯,೪೯೦ (೬೨.೦೩) | ಆಸ್ಕರ್ ಫರ್ನಾಂಡಿಸ್ (ಭಾ.ರಾ.ಕಾಂ.) ೨,೮೭,೪೧೨ (೬೨.೩೭) |
| ೧೯೮೯ | ಜನಾರ್ದನ ಪೂಜಾರಿ (ಭಾ.ರಾ.ಕಾಂ.) ೨,೭೫,೬೭೨ (೪೪.೧) | ಆಸ್ಕರ್ ಫರ್ನಾಂಡಿಸ್ (ಭಾ.ರಾ.ಕಾಂ.) ೩,೧೩,೮೪೯ (೫೩.೫) |
| ೧೯೯೧ | ಜನಾರ್ದನ ಪೂಜಾರಿ (ಭಾ.ರಾ.ಕಾಂ.) ೨,೩೯,೬೯೫ (೪೩.೪೬) | ಆಸ್ಕರ್ ಫರ್ನಾಂಡಿಸ್ (ಭಾ.ರಾ.ಕಾಂ.) ೨,೩೪,೧೨೦ (೪೭.೯೧) |
| ೧೯೯೬ | ವಿ.ಧನಂಜಯ ಕುಮಾರ್ (ಭಾ.ಜ.ಪ) ೨,೫೦,೭೬೫ (೩೬.೧೨) | ಆಸ್ಕರ್ ಫರ್ನಾಂಡಿಸ್ (ಭಾ.ರಾ.ಕಾಂ.) ೨,೩೫,೯೩೨ (೩೭.೩೬) |
| ೧೯೯೮* | ವಿ.ಧನಂಜಯ ಕುಮಾರ್ (ಭಾ.ಜ.ಪ) ೩,೪೧,೩೬೨ (೪೮.೧೫) | ಐ.ಎಂ.ಜಯರಾಮಶೆಟ್ಟಿ (ಭಾ.ಜ.ಪ) ೩,೪೧,೪೬೬ (೫೦,೮೩) |
| ೧೯೯೯ | ವಿ.ಧನಂಜಯ ಕುಮಾರ್ (ಭಾ.ಜ.ಪ) ೩,೫೩,೫೩೬ (೪೯) | ವಿನಯ್‌ಕುಮಾರ್ ಸೊರ್ಕೆ (ಭಾ.ರಾ.ಕಾಂ.) ೩,೫೨,೩೨೬ (೫೧) |
| ೨೦೦೪ | ಡಿ.ವಿ.ಸದಾನಂದಗೌಡ (ಭಾ.ಜ.ಪ) ೩,೮೪,೭೬೦ | ಶ್ರೀಮತಿ ಮನೋರಮಾ ಎಂ.ಮಧ್ವರಾಜ್ (ಭಾ.ಜ.ಪ.) ೩,೬೯,೬೨೭ |

* ದಕ್ಷಿಣ ಕನ್ನಡ ಜಿಲ್ಲೆಯು ೧೯೯೭ರಲ್ಲಿ ವಿಭಜನೆಗೊಂಡು ಉಡುಪಿ ಜಿಲ್ಲೆಯು ನೂತನವಾಗಿ ಅಸ್ತಿತ್ವಕ್ಕೆ ಬಂದಿದೆ.

## ದಕ್ಷಿಣ ಕನ್ನಡ ಜಿಲ್ಲಾ ವಿಧಾನಸಭಾ ಚುನಾವಣಾ ಫಲಿತಾಂಶಗಳ ಪಕ್ಷಿನೋಟ–೧ (೧೯೫೭–೨೦೦೪)

| | ಪುತ್ತೂರು (ದ್ವಿಸದಸ್ಯ ಕ್ಷೇತ್ರ) | ಬೆಳ್ತಂಗಡಿ | ಪಾಣೆ ಮಂಗಳೂರು/ ಬಂಟ್ವಾಳ | ಮಂಗಳೂರು–I | ಮಂಗಳೂರು II /ಉಳ್ಳಾಲ | ಸುರತ್ಕಲ್ | ಸುಳ್ಯ (ಮೀಸಲು) | ವಿಟ್ಲ |
|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ |
| ಚುನಾವಣಾ ವರ್ಷ | ಅಯ್ದೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ | ಅಯ್ದೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ | ಅಯ್ದೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ | ಅಯ್ದೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡ ವಾರು ಪ್ರಮಾಣ | ಅಯ್ದೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ | ಅಯ್ದೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡ ವಾರು ಪ್ರಮಾಣ | ಅಯ್ದೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ | ಅಯ್ದೆ ಯಾದವರ ಹೆಸರು, ಪಕ್ಷ ಗಳಿಸಿದ ಮತ ಹಾಗೂ ಶೇಕಡ ವಾರು ಪ್ರಮಾಣ |
| ೧೯೫೭ | ೧) ಸುಬ್ಬಯ್ಯನಾಯಕ್ (ಭಾ.ರಾ.ಕಾಂ) ೨೯,೬೭೩ (೩೩.೧೬) ೨) ಕೆ. ವೆಂಕಟರಮಣ ಗೌಡ (ಭಾ.ರಾ.ಕಾಂ) ೨೮,೯೯೧ (೩೧.೯೭) | ರತ್ನವರ್ಮ ಹೆಗಡೆ (ಭಾ.ರಾ.ಕಾಂ) ೨೦,೫೬೩ (೯೯.೭೬) | ಡಾ.ಕೆ.ನಾಗಪ್ಪ ಆಳ್ವ (ಭಾ.ರಾ.ಕಾಂ) ೧೯,೫೩೩ (೫೮.೬೪) | ವೈಕುಂಠಬಾಳಿಗಾ ಬಿ● (ಭಾ.ರಾ.ಕಾಂ) ೧೬೩೬೫ (೪೮.೯೪) | ಗಜಾನನ ಪಂಡಿತ (ಭಾ.ರಾ.ಕಾಂ) ೨೦,೩೩೨ (೫೮.೩೩) | ಬಿ.ಆರ್.ಕರ್ಕೇರಾ (ಭಾ.ರಾ.ಕಾಂ) ೧೫.೬೨೯ (೫೬.೯೮) **ಉಪಚುನಾವಣೆ:** (೨೯–೫–೧೯೫೯) ಕೆ.ಧೂಮಪ್ಪ (ಭಾ.ರಾ.ಕಾಂ) ೧೦,೦೧೯(೪೩.೯೪) | **ಈ ಕ್ಷೇತ್ರವನ್ನು ಪುತ್ತೂರು ದ್ವಿಸದಸ್ಯ ಕ್ಷೇತ್ರದಿಂದ ಬೇರ್ಪಡಿಸಿ ೧೯೬೨ರಲ್ಲಿ ನೂತನವಾಗಿ ರಚಿಸಲಾಯಿತು.** | **ಈ ಕ್ಷೇತ್ರ ೧೯೭೮ರಲ್ಲಿ ನೂತನವಾಗಿ ರಚಿಸಲಾಯಿತು.** |
| ೧೯೬೨ | ಕೆ. ವೆಂಕಟರಮಣ ಗೌಡ (ಭಾ.ರಾ.ಕಾಂ) ೧೪,೨೯೫ (೪೮.೪೫) | ಬಿ.ವೈಕುಂಠ ಬಾಳಿಗಾ (ಭಾ.ರಾಕಾಂ) ೧೫,೯೯೧(೪೬.೧೮) | ಎಂ. ಶ್ರೀನಿವಾಸ ನಾಯಕ್(ಭಾ.ರಾ.ಕಾಂ) ೧೬,೭೮೫(೪೧.೩೭) | ಕೆ. ನಾಗಪ್ಪ ಆಳ್ವ● (ಭಾ.ರಾ.ಕಾಂ) ೧೬,೧೭೦(೪೭.೯೯) | ಎ.ಕೃಷ್ಣ ಶೆಟ್ಟಿ (ಸಿಪಿಐ) ೧೭,೭೨೫(೪೨.೨೩) | ಸಂಜೀವನಾಥ ಐಕಲ್(ಪ್ರ.ಸ.ಪ) ೧೩,೧೪೮(೪೮.೯೦) | ಸುಬ್ಬಯ್ಯನಾಯಕ್ (ಭಾ.ರಾ.ಕಾಂ) ೧೨,೭೮೭(೪೯,೩೮) | |

● ಸಂಪುಟ ಸಚಿವರಾಗಿದ್ದರು.

ಮುಂದುವರಿದಿದೆ.....

| ಚುನಾವಣಾ ವರ್ಷ | ಪುತ್ತೂರು | ಬೆಳ್ತಂಗಡಿ | ಬಂಟ್ವಾಳ | ಮಂಗಳೂರು | ಉಳ್ಳಾಲ | ಸುರತ್ಕಲ್ | ಸುಳ್ಯ (ಮೀಸಲು) | ವಿಟ್ಲ |
|---|---|---|---|---|---|---|---|---|
| ೧೯೬೭ | ಬಿ.ವಿಠಲದಾಸಶೆಟ್ಟಿ●●<br>(ಭಾ.ರಾ.ಕಾಂ)<br>೨೨,೫೩೪(೪೮.೩೪) | ಬಿ.ವೈಕುಂಠ ಬಾಳಿಗಾ<br>(ಭಾ.ರಾ.ಕಾಂ)<br>೧೫,೪೭೬ (೪೬.೫೬)<br>**ಉಪಚುನಾವಣೆ:**<br>(೧೯–೧೧–೬೮)<br>ಕೆ. ಚಿದಾನಂದ<br>(ಭಾ.ರಾ.ಕಾಂ)<br>೧೬,೮೭೦ (೪೯.೮೪) | ಶ್ರೀಮತಿ ಕೆ.ಲೀಲಾವತಿ<br>ರಾಯ್<br>(ಭಾ.ರಾ.ಕಾಂ)<br>೨೦,೩೪೭<br>(೪೭.೨೦) | ಎಂ. ಶ್ರೀನಿವಾಸ<br>ನಾಯಕ್<br>(ಭಾ.ರಾ.ಕಾಂ)<br>೧೫,೧೦೫<br>(೩೬.೮೨) | ಬಿ.ಎಂ. ಇದಿನಬ್ಬ<br>(ಭಾ.ರಾ.ಕಾಂ)<br>೨೧,೩೬೫<br>(೫೦.೪೪) | ಪಿ.ವಿ.ಐತಾಳ<br>(ಪ.ಸ.ಪ)<br>೨೫,೦೭೦<br>(೬೧.೬೮) | ಎ.ರಾಮಚಂದ್ರ<br>(ಸ್ವ) ೧೫,೪೮೭<br>(೪೬.೪೩) | **ಈ<br>ಕ್ಷೇತ್ರ<br>ವನ್ನು<br>೧೯೭೮<br>ರಲ್ಲಿ** |
| ೧೯೭೨ | ಎ.ಶಂಕರ ಆಳ್ವ●<br>ಭಾ.ರಾ.ಕಾಂ)<br>೨೯,೬೩೦<br>(೫೬.೪೨) | ಕೆ. ಸುಬ್ರಮಣ್ಯ ಗೌಡ<br>(ಭಾ.ರಾ.ಕಾಂ)<br>೨೪,೧೨೬ (೫೭.೯೭) | ಬಿ.ವಿ.ಕಕ್ಕೀಲಾಯ<br>(ಸಿ.ಪಿ.ಐ)೩೦,೦೩೧<br>(೬೨.೫೧) | ಶ್ರೀಮತಿ ಅಡಿ<br>ಸಲ್ಡಾನಾ<br>(ಭಾ.ರಾ.ಕಾಂ<br>೨೧,೯೯೪ (೪೯.೭೪) | ಯು.ಟಿ.ಫರೀದ್<br>(ಭಾ.ರಾ.ಕಾಂ)<br>೩೦,೦೪೮ (೫೩.೭೯) | ಬಿ.ಸುಬ್ಬಯ್ಯಶೆಟ್ಟಿ●●<br>(ಭಾ.ರಾ.ಕಾಂ)<br>೨೭,೭೨೦ (೬೪.೩೦) | ಪಿ.ಡಿ.ಬಂಗೇರ<br>(ಭಾ.ರಾ.ಕಾಂ)<br>೨೩,೦೮೯<br>(೬೩.೦೨) | **ರಚಿಸ<br>ಲಾಯಿತು** |
| ೧೯೭೮ | ಕೆ. ರಾಮಭಟ್(ಜ.ಪ)<br>೨೫,೭೫೧<br>(೪೩.೩೨) | ಕೆ. ಗಂಗಾಧರ್<br>(ಕಾಂಗ್ರೆ)<br>೩೧,೨೫೫ (೫೫.೫೩) | ಮೊಹಿದ್ದೀನ್ ಬಿ.ಎ.<br>(ಕಾಂಗ್ರೆ)೩೦,೭೯೦<br>(೬೦.೧೨) | ಪಿ.ಎಫ್.ರೋಡ್ರೀಕ್ಸ್●●<br>(ಕಾಂಗ್ರೆ)<br>೨೬,೫೭೯ (೫೦.೧೩) | ಫರೀದ್ ಯು.ಟಿ.<br>(ಕಾಂಗ್ರೆ)<br>೩೦,೧೭೪ (೫೭.೦೭) | ಸುಬ್ಬಯ್ಯಶೆಟ್ಟಿ●<br>(ಕಾಂಗ್ರೆ)೨೯,೪೫೨<br>(೫೮.೬೩) | ಎ.ರಾಮಚಂದ್ರ<br>(ಜ.ಪ)<br>೨೪,೧೮೪ (೪೪.೫೪) | ಬಿ.ಎ.ಕಕ್ಕಿಲಾಯ<br>(ಭಾ.ಕ.ಪ)<br>೩೧,೦೩೦ (೫೧.೮೯) |

● ಸಂಪುಟ ಸಚಿವರಾಗಿದ್ದರು

●● ರಾಜ್ಯ ಸಚಿವರಾಗಿದ್ದರು.

ಮುಂದುವರಿದಿದೆ.....

| ಚುನಾವಣೆ ವರ್ಷ | ಪುತ್ತೂರು | ಬೆಳ್ತಂಗಡಿ | ಬಂಟ್ವಾಳ | ಮಂಗಳೂರು | ಉಳ್ಳಾಲ | ಸುರತ್ಕಲ್ | ಸುಳ್ಯ (ಮೀಸಲು) | ವಿಟ್ಲ |
|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ |
| ೧೯೮೩ | ಕೆ. ರಾಮಭಟ್ (ಭಾ.ಜ.ಪ.) ೨೬,೬೧೮ (೪೫.೬೩) | ಕೆ. ವಸಂತ ಬಂಗೇರಾ (ಭಾ.ಜ.ಪ) ೨೫,೫೭೯ (೬೨.೧೬) | ಎ. ಶಿವರಾಮ್ (ಭಾ.ಜ.ಪ.) ೧೭,೯೧೦(೨೮.೧೨) | ಧನಂಜಯ ಕುಮಾರ್ ವಿ. (ಭಾ.ಜ.ಪ) ೨೨.೯೦೯(೪೪.೮೦) | ಪಿ. ರಾಮಚಂದ್ರ ರಾವ್ (ಸಿಪಿಎಂ) ೧೬,೪೨೩ (೩೨.೪೪) | ಲೋಕಯ್ಯ ಶೆಟ್ಟಿ (ಜ.ಪ.) ೨೯,೦೮೨ (೬೧.೮೩) | ಬಕೀಲ್ ಹುಕ್ರಪ್ಪ (ಭಾ.ಜ.ಪ) ೨೧,೯೭೫ (೪೨.೬೪) | ಎ. ರುಕ್ಮಯ್ಯಪೂಜಾರಿ (ಭಾ.ಜ.ಪ) ೨೨,೨೭೭ (೩೭.೯೦) |
| ೧೯೮೫ | ವಿನಯ್‌ಕುಮಾರ್ ಸೊರಕೆ (ಭಾ.ರಾ.ಕಾಂ) ೩೭,೪೨೬ (೫೧.೪೫) | ಕೆ. ವಸಂತ ಬಂಗೇರಾ (ಭಾ.ಜ.ಪ) ೩೩,೩೨೪ (೫೧.೧೧) | ಬಿ. ರಮಾನಾಥ ರೈ (ಭಾ.ರಾ.ಕಾಂ.) ೨೬.೩೩೩ (೪೯.೯೬) | ಬ್ಲೇಸಿಯಸ್ ಎಂ.ಡಿಸೋಜಾ (ಭಾ.ರಾ.ಕಾಂ.) ೨೪,೪೯೪ (೪೪.೪೩) | ಬಿ.ಎಂ.ಇದಿನಬ್ಬ (ಭಾ.ರಾ.ಕಾಂ) ೨೬,೧೮೪ (೪೫.೮೦) | ಎನ್.ಎಂ.ಅಡ್ಯಂತಾಯ (ಭಾ.ರಾ.ಕಾಂ) ೩೧,೮೪೬ (೫೪.೩೮) | ಕುಶಾಲ.ಕೆ (ಭಾ.ರಾ.ಕಾಂ) ೨೫,೫೪೨ (೪೦.೬೬) | ಬಿ.ಎ.ಉಮ್ಮರಬ್ಬ (ಭಾ.ರಾ.ಕಾಂ) ೩೧,೦೧೭(೪೫.೪೪) |
| ೧೯೮೯ | ವಿನಯ್ ಕುಮಾರ್ ಸೊರಕೆ (ಭಾ.ರಾ.ಕಾಂ) ೪೩,೯೬೫(೪೬.೫೮) | ಕೆ.ಗಂಗಾಧರಗೌಡ (ಭಾ.ರಾ.ಕಾಂ) ೪೦,೯೬೪ (೪೪.೯೫) | ಬಿ. ರಮಾನಾಥ ರೈ•• (ಭಾ.ರಾ.ಕಾಂ) ೩೨,೯೩೯ (೪೮.೩೬) | ಬ್ಲೇಸಿಯಸ್.ಎಂ ಡಿಸೋಜಾ• ೨೩,೭೩೯ (೩೯.೨೯) | ಬಿ.ಎಂ.ಇದಿನಬ್ಬ (ಭಾ.ರಾ.ಕಾಂ) ೨೫,೭೮೫ (೩೬.೫೪) | ವಿಜಯಕುಮಾರ್ ಶೆಟ್ಟಿ (ಭಾ.ರಾ.ಕಾಂ) ೩೫,೨೩೦(೪೫.೨೯) | ಕುಶಾಲ.ಕೆ (ಭಾ.ರಾ.ಕಾಂ) ೩೩,೫೬೦ (೩೮.೬೧) | ಎ.ರುಕ್ಮಯ್ಯ ಪೂಜಾರಿ (ಭಾ.ಜ.ಪ) ೨೭,೮೪೬ (೩೧.೯೯) |
| ೧೯೯೪ | ಡಿ.ವಿ.ಸದಾನಂದಗೌಡ (ಭಾ.ಜ.ಪ) ೫೩,೦೧೫(೪೮.೫೯) | ಕೆ.ವಸಂತಬಂಗೇರಾ (ಜ.ದ) ೩೯,೮೭೧(೩೮.೫೧) | ಬಿ. ರಮಾನಾಥ ರೈ (ಭಾ.ರಾ.ಕಾಂ) ೩೪,೦೨೭(೪೪.೨೮) | ಎನ್. ಯೋಗೀಶ್ ಭಟ್,(ಭಾ.ಜ.ಪ) ೨೫,೧೦೬(೪೩.೪೫) | ಕೆ.ಜಯರಾಮಶೆಟ್ಟಿ (ಭಾ.ಜ.ಪ)೨೪,೪೧೨ (೩೨.೨೬) | ಕುಂಬ್ಳೆ ಸುಂದರರಾವ್ (ಭಾ.ಜ.ಪ)೨೯,೫೮೯ (೩೫.೫೧) | ಎಸ್.ಅಂಗಾರ ಭಾ.ಜ.ಪ.೨,೧೧೩ (೫೧.೨೧) | ಎ.ರುಕ್ಮಯ್ಯ ಪೂಜಾರಿ (ಭಾ.ಜ.ಪ)೪೧,೬೨೭ (೪೩.೪೭) |
| ೧೯೯೯* | ಡಿ.ವಿ.ಸದಾನಂದಗೌಡ (ಭಾ.ಜ.ಪ) ೬೨.೩೦೬(೫೨) | ಕೆ.ಪ್ರಭಾಕರಬಂಗೇರಾ (ಭಾ.ಜ.ಪ) ೪೫,೦೪೨(೪೧) | ಬಿ.ರಮಾನಾಥ ರೈ• (ಭಾ.ರಾ.ಕಾಂ.) ೪೯,೯೦೫(೫೭) | ಎನ್.ಯೋಗೀಶ್ ಭಟ್ (ಭಾ.ಜ.ಪ) ೩೪,೬೨೮(೫೪) | ಫರೀದ್ ಯು.ಟಿ. (ಭಾ.ರಾ.ಕಾಂ.) ೫೦,೧೩೪(೫೩) | ವಿಜಯಕುಮಾರ್ ಶೆಟ್ಟಿ (ಭಾ.ರಾ.ಕಾಂ) ೫೩,೭೪೯(೫೨) | ಎಸ್.ಅಂಗಾರ (ಭಾ.ಜ.ಪ) ೫೪,೮೧೪(೫೨) | ಕೆ.ಎಂ.ಇಬ್ರಾಹಿಂ (ಭಾ.ರಾ.ಕಾಂ) ೫೪,೨೬೮(೫೦) |
| ೨೦೦೪ | ಶಕುಂತಲಾ ಟಿ.ಶೆಟ್ಟಿ (ಭಾ.ಜ.ಪ) ೬೫,೧೧೯ | ಕೆ.ಪ್ರಭಾಕರಬಂಗೇರಾ (ಭಾ.ಜ.ಪ.) ೪೮,೧೧೨ | ಬಿ.ನಾಗರಾಜಶೆಟ್ಟಿ• (ಭಾ.ಜ.ಪ) ೫೪,೮೬೦ | ಎನ್.ಯೋಗೀಶ್ ಭಟ್ (ಭಾ.ಜ.ಪ) ೨೯,೯೨೮ | ಫರೀದ್ ಯು.ಟಿ# (ಭಾ.ರಾ.ಕಾಂ) ೪೭,೮೩೯ | ಜೆ.ಕೃಷ್ಣ ಪಲೇಮಾರ್ (ಭಾ.ಜ.ಪ.)೫೭,೮೦೮ | ಎಸ್.ಅಂಗಾರ (ಭಾ.ಜ.ಪ) ೬೧,೪೮೦ | ಪದ್ಮನಾಭ ಕೊಟ್ಟಾರಿ (ಭಾ.ಜ.ಪ) ೬೦,೨೫೦ |

• ಸಂಪುಟ ಸಚಿವರಾಗಿರಾಗಿದ್ದರು. •• ರಾಜ್ಯ ಸಚಿವರಾಗಿರಾಗಿದ್ದರು. # ದಿನಾಂಕ ೭–೨–೨೦೦೭ರಂದು ನಿಧನರಾದುದರಿಂದ ಈ ಸ್ಥಾನವಿಂದು ತೆರವಾಗಿದೆ.

### ದಕ್ಷಿಣ ಕನ್ನಡ ಜಿಲ್ಲಾ ವಿಧಾನಸಭಾ ಚುನಾವಣಾ ಫಲಿತಾಂಶಗಳ ಪಕ್ಷಿನೋಟ–೨ (೧೯೫೭–೧೯೭೮)

| ಚುನಾವಣಾ ವರ್ಷ | ಕಾಪು | ಉಡುಪಿ | ಬ್ರಹ್ಮಾವರ | ಕುಂದಾಪುರ | ಬೈಂದೂರು | ಕಾರ್ಕಳ (ದ್ವಿಸದಸ್ಯ ಕ್ಷೇತ್ರ) | ಮೂಡಬಿದ್ರಿ (ಮೀಸಲು) |
|---|---|---|---|---|---|---|---|
| | ಆಯ್ಕೆಯಾದವರ ಹೆಸರು, ಪಕ್ಷಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ) | (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ) | (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ) | (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ) | (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ) | (ಆಯ್ಕೆಯಾದವರ ಹೆಸರು, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ) | (ಆಯ್ಕೆಯಾದವರ ಹೆಸರು, ಪಕ್ಷ, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ) |
| ೧ | ೨ | ೩ | ೪ | ೫ | ೬ | ೭ | ೮ |
| ವರ್ಷ | | | | | | | |
| ೧೯೫೭ | ಎಫ್ ಎಕ್ಸ್ ಪಿಂಟೋರಾ (ಭಾ.ರಾ.ಕಾಂ) ೧೮,೭೬೧ (೬೨.೭೫) | ಉಪೇಂದ್ರನಾಯಕ್ (ಪ್ರ.ಸ.ಪ) ೧೭,೫೮ (೫೬.೯೭) | ಜಗಜೀವನದಾಸ್ ಶೆಟ್ಟಿ (ಭಾರಾಕಾಂ) ೧೬,೯೬೪ (೬೧.೯೩) | ವಿ. ಶ್ರೀನಿವಾಸಶೆಟ್ಟಿ (ಪ್ರಸಪ) ೧೬,೯೩ (೫೦.೬೬) | ವೈ.ಮಂಜಯ್ಯ ಶೆಟ್ಟಿ (ಭಾ.ರಾ.ಕಾಂ) (ಅವಿರೋಧ ಆಯ್ಕೆ) | ೧) ಮಂಜಪ್ಪ ಉಳ್ಳಾಲ (ಅವಿರೋಧ ಆಯ್ಕೆ) ೨) ಹೆಗ್ಗಡೆ ಕಾಂತಪ್ಪ ಖಂಡಿಂಜಿ ● (ಭಾ.ರಾ.ಕಾಂ) ೧೫,೮೦೧(೩೭.೧೮) | ಈ ಕ್ಷೇತ್ರವನ್ನು ಕಾರ್ಕಳ ದ್ವಿಸದಸ್ಯ ಕ್ಷೇತ್ರದಿಂದ ಬೇರ್ಪಡಿಸಿ ನೂತನವಾಗಿ ೧೯೬೨ರಲ್ಲಿ ರಚಿಸಲಾಯಿತು |
| ೧೯೬೨ | ಬಿ. ಭಾಸ್ಕರಶೆಟ್ಟಿ (ಪ್ರ.ಸ.ಪ)೧೩,೬೨೪ (೪೮.೭೭) | ಎಂ. ಮಧ್ವರಾಜ (ಭಾ.ರಾ.ಕಾಂ) ೧೭,೫೧೧ (೫೩.೫೮) | ಎಸ್.ಡಿ.ಸಾಮ್ರಾಜ್ಯ (ಭಾ.ರಾ.ಕಾಂ) ೧೪,೬೦೧ (೫೫.೪೮) | ಎಸ್.ಎಸ್.ಕೋಲ್ಕೆಬೈಲು (ಭಾ.ರಾ.ಕಾಂ) ೧೬,೯೨೫ (೫೨.೫೭) | ವೈ.ಮಂಜಯ್ಯ ಶೆಟ್ಟಿ (ಭಾ.ರಾ.ಕಾಂ) ೧೬,೫೯೧ (೪೯.೦೧) | ದಯಾನಂದ.ಆರ್ ಕಾಳೆ (ಪ್ರ.ಸ.ಪ) ೧೭,೨೩೪ (೫೯.೦೫) | ಗೋಪಾಲ ಸಾಲಿಯಾನ (ಸ್ವಪ) ೧೦,೪೩೧ (೫೦.೬೩) |
| ೧೯೬೭ | ಬಿ.ಭಾಸ್ಕರಶೆಟ್ಟಿ (ಪ್ರ.ಸ.ಪ)೨೦,೯೫೬ (೫೭.೧೭) | ಎಸ್.ಕೆ.ಅಮೀನ್ (ಭಾ.ರಾ.ಕಾಂ) ೧೧,೭೩೭(೩೩.೩೫) | ಎಸ್.ಜಯಪ್ರಕಾಶ್ ಹೆಗ್ಡೆ (ಪಕ್ಷೇತರ) ೨೨,೫೫೧ (೬೨.೮೯) | ಶ್ರೀಮತಿ ವಿನ್ನಿಫ್ರೆಡ್ ಎಫ್.ಫರ್ನಾಂಡೀಸ್ (ಪ್ರಸಪ) ೧೮,೮೮೧ (೫೧.೭೬) | ಸುಬ್ಬರಾವ್ ಹಲ್ಸನಾಡ್ (ಪ್ರ.ಸ.ಪ) ೧೮,೭೦೦ (೪೭.೯೯) | ಬೋಳ ರಘುರಾಮಶೆಟ್ಟಿ (ಭಾಜಪಂ) ೨೦,೧೧೨(೫೭.೦೪) | ಕೆ.ರತ್ನಕುಮಾರ್ ಶೆಟ್ಟಿ (ಸ್ವಪ) ೧೩,೯೪೦ (೪೩.೪೨) |
| ೧೯೭೨ | ಬಿ. ಭಾಸ್ಕರ್‌ಶೆಟ್ಟಿ (ಭಾ.ರಾ.ಕಾಂ) ೨೫,೩೫೮ (೬೨.೨೬) | ಶ್ರೀಮತಿ ಮನೋರಮಾ ಮಧ್ವರಾಜ್●● (ಭಾ.ರಾ.ಕಾಂ) ೨೬,೦೨೦ (೫೮.೯೯) | ಜಯಪ್ರಕಾಶಹೆಗ್ಡೆ ಕೋಲ್ಕೆ ಬೈಲು (ಭಾ.ರಾ.ಕಾಂ) ೨೨,೪೨೧ (೫೮.೨೮) | ಶ್ರೀಮತಿ ವಿನ್ನಿಫ್ರೆಡ್ ಎಫ್.ಫರ್ನಾಂಡೀಸ್ (ಭಾ.ರಾ.ಕಾಂ) ೧೮,೭೭೬ (೪೮.೦೫) | ಎ.ಗೋಪಾಲಕೃಷ್ಣ ಕೊಡ್ಗಿ (ಭಾ.ರಾ.ಕಾಂ) ೨೯,೪೯೬ (೭೧.೭೯) | ಎಂ.ವೀರಪ್ಪ ಮೊಯ್ಲಿ ●● (ಭಾರಾಕಾಂ) ೨೫,೩೬೦ (೬೭.೭೩) | ಡಾ.ದಾಮೋದರ ಮುಲ್ಕಿ (ಭಾರಾಕಾಂ) ೨೫,೧೨೧(೬೪.೯೪) |
| ೧೯೭೮ | ಬಿ.ಭಾಸ್ಕರಶೆಟ್ಟಿ (ಕಾಂಗ್ರೆ) ೨೯,೦೩೦ (೫೭.೬೭) | ಶ್ರೀಮತಿ ಎಂ.ಮನೋರಮಾ ಮಧ್ವರಾಜ್●●(ಕಾಂಗ್ರೆ) ೩೦,೮೯೯ (೫೫.೫೮) | ಆನಂದಕುಂದ ಹೆಗ್ಡೆ (ಕಾಂಗ್ರೆ) ೨೯,೦೩೧ (೪೯.೨೮) | ಕಾಪು ಸಂಜೀವರೆಡ್ಡಿ (ಜ.ಪ) ೨೮,೬೧೨(೪೯.೦೯) | ಎಂ.ಗೋಪಾಲಕೃಷ್ಣ ಕೊಡ್ಗಿ (ಕಾಂಗ್ರೆ) ೨೯,೬೨೨ (೫೯.೨೪) | ಎಂ.ವೀರಪ್ಪ ಮೊಯ್ಲಿ● (ಕಾಂಗ್ರೆ) ೨೯,೪೧ (೫೫.೫೬) | ಡಾ.ದಾಮೋದರ ಮುಲ್ಕಿ (ಕಾಂಗ್ರೆ) ೨೫,೮೦೦ (೫೨.೫೫) |

ಮುಂದುವರಿದಿದೆ.....

●ಸಂಪುಟ ಸಚಿವರಾಗಿದ್ದರು.

●● ರಾಜ್ಯ ಸಚಿವರಾಗಿದ್ದರು.

**ದಕ್ಷಿಣ ಕನ್ನಡ ಜಿಲ್ಲಾ ವಿಧಾನಸಭಾ ಚುನಾವಣಾ ಫಲಿತಾಂಶಗಳ ಪಕ್ಷಿನೋಟ – ೨(೧೯೮೩ – ೨೦೦೪)**

| ಚುನಾವಣಾ ವರ್ಷ | ಕಾಪು | ಉಡುಪಿ | ಬ್ರಹ್ಮಾವರ | ಕುಂದಾಪುರ | ಬೈಂದೂರು | ಕಾರ್ಕಳ | ಮೂಡಬಿದ್ರಿ$ |
|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ |
| ೧೯೮೩ | ವಸಂತ.ವಿ. ಸಾಲಿಯಾನ (ಭಾ.ರಾ.ಕಾಂ) ೨೨,೮೩೯ | ಡಾ.ವಿ.ಎಸ್.ಆಚಾರ್ಯ (ಭಾ.ಜ.ಪ) ೨೬,೩೮೫ (೪೯.೩೦) | ಡಾ.ಬಿ.ಬಿ.ಶೆಟ್ಟಿ (ಭಾ.ಜ.ಪ.) ೨೭.೫೦೪(೪೭.೭೫) | ಪ್ರತಾಪಚಂದ್ರ ಶೆಟ್ಟಿ ಕೆ. (ಭಾ.ರಾ.ಕಾಂ.) ೩೨,೪೯೬(೫೪.೮೯) | ಅಪ್ಪಣ್ಣ ಹೆಗ್ಡೆ (ಜ.ಪ) ೨೫,೭೭೧ (೪೯.೨೬) | ಎಂ.ವೀರಪ್ಪ ಮೊಯ್ಲಿ (ಭಾ.ರಾ.ಕಾಂ) ೨೬,೧೭೬(೫೧.೮೫) | ಕೆ. ಅಮರನಾಥಶೆಟ್ಟಿ●● (ಜ.ಪ)೨೪,೪೩೩ (೫೫.೩೯) |
| ೧೯೮೫ | ವಸಂತ.ವಿ. ಸಾಲಿಯಾನ (ಭಾ.ರಾ.ಕಾಂ)೨೭,೩೫೬ (೫೭.೩೮) | ಶ್ರೀಮತಿ ಎಂ.ಮನೋರಮಾ ಮಧ್ವರಾಜ್ (ಭಾ.ರಾ.ಕಾಂ) ೩೮,೧೬೨(೬೨.೯೨) | ಪಿ.ಬಸವರಾಜ್ (ಭಾ.ರಾ.ಕಾಂ) ೩೪,೩೫೪(೫೩.೪೫) | ಪ್ರತಾಪಚಂದ್ರ ಶೆಟ್ಟಿ ಕೆ. (ಭಾ.ರಾ.ಕಾಂ) ೩೮,೨೯೬(೫೬.೧೧) | ಜಿ.ಎಸ್.ಆಚಾರ್ (ಭಾ.ರಾ.ಕಾಂ) ೨೮,೩೯೩(೪೮.೪೦) | ಎಂ.ವೀರಪ್ಪ ಮೊಯ್ಲಿ● (ಭಾ.ರಾ.ಕಾಂ) ೩೩,೩೩೦(೫೩.೧೮) | ಕೆ.ಅಮರನಾಥಶೆಟ್ಟಿ●● (ಜ.ಪ)೨೮,೬೮೩ (೫೦.೭೧) |
| ೧೯೮೯ | ವಸಂತ ವಿ. ಸಾಲಿಯಾನ●● (ಭಾ.ರಾ.ಕಾಂ) ೨೯,೮೨೩ (೫೪.೫೨) | ಶ್ರೀಮತಿ ಎಂ.ಮನೋರಮಾ ಮಧ್ವರಾಜ್● (ಭಾ.ರಾ.ಕಾಂ) ೨೯,೪೯೦ (೩೯.೦೪). | ಪಿ.ಬಸವರಾಜ್ (ಭಾ.ರಾ.ಕಾಂ) ೪೧.೭೦೯(೫೧.೭೨) | ಪ್ರತಾಪಚಂದ್ರ ಶೆಟ್ಟಿ ಕೆ.(ಭಾ.ರಾ.ಕಾಂ) ೪೬,೬೪೧(೫೮.೬೦) | ಜಿ.ಎಸ್.ಆಚಾರ್ (ಭಾ.ರಾ.ಕಾಂ) ೩೫,೮೯೨(೪೮.೦೭) | **ಎಂ.ವೀರಪ್ಪ ಮೊಯ್ಲಿ●* (ಭಾ.ರಾ.ಕಾಂ) ೪೧,೧೭೧(೫೬.೮೦)** | ಕೆ. ಸೋಮಪ್ಪ ಸುವರ್ಣ (ಭಾ.ರಾ.ಕಾಂ) ೩೪,೬೬೭(೫೧.೯೦) |
| ೧೯೯೪ | ವಸಂತ ವಿ.ಸಾಲಿಯಾನ (ಭಾ.ರಾ.ಕಾಂ) ೧೭,೧೫೨ (೨೭.೭೮) | ಸಭಾಪತಿ ಯು.ಆರ್. (ಕೆ.ಸಿ.ಪಿ) ೨೯,೬೪೯ (೩೭.೭೯) | ಕೆ.ಜಯಪ್ರಕಾಶ್‌ಹೆಗ್ಡೆ●● (ಜ.ಪ.)೩೮,೬೩೩ (೪೬.೩೪) | ಕೆ. ಪ್ರತಾಪಚಂದ್ರಶೆಟ್ಟಿ (ಭಾ.ರಾ.ಕಾಂ) ೪೧.೨೦೯(೪೫.೨೧) | ಐ.ಎಂ.ಜಯರಾಮ ಶೆಟ್ಟಿ (ಭಾ.ಜ.ಪ) ೨೯,೮೪೧(೩೭.೪೭) | ಎಂ.ವೀರಪ್ಪ ಮೊಯ್ಲಿ (ಭಾ.ರಾ.ಕಾಂ) ೩೬,೦೬೮(೪೬.೬೪) | ಕೆ.ಅಮರನಾಥಶೆಟ್ಟಿ●● (ಜ.ದ)೩೩.೩೧೯ (೪೭.೪೯) |
| ೧೯೯೯ | ವಸಂತ ವಿ.ಸಾಲಿಯಾನ●● (ಭಾ.ರಾ.ಕಾಂ) ೩೧,೧೫೧ (೪೭) | ಸಭಾಪತಿ ಯು.ಆರ್ (ಭಾ.ರಾ.ಕಾಂ)೪೧,೦೧೮ (೪೯) | ಕೆ.ಜಯಪ್ರಕಾಶ್‌ಹೆಗ್ಡೆ (ಪಕ್ಷೇತರ) ೩೨.೪೨೯(೩೯) | ಶ್ರೀನಿವಾಸಶೆಟ್ಟಿ ಹಲ್ದಿ (ಭಾ.ಜ.ಪ) ೪೮.೦೫೧(೫೦) | ಕೆ.ಗೋಪಾಲ ಪೂಜಾರಿ (ಭಾ.ರಾ.ಕಾಂ) ೪೬,೦೭೫(೫೨) | ಎಚ್.ಗೋಪಾಲ ಭಂಡಾರಿ (ಭಾ.ರಾ.ಕಾಂ) ೪೯,೫೯೧(೬೨) | ಕೆ.ಅಭಯಚಂದ್ರ (ಭಾ.ರಾ.ಕಾಂ) ೩೫,೫೮೮(೫೦) |
| ೨೦೦೪ | ಲಾಲಾಜಿ ಆರ್.ಮೆನನ್ (ಭಾ.ಜ.ಪ.)೩೬,೩೯೭ | ಕೆ.ರಘುಪತಿಭಟ್ (ಭಾ.ಜ.ಪ)೩೬, | ಕೆ.ಜಯಪ್ರಕಾಶ್ ಹೆಗ್ಡೆ (ಪಕ್ಷೇತರ) ೩೯,೫೨೧ | ಶ್ರೀನಿವಾಸ ಶೆಟ್ಟಿ ಹಲ್ದಿ (ಭಾ.ಜ.ಪ) ೫೮,೯೨೩ | ಕೆ.ಗೋಪಾಲ ಪೂಜಾರಿ (ಭಾ.ರಾ.ಕಾಂ) ೪೭,೬೨೭ | ಸುನೀಲ್ ಕುಮಾರ್ (ಭಾ.ಜ.ಪ.) ೫೨,೦೬೧ | ಕೆ. ಅಭಯಚಂದ್ರ (ಭಾ.ರಾ.ಕಾಂ) ೨೯,೯೨೬ |

$ ದಕ್ಷಿಣ ಕನ್ನಡ ಜಿಲ್ಲೆಯು ೧೯೯೭ರಲ್ಲಿ ವಿಭಜಿಸಲ್ಪಟ್ಟಾಗ ಉಡುಪಿ ಜಿಲ್ಲೆಯು ಅಸ್ತಿತ್ವಕ್ಕೆ ಬಂದಿತು. ೧೯೯೮ರಲ್ಲಿ ಮೂಡಬಿದ್ರಿ ಹೋಬಳಿಯು ಕಾರ್ಕಳ ತಾಲೂಕಿನಿಂದ ಮಂಗಳೂರು ತಾಲೂಕಿಗೆ ವರ್ಗಾಯಿಸಲ್ಪಟ್ಟಿದೆ. ೧೯೯೮ರಲ್ಲಿ ಮೂಡಬಿದ್ರಿ ಹೋಬಳಿಯು ಕಾರ್ಕಳ ತಾಲೂಕಿನಿಂದ ಮಂಗಳೂರು ತಾಲೂಕಿಗೆ ವರ್ಗಾಯಿಸಲ್ಪಟ್ಟಿದೆ. ಈ ಕ್ಷೇತ್ರವಿಂದು ದಕ್ಷಿಣ ಕನ್ನಡ ಜಿಲ್ಲೆಗೆ ವರ್ಗಾಯಿಸಲ್ಪಟ್ಟಿದೆ.

●● ರಾಜ್ಯ ಸಚಿವರಾಗಿದ್ದರು ● ಸಂಪುಟ ಸಚಿವರಾಗಿದ್ದರು ●* ೨೦–೧೧–೧೯೯೨ ರಿಂದ ೧೦–೧೨–೧೯೯೪ರವರೆಗೆ ಮುಖ್ಯಮಂತ್ರಿಗಳಾಗಿದ್ದರು